ಶುಕ್ರವಾರ, ಅಕ್ಟೋಬರ್ 22, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 293 | ಪುಟ 18


www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಮುಗ್ಧ, ಸಂಕೋಚಮಯ ಪಾತ್ರಗಳಲ್ಲೇ ಕಾಣಿಸಿಕೊಳ್ಳುತ್ತಿದ್ದ ನಟ ರಾಜ್ ಬಿ. ಶೆಟ್ಟಿ ಇದ್ದಕ್ಕಿದ್ದಂತೆಯೇ ರೌಡಿ ಲುಕ್‌ನಲ್ಲಿ ಕಾಣಿಸಿಕೊಂಡ ಗುಟ್ಟೇನು?



ಸೆನ್ಸೆಕ್ಸ್	ನಿಫ್ಟಿ	₹/$
60,923 ▼	18,178 ▼	74.87 ▲

ತುಂಗಭದ್ರಾ ಜಲಾಶಯದ ರಾಯ ಕಾಲುವೆಯ ತೂಬು, 'ಎಸ್ಕೇಪ್ ಗೇಟ್' ಸಂಪೂರ್ಣ ನಿಷ್ಕ್ರಿಯ

ಕಾಲುವೆ ಜಾಗದಲ್ಲಿ ಸಚಿವರ ಮನೆ

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ಇಲ್ಲಿನ ತುಂಗಭದ್ರಾ ಜಲಾಶಯದ ರಾಯ (ಸಣ್ಣ) ಉಪಕಾಲುವೆಯ ಜಾಗದಲ್ಲಿ ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಖಾತೆ ಸಚಿವ ಆನಂದ್ ಸಿಂಗ್ ಅವರು ಭವ್ಯ ಬಂಗಲೆ ನಿರ್ಮಿಸಿದರೆ, ಒಳಚರಂಡಿ ಮೇಲೆ ಅವರ ಆಪ್ತರು ಲೇಔಟ್ ನಿರ್ಮಿಸಿರುವ ವಿಷಯ ಪತ್ತೆಯಾಗಿದೆ.

ಸರ್ವೆ ನಂಬರ್ 63ರಲ್ಲಿ ತುಂಗಭದ್ರಾ ನೀರಾವರಿ ನಿಗಮಕ್ಕೆ ಸೇರಿದ 0.30 ಎಕರೆ ಜಾಗ ಇದೆ. ಅದರ ಮೇಲೆ ಸಚಿವರು ಬಂಗ್ಲೆ, ರಸ್ತೆ ನಿರ್ಮಿಸಿದ್ದಾರೆ. ಅಷ್ಟೇ ಅಲ್ಲ, ತಾಲ್ಲೂಕಿನ 88–ಮುದ್ಲಾಪುರ ಗ್ರಾಮದ ಸರ್ವೆ ನಂಬರ್ 83ರಲ್ಲಿನ ಮುಖ್ಯ ಒಳಚರಂಡಿ ಮೇಲೆ ಆನಂದ್ ಸಿಂಗ್ ಆಪ್ತರಿಗೆ ಸೇರಿದ ಸುರಕ್ಷಾ ಎಂಟರ್‌ಪ್ರೈಸೆಸ್‌ನವರು ಲೇಔಟ್ ಮಾಡಿ, ನಿವೇಶನಗಳನ್ನು ನಿರ್ಮಿಸಿದ್ದಾರೆ. ಜತೆಗೆ, ಸರ್ವೆ ನಂಬರ್ 69ರಲ್ಲಿ ಸರ್ಕಾರಕ್ಕೆ ಸೇರಿದ 0.3 ಎಕರೆ, 0.1 ಎಕರೆ ಖಾಸಗಿ ವ್ಯಕ್ತಿಯ ಆಸ್ತಿ ಅತಿಕ್ರಮಿಸಿ ಅದನ್ನು ಲೇಔಟ್ ಒಳಗೆ ಸೇರಿಸಿದ್ದಾರೆ. ಹೀಗೆ ಮಾಡುವಾಗ ಭೂ ಪರಿವರ್ತನೆ, ಕ್ರಯ ಪತ್ರವಾಗಿಲ್ಲ ಎಂಬ ಆರೋಪ ಇದೆ. ಈ ಕುರಿತ ದಾಖಲೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.



ಹೊಸಪೇಟೆಯ ತುಂಗಭದ್ರಾ ಜಲಾಶಯದ ರಾಯ ಉಪಕಾಲುವೆಗೆ ಹೊಂದಿಕೊಂಡಂತೆ ಇರುವ ಸಚಿವ ಆನಂದ್ ಸಿಂಗ್ ಬಂಗ್ಲೆ

ಪ್ರಜಾವಾಣಿ ವಿಶೇಷ

ಕಾಲುವೆ ತುಂಬಿ ಹರಿಯುವಾಗ ಭಾರಿ ಮಳೆಯಾಗಿ ಪ್ರವಾಹ ಬಂದರೆ ಹೆಚ್ಚುವರಿ ನೀರು ಹೊರಹಾಕಲು ರಾಯ ಕಾಲುವೆಯ ಮೂರು ಕಡೆ 'ಎಸ್ಕೇಪ್ ಗೇಟ್', ತೂಬುಗಳನ್ನು ನಿರ್ಮಿಸಲಾಗಿದೆ. ಆದರೆ, ಅವುಗಳನ್ನು ನಿಷ್ಕ್ರಿಯಗೊಳಿಸಲಾಗಿದೆ. ಅಲ್ಲಿ ಪೈಪ್‌ಲೈನ್ ಮಾಡಿ, ನಿವೇಶನಗಳನ್ನು ನಿರ್ಮಿಸಲಾಗಿದೆ.



ನಾನು ಸರ್ಕಾರಿ ಜಮೀನು ಅತಿಕ್ರಮಿಸಿದರೆ ಅದರ ಬಗ್ಗೆ ತನಿಖೆ ನಡೆಸಲಿ. ಕಾನೂನು ಪ್ರಕಾರ ಏನು ಬೇಕಾದರೂ ಕ್ರಮ ಕೈಗೊಳ್ಳಲಿ
ಆನಂದ್ ಸಿಂಗ್
ಪ್ರವಾಸೋದ್ಯಮ ಸಚಿವ

ಆದರೆ, ದಾಖಲೆಗಳಲ್ಲಿ ಕಾಲುವೆ ಇದೆ ಎಂದು ತೋರಿಸಲಾಗಿದೆ. ತುಂಗಭದ್ರಾ ನೀರಾವರಿ ಇಲಾಖೆಯಿಂದ ಅನುಮತಿ ಪಡೆಯದೇ ನಗರಾಭಿವೃದ್ಧಿ ಪ್ರಾಧಿಕಾರವು ಲೇಔಟ್‌ಗೆ ಅನುಮೋದನೆ ನೀಡಿದೆ.

ಕಾಲುವೆಯ ದಿಕ್ಕು ಬದಲಿಸಿರುವುದರಿಂದ ಸ್ವಲ್ಪ ಮಳೆಯಾದರೂ ಹಂಪಿ ರಸ್ತೆಯಲ್ಲಿ ಇತ್ತೀಚಿನ ದಿನಗಳಲ್ಲಿ ಅಪಾರ ಪ್ರಮಾಣದಲ್ಲಿ ನೀರು ನಿಲ್ಲುತ್ತಿದೆ. ಇನ್ನು, ಸರ್ವೆ ನಂಬರ್ 83ರಲ್ಲಿ ನಗರದ ಮುಖ್ಯ ಒಳಚರಂಡಿ ಹಾದು ಹೋಗಿದೆ. ಅದರ ಮೇಲೆಯೇ ನಿವೇಶನ ನಿರ್ಮಿಸಿರುವುದರಿಂದ ಅದಕ್ಕೂ ಕುತ್ತು ಬಂದಿದೆ.

2007–08ರಲ್ಲಿ ಸಚಿವರಿಂದ ಖರೀದಿ: 2007–08ರಲ್ಲಿ ಸಚಿವ ಆನಂದ್ ಸಿಂಗ್, ಅವರ ತಂದೆ, ತಾಯಿ, ಪತ್ನಿ, ಭಾಮೈದನ ಹೆಸರಿನಲ್ಲಿ ಸರ್ವೆ ನಂಬರ್ 65, 66, 67, 68, 69, 71, 72, 73, 74, 75, 78ರಲ್ಲಿ ಒಟ್ಟು 25 ಎಕರೆ ಜಾಗ ಖರೀದಿಸಲಾಗಿದೆ. ಬಳಿಕ ಅಲ್ಲಿ ಲೇಔಟ್ ನಿರ್ಮಾಣಕ್ಕೆ ಸುರಕ್ಷಾ ಎಂಟರ್‌ಪ್ರೈಸೆಸ್‌ಗೆ ಭೂಮಿಯನ್ನು ಹಸ್ತಾಂತರಿಸಿದ್ದರು. ಈಗ ಅಲ್ಲಿ ಲೇಔಟ್ ಮಾಡಿ, ನಿವೇಶನಗಳನ್ನು ನಿರ್ಮಿಸಲಾಗಿದೆ.

ಮನೆ, ಲೇಔಟ್ ನಿರ್ಮಿಸಿದ ಸಂದರ್ಭದಲ್ಲಿ ಅತಿಕ್ರಮಿಸಿರುವ ಸರ್ಕಾರಿ ಜಾಗವನ್ನು ಇದುವರೆಗೆ ನೋಂದಣಿ ಮಾಡಿಕೊಂಡಿಲ್ಲ. ಈಗಲೂ ಪಹಣಿಯಲ್ಲಿ ಸರ್ಕಾರಕ್ಕೆ ಸೇರಿದ ಜಾಗ ಎಂದಿದೆ.

5ನೇ ಪುಟ ನೋಡಿ

ಲಸಿಕೆ: 100 ಕೋಟಿ ಡೋಸ್ ಸಾಧನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ಸಾಂಕ್ರಾಮಿಕದ ವಿರುದ್ಧದ ಲಸಿಕೆ ಅಭಿಯಾನದಲ್ಲಿ ಭಾರತವು ಮಹತ್ವದ ಮೈಲಿಗಲ್ಲೊಂದನ್ನು ಗುರುವಾರ ಸಾಧಿಸಿದೆ. ಲಸಿಕೆಯ 100 ಕೋಟಿಗೂ ಹೆಚ್ಚಿನ ಡೋಸ್‌ಗಳನ್ನು ಜನರಿಗೆ ನೀಡಲಾಗಿದೆ. ಇದೇ ಜನವರಿ 16ರಂದು ಲಸಿಕೆ ಅಭಿಯಾನ ಆರಂಭಗೊಂಡಿತ್ತು. ಒಂಬತ್ತು ತಿಂಗಳು ದಾಟಿದ ಬಳಿಕ ಲಸಿಕೆ ನೀಡಿಕೆಯು 100 ಕೋಟಿ ಡೋಸ್‌ಗಳನ್ನು ದಾಟಿದೆ.

18 ವರ್ಷಕ್ಕಿಂತ ಹೆಚ್ಚಿನ ವಯಸ್ಕ ಜನರನ್ನು ಮಾತ್ರ ಲಸಿಕೆಗೆ ಅರ್ಹರು ಎಂದು ಗುರುತಿಸಲಾಗಿದೆ. ಈ ವರ್ಗದ ಶೇ 75ರಷ್ಟು ಮಂದಿ ಕನಿಷ್ಠ ಒಂದು ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ. ಲಸಿಕೆಗೆ ಅರ್ಹರಾಗಿರುವ ಶೇ 31ರಷ್ಟು ಜನರಿಗೆ ಲಸಿಕೆಯ ಎರಡೂ ಡೋಸ್ ಸಿಕ್ಕಿದೆ. ಒಟ್ಟು ಜನಸಂಖ್ಯೆಯ ಶೇ 21ರಷ್ಟು ಜನರಿಗೆ ಕೋವಿಡ್‌ನಿಂದ ಸಂಪೂರ್ಣ ರಕ್ಷಣೆ ಸಿಕ್ಕಿದೆ ಎಂದು ಅರ್ಥ.



ಗುರುವಾರ ಬೆಳಿಗ್ಗೆ 9.50ರ ಹೊತ್ತಿಗೆ ನೂರು ಕೋಟಿ ಡೋಸ್‌ಗಳ ಮೈಲುಗಲ್ಲನ್ನು ದೇಶವು ದಾಟಿತು. ಪ್ರಧಾನಿ ನರೇಂದ್ರ ಮೋದಿ ಅವರು ಈ ಸಂದರ್ಭದಲ್ಲಿ ದೆಹಲಿಯ ಆರ್‌ಎಂಎಲ್ ಆಸ್ಪತ್ರೆಗೆ ಭೇಟಿ ನೀಡಿದರು. ಜಗತ್ತಿನ ಆರ್ಥಿಕತೆಯು ಮುಗ್ಗರಿಸುವಂತೆ ಮಾಡಿದ ಕೋವಿಡ್ ಸಾಂಕ್ರಾಮಿಕದ ವಿರುದ್ಧದ ಹೋರಾಟದಲ್ಲಿ ಆರೋಗ್ಯ ಕಾರ್ಯಕರ್ತರು ವಹಿಸಿದ ಪಾತ್ರ ನಿರ್ಣಾಯಕ ಎಂದು ಮೋದಿ ಕೊಂಡಾಡಿದರು.

ನೂರು ಕೋಟಿ ಲಸಿಕೆ ಡೋಸ್‌ಗಳ ಬಲವಾದ ಸುರಕ್ಷಾ ಕವಚವನ್ನು ಭಾರತವು ಈಗ ಹೊಂದಿದೆ. ಇದು ಭಾರತದ ಪೌರರ ಸಾಧನೆ ಎಂದು ಪ್ರಧಾನಿ ಬಣ್ಣಿಸಿದ್ದಾರೆ.



ಭಾರತವು ಇತಿಹಾಸ ಬರೆದಿದೆ. ಭಾರತದ ವಿಜ್ಞಾನ, ಉದ್ಯಮ ಮತ್ತು 130 ಕೋಟಿ ಭಾರತೀಯರ ಸಾಮೂಹಿಕ ಸ್ಫೂರ್ತಿಯ ವಿಜಯಕ್ಕೆ ನಾವು ಸಾಕ್ಷಿಗಳಾಗಿದ್ದೇವೆ
ನರೇಂದ್ರ ಮೋದಿ
ಪ್ರಧಾನಿ

ಎಸ್ಸಿ, ಎಸ್ಟಿ ಉದ್ಯಮಿಗೆ ನೀಡುವ ಸೌಲಭ್ಯ

ಆರ್ಥಿಕ ಹಿಂದುಳಿದವರಿಗೂ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೈಗಾರಿಕೆ ಆರಂಭಿಸಲು ಪರಿಶಿಷ್ಟ ಜಾತಿ (ಎಸ್ಸಿ) ಮತ್ತು ಪರಿಶಿಷ್ಟ ಪಂಗಡದವರಿಗೆ (ಎಸ್ಟಿ) ನೀಡುತ್ತಿರುವ ಸೌಲಭ್ಯಗಳನ್ನು ಆರ್ಥಿಕವಾಗಿ ದುರ್ಬಲರಾಗಿರುವ ಇತರ ಸಮುದಾಯಗಳಿಗೂ ವಿಸ್ತರಿಸಲು ನಿರ್ಧರಿಸಿದ್ದೇವೆ' ಎಂದು ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ತಿಳಿಸಿದರು.



ಮುರುಗೇಶ ನಿರಾಣಿ

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ನಗರದಲ್ಲಿ ಗುರುವಾರ ಹಮ್ಮಿಕೊಂಡ 104ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ, ಮಾತನಾಡಿದರು.

'ಕೈಗಾರಿಕೆಗಳನ್ನು ಸ್ಥಾಪಿಸಲು ಜಮೀನು ಅಥವಾ ಕೈಗಾರಿಕಾ ಶೆಡ್‌ಗಳನ್ನು ಶೇ 75ರಷ್ಟು ರಿಯಾಯಿತಿ ದರದಲ್ಲಿ ಎಸ್ಸಿ, ಎಸ್ಟಿ ಸಮುದಾಯದವರಿಗೆ ಹಂಚಿಕೆ ಮಾಡಲಾಗುತ್ತಿದೆ. ಸಾಲ, ಬಡ್ಡಿ ವಿನಾಯಿತಿ ಸೇರಿದಂತೆ ವಿವಿಧ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಅದೇ ರೀತಿ, ಕೈಗಾರಿಕೋದ್ಯಮಿಗಳಾಗಲು ಆರ್ಥಿಕವಾಗಿ ಹಿಂದುಳಿದ ಸಮುದಾಯದವರಿಗೂ ಪ್ರೋತ್ಸಾಹ ನೀಡಬೇಕಿದೆ. ಸರ್ಕಾರವು ಈ ಬಗ್ಗೆ ಕಾರ್ಯಪ್ರವೃತ್ತವಾಗಿದೆ' ಎಂದು ಹೇಳಿದರು.

'ಕೈಗಾರಿಕೆಗಳನ್ನು ಪ್ರಾರಂಭಿಸಲು ರಾಜ್ಯದಲ್ಲಿ ಇರುವಷ್ಟು ಅವಕಾಶಗಳು ಬೇರೆಲ್ಲಿಯೂ ಇಲ್ಲ. ಚಿಕ್ಕ ರಾಷ್ಟ್ರವಾದ ದುಬೈ, 40 ವರ್ಷಗಳ ಅವಧಿಯಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದೆ. ಅಲ್ಲಿನ ಕೈಗಾರಿಕೋದ್ಯಮಿಗಳು ಭೂಮಿಯನ್ನು ಹೊಂದಿರುವುದೇ ಇದಕ್ಕೆ ಮುಖ್ಯ ಕಾರಣ. ಇಲ್ಲಿಯೂ ಕೈಗಾರಿಕೋದ್ಯಮಿಗಳನ್ನು ಸೆಳೆಯಲು ಭೂ ಬ್ಯಾಂಕ್ ಪರಿಕಲ್ಪನೆಯನ್ನು ಮರು ಆರಂಭಿಸಲು ರಾಜ್ಯ ಸರ್ಕಾರ ಚಿಂತಿಸಿದೆ' ಎಂದರು.

ಟೆಕ್ ಶೃಂಗ: 'ಕೋವಿಡ್ ನಿಯಂತ್ರಣಕ್ಕೆ ಬಂದಿರುವುದರಿಂದ ಕೈಗಾರಿಕಾ ಚಟುವಟಿಕೆಗಳಿಗೆ ಉತ್ತೇಜನ ನೀಡಿ, ಹೂಡಿಕೆದಾರರನ್ನು ಆಕರ್ಷಿಸಲು ಮುಂದಾಗಿದ್ದೇವೆ. ನವೆಂಬರ್ ತಿಂಗಳಲ್ಲಿ ಟೆಕ್ ಶೃಂಗವನ್ನು ನಡೆಸಲಾಗುವುದು' ಎಂದು ಮುರುಗೇಶ್ ನಿರಾಣಿ ತಿಳಿಸಿದರು.

ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕಲ್ ಎಂ. ಸುಂದರ್, 'ಕೋವಿಡ್ ಕಾಣಿಸಿಕೊಂಡ ಬಳಿಕ ವಾಣಿಜ್ಯ ಮತ್ತು ಕೈಗಾರಿಕಾ ವಲಯ ಅಪಾರ ನಷ್ಟ ಅನುಭವಿಸಿತ್ತು. ಈಗ ಕೋವಿಡ್ ನಿಯಂತ್ರಣಕ್ಕೆ ಬಂದಿರುವುದರಿಂದ ಈ ವಲಯ ಚೇತರಿಸಿಕೊಳ್ಳುವ ಆಶಾವಾದದಲ್ಲಿ ಇದ್ದೇವೆ' ಎಂದು ಹೇಳಿದರು.

ಚಿನಕುರಳಿ
ಪ್ರಕಾಶ್ ಶೆಟ್ಟಿ



ಸ್ನಾತಕೋತ್ತರ ಪದವಿಗೆ ಮುನ್ನವೇ ಕೆ–ಸೆಟ್ ಪಾಸ್ ಆದವರಿಗೆ ಆತಂಕ

'ಕೆ–ಸೆಟ್' ಅರ್ಹತೆಯೂ ನಿಷ್ಪ್ರಯೋಜಕ !

• ರಾಜೇಶ್ ರೈ ಚಟ್ಲ

ಬೆಂಗಳೂರು: ಸ್ನಾತಕೋತ್ತರ ಪದವಿ (ಪಿ.ಜಿ) ಪಾಸಾಗುವ ಮೊದಲೇ ಕೆ–ಸೆಟ್ (ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ) ಪಾಸಾಗಿದ್ದರೆ, ಅಂಥವರು ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹರಲ್ಲ!

ಪಿ.ಜಿ ಕಲಿಯುತ್ತಿರುವಾಗಲೇ ಕೆ–ಸೆಟ್‌ಗೆ ನೋಂದಾಯಿಸಿ, ಸಾವಿರಾರು ಅಭ್ಯರ್ಥಿಗಳು ತೇರ್ಗಡೆಯಾಗಿದ್ದಾರೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ 1,242 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಈಗ ನಡೆಯುತ್ತಿರುವ ನೇಮಕಾತಿ ಪ್ರಕ್ರಿಯೆಯಲ್ಲಿ ಅರ್ಜಿ ಸಲ್ಲಿಸುವ ಅವಕಾಶದಿಂದ ಇವರೆಲ್ಲ ವಂಚಿತರಾಗುವ ಆತಂಕ ಎದುರಿಸುತ್ತಿದ್ದಾರೆ.

ಈ ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನೇಮಕಾತಿ ಪ್ರಾಧಿಕಾರವಾಗಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ನವೆಂಬರ್ 6 ಕೊನೆಯ ದಿನ.

ಕೆ–ಸೆಟ್ ಅಧಿಸೂಚನೆ ಪ್ರಕಾರ, ಪಿ.ಜಿ ಪಡೆದವರು ಮತ್ತು ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಪಿ.ಜಿ ವ್ಯಾಸಂಗ (ಪ್ರಥಮ ಮತ್ತು ದ್ವಿತೀಯ) ಮಾಡುತ್ತಿರುವ ವಿದ್ಯಾರ್ಥಿಗಳು ಕೆ–ಸೆಟ್ ಪರೀಕ್ಷೆ ತೆಗೆದುಕೊಳ್ಳಲು ಅರ್ಹರು. ಪಿ.ಜಿ ವ್ಯಾಸಂಗ ಮಾಡುತ್ತಿರುವಾಗಲೇ ಕೆ–ಸೆಟ್ ಪಾಸಾದರೆ, ಅಂಥವರು ಕೆ–ಸೆಟ್ ಫಲಿತಾಂಶ ಪ್ರಕಟವಾದ ದಿನದಿಂದ ಎರಡು ವರ್ಷದ ಒಳಗೆ ಪಿ.ಜಿ ಅಂಕ ಪಟ್ಟಿ ಸಲ್ಲಿಸಿದರೆ ಮಾತ್ರ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪ್ರಮಾಣಪತ್ರ ಪಡೆಯಬಹುದು. ಇಲ್ಲದೇ ಇದ್ದರೆ ಅರ್ಹತೆ ರದ್ದುಗೊಳ್ಳುತ್ತದೆ. ಹೀಗೆ ಪರೀಕ್ಷೆ ಬರೆದ ಸಾವಿರಾರು ಅಭ್ಯರ್ಥಿಗಳು ತಮ್ಮ ಪಿ.ಜಿ ಫಲಿತಾಂಶ ಪ್ರಕಟಗೊಳ್ಳುವ ಮೊದಲೇ ಕೆ–ಸೆಟ್ ಪಾಸ್ ಮಾಡಿಕೊಂಡಿದ್ದಾರೆ.

ಆದರೆ, ಪಿ.ಜಿ ಪಾಸಾಗುವ ಮೊದಲೇ ಕೆ–ಸೆಟ್ ಮಾಡಿಕೊಂಡ ಅಭ್ಯರ್ಥಿಗಳು ಸಹಾಯಕ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ, 'ಕೆ–ಸೆಟ್ ಪಾಸಾದ ವರ್ಷ ಪಿ.ಜಿ ವರ್ಷಕ್ಕಿಂತ ಕಡಿಮೆ ಇರಬಾರದು' ಎಂಬ ಸಂದೇಶ ಬರುತ್ತಿದೆ. ಹೀಗಾಗಿ, ಆನ್‌ಲೈನ್ ಅರ್ಜಿಯ ಮುಂದಿನ ಹಂತಗಳನ್ನು ಭರ್ತಿ ಮಾಡಲು ಸಾಧ್ಯ ಆಗುತ್ತಿಲ್ಲ ಎಂದು ಅಭ್ಯರ್ಥಿಗಳು ದೂರಿದ್ದಾರೆ.

'ಈ ಹಿಂದೆ ಈ ರೀತಿಯ ಸಮಸ್ಯೆ ಇರಲಿಲ್ಲ. ಸ್ನಾತಕೋತ್ತರ ಪದವಿ ಓದುತ್ತಿರುವಾಗಲೇ ಕೆ–ಸೆಟ್ ಪಾಸಾದ ಅನೇಕರು ಸಹಾಯಕ ಹುದ್ದೆಗಳಿಗೆ ಅರ್ಹತೆ ಪಡೆದಿದ್ದಾರೆ. ಇದೇ ಮೊದಲ ಬಾರಿಗೆ ಈ ಷರತ್ತು ವಿಧಿಸಲಾಗಿದೆ' ಎಂದು ಹುದ್ದೆ ಆಕಾಂಕ್ಷಿ ರಾಯಚೂರು ಜಿಲ್ಲೆಯ ಲಿಂಗಸಗೂರಿನ ವಿಜಯಕುಮಾರ್ ನಾಯಕ್ ಹೇಳಿದರು.

'ನಾನು ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಪಿ.ಜಿ ಮೊದಲ ವರ್ಷದಲ್ಲಿದ್ದಾಗಲೇ ಕೆ– ಸೆಟ್ (2019 ಮಾರ್ಚ್) ಪಾಸಾಗಿದ್ದೇನೆ. 2020 ಜೂನ್‌ನಲ್ಲಿ ಪಿ.ಜಿ ಮುಗಿಯಬೇಕಾಗಿತ್ತು. ಕೋವಿಡ್ ಕಾರಣದಿಂದ 2021 ಜನವರಿಗೆ ಕೋರ್ಸ್ ಮುಗಿಯಿತು. ಆದರೆ, ಕೋರ್ಸ್ ಮುಗಿಯುವ ಮೊದಲೇ ಕೆ–ಸೆಟ್ ಪಾಸಾಗಿರಬಾರದು ಎಂಬ ಷರತ್ತಿನಿಂದಾಗಿ ಹುದ್ದೆಗೆ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ನನ್ನಂತೆ ಪಿ.ಜಿ ಮುಗಿಯುವ ಮೊದಲೇ ಕೆ–ಸೆಟ್ ಪಾಸಾದವರು ನಮ್ಮ ವಿಶ್ವವಿದ್ಯಾಲಯವೊಂದರಲ್ಲಿಯೇ 2,000ಕ್ಕೂ ಹೆಚ್ಚು ಮಂದಿ ಇದ್ದೇವೆ' ಎಂದೂ ಅವರು ಹೇಳಿದರು.

ಕೆ–ಸೆಟ್ ಪಾಸಾದವರು ಮತ್ತೆ ಬರೆದರೆ 'ಅರ್ಹತೆ' ರದ್ದು

ಕೆ–ಸೆಟ್ ಅಧಿಸೂಚನೆಯಲ್ಲಿ 'ಈಗಾಗಲೇ ಕೆ–ಸೆಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು, ಮುಂಬರುವ ಕೆ–ಸೆಟ್ ಪರೀಕ್ಷೆಗೆ ಅದೇ ವಿಷಯದಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಇಲ್ಲ. ಈಗಾಗಲೇ ಕೆ–ಸೆಟ್ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸಿದರೆ, ಅಂಥ ಅಭ್ಯರ್ಥಿಗಳ ಅರ್ಹತೆ ರದ್ದುಗೊಳಿಸಲಾಗುವುದು. ಅಲ್ಲದೆ, ಅಂಥವರು ಹಿಂದೆ ಪಡೆದಿರುವ ಕೆ–ಸೆಟ್ ಅರ್ಹತೆಯನ್ನು ಕೂಡಾ ಡಿ ನೋಟಿಫಿಕೇಷನ್ ಮೂಲಕ ಹಿಂಪಡೆಯಲಾಗುವುದು' ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಇದು ಕೂಡ ಗೊಂದಲಗಳಿಗೆ ಕಾರಣವಾಗಿದೆ.

ಪಿ.ಜಿಯಲ್ಲಿ ಇರುವಾಗಲೇ ಕೆ–ಸೆಟ್ ಪಾಸ್ ಆದವರಿಗೂ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸುವ ಅವಕಾಶ ಕಲ್ಪಿಸಲು ಕ್ರಮಕೈಗೊಳ್ಳಲಾಗುವುದು
ಎಸ್. ರಮ್ಯಾ
ಕಾರ್ಯನಿರ್ವಾಹಕ ನಿರ್ದೇಶಕಿ, ಕೆಇಎ

ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆ

‘ವಿಎಫ್‌ಎಲ್‌ವೈಎಕ್ಸ್’ನಿಂದ ಡ್ರೋನ್ ತಯಾರಿಕೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಇ-ಕಾಮರ್ಸ್ ಕ್ಷೇತ್ರದ ‘ಎಕ್ಸ್‌ಬೂಮ್’ ಯುಟಿಲಿಟಿಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಡ್ರೋನ್ ತಯಾರಿಸುವ ‘ವಿಎಫ್‌ಎಲ್ ವೈಎಕ್ಸ್’ ತಂತ್ರಜ್ಞಾನ ಕಂಪನಿಯನ್ನು ನಗರದಲ್ಲಿ ಆರಂಭಿಸಿದೆ.

ವಿಶೇಷ ವಿನ್ಯಾಸದ ಮತ್ತು ಮಾನವರಹಿತ ಡ್ರೋನ್ ತಯಾರಿಸುವುದು ಈ ಕಂಪನಿಯ ಉದ್ದೇಶವಾಗಿದೆ. ಹತ್ತು ಸಾವಿರ ಚದರ ಅಡಿಯಲ್ಲಿ ‘ಎಕ್ಸ್‌ಬೂಮ್’ನ ಈ ನವೋದ್ಯಮದ ಘಟಕವು ಕಾರ್ಯನಿರ್ವಹಿಸಲಿದೆ.

ನಾಸಾದ ಮಾಜಿ ವಿಜ್ಞಾನಿ ರೋಹಿತ್ ದೇ ಅವರನ್ನು ಮುಖ್ಯ ತಂತ್ರಜ್ಞಾನ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಡ್ರೋನ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ಹೊಣೆ ಇವರದ್ದಾಗಿದೆ.

ಎಕ್ಸ್‌ಬೂಮ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ವಿಶಾಲ್ ಸೌರವ್ ಮಾತನಾಡಿ, ‘ಗುಣಮಟ್ಟ, ವಿನ್ಯಾಸ, ತಂತ್ರಜ್ಞಾನ ಮತ್ತು ಸುರಕ್ಷತೆ ಈ ಡ್ರೋನ್‌ಗಳ ವಿಶೇಷ ಗುಣಲಕ್ಷಣಗಳಾಗಿವೆ. ಅತ್ಯಾಧುನಿಕ ತಂತ್ರಜ್ಞಾನ ಮತ್ತು ಉತ್ತಮ ಗುಣಮಟ್ಟ ಹೊಂದಿರುವ ಈ ಡ್ರೋನ್ ಬೆಲೆ ₹6.5 ಲಕ್ಷ ಬೆಲೆ’ ಎಂದು ತಿಳಿಸಿದ್ದಾರೆ.


ಡ್ರೋನ್‌ಗಳನ್ನು ಪ್ರದರ್ಶಿಸಿದ ರೋಹಿತ್ ದೇ ಮತ್ತು ವಿಶಾಲ್ ಸೌರವ್

ಮುಖ್ಯ ತಂತ್ರಜ್ಞಾನ ಅಧಿಕಾರಿ ರೋಹಿತ್ ದೇ ಮಾತನಾಡಿ, ‘ನಮ್ಮ ಡ್ರೋನ್‌ಗಳು ವಿಭಿನ್ನವಾಗಿವೆ. ಪ್ಲಾಸ್ಟಿಕ್ ಬದಲು ಕಾರ್ಬನ್ ಫೈಬರ್‌ನಿಂದ ತಯಾರಿಸಲಾಗುತ್ತಿದೆ. ಪೈಲಟ್ ತರಬೇತಿ ಕಾರ್ಯಕ್ರಮ ನೀಡಲಾಗುವುದು. ಗ್ರಾಹಕರ ಅಗತ್ಯಕ್ಕೆ ತಕ್ಕಂತೆ ಡ್ರೋನ್‌ಗಳನ್ನು ರೂಪಿಸಲಾಗಿದೆ’ ಎಂದರು.

ಬಿಸಿಯೂಟ ಕಾರ್ಯಕ್ರಮಕ್ಕೆ ಚಾಲನೆ

ವಿದ್ಯಾರ್ಥಿಗಳೊಂದಿಗೆ ಊಟ ಸವಿದ ಸಚಿವ ನಾಗೇಶ್

ಪ್ರಜಾವಾಣಿ ವಾರ್ತೆ

ತಿಪಟೂರು: ರಾಜ್ಯದ ಎಲ್ಲ ಶಾಲೆಗಳಲ್ಲಿ 25ರಿಂದ ಪ್ರಾಥಮಿಕ ಹಂತದಿಂದಲೇ ಭೌತಿಕ ತರಗತಿಗಳು ಆರಂಭವಾಗುತ್ತಿದ್ದು, ಶಿಕ್ಷಕರು ಹೆಚ್ಚಿನ ಜವಾಬ್ದಾರಿ ವಹಿಸಿಕೊಂಡು ಈ ವರ್ಷದ ಪಠ್ಯವನ್ನು ಸಂಪೂರ್ಣವಾಗಿ ಬೋಧಿಸಬೇಕು ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದರು.

ನಗರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲೆಗೆ ಗುರುವಾರ ದಿಢೀರ್ ಭೇಟಿ ನೀಡಿ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶಾಲೆಗಳಲ್ಲಿ ಸಾಧ್ಯವಾದರೆ ಹೆಚ್ಚುವರಿ ತರಗತಿಗಳನ್ನು ತೆಗೆದುಕೊಂಡು ಪಠ್ಯವನ್ನು ಮುಗಿಸುವುದಾಗಿ ಹಲವು ಶಿಕ್ಷಕರು ತಿಳಿಸಿದ್ದಾರೆ. ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಇಲಾಖೆಯಿಂದ ಸೂಚಿಸಲಾಗಿದೆ ಎಂದರು.

ಬಿಸಿಯೂಟ ತಯಾರಿಸುವ ಸಿಬ್ಬಂದಿಗೆ ನೀಡುವ ಗೌರವಧನವನ್ನು ನೇರವಾಗಿ ಅವರ ಖಾತೆಗೆ ಜಮಾವಣೆ ಮಾಡಲಾಗುತ್ತಿದೆ. ಕೆಲವರು ನೀಡಿರುವ ಬ್ಯಾಂಕ್ ಖಾತೆಗಳ ಮಾಹಿತಿ ತಪ್ಪಿರುವುದರಿಂದ ಹಣ ಸಂದಾಯ ಮಾಡಲು ಸಾಧ್ಯವಾಗಿಲ್ಲ. ಶೀಘ್ರ ಅಂತಹವರಿಂದ ಮಾಹಿತಿ ಪಡೆದು ಖಾತೆಗೆ ಗೌರವಧನ ಜಮಾವಣೆ ಮಾಡಲಾಗುವುದು ಎಂದು ತಿಳಿಸಿದರು.


ತಿಪಟೂರಿನ ಬಾಲಕಿರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲೆ ವಿದ್ಯಾರ್ಥಿನಿಯರೊಂದಿಗೆ ಊಟ ಸವಿದ ಶಿಕ್ಷಣ ಸಚಿವ ಬಿ.ಸಿ.ನಾಗೇಶ್

ವಿದ್ಯಾರ್ಥಿಗಳೊಂದಿಗೆ ಊಟ ಮಾಡಿದ ಸಚಿವರು: ನಗರದ ಬಾಲಕಿರ ಪ್ರೌಢಶಾಲೆಯಲ್ಲಿ ಸಚಿವರೇ ವಿದ್ಯಾರ್ಥಿನಿಯರಿಗೆ ಸಿಹಿ ಬಡಿಸಿದರು. ನಂತರ ವಿದ್ಯಾರ್ಥಿಗಳೊಂದಿಗೆ ಊಟ ಮಾಡಿದರು. ಪಠ್ಯ, ಬಸ್ ಸೌಕರ್ಯ, ಬಿಸಿಯೂಟದ ಗುಣಮಟ್ಟ, ಶಾಲಾ ವಾತಾವರಣದ ಬಗ್ಗೆ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದರು.

ವಿದ್ಯುತ್ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಗತ ಕೇಬಲ್ ಅಳವಡಿಸುವ ಕಾರ್ಯ ಕೈಗೊಂಡಿರುವುದರಿಂದ ಅ.22ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಉತ್ತರಹಳ್ಳಿ ರಸ್ತೆ, ಅನ್ನ ಪೂರ್ಣೇಶ್ವರಿ ಲೇಔಟ್, ಬಿಎಚ್‌ಇಎಲ್ ಲೇಔಟ್, ರಾಘವೇಂದ್ರ ಇಂಡಸ್ಟ್ರಿಯಲ್ ಎಸ್ಟೇಟ್, ಬಿಇಎಲ್ 1ನೇ ಮತ್ತು 2ನೇ ಹಂತ, ಗಾಂಧಿ ಪಾರ್ಕ್, ಬಾಪೂಜಿ ನಗರ, ಗೋವಿಂದರಾಜನಗರ, ಚಂದ್ರಾಲೇಔಟ್, ಅಗ್ರಹಾರ ದಾಸರಹಳ್ಳಿ, ಹಂಪಿನಗರ, ಮಾರೇನಹಳ್ಳಿ, ಸಂಜೀವಿನಿನಗರ, ವೃಷಭಾವತಿ ನಗರ, ನಾಗರಬಾವಿ, ಸುಂಕದಕಟ್ಟೆ, ನರಸಾಪುರ, ಎಸ್‌ವಿಜಿ ನಗರ ಸುತ್ತಮುತ್ತ ಪ್ರದೇಶಗಳಲ್ಲಿ ವ್ಯತ್ಯಯವಾಗಲಿದೆ.

220/66/11ಕೆವಿ ಎಚ್.ಎಸ್.ಆರ್ ಉಪಕೇಂದ್ರದಲ್ಲಿ ತುರ್ತು ಕಾಮಗಾರಿಗಳನ್ನು ಕೈಗೊಂಡಿರುವುದರಿಂದ ಮಾರ್ವೆಲ್ ಆಸ್ಪತ್ರೆ, ಜಕ್ಕಸಂದ್ರ ಬಡಾವಣೆ, 1ನೇ ಮತ್ತು 3ನೇ ಬ್ಲಾಕ್ ಕೋರಮಂಗಲ, ರಹೇಜ ರೆಸಿಡೆನ್ಸಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

ಎಚ್.ಎಸ್.ಆರ್. ಬಡಾವಣೆ 1ನೇ ಸೆಕ್ಟರ್, 2ನೇ ಸೆಕ್ಟರ್, 3ನೇ ಸೆಕ್ಟರ್, 4ನೇ ಸೆಕ್ಟರ್, 5ನೇ, 7ನೇ ಸೆಕ್ಟರ್ ಹಾಗೂ 24, 25 ಮತ್ತು 27ನೇ ಮುಖ್ಯ ರಸ್ತೆ, ಅಗರ, ಐಟಿಐ ಲೇಔಟ್, ಎಂ.ಎಂ. ಪಾಳ್ಯ ಮುಖ್ಯ ರಸ್ತೆ, ಹಳೆ ಎಂ.ಎಂ. ಪಾಳ್ಯ, ಮುನೇಶ್ವರನಗರ, ಜಿ.ಬಿ.ಪಾಳ್ಯ ಒಂದು ಭಾಗ, ಬಾಷ್ ಹತ್ತಿರ, ಹೊಸೂರು ಮುಖ್ಯ ರಸ್ತೆ, ಜಕ್ಕಸಂದ್ರ, ಕೋರಮಂಗಲ 1ನೇ ಮತ್ತು 3ನೇ ಬ್ಲಾಕ್, ಬೊಮ್ಮನಹಳ್ಳಿ, ಕುಡ್ಲು, ಕೈಕೊಂಡ್ರಹಳ್ಳಿ, ಸೋಮಸುಂದರಪಾಳ್ಯ, ಹೊಸಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನಗರದಲ್ಲಿ ಇಂದು

ಹೈಟೆಕ್ ಸರ್ಕಾರಿ ಶಾಲಾ ಕಟ್ಟಡ ಉದ್ಘಾಟನೆ: ಬಿ.ಸಿ. ನಾಗೇಶ್, ಆರ್. ಅಶೋಕ, ವಿ.ಎಸ್. ರೆಡ್ಡಿ, ತೇಜಸ್ವಿ ಸೂರ್ಯ, ಸೌಮ್ಯಾರೆಡ್ಡಿ, ಸ್ಥಳ: ಕರ್ನಾಟಕ ಪಬ್ಲಿಕ್ ಸ್ಕೂಲ್, ಸಾರಕ್ಕಿ, 10.30

‘ಅನಂತಪಥ’ ಮಾಸ ಪತ್ರಿಕೆ ಬಿಡುಗಡೆ: ಡಾ.ಸಿ.ಎನ್. ಕೃಷ್ಣ ಗುರೂಜಿ, ಆಯೋಜನೆ: ಅನಂತಕುಮಾರ ಪ್ರತಿಷ್ಠಾನ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

ಗಿರೀಶ್ ಕಾರ್ನಾಡ್ ಅವರ ‘ಮಾನಿಷಾದ’ ನಾಟಕ ಪ್ರದರ್ಶನ: ಪ್ರಸ್ತುತಿ: ಕರಣ ಥಿಯೇಟರ್, ನಿರ್ದೇಶನ: ರೇವಂತ್ ಮಾಳಿಗೆ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7


‘ಮಾನಿಷಾದ’ ನಾಟಕದ ದೃಶ್ಯ

ನಾಳೆಯಿಂದ ರಾಷ್ಟ್ರೀಯ ಜ್ಯೋತಿಷ ಸಮ್ಮೇಳನ

ಬೆಂಗಳೂರು: ದಿವ್ಯಜ್ಯೋತಿ ಜ್ಯೋತಿಷ ಕಾಲೇಜು ಇದೇ 23 ಮತ್ತು 24ಕ್ಕೆ 13ನೇ ರಾಷ್ಟ್ರೀಯ ಸಮ್ಮೇಳನವನ್ನು ಕೆ.ಜಿ. ರಸ್ತೆಯಲ್ಲಿರುವ ಶಿಕ್ಷಕರ ಸದನದಲ್ಲಿ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಖಜಾಂಚಿ ಜಿ.ಕೆ. ಶಿವಣ್ಣ ಮಾತನಾಡಿ, ‘ಹಸ್ತಮುದ್ರಿಕೆ, ಸಂಖ್ಯಾ ಶಾಸ್ತ್ರ, ವಾಸ್ತು ಶಾಸ್ತ್ರ ಸೇರಿದಂತೆ ಜ್ಯೋತಿಷದ ವಿವಿಧ ಪ್ರಕಾರಗಳ ಬಗ್ಗೆ ವಿಚಾರಗೋಷ್ಠಿಗಳು ನಡೆಯಲಿವೆ. ಧಾರ್ಮಿಕ ವಿಚಾರಗಳ ಬಗ್ಗೆಯೂ ಸಂವಾದಗಳು ನಡೆಯಲಿವೆ’ ಎಂದು ಹೇಳಿದರು.

ರಾಜಕಾಲುವೆ ಒತ್ತುವರಿ ತೆರವಿಗೆ ಕ್ರಮ

ಆನೇಕಲ್: ‘ಹೆನ್ನಾಗರ ಕೆರೆ ಕೋಡಿಯಿಂದಾಗಿ ತೊಂದರೆಗೀಡಾಗಿರುವ ರೈತರಿಗೆ ಶೀಘ್ರದಲ್ಲಿ ಪರಿಹಾರ ನೀಡಲಾಗುವುದು. ರಾಜಕಾಲುವೆ ಒತ್ತುವರಿಯನ್ನು ತೆರವುಗೊಳಿಸಿ ಕೆರೆ ಕೋಡಿಯ ನೀರು ತೋಟಗಳು ಮತ್ತು ಹೊಲಗದ್ದೆಗಳಿಗೆ ಹರಿಯದಂತೆ ಕ್ರಮ ಕೈಗೊಳ್ಳಲಾಗುವುದು’ ಎಂದು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ತಿಳಿಸಿದರು.

ಅವರು ತಾಲ್ಲೂಕಿನ ಹೆನ್ನಾಗರ ಕೆರೆ ಕೋಡಿಗೆ ಭೇಟಿ ನೀಡಿ ರೈತರಿಂದ ಅಹವಾಲುಗಳನ್ನು ಸ್ವೀಕರಿಸಿ ಮಾತನಾಡಿದರು.

ಪ್ರಜಾವಾಣಿಯಲ್ಲಿ ಬುಧವಾರ (ಅ.20)ದಂದು ಕೆರೆ ಕೋಡಿಯಿಂದಾದ ಸಮಸ್ಯೆಗಳ ಬಗ್ಗೆ ವಿಶೇಷ ಲೇಖನ ಪ್ರಕಟವಾದ ಹಿನ್ನೆಲೆಯಲ್ಲಿ ಶಾಸಕರು ಮತ್ತು ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಕೇಂದ್ರ ಸರ್ಕಾರಿ ನೌಕರರಿಗೆ ಶೇ 3ರಷ್ಟು ತುಟ್ಟಿ ಭತ್ಯೆ ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರಿ ನೌಕರರಿಗೆ ಶೇಕಡ 3ರಷ್ಟು ತುಟ್ಟಿಭತ್ಯೆ ಮತ್ತು ತುಟ್ಟಿ ಪರಿಹಾರವನ್ನು ಹೆಚ್ಚಿಸುವ ನಿರ್ಧಾರವನ್ನು ಕೇಂದ್ರ ಸಂಪುಟ ಗುರುವಾರ ತೆಗೆದುಕೊಂಡಿದೆ.

47.14 ಲಕ್ಷ ನೌಕರರು ಮತ್ತು 68.62 ಲಕ್ಷ ಪಿಂಚಣಿದಾರರಿಗೆ ಇದರ ಲಾಭ ದೊರೆಯಲಿದೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಸಿಂಗ್ ಠಾಕೂರ್ ಅವರು ಸಂಪುಟದ ನಿರ್ಧಾರವನ್ನು ತಿಳಿಸಿದರು.

ಭತ್ಯೆ ಹೆಚ್ಚಳದ ನಿರ್ಧಾರದಿಂದ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ ₹9,488 ಕೋಟಿ ಹೊರೆಯಾಗಲಿದೆ ಎಂದು ಅವರು ಹೇಳಿದರು.

ಈ ಮೊದಲು ಜುಲೈನಲ್ಲಿ ಸರ್ಕಾರವು ತುಟ್ಟಿ ಭತ್ಯೆಯನ್ನು ಶೇ 17 ರಿಂದ ಶೇ 28ಕ್ಕೆ ಹೆಚ್ಚಿಸಿತ್ತು.

ಶಿವಾಜಿನಗರದಲ್ಲಿ ರಾಮರಾಜ ಷೋ ರೂಂ

ಬೆಂಗಳೂರು: ಶಿವಾಜಿನಗರದಲ್ಲಿ ಹೊಸ ರಾಮರಾಜ ಕಾಟನ್ ಷೋ ರೂಂ ಶುಕ್ರವಾರ ಆರಂಭವಾಗಲಿದೆ.

ಶುಕ್ರವಾರ ಬೆಳಿಗ್ಗೆ 9.30ಕ್ಕೆ ಶಾಸಕ ರಿಜ್ವಾನ್ ಅರ್ಷದ್ ಈ ಷೋ ರೂಂ ಅನ್ನು ಉದ್ಘಾಟಿಸಲಿದ್ದಾರೆ. ಶಿವಾಜಿನಗರದ ಶ್ರೀ ರಾಮಲು ಸನ್ನಿಧಿ ಬೀದಿಯಲ್ಲಿ ಈ ಷೋ ರೂಂ ತೆರೆಯಲಾಗಿದೆ.

ನಾಳೆ ದುಂಡು ಮೇಜಿನ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಸಂಘಟನೆಗಳ ಆಶ್ರಯದಲ್ಲಿ ‘ಪಠ್ಯಪುಸ್ತಕ ಪರಿಷ್ಕರಣೆಯ ರಾಜಕಾರಣ’ ಕುರಿತು ದುಂಡು ಮೇಜಿನ ಸಭೆ ಅ.23ರಂದು ಬೆಳಿಗ್ಗೆ 10.30ಕ್ಕೆ ಕುಮಾರ ಪಾರ್ಕ್‌ನ ಗಾಂಧಿ ಭವನದಲ್ಲಿ ಆಯೋಜಿಸಲಾಗಿದೆ.

ಪ್ರಗತಿಪರ ಸಂಘಟನೆಗಳ ಒಕ್ಕೂಟ, ಮಹಿಳಾ ಸಂಘಟನೆಗಳು, ಸಮುದಾಯ ಕರ್ನಾಟಕ, ಬಂಡಾಯ ಸಾಹಿತ್ಯ ಸಂಘಟನೆ ಹಾಗೂ ಸಾಹಿತಿಗಳು ಮತ್ತು ಪ್ರಗತಿಪರ ಚಿಂತಕರು ಈ ಕಾರ್ಯಕ್ರಮ ಅಯೋಜಿಸಿದ್ದಾರೆ ಎಂದು ದಲಿತ ಸಂಘರ್ಷ ಸಮಿತಿ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ತಿಳಿಸಿದ್ದಾರೆ.

ಹಾಲು ಖರೀದಿಗೆ ಏಕರೂಪ ದರ: ಬಾಲಚಂದ್ರ

ಗೋಕಾಕ (ಬೆಳಗಾವಿ): ‘ರಾಜ್ಯದ ಎಲ್ಲ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳಲ್ಲೂ ಹಾಲು ಖರೀದಿಗೆ ಏಕರೂಪ ದರ ನಿಗದಿಪಡಿಸಲಾಗುವುದು’ ಎಂದು ಕೆಎಂಎಫ್ ಅಧ್ಯಕ್ಷರೂ ಆಗಿರುವ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ತಿಳಿಸಿದರು.

ಇಲ್ಲಿನ ಎನ್‌ಎಸ್‌ಎಫ್ ಅತಿಥಿ ಗೃಹದಲ್ಲಿ ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ಕಲ್ಯಾಣ ಸಂಘದಿಂದ ಫಲಾನುಭವಿಗಳಿಗೆ ಗುರುವಾರ ಚೆಕ್ ವಿತರಿಸಿ ಅವರು ಮಾತನಾಡಿದರು.

‘ಕೆಲವು ಜಿಲ್ಲಾ ಹಾಲು ಒಕ್ಕೂಟಗಳಲ್ಲಿ ಹಾಲಿನ ದರದಲ್ಲಿ ವ್ಯತ್ಯಾಸಗಳಿವೆ. ಅದನ್ನು ಪರಿಹರಿಸಲಾಗುವುದು. ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ನಡೆಯುವ ಮಹಾಮಂಡಳಿಯ ಸಾಮಾನ್ಯ ಸಭೆಯಲ್ಲಿ ಏಕರೂಪ ದರ ನಿಗದಿಪಡಿಸುವ ಬಗ್ಗೆ ನಿರ್ಧರಿಸಲಾಗುವುದು’ ಎಂದರು.

‘ಕೆಎಂಎಫ್‌ನಿಂದ ಜಾನುವಾರುಗಳನ್ನು ವಿಮಾ ಯೋಜನೆ ವ್ಯಾಪ್ತಿಗೊಳಪಡಿಸಲಾಗಿದೆ. ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಹಾಲು ಪೂರೈಸುವವರ ಜಾನುವಾರುಗಳು ಮೃತಪಟ್ಟಲ್ಲಿ ₹ 50ಸಾವಿರವರೆಗೆ ವಿಮಾ ಸೌಲಭ್ಯ ಸಿಗಲಿದೆ’ ಎಂದು ಹೇಳಿದರು.

‘ಕೆಎಂಎಫ್ ವ್ಯಾಪ್ತಿಯ ಸಿಬ್ಬಂದಿಯು ಕೋವಿಡ್ ವೇಳೆ ಪ್ರಾಣವನ್ನೇ ಪಣಕ್ಕಿಟ್ಟು ಕಾರ್ಯನಿರ್ವಹಿಸಿದ್ದಾರೆ. ಬೆಳಿಗ್ಗೆ 4 ಗಂಟೆಯಿಂದಲೇ ಕೆಲಸ ಮಾಡಿ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಹೀಗಾಗಿ, ಸಿಬ್ಬಂದಿಗೆ ಪ್ರತಿ ಲೀಟರ್ ಹಾಲಿಗೆ (ಖರೀದಿಯಾಗುವ) 20 ಪೈಸೆ ನೀಡುವ ಪ್ರಸ್ತಾವವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಲ್ಲಿಸಲಾಗಿದೆ ಎಂದರು.

ಕೋರ್ಸ್ ಮುಗಿಸಿದ ಬೆನ್ನಲ್ಲೇ ಇಕ್ಕಟ್ಟಿಗೆ ಸಿಲುಕಿದ ತಜ್ಞ ವೈದ್ಯರು

ಗೊಂದಲದ ಗೂಡು ‘ಕಡ್ಡಾಯ ಸೇವೆ’

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿ, ಸ್ನಾತಕೋತ್ತರ ಡಿಪ್ಲೊಮಾ ಮತ್ತು ಸೂಪರ್ ಸ್ಪೆಷಾಲಿಟಿ ಕೋರ್ಸ್‌ಗಳನ್ನು ಪೂರೈಸಿರುವ ತಜ್ಞ ವೈದ್ಯರನ್ನು ಒಂದು ವರ್ಷದ ಕಡ್ಡಾಯ ಸರ್ಕಾರಿ ಸೇವೆಗೆ ನಿಯೋಜಿಸಲು ಆರೋಗ್ಯ ಇಲಾಖೆ ಆರಂಭಿಸಿರುವ ಪ್ರಕ್ರಿಯೆ ಈಗ ಗೊಂದಲದ ಗೂಡಾಗಿದೆ. ಇದರಿಂದ ನೂರಾರು ವೈದ್ಯರ ವೃತ್ತಿ ಜೀವನ ಆರಂಭಿಸಲಾಗದೇ ಇಕ್ಕಟ್ಟಿಗೆ ಸಿಲುಕಿದ್ದಾರೆ.

ಕಡ್ಡಾಯ ಸೇವೆಯ ಅವಧಿ ಪೂರ್ಣಗೊಳಿಸದೇ ಈ ವೈದ್ಯರ ವೃತ್ತಿ ಜೀವನ ಆರಂಭಕ್ಕೆ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡದಂತೆ ನಿರ್ಬಂಧ ವಿಧಿಸಲಾಗಿದೆ.

ವಿದ್ಯಾರ್ಥಿಗಳ ಮೂಲ ದಾಖಲೆಗಳನ್ನು ಹಿಂದಿರುಗಿಸದಂತೆಯೂ ಶಿಕ್ಷಣ ಸಂಸ್ಥೆಗಳಿಗೆ ತಾಕೀತು ಮಾಡಲಾಗಿದೆ. ಕೋರ್ಸ್ ಮುಗಿದ ಬೆನ್ನಲ್ಲೇ ವೃತ್ತಿ ಜೀವನ ಆರಂಭಿಸಲು ತೊಡಕು ಸೃಷ್ಟಿಯಾಗಿರುವುದರಿಂದ ಯುವ ವೈದ್ಯರು ಕಂಗಾಲಾಗಿದ್ದಾರೆ.

ಪ್ರಸಕ್ತ ವರ್ಷ ಸ್ನಾತಕೋತ್ತರ ಕೋರ್ಸ್ ಮುಗಿಸಿರುವ ಎಲ್ಲ ವೈದ್ಯರನ್ನೂ ಕರ್ನಾಟಕ ವೈದ್ಯರ ಕಡ್ಡಾಯ ಸೇವಾ ತರಬೇತಿ ಕಾಯ್ದೆ -2015ರ ಅಡಿಯಲ್ಲಿ ಕಡ್ಡಾಯ ಸರ್ಕಾರಿ ಸೇವೆಗೆ ನಿಯೋಜಿಸಲು ನಿರ್ಧರಿಸಲಾಗಿದೆ. ವೈದ್ಯಕೀಯ ಶಿಕ್ಷಣ ಇಲಾಖೆ ಸೆಪ್ಟೆಂಬರ್‌ನಲ್ಲಿ ಪ್ರಕ್ರಿಯೆ ಆರಂಭಿಸಿತ್ತು. ನಂತರ ಈ ಹೊಣೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ.

ಅಕ್ಟೋಬರ್ 4ರಿಂದ ಆರೋಗ್ಯ ಇಲಾಖೆ ಪ್ರಕ್ರಿಯೆ ಆರಂಭಿಸಿದ್ದು, ಗೊಂದಲಗಳ ಕಾರಣದಿಂದ ಕೌನ್ಸೆಲಿಂಗ್ ದಿನಾಂಕವನ್ನು ಮೂರನೇ ಬಾರಿಗೆ ಮುಂದೂಡಲಾಗಿದೆ.

ಅ.4 ರ ಅಧಿಸೂಚನೆ ಪ್ರಕಾರ, ಅ.10ರವರೆಗೆ ನೋಂದಣಿ ಮತ್ತು ಅ.22 ಕ್ಕೆ ಫಲಿತಾಂಶ ಪ್ರಕಟವಾಗಬೇಕಿತ್ತು. ಅ. 29 ರಂದು ಸೇವೆಗೆ ಸೇರಲು ಕೊನೆಯ ದಿನಾಂಕವಾಗಿತ್ತು. ಅ.10 ಕ್ಕೆ ಪರಿಷ್ಕೃತ ಅಧಿಸೂಚನೆ ಹೊರಡಿಸಿ ಅ.13 ರವರೆಗೂ ನೋಂದಣಿಗೆ ಅವಕಾಶ ನೀಡಲಾಗಿತ್ತು. ಅ.13ಕ್ಕೆ ಮತ್ತೊಂದು ಪರಿಷ್ಕೃತ ಅಧಿಸೂಚನೆ ಹೊರಡಿಸಿದ್ದು, ನೋಂದಣಿಗೆ ಅ.23ರವರೆಗೂ ಕಾಲಾವಕಾಶ ನೀಡಲಾಗಿದೆ. ಅ.30ಕ್ಕೆ ಫಲಿತಾಂಶ ಪ್ರಕಟಿಸುವುದಾಗಿ ಆರೋಗ್ಯ ಇಲಾಖೆ ಹೇಳಿದೆ.

ಹುದ್ದೆಗಳ ಕೊರತೆ: 2018–19 ರಲ್ಲಿ ಕೋರ್ಸ್ ಆರಂಭಿಸಿ 2021ರ ಜುಲೈನಲ್ಲಿ ಪದವಿ ಪಡೆದಿರುವ ವೈದ್ಯಕೀಯ ಸ್ನಾತಕೋತ್ತರ ಪದವಿ, ಸ್ನಾತಕೋತ್ತರ ಡಿಪ್ಲೊಮಾ ಮತ್ತು ಸೂಪರ್ ಸ್ಪೆಷಾಲಿಟಿ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದವರನ್ನು ಕಡ್ಡಾಯ ಸರ್ಕಾರಿ ಸೇವೆಗೆ ನಿಯೋಜಿಸಲು ಈ ಬಾರಿ ಪ್ರಕ್ರಿಯೆ ನಡೆಯುತ್ತಿದೆ. ಸುಮಾರು 2,500 ತಜ್ಞ ವೈದ್ಯರು 2021ರ ಜುಲೈನಲ್ಲಿ ಕೋರ್ಸ್ ಮುಗಿಸಿದ್ದಾರೆ. ಶನಿವಾರದವರೆಗೂ 1,589 ಮಂದಿ ನೋಂದಾಯಿಸಿಕೊಂಡಿದ್ದಾರೆ.

ಪ್ರಜಾವಾಣಿ ವಿಶೇಷ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಳಿ ಲಭ್ಯವಿರುವ ಮಾಹಿತಿ ಪ್ರಕಾರ, 24 ವಿಭಾಗಗಳಲ್ಲಿ 1,307 ಹುದ್ದೆಗಳು ಮಾತ್ರ ಖಾಲಿ ಇವೆ. ಜನರಲ್ ಮೆಡಿಸಿನ್, ಕಿವಿ, ಮೂಗು ಮತ್ತು ಗಂಟಲು ತಜ್ಞರ ವಿಭಾಗ, ಕೀಲು ಮತ್ತು ಮೂಳೆ ತಜ್ಞರ ವಿಭಾಗ, ಸಾಮಾನ್ಯ ಶಸ್ತ್ರಚಿಕಿತ್ಸಾ ತಜ್ಞರ ವಿಭಾಗ, ರೋಗಪತ್ತೆ ವಿಜ್ಞಾನ, ಮಕ್ಕಳ ತಜ್ಞರ ವಿಭಾಗ ಮತ್ತು ನೇತ್ರ ತಜ್ಞರ ವಿಭಾಗದಲ್ಲಿ ಅಭ್ಯರ್ಥಿಗಳ ಸಂಖ್ಯೆಗೆ ಹೋಲಿಸಿದರೆ ಹುದ್ದೆಗಳ ಕೊರತೆ ತೀವ್ರವಾಗಿದೆ.

ಅನ್ಯ ವಿಷಯಕ್ಕೆ ನಿಯೋಜನೆ?: ‘ಹಲವು ವಿಭಾಗಗಳಲ್ಲಿ ಖಾಲಿ ಹುದ್ದೆಗಳ ಕೊರತೆ ತೀವ್ರವಾಗಿದೆ. ಇದರಿಂದಾಗಿ ಎಲ್ಲರನ್ನೂ ಕಡ್ಡಾಯ ಸೇವೆಗೆ ನಿಯೋಜಿಸಲು ಸಾಧ್ಯವೇ ಎಂಬ ಪ್ರಶ್ನೆಗೆ ಉತ್ತರ ಪಡೆಯಲು ಆರೋಗ್ಯ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿದ್ದೆವು. ಖಾಲಿ ಇರುವ ವಿಭಾಗಗಳಿಗೆ ನಿಯೋಜನೆ ಮಾಡುವುದಾಗಿ ಹೇಳಿದರು. ಜನರಲ್ ಮೆಡಿಸಿನ್ ತಜ್ಞರನ್ನು ಅರಿವಳಿಕೆ ವಿಭಾಗಕ್ಕೆ ನಿಯೋಜಿಸುವ ಚಿಂತನೆ ಇದೆ ಎಂಬ ಮಾಹಿತಿಯನ್ನೂ ಹಂಚಿಕೊಂಡರು’ ಎಂದು ಯುವ ವೈದ್ಯರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಯಾವ ವಿಷಯದಲ್ಲಿ ತಜ್ಞತೆ ಇದೆಯೋ ಅದರಲ್ಲೇ ಅವಕಾಶ ಮತ್ತು ಚಿಕಿತ್ಸೆ ನೀಡಬೇಕು. ಕಲಿಯದ ವಿಷಯದಲ್ಲಿ ಪ್ರಯೋಗ ಮಾಡಲು ಹೋದರೆ ರೋಗಿಗಳ ಪ್ರಾಣಕ್ಕೆ ಅಪಾಯ ಎದುರಾಗುತ್ತದೆ. ವೈದ್ಯಕೀಯ ನೀತಿಸಂಹಿತೆಗೆ ವಿರುದ್ಧವಾಗಿ ಕೆಲಸ ಮಾಡುವಂತೆ ವೈದ್ಯರಿಗೆ ಸರ್ಕಾರವೇ ಆದೇಶ ನೀಡಿದರೆ ಗತಿ ಏನು’ ಎಂದು ಅವರು ಪ್ರಶ್ನಿಸಿದರು.

ಡೀಮ್ಡ್ ವಿದ್ಯಾರ್ಥಿಗಳು ಹೊರಕ್ಕೆ: ‘ಕಡ್ಡಾಯ ಸೇವೆಯ ಪ್ರಕ್ರಿಯೆ ಆರಂಭವಾಗುವ ಮುನ್ನವೇ ಡೀಮ್ಡ್ ವಿಶ್ವವಿದ್ಯಾಲಯಗಳು ತಮ್ಮ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ, ಮೂಲ ದಾಖಲೆಗಳನ್ನು ವಿತರಿಸಿವೆ. ಅವರಲ್ಲೂ ವೃತ್ತಿಜೀವನ ಆರಂಭಿಸಿದ್ದಾರೆ. ಸರ್ಕಾರದ ನಿಯಮ ಪಾಲಿಸಲು ಹೊರಟವರನ್ನೇ ವಿಳಂಬ, ಗೊಂದಲದ ಶಿಕ್ಷೆಗೆ ಗುರಿಪಡಿಸುವುದು ಸರಿಯೇ’ ಎಂದು ಇನ್ನೊಬ್ಬ ವೈದ್ಯರು ಕೇಳುತ್ತಾರೆ.

‘ಸಮಸ್ಯೆ ಪರಿಹರಿಸಲು ಯತ್ನ’

ವೈದ್ಯರನ್ನು ಕಡ್ಡಾಯ ಸೇವೆಗೆ ನಿಯೋಜಿಸುವ ಪ್ರಕ್ರಿಯೆಯಲ್ಲಿನ ಗೊಂದಲ ಕುರಿತು ಪ್ರತಿಕ್ರಿಯಿಸಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ.ಅನಿಲ್ ಕುಮಾರ್, ‘ಹುದ್ದೆಗಳ ಕೊರತೆ ಸೇರಿದಂತೆ ಹಲವು ಸಮಸ್ಯೆಗಳು ಇರುವುದು ನಿಜ. ದೊಡ್ಡ ಪ್ರಮಾಣದಲ್ಲಿ ವೈದ್ಯರನ್ನು ಕಡ್ಡಾಯ ಸೇವೆಗೆ ನಿಯೋಜಿಸುತ್ತಿರುವುದರಿಂದ ಸಮಸ್ಯೆಯಾಗಿದೆ. ಅವುಗಳನ್ನು ಪರಿಹರಿಸುವ ಪ್ರಯತ್ನ ನಡೆಯುತ್ತಿದೆ’ ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	120.35	9,907	3,729
ಹಾರಂಗಿ	2,859	2,858.33	2,016	2,016
ಕಬಿನಿ	2284.00	2,282.3	4,500	2,500
ಹೇಮಾವತಿ	2,922	2,910.52	2,336	4,331
ಲಿಂಗನಮಕ್ಕಿ	1,819	1,815.10	--	--
ಸೂಪಾ (ಮೀ)	564	556.58	428	5,749
ಮಾಣಿ	594	587.12	232	-
ತುಂಗಭದ್ರಾ	1,633	1,632.81	6,474	10,688
ಮಲಪ್ರಭಾ	2079.5	2,079	40;000	694
ಘಟಪ್ರಭಾ	2175	2,175	409	409
ಭದ್ರಾ	186	186.4	4,787	4,787
ಆಲಮಟ್ಟಿ (ಮೀ)	519.6	519.60	8,919	7,875
ನಾರಾಯಣಪುರ (ಮೀ)	492.25	492.17	6,300	8,900

*ನೆಲಮಟ್ಟದಿಂದ

ಆರ್‌ಎಸ್‌ಎಸ್ 28ರಿಂದ ಬೈಠಕ್

ಧಾರವಾಡ: ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಅಖಿಲ ಭಾರತೀಯ ಕಾರ್ಯಕಾರಿ ಮಂಡಳಿ ಬೈಠಕ್ ಇದೇ 28ರಿಂದ ಮೂರು ದಿನ ಇಲ್ಲಿನ ಹೊರವಲಯದ ಗರಗ ಸಮೀಪದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ನಡೆಯಲಿದೆ.

ಬೈಠಕ್‌ನಲ್ಲಿ ಸರಸಂಘಚಾಲಕ ಡಾ.ಮೋಹನ ಭಾಗವತ್ ಮತ್ತು ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಹಾಗೂ ಅಖಿಲ ಭಾರತ, ಕ್ಷೇತ್ರೀಯ ಮತ್ತು ಪ್ರಾಂತಸ್ತರದ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ದೇಶದ ಸುಮಾರು 350 ಪ್ರತಿನಿಧಿಗಳು ಈ ಬೈಠಕ್‌ನಲ್ಲಿ ಭಾಗವಹಿಸಲಿದ್ದಾರೆ ಎಂದು ಅಖಿಲ ಭಾರತೀಯ ಪ್ರಚಾರ ಪ್ರಮುಖ ಸುನೀಲ್ ಅಂಬೇಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

1–5 ತರಗತಿ ಆರಂಭ ಮಾರ್ಗಸೂಚಿ ಪ್ರಕಟ

ಬೆಂಗಳೂರು: ರಾಜ್ಯದಲ್ಲಿ ಇದೇ 25ರಿಂದ ಪ್ರಾಥಮಿಕ ಹಂತದಿಂದಲೇ (1ರಿಂದ 5) ತರಗತಿ ಆರಂಭಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ ಮಾರ್ಗಸೂಚಿ ಪ್ರಕಟಿಸಿದ್ದು, ವಿದ್ಯಾರ್ಥಿಗಳ ಪ್ರತ್ಯೇಕ ತಂಡ ರಚಿಸಿ ಬೋಧನೆ ಮಾಡಬೇಕು ಮತ್ತು 50 ವರ್ಷ ದಾಟಿದ ಶಿಕ್ಷಕರು ಕಡ್ಡಾಯವಾಗಿ ಫೇಸ್‌ಶೀಲ್ಡ್ ಧರಿಸಬೇಕು ಎಂದು ಸೂಚಿಸಿದೆ.

25ರಿಂದ30ರವರೆಗೆಸರ್ಕಾರಿ,ಅನುದಾನಿತ, ಖಾಸಗಿ ಶಾಲೆಗಳು ವಿದ್ಯಾರ್ಥಿಗಳ ತಂಡ ರಚನೆ ಮಾಡಿ ಅರ್ಧ ದಿನ ಮಾತ್ರ ಭೌತಿಕ ತರಗತಿಗಳು ನಡೆಸಬೇಕು. ನ. 2ರಿಂದ ಪೂರ್ಣ ಪ್ರಮಾಣದಲ್ಲಿ ತರಗತಿ ಆರಂಭಿಸಬೇಕು. ಅಂದಿನಿಂದ ಮಧ್ಯಾಹ್ನದ ಬಿಸಿಯೂಟ ನೀಡಲಾಗುವುದು. ಮಕ್ಕಳು ಮನೆಯಿಂದಲೇ ಬಿಸಿನೀರು ತರುವುದು ಉತ್ತಮ. ವಿದ್ಯಾರ್ಥಿಗಳ ಭೌತಿಕ ಹಾಜರಾತಿ ಕಡ್ಡಾಯವಲ್ಲ. ಶಾಲೆಗೆ ಹಾಜರಾಗುವ ವಿದ್ಯಾರ್ಥಿಗಳು ಪೋಷಕರಿಂದ ಅನುಮತಿ ಪತ್ರ ಕಡ್ಡಾಯವಾಗಿ ತರಬೇಕು ಎಂದು ಇಲಾಖೆ ಸೂಚನೆ ನೀಡಿದೆ.

ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿ ವರ್ಗ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಶಿಕ್ಷಕರು ಕಡ್ಡಾಯವಾಗಿ ಎರಡು ಡೋಸ್ ಕೋವಿಡ್ ಲಸಿಕೆ ಪಡೆದಿರಬೇಕು. ಶಾಲೆಯಲ್ಲಿ ಬಿಸಿನೀರಿನ ವ್ಯವಸ್ಥೆ ಮಾಡಬೇಕು. ಒಂದೂವರೆ ವರ್ಷದ ನಂತರ ಭೌತಿಕ ತರಗತಿ ಆರಂಭ ಆಗುತ್ತಿರುವುದರಿಂದ ಮೊದಲ ವಾರ ಬ್ರಿಡ್ಜ್ ಕೋರ್ಸ್‌ಗೆ (ಸೇತುಬಂಧ) ಆದ್ಯತೆ ನೀಡಬೇಕು. ಕೋವಿಡ್ ನಿಯಂತ್ರಣ ಸಂಬಂಧ ಸರ್ಕಾರ, ಆರೋಗ್ಯ ಇಲಾಖೆ ಮತ್ತು ಜಿಲ್ಲಾಡಳಿತಗಳು ನೀಡುವ ಸೂಚನೆ ಕಡ್ಡಾಯವಾಗಿ ಪಾಲಿಸಬೇಕು ಎಂದೂ ತಿಳಿಸಲಾಗಿದೆ. 20 ಮಕ್ಕಳ ತಂಡ ರಚನೆ ಮಾಡಬೇಕು. ಮಕ್ಕಳಲ್ಲಿ ದಿಢೀರ್ ಅಸ್ವಸ್ಥತೆ ಅಥವಾ ರೋಗಲಕ್ಷಣ ಇದ್ದರೆ, ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಿ, ಸ್ಥಳೀಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಗೆ ಸೂಚಿಸಬೇಕು ಎಂದು ಮಾರ್ಗಸೂಚಿಯಲ್ಲಿದೆ.

ತರಗತಿ ವೇಳಾಪಟ್ಟಿ: ಅ. 25ರಿಂದ 30ರವರೆಗೆಸೋಮವಾರದಿಂದಶುಕ್ರವಾರದವರೆಗೆ ಬೆಳಿಗ್ಗೆ 10ರಿಂದ ಮಧ್ಯಾಹ್ನ 1.30ರವರೆಗೆ ಹಾಗೂ ಶನಿವಾರ ಬೆಳಿಗ್ಗೆ 8ರಿಂದ 11.40ರವರೆಗೆ ತರಗತಿ ನಡೆಸಬೇಕು. ನ. 2ರಿಂದ ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 10.30ರಿಂದ ಸಂಜೆ 4.30ರವರೆಗೆ ಹಾಗೂ ಶನಿವಾರ ಬೆಳಿಗ್ಗೆ 8ರಿಂದ 11.40ರವರೆಗೆ ತರಗತಿ ನಡೆಸಲು ಸೂಚನೆ ನೀಡಲಾಗಿದೆ.

ವಿಠಲ ಮಲೆಕುಡಿಯ ನಿರ್ದೋಷಿ: ಕೋರ್ಟ್

ಮಂಗಳೂರು: ನಕ್ಸಲ್ ಚಟುವಟಿಕೆಯಲ್ಲಿ ಭಾಗಿಯಾಗಿದ್ದ ಆರೋಪ ಎದುರಿಸುತ್ತಿದ್ದ ವಿಠಲ ಮಲೆಕುಡಿಯ ಮತ್ತು ಅವರ ತಂದೆ ಲಿಂಗಣ್ಣ ಮಲೆಕುಡಿಯ ಅವರ ಪ್ರಕರಣದ ವಿಚಾರಣೆ ನಡೆಸಿದ 3ನೇ ಹೆಚ್ಚುವರಿ ನ್ಯಾಯಾಲಯವು ಇವರಿಬ್ಬರೂ ನಿರ್ದೋಷಿ ಎಂದು ಆದೇಶ ಪ್ರಕಟಿಸಿದೆ.

ನ್ಯಾಯಾಧೀಶ ಬಿ.ಬಿ. ಜಕಾತಿ ಗುರುವಾರ ಈ ಆದೇಶ ಪ್ರಕಟಿಸಿದರು. ಬೆಳ್ತಂಗಡಿ ತಾಲ್ಲೂಕು ಕುತ್ಲೂರಿನ ವಿಠಲ ಮಲೆಕುಡಿಯ ಅವರನ್ನು 2012ರ ಮಾರ್ಚ್ 3ರಂದು ನಕ್ಸಲ್ ನಿಗ್ರಹ ದಳವು ಬಂಧಿಸಿತ್ತು. ಬಳಿಕ ನ್ಯಾಯಾಲಯಕ್ಕೆ ಸಲ್ಲಿಸಲಾದ ದೋಷಾರೋಪ ಪಟ್ಟಿಯಲ್ಲಿ ವಿಠಲ ಮಲೆಕುಡಿಯ ಅವರನ್ನು 6ನೇ ಆರೋಪಿಯನ್ನಾಗಿ ಹಾಗೂ ತಂದೆ ಲಿಂಗಣ್ಣ ಮಲೆಕುಡಿಯ ಅವರನ್ನು 7ನೇ ಆರೋಪಿಯನ್ನಾಗಿ ಮಾಡಲಾಗಿತ್ತು.

ಬಂಧನ ಸಮಯದಲ್ಲಿ ವಿಠಲ ಮಂಗಳೂರು ವಿ.ವಿ ಪತ್ರಿಕೋದ್ಯಮ ವಿದ್ಯಾರ್ಥಿಯಾಗಿದ್ದರು.

ಪೊಲೀಸರಿಗೆ ತಲವಾರು ಬೀಸಿ ಆರೋಪಿ ಪರಾರಿ

ಮಂಗಳೂರು: ಆರೋಪಿಯನ್ನು ವಶಕ್ಕೆ ಪಡೆಯಲು ಹೋಗಿದ್ದ ವೇಳೆ, ಆತ ಪೊಲೀಸರ ಮೇಲೆ ತಲವಾರು ಬೀಸಿ, ಪರಾರಿಯಾದ ಘಟನೆ ಗುರುವಾರ ಸಮೀಪದ ಉಳ್ಳಾಲದಲ್ಲಿ ನಡೆದಿದೆ.

ಹಲವು ಪ್ರಕರಣಗಳ ಆರೋಪಿಯಾಗಿರುವ ಧರ್ಮನಗರ ನಿವಾಸಿ ಮುಕ್ತಾರ್ ಅಹ್ಮದ್ ಎಂಬಾತ ತಲೆಮರೆಸಿಕೊಂಡಿದ್ದ. ಈ ಕಾರಣದಿಂದ ಉಳ್ಳಾಲ ಪೊಲೀಸರು ನ್ಯಾಯಾಲಯದ ವಾರಂಟ್ ಪಡೆದು ಬಂಧಿಸಲು ಗುರುವಾರ ಬೆಳಿಗ್ಗೆ ಆತನ ಮನೆಗೆ ತೆರಳಿದ್ದರು. ಈ ಸಂದರ್ಭದಲ್ಲಿ ತಲವಾರು ಹಿಡಿದು ಹೊರಬಂದ ಮುಕ್ತಾರ್, ಪೊಲೀಸರ ಮೇಲೆ ದಾಳಿ ನಡೆಸಲು ಯತ್ನಿಸಿ, ನವಾಜ್ ಎಂಬ ವ್ಯಕ್ತಿಯ ಬೈಕಿನಲ್ಲಿ ಪರಾರಿಯಾದ. ಬೈಕ್ ಬೆನ್ನಟ್ಟಿದ್ದ ಪೊಲೀಸರು ತೊಕ್ಕೊಟ್ಟು ಮೇಲ್ಸೇತುವೆ ಬಳಿ ಬೈಕ್ ಅನ್ನು ಹಿಡಿದಿದ್ದಾರೆ. ಆದರೆ, ಮುಕ್ತಾರ್ ಬೈಕ್‌ನಿಂದ ಇಳಿದು, ಪರಾರಿಯಾಗಿದ್ದು, ನವಾಜ್‌ನನ್ನು ಬಂಧಿಸಿದ್ದಾರೆ.

ಜಾನಪದ ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣಕ್ಕೆ ಆರು ವರ್ಷಗಳಾದರೂ ಸಿಗದ ಅನುಮೋದನೆ

ಕಡತದಲ್ಲೇ ಉಳಿದ 'ಡಿಜಿಟಲ್ ಆತ್ಮಕಥೆ'

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕರ್ನಾಟಕ ಜಾನಪದ ಅಕಾಡೆಮಿಯು ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣಕ್ಕೆ ಯೋಜನೆ ರೂಪಿಸಿ ಆರು ವರ್ಷಗಳು ಕಳೆದರೂ ಸರ್ಕಾರದಿಂದ ಈವರೆಗೂ ಅನುಮೋದನೆ ಸಿಕ್ಕಿಲ್ಲ. ಹೀಗಾಗಿ, 'ಡಿಜಿಟಲ್ ಆತ್ಮಕಥೆ' ಹೊಂದುವ ಕಲಾವಿದರ ಕನಸುಗಳು ಕಡತದಲ್ಲಿಯೇ ಕಮರಿಹೋಗುತ್ತಿವೆ.

ಕಲೆ ಹಾಗೂ ಕಲಾವಿದರ ಜೀವನವನ್ನು ಪರಿಚಯಿಸುವ ಉದ್ದೇಶದಿಂದ 2015ರಲ್ಲಿ ಅಕಾಡೆಮಿಯ ಅಂದಿನ ಅಧ್ಯಕ್ಷ ಪಿಚ್ಚಳ್ಳಿ ಶ್ರೀನಿವಾಸ ಅವರು 'ಡಿಜಿಟಲ್ ಆತ್ಮಕಥೆ' ಯೋಜನೆ ರೂಪಿಸಿದ್ದರು. ಇದಕ್ಕಾಗಿ ₹ 2.5 ಕೋಟಿ ವಿಶೇಷ ಅನುದಾನ ಮೀಸಲಿಡಲಾಗಿತ್ತು. ಆದರೆ, ಈವರೆಗೂ ಜಾನಪದ ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ ಸಾಕಾರವಾಗಿಲ್ಲ.

ಡೊಳ್ಳು ಕುಣಿತ, ಗೊರವರ ಕುಣಿತ, ತಮಟೆ ವಾದನ, ಪಟ ಕುಣಿತ, ಕಂಸಾಳೆ, ಪೂಜಾ ಕುಣಿತ ಸೇರಿದಂತೆ ಜಾನಪದ ಕಲೆಯ ವಿವಿಧ ಪ್ರಕಾರಗಳಲ್ಲಿ ಸಾಧನೆ ಮಾಡಿದ ಕಲಾವಿದರ ಪಟ್ಟಿಯನ್ನು ಈ ಹಿಂದೆ ಸಿದ್ಧ ಪಡಿಸಲಾಗಿತ್ತು. ಸಾಕ್ಷ್ಯಚಿತ್ರ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಿರ್ದೇಶಕರ ಆಯ್ಕೆಗೆ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನೂ ರಚನೆ ಮಾಡಲಾಗಿತ್ತು.

ಪ್ರತಿ ಕಲಾವಿದರ ಬಗ್ಗೆ 10 ಗಂಟೆ ಚಿತ್ರೀಕರಣ ನಡೆಸಿ, ಅವರ ಕುಟುಂಬದ ಸದಸ್ಯರು ಹಾಗೂ ಆಪ್ತರಿಂದಲೂ ಮಾಹಿತಿ ಕಲೆ ಹಾಕುವುದು ಯೋಜನೆಯ ಭಾಗವಾಗಿತ್ತು.



ಕಲಾವಿದರ ಡಿಜಿಟಲ್ ಆತ್ಮಕಥೆ ನಿರ್ಮಾಣಕ್ಕೆ ಸರ್ಕಾರದ ಅನುಮೋದನೆಗೆ ಕಾಯುತ್ತಿದ್ದು, ಶೀಘ್ರ ಅನುಮೋದನೆ ಸಿಗಲಿದೆ. ಅನುದಾನವಿದೆ

ಮಂಜಮ್ಮ ಜೋಗತಿ, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷೆ



ಮೂಲ ಕಲೆ ಉಳಿಸಲು ಇದು ಸಹಕಾರಿಯಾಗಿತ್ತು. ನಂತರ ಬಂದ ಅಧ್ಯಕ್ಷರು ಡಿಜಿಟಲ್ ಆತ್ಮಕಥೆಗೆ ಆಸಕ್ತಿ ತೋರದಿರುವುದು ವಿಪರ್ಯಾಸ

ಪಿಚ್ಚಳ್ಳಿ ಶ್ರೀನಿವಾಸ, ಕರ್ನಾಟಕ ಜಾನಪದ ಅಕಾಡೆಮಿ ಮಾಜಿ ಅಧ್ಯಕ್ಷ

ಸಿಗದ ಅನುಮತಿ: ಚಿತ್ರೀಕರಣವನ್ನು ಒಂದು ಗಂಟೆಗೆ ಪರಿಷ್ಕರಿಸಿ, ಅರ್ಧ ಗಂಟೆಯ ಎರಡು ಕಂತುಗಳನ್ನು ಹೊರತರಲು ಯೋಜನೆ ರೂಪಿಸಲಾಗಿತ್ತು.

ಪ್ರತಿ ಸಾಕ್ಷ್ಯಚಿತ್ರಕ್ಕೆ ₹ 4 ಲಕ್ಷ ವೆಚ್ಚವಾಲಿದೆ ಎಂದು ಅಕಾಡೆಮಿ ಅಂದಾಜಿಸಿತ್ತು. ಈ ಯೋಜನೆಗೆ ಟೆಂಡರ್ ರಹಿತ ಅನುಮತಿ ನೀಡುವಂತೆ ಅಕಾಡೆಮಿಯು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಆದರೆ, ಸರ್ಕಾರ ಇದಕ್ಕೆ ಅವಕಾಶ ನೀಡದಿದ್ದರಿಂದ ಯೋಜನೆ ನನೆಗುದಿಗೆ ಬಿದ್ದಿದೆ.

'ಕಲಾವಿದರು ಬಳಸುವ ವಸ್ತ್ರಗಳು, ವಾದ್ಯಗಳು ಹಾಗೂ ಹಾಡುವ ಶೈಲಿಯನ್ನೂ ಮರು ನಿರ್ಮಾಣ ಮಾಡಲು ಡಿಜಿಟಲ್ ಆತ್ಮಕಥೆ ಸಹಕಾರಿಯಾಗಲಿದೆ. ವಾರ್ತಾ ಇಲಾಖೆ ನಿರ್ಮಿಸಿದ ಸಾಕ್ಷ್ಯಚಿತ್ರಗಳ ರೀತಿ ಆಗಬಾರದು ಎಂಬ ಕಾರಣಕ್ಕೆ ಟೆಂಡರ್ ರಹಿತ ಅನುಮತಿ ಕೇಳಲಾಗಿತ್ತು. ಕಲೆ ಹಾಗೂ ಕಲಾವಿದರ ಬಗ್ಗೆ ಸರ್ಕಾರಗಳು ಆಸಕ್ತಿ ತೋರದಿದ್ದರಿಂದ ಈವರೆಗೂ ಅದು ಸಾಕಾರಗೊಂಡಿಲ್ಲ' ಎಂದು ಅಕಾಡೆಮಿಯ ಮಾಜಿ ಅಧ್ಯಕ್ಷ ಹಾಗೂ ಕಲಾವಿದ ಪಿಚ್ಚಳ್ಳಿ ಶ್ರೀನಿವಾಸ ಬೇಸರ ವ್ಯಕ್ತಪಡಿಸಿದರು.

ಸಿದ್ಧಗೊಂಡಿದ್ದ ಕಲಾವಿದರ ಪಟ್ಟಿ

ಜಾನಪದ ಕಲಾವಿದರ ಡಿಜಿಟಲ್ ಆತ್ಮಕಥೆಗೆ ಸಂಬಂಧಿಸಿದಂತೆ 67 ಕಲಾವಿದರ ಪಟ್ಟಿಯನ್ನೂ 2015ರಲ್ಲಿ ಸಿದ್ಧಪಡಿಸಲಾಗಿತ್ತು.

ಪ್ರತಿ ಜಿಲ್ಲೆಯಿಂದ ತಲಾ ಇಬ್ಬರು ಕಲಾವಿದರನ್ನು ಗುರುತಿಸಲಾಗಿತ್ತು. ಜಾನಪದ ಗಾಯಕಿ ಸುಕ್ರಿ ಬೊಮ್ಮಗೌಡ, ವೀರಗಾಸೆ ಕಲಾವಿದ ಎಂ.ಆರ್. ಬಸಪ್ಪ, ಗೊರವಕುಣಿತ ಕಲಾವಿದ ಪುಟ್ಟಮಲ್ಲೇಗೌಡ ಸೇರಿದಂತೆ ವಿವಿಧ ಕಲಾವಿದರ ಹೆಸರು ಪಟ್ಟಿಯಲ್ಲಿ ಇದ್ದವು.

2016ರಲ್ಲಿಯೇ ಡಿಜಿಟಲ್ ಆತ್ಮಕಥೆಯನ್ನು ಸಿದ್ಧಗೊಳಿಸಲು ಅಕಾಡೆಮಿ ಗಡುವು ಹಾಕಿಕೊಂಡಿತ್ತು. ಆದರೆ, ತಾಂತ್ರಿಕ ಕಾರಣಗಳಿಂದ ಆಗ ಸಾಧ್ಯವಾಗಿರಲಿಲ್ಲ.

ಗೌರಿ ಹತ್ಯೆ: ಹೈಕೋರ್ಟ್ ಆದೇಶ ಅನೂರ್ಜಿತಗೊಳಿಸಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ ಆರೋಪಿ ಮೋಹನ್ ನಾಯಕ್ ವಿರುದ್ಧ ಕರ್ನಾಟಕ ಸಂಘಟಿತ ಅಪರಾಧಗಳ ನಿಯಂತ್ರಣ ಕಾಯ್ದೆ (ಕೊಕಾ) ಅಡಿ ದಾಖಲಿಸಲಾಗಿದ್ದ ಆರೋಪ ರದ್ದುಗೊಳಿಸಿದ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ಗುರುವಾರ ಅನೂರ್ಜಿತಗೊಳಿಸಿದೆ.

ಸಂಘಟಿತ ಅಪರಾಧ ಗುಂಪಿನ ಭಾಗವಾಗಿರುವ ಆರೋಪಿಯ ವಿರುದ್ಧ ಈ ಹಿಂದೆ ಸಲ್ಲಿಸಲಾಗಿದ್ದ ಎರಡು ಆರೋಪಪಟ್ಟಿಗಳ ಅನ್ವಯವೇ ವಿಚಾರಣೆ ನಡೆಸಬೇಕು ಎಂದು ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ತ್ರಿಸದಸ್ಯ ಪೀಠ ಗುರುವಾರ ಪ್ರಕಟಿಸಿರುವ ಆದೇಶದಲ್ಲಿ ತಿಳಿಸಿದೆ.

ನಾಯಕ್ ವಿರುದ್ಧ ಕೊಕಾ ಅಡಿ ದಾಖಲಿಸಲಾದ ಆರೋಪ ರದ್ದುಗೊಳಿಸಿ ರಾಜ್ಯ ಹೈಕೋರ್ಟ್ 2021ರ ಏಪ್ರಿಲ್ 22ರಂದು ನೀಡಿದ್ದ ಆದೇಶ ಪ್ರಶ್ನಿಸಿ ಗೌರಿ ಅವರ ಸೋದರಿ ಕವಿತಾ ಲಂಕೇಶ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ಸೆಪ್ಟೆಂಬರ್ 21ರಂದು ಪೂರ್ಣಗೊಳಿಸಿದ್ದ ಪೀಠ ಆದೇಶ ಕಾಯ್ದಿರಿಸಿತ್ತು. ಸಂಘಟಿತ ಅಪರಾಧ ಗುಂಪಿನ ಸದಸ್ಯರೊಂದಿಗೆ ಸಂಬಂಧ ಹೊಂದಿರುವ ಕುರಿತು ಸಾಕ್ಷ್ಯಗಳು ದೊರೆತಿರುವುದರಿಂದ, ಕಾಯ್ದೆಯ ಸೆಕ್ಷನ್ 3(2), 3(3), 3(4) ಅಥವಾ 3(5)ರ ಅಡಿ ಯಾವುದೇ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಬಹುದು ಎಂದೂ ಪೀಠ ಹೇಳಿದೆ. ಇದರಿಂದಾಗಿ ವಿಚಾರಣೆ ಪೂರ್ಣಗೊಳ್ಳುವ ಮುನ್ನ ಆರೋಪಿಗೆ ಜಾಮೀನು ದೊರೆಯುವ ಸಾಧ್ಯತೆಗಳು ಮತ್ತಷ್ಟು ಕ್ಷೀಣಿಸಿವೆ.

ಈ ಮೇಲ್ಮನವಿಯ ವಿಚಾರಣೆ ನಡೆಸಿ ಆದೇಶ ನೀಡುವವರೆಗೆ ಆರೋಪಿ ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಇತ್ಯರ್ಥಪಡಿಸದಂತೆ ಪೀಠವು ಈ ಹಿಂದೆ ಅಧೀನ ನ್ಯಾಯಾಲಯಕ್ಕೆ ಸೂಚಿಸಿತ್ತು.

ಗೌರಿ ಹತ್ಯೆಯ ಪ್ರಮುಖ ಆರೋಪಿಗಳಾದ ಅಮೋಲ್ ಕಾಳೆ ಮತ್ತು ರಾಜೇಶ್ ಬಂಗೇರಾ ಅವರೊಂದಿಗೆ ಆರೋಪಿ ನಿಕಟ ಸಂಬಂಧ ಹೊಂದಿದ್ದ, ಅಲ್ಲದೆ, ಅಪರಾಧ ಗುಂಪಿನ ಭಾಗವಾಗಿದ್ದ ಎಂಬುದು ಎಸ್‌ಐಟಿ ತನಿಖೆಯಿಂದ ತಿಳಿದುಬಂದಿದೆ ಎಂದು ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ ಹಾಗೂ ಸಿ.ಟಿ. ರವಿಕುಮಾರ್ ಅವರನ್ನೊಳಗೊಂಡ ಪೀಠ ಹೇಳಿದೆ.

ಕೊಕಾ ಅಡಿ ದಾಖಲಾಗಿದ್ದ ಆರೋಪವನ್ನು ರದ್ದುಪಡಿಸಿ ಆದೇಶ ನೀಡಿರುವ ಹೈಕೋರ್ಟ್‌ನ ಕ್ರಮವು ಸ್ಪಷ್ಟವಾಗಿ ಪ್ರಮಾದದಿಂದ ಕೂಡಿದ್ದು, ಅಧಿಕಾರ ವ್ಯಾಪ್ತಿಯನ್ನು ಮೀರಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪ್ರಕರಣದ ಪ್ರಮುಖ ಆರೋಪಿ ಅಮೋಲ್ ಕಾಳೆ ನೇತೃತ್ವದ ಗುಂಪಿನ ಭಾಗವಾಗಿರುವ ಮೋಹನ್ ನಾಯಕ್, ಗೌರಿ ಲಂಕೇಶ್ ಹತ್ಯೆ ಪ್ರಕರಣದ ಹೊರತಾಗಿಯೂ ಇತರ ಅನೇಕ ಸಂಘಟಿತ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವ ಸಾಧ್ಯತೆ ಇದೆ. ವಿಚಾರವಾದಿಗಳಾದ ಡಾ.ನರೇಂದ್ರ ದಾಭೋಲ್ಕರ್, ಗೋವಿಂದ ಪಾನ್ಸರೆ, ಡಾ.ಎಂ.ಎಂ. ಕಲ್ಬುರ್ಗಿ ಅವರ ಹತ್ಯೆ ಹಾಗೂ ಚಿಂತಕ ಕೆ.ಎಸ್. ಭಗವಾನ್ ಅವರ ಹತ್ಯೆ ಸಂಚು ರೂಪಿಸಿದ ಆರೋಪಗಳಿಗೆ ಸಂಬಂಧಿಸಿದಂತೆಯೇ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಅರ್ಜಿದಾರರು ದೂರಿದ್ದರು.

ಗೌರಿ ಲಂಕೇಶ್ ಅವರು 2017ರ ಸೆಪ್ಟೆಂಬರ್ 5ರಂದು ಬೆಂಗಳೂರಿನ ರಾಜರಾಜೇಶ್ವರಿ ನಗರದ ತಮ್ಮ ನಿವಾಸದೆದುರು ಹತ್ಯೆಗೊಳಗಾಗಿದ್ದರು.

ರೇಣುಕಾ ರಮಾನಂದಗೆ ವಿಭಾ ಸಾಹಿತ್ಯ ಪ್ರಶಸ್ತಿ



ಹುಬ್ಬಳ್ಳಿ: ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶೆಟಗೇರಿಯ ರೇಣುಕಾ ರಮಾನಂದ ಅವರು 2021ನೇ ಸಾಲಿನ 'ವಿಭಾ ಸಾಹಿತ್ಯ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.

ರೇಣುಕಾ ಬರೆದ 'ಸಾಂಬಾರ ಬಟ್ಟಲ ಕೊಡಿಸು' ಕವನ ಸಂಕಲನದ ಹಸ್ತಪ್ರತಿಗೆ ಈ ಗೌರವ ದೊರೆತಿದೆ. ಪ್ರಶಸ್ತಿ ₹10 ಸಾವಿರ ನಗದು ಹಾಗೂ ಫಲಕ ಒಳಗೊಳ್ಳಲಿದೆ.

ವಿಮರ್ಶಕರಾದ ಬಾನು ಮುಷ್ತಾಕ್ ಮತ್ತು ಕೆ.ಫಣಿರಾಜ ಅವರು ಅಂತಿಮ ಸುತ್ತಿನ ಆಯ್ಕೆಯ ತೀರ್ಪುಗಾರರಾಗಿದ್ದರು ಎಂದು ವಿಭಾ ಸಾಹಿತ್ಯ ಪ್ರಶಸ್ತಿಯ ಸಂಚಾಲಕಿ ಸುನಂದಾ ಕಡಮೆ ತಿಳಿಸಿದ್ದಾರೆ.

₹100ಕ್ಕಾಗಿ ಪರಿಶಿಷ್ಟ ಕಾರ್ಮಿಕನಿಗೆ ಹಲ್ಲೆ

ತಿಪಟೂರು (ತುಮಕೂರು): ತಾಲ್ಲೂಕಿನ ಗೊರಗೊಂಡನಹಳ್ಳಿಯಲ್ಲಿ ₹100 ಮರಳಿಸಲಿಲ್ಲವೆಂದು ಕೋಪಗೊಂಡ ಸಿಮೆಂಟ್ ಅಂಗಡಿಯ ಗುಮಾಸ್ತನೊಬ್ಬ, ಹಮಾಲಿ ಮೇಲೆ ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿ, ಭುಜದ ಮೂಳೆ ಮುರಿದಿದ್ದಾನೆ.

ಸಿಮೆಂಟ್ ಅಂಗಡಿಯೊಂದರಲ್ಲಿ ಹಮಾಲಿ ಕೆಲಸ ಮಾಡುತ್ತಿದ್ದ, ಪರಿಶಿಷ್ಟ ಸಮುದಾಯದ ನಾರಾಯಣ (32) ಹಲ್ಲೆಗೊಳಗಾದವರು. ಅಕ್ಟೋಬರ್ 13ರಂದು ಸಿಮೆಂಟ್ ಅಂಗಡಿಯ ಗುಮಾಸ್ತ ಕೂಲಿಯಾಗಿ ₹500ರ ನೋಟು ನೀಡಿ, ₹100 ಚಿಲ್ಲರೆಯನ್ನು ವಾಪಸ್ ನೀಡುವಂತೆ ತಿಳಿಸಿದ್ದರು. ಆದರೆ ನಾರಾಯಣ ಚಿಲ್ಲರೆ ಹಣ ಹಿಂತಿರುಗಿಸಿರಲಿಲ್ಲ. ಇದರಿಂದ ಸಿಟ್ಟಿಗೆದ್ದ ಗುಮಾಸ್ತ ಅವಾಚ್ಯ ಶಬ್ದಗಳಿಂದ ನಿಂದಿಸಿ, ರಾಡ್‌ನಿಂದ ಹಲ್ಲೆ ಮಾಡಿದ್ದಾರೆ ಎಂದು ನಾರಾಯಣ ದೂರಿನಲ್ಲಿ ತಿಳಿಸಿದ್ದಾರೆ. ಘಟನೆ ಬಳಿಕ ದೂರು ನೀಡದಂತೆ ಆರೋಪಿಗಳು ಪ್ರಾಣ ಬೆದರಿಕೆ ಹಾಕಿದ್ದಾರೆ ಎಂದೂ ನಾರಾಯಣ ಆರೋಪಿಸಿದ್ದಾರೆ.

ಅಂಗಡಿ ಮಾಲೀಕರ ವಿರುದ್ಧ ನಗರ ಠಾಣೆಯಲ್ಲಿ ದೂರು ದಾಖಲಾಗಿದೆ.



ಹಲ್ಲೆಗೊಳಗಾದ ನಾರಾಯಣ ಸದ್ಯ ತಿಪಟೂರು ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ

ಕಾಲುವೆ ಜಾಗದಲ್ಲಿ ಸಚಿವರ ಮನೆ

ಒಂದನೇ ಪುಟದಿಂದ

'ಕಾಲುವೆ, ಒಳಚರಂಡಿಯ ಜಾಗ ಸರ್ಕಾರಕ್ಕೆ ಸೇರಿದೆ. ಒಂದು ವೇಳೆ ಆ ಜಾಗ ಬೇರೊಂದು ಉದ್ದೇಶಕ್ಕೆ ಬಳಸಿಕೊಳ್ಳಬೇಕಾದರೆ ಅದನ್ನು ಡಿನೋಟಿಫಿಕೇಷನ್ ಮಾಡಬೇಕಾಗುತ್ತದೆ. ಆದರೆ, ಅದ್ಯಾವುದೂ ಮಾಡದೆ ಕಾನೂನುಬಾಹಿರವಾಗಿ ಸಚಿವರು ಮನೆ ನಿರ್ಮಿಸಿದ್ದಾರೆ. ಲೇಔಟ್ ನಿರ್ಮಿಸಲಾಗಿದೆ. ಇವರ ವಿರುದ್ಧ ಕ್ರಮ ಜರುಗಿಸಬೇಕು. ಸರ್ಕಾರಿ ಆಸ್ತಿಯನ್ನು ಅದರ ಮೂಲ ಉದ್ದೇಶಕ್ಕಾಗಿ ಬಳಸಿಕೊಳ್ಳಬೇಕು' ಎಂದು ದೂರುದಾರರಾದ ಡಿ. ವೇಣುಗೋಪಾಲ, ಡಿ. ಅಬ್ದುಲ್ ಖದೀರ್, ಖಾಜಾ ಮೈನುದ್ದೀನ್ ಆಗ್ರಹಿಸಿದ್ದಾರೆ.

ತುಂಗಭದ್ರಾ ಜಲಾಶಯದ ಕಾಲುವೆ ಆಸ್ತಿ ಸರ್ಕಾರದ್ದು, ಅದಕ್ಕೆ ಸೇರಿದ ಜಾಗದಲ್ಲಿ ಲೇಔಟ್ ನಿರ್ಮಿಸಿರುವುದು ಕಾನೂನುಬಾಹಿರ.

ಜೆ. ಕಾರ್ತಿಕ್, ಪ್ರಧಾನ ಕಾರ್ಯದರ್ಶಿ, ರಾಜ್ಯ ರೈತ ಸಂಘ

ಯುಜಿಡಿಗೆ ಸೇರಿದ ಜಾಗದಲ್ಲಿ ಲೇಔಟ್ ನಿರ್ಮಿಸಿರುವ ವಿಚಾರ ನನಗೆ ಗೊತ್ತಿಲ್ಲ. ಅದನ್ನು ಪರಿಶೀಲಿಸಿ ಕ್ರಮ ಜರುಗಿಸಲಾಗುವುದು. –

ಮನ್ಸೂರ್ ಅಲಿ, ಪೌರಾಯುಕ್ತ, ನಗರಸಭೆ

ಸರ್ಕಾರಿ ಆಸ್ತಿ ಕಬಳಿಕೆ ಬಗ್ಗೆ ಡಿಸಿಗೆ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ. ಇದರ ವಿರುದ್ಧ ನ್ಯಾಯಾಲಯದಲ್ಲಿ ಹೋರಾಡುವೆ.

–ಡಿ. ವೇಣುಗೋಪಾಲ, ದೂರುದಾರ, ಬಿಜೆಪಿ ಮುಖಂಡ

ಸಚಿವರಿಂದ ನಾವು ಜಾಗ ಖರೀದಿಸಿ, ಲೇಔಟ್ ಅಭಿವೃದ್ಧಿ ಪಡಿಸಿದ್ದೇವೆ. ಯಾವುದೇ ರೀತಿಯ ಸರ್ಕಾರಿ ಜಮೀನು ಅತಿಕ್ರಮಣ ಮಾಡಿಲ್ಲ. –ರವಿಶಂಕರ್, ಪಾಲುದಾರ, ಸುರಕ್ಷಾ ಎಂಟರ್‌ಪ್ರೈಸೆಸ್

ರಾಯ ಕಾಲುವೆಯ ಜಾಗ ಏನಾಗಿದೆಯೋ ನನಗೆ ಗೊತ್ತಿಲ್ಲ. ಅದರ ಬಗ್ಗೆ ಪರಿಶೀಲನೆ ನಡೆಸಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

–ಕೃಷ್ಣಾಜಿ ಚವ್ಹಾಣ್, ಮುಖ್ಯ ಎಂಜಿನಿಯರ್, ತುಂಗಭದ್ರಾ ನೀರಾವರಿ ನಿಗಮ

ಕ್ರೈಸ್ತರ ಕ್ಷಮೆ ಯಾಚಿಸುವೆ: ಗೂಳಿಹಟ್ಟಿ

ಚರ್ಚ್, ಮಸೀದಿ, ದರ್ಗಾ ಮಾಹಿತಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಮಸೀದಿ, ದರ್ಗಾ ಮತ್ತು ಚರ್ಚ್‌ಗಳಿಗೆ ಸಮರ್ಪಕವಾಗಿ ಅನುದಾನ ಹಂಚಿಕೆ ಮಾಡುವ ಉದ್ದೇಶದಿಂದ ಅವುಗಳ ಮಾಹಿತಿ ಸಂಗ್ರಹಿಸಲಾಗುತ್ತಿದೆಯೇ ಹೊರತು, ಇದರ ಹಿಂದೆ ಯಾವುದೇ ದುರುದ್ದೇಶವಿಲ್ಲ' ಎಂದು ವಿಧಾನಮಂಡಲದ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಸಮಿತಿಯ ಸದಸ್ಯ ಗೂಳಿಹಟ್ಟಿ ಶೇಖರ್ ತಿಳಿಸಿದ್ದಾರೆ.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ಸಮಿತಿಯ ಸಭೆಗಳಲ್ಲಿ ಶಾದಿ ಮಹಲ್‌ಗಳ ನಿರ್ಮಾಣ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಅನುದಾನ ಹಂಚಿಕೆಯ ವಿಚಾರ ಪ್ರಸ್ತಾಪವಾಗುತ್ತದೆ. ಅದಕ್ಕೆ ನಿಖರ ಮಾಹಿತಿಯ ಅಗತ್ಯವಿದೆ ಎಂದರು.

ಈ ಕಾರಣಕ್ಕಾಗಿ ಚರ್ಚ್ ಮಾತ್ರ ಅಲ್ಲ, ಮಸೀದಿ ಮತ್ತು ದರ್ಗಾಗಳ ಬಗ್ಗೆಯೂ ಮಾಹಿತಿ ಕೇಳಲಾಗಿದೆ. ಹಿಂದುಳಿದ ವರ್ಗಗಳ ಇಲಾಖೆ ಅಧಿಕಾರಿಗಳು ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಸೇರಿ ಮಾಹಿತಿ ಕಲೆ ಹಾಕುತ್ತಾರೆ. ಅನುದಾನದ ಸಮರ್ಪಕ ಹಂಚಿಕೆಗೆ ನೈಜ ಮಾಹಿತಿಯ ಅಗತ್ಯವಿದೆ ಎಂದು ಗೂಳಿಹಟ್ಟಿ ಶೇಖರ್ ಹೇಳಿದರು.

ಕ್ಷಮೆ ಯಾಚನೆ: 'ನನ್ನ ಮಾತಿನಿಂದ ಮೂಲ ಕ್ರೈಸ್ತ ಸಮುದಾಯಕ್ಕೆ ನೋವಾಗಿದ್ದರೆ ಬಹಿರಂಗ ಕ್ಷಮೆ ಕೋರುತ್ತೇನೆ. ನಾವು ಆ ಸಮುದಾಯದ ಪರವಾಗಿದ್ದೇವೆ. ಬಲವಂತವಾಗಿ ಮತಾಂತರ ಮಾಡುವವರ ವಿರುದ್ಧ ಸಮರ ಮುಂದುವರಿಸುತ್ತೇನೆ. ಆದರೆ, ಮೂಲ ಕ್ರೈಸ್ತ ಧರ್ಮದವರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವುದಿಲ್ಲ' ಎಂದು ಹೇಳಿದರು.

'ಹಿಂದೂಗಳಾಗಿ ಹುಟ್ಟಿ ನಾವು ಸಾಕಷ್ಟು ನೋವು ತಿನ್ನುತ್ತಿದ್ದೇವೆ. ಚರ್ಚ್‌ಗಳ ಮಾಹಿತಿ ಕಲೆ ಹಾಕುವ ಸಂದರ್ಭದಲ್ಲಿ ಗಲಾಟೆ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದರು. ಚರ್ಚ್‌ಗಳ ಸಮೀಕ್ಷೆ ನಡೆಸುತ್ತಿಲ್ಲ, ಅನುದಾನದ ಸಮರ್ಪಕ ಹಂಚಿಕೆಗಾಗಿ ಮಾಹಿತಿ ಮಾತ್ರ ಕೇಳುತ್ತಿದ್ದೇವೆ' ಎಂದರು.

'ಪಿಎಸ್‌ಐ' ಹೆಸರಿನಲ್ಲಿ ಮಹಿಳೆಗೆ ಬ್ಲ್ಯಾಕ್‌ಮೇಲ್

ಬೆಂಗಳೂರು: ತಾನೊಬ್ಬ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಎಂಬುದಾಗಿ ಹೇಳಿಕೊಂಡು ಮಹಿಳೆಯೊಬ್ಬರನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪಿ ಸಂದೀಪ್‌ನನ್ನು (34) ಕೆಂಪೇಗೌಡನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಶಿವಮೊಗ್ಗದ ಸಂದೀಪ್, ಉದ್ಯಮಿ ಎಂಬುದಾಗಿ ಹೇಳಿಕೊಳ್ಳುತ್ತಿದ್ದಾನೆ. 45 ವರ್ಷದ ಮಹಿಳೆ ನೀಡಿದ್ದ ದೂರು ಆಧರಿಸಿ ಆತನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಲಸಕ್ಕಾಗಿ ಮಹಿಳೆ ಹುಡುಕಾಡುತ್ತಿದ್ದರು. ಅವರ ಮೊಬೈಲ್ ನಂಬರ್ ತಿಳಿದುಕೊಂಡಿದ್ದ ಆರೋಪಿ, ಕರೆ ಮಾಡಿ ಮಾತನಾಡಿದ್ದ. ಕೆಲಸ ಕೊಡಿಸುವುದಾಗಿ ಭರವಸೆ ನೀಡಿದ್ದ. ಮಹಿಳೆಗೆ ವಿಡಿಯೊ ಕರೆ ಮಾಡಿದ್ದ ಆತ, ಬಟ್ಟೆಗಳನ್ನು ಬಿಚ್ಚುವಂತೆ ಹೇಳಿದ್ದ. ಅದಕ್ಕೆ ಮಹಿಳೆ ನಿರಾಕರಿಸಿದ್ದರು.'

'ವಿಡಿಯೊ ಕರೆ ದೃಶ್ಯವನ್ನು ಚಿತ್ರೀಕರಿಸಿಕೊಂಡಿದ್ದ ಆರೋಪಿ, ಮಹಿಳೆಯನ್ನು ಅರೆನಗ್ನವಾಗಿ ಕಾಣುವಂತೆ ಮಾರ್ಫಿಂಗ್ ಮಾಡಿದ್ದ. ಅದೇ ವಿಡಿಯೊವನ್ನು ಮಹಿಳೆಗೆ ಕಳುಹಿಸಿ ಬ್ಲ್ಯಾಕ್‌ಮೇಲ್ ಮಾಡಿ, ಅವರನ್ನು ಯಲಚೇನಹಳ್ಳಿ ಬಳಿ ಅ.21ರಂದು ಕರೆಸಿಕೊಂಡಿದ್ದ. 'ನಾನೊಬ್ಬ ಪಿಎಸ್‌ಐ. ನಿನ್ನ ವಿಡಿಯೊ ನನ್ನ ಬಳಿ ಇದೆ. ಕೇಳಿದಷ್ಟು ಹಣ ಕೊಡದಿದ್ದರೆ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ. ನಿನ್ನನ್ನೂ ಬಂಧಿಸಿ ಜೈಲಿಗೆ ಕಳುಹಿಸುತ್ತೇನೆ' ಎಂದೂ ಆತ ಹೇಳಿದ್ದ.'

'ಹಣಕ್ಕೆ ಪೀಡಿಸಲಾರಂಭಿಸಿದ್ದ ಆರೋಪಿ, ಮಾನಸಿಕ ಹಾಗೂ ದೈಹಿಕವಾಗಿ ಕಿರುಕುಳ ನೀಡಲಾರಂಭಿಸಿದ್ದ. ನೊಂದ ಮಹಿಳೆ ಠಾಣೆಗೆ ದೂರು ನೀಡಿದ್ದರು' ಎಂದೂ ಮೂಲಗಳು ತಿಳಿಸಿವೆ.

₹ 5 ಲಕ್ಷ ಮೌಲ್ಯದ 10 ವಾಹನ ಜಪ್ತಿ

ಬೆಂಗಳೂರು: ಅನ್ನಪೂರ್ಣೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳನ್ನು ಕದಿಯುತ್ತಿದ್ದ ದೀಪಕ್ ಕುಮಾರ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. 'ದ್ವಿಚಕ್ರ ವಾಹನ ಕಳ್ಳತನ ಬಗ್ಗೆ ಪ್ರಕರಣಗಳು ದಾಖಲಾಗಿದ್ದವು. ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದ. ಆತನಿಂದ ₹ 5 ಲಕ್ಷ ಮೌಲ್ಯದ 10 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಹನುಮಂತನಗರ, ಶಿವಾಜಿನಗರ, ಬ್ಯಾಡರಹಳ್ಳಿ, ಮಹಾಲಕ್ಷ್ಮಿ ಲೇಔಟ್, ಬಾಗಲಗುಂಟೆ, ಕುಣಿಗಲ್ ಠಾಣೆ ವ್ಯಾಪ್ತಿಯಲ್ಲೂ ದೀಪಕ್ ಕೃತ್ಯ ಎಸಗಿರುವ ಮಾಹಿತಿ ಇದೆ' ಎಂದೂ ತಿಳಿಸಿದರು.

ಪೊಲೀಸ್ ಸಂಸ್ಮರಣಾ ದಿನಾಚರಣೆ; ಹುತಾತ್ಮರಿಗೆ ಗೌರವ ನಮನ

'₹200 ಕೋಟಿ ವೆಚ್ಚದಲ್ಲಿ 100 ಕಟ್ಟಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಹಲವು ಪೊಲೀಸ್ ಠಾಣೆಗಳ ಕಟ್ಟಡಗಳು ಹಳೆಯದ್ದಾಗಿದ್ದು, ಹೊಸ ಕಟ್ಟಡಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ₹ 200 ಕೋಟಿ ವೆಚ್ಚದಲ್ಲಿ 100 ಠಾಣೆಗಳಿಗೆ ಹೊಸ ಕಟ್ಟಡ ನಿರ್ಮಿಸುವ ಯೋಜನೆ ಹಾಕಿಕೊಳ್ಳಲಾಗಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಮೈಸೂರು ರಸ್ತೆಯಲ್ಲಿರುವ ನಗರ ಸಶಸ್ತ್ರ ಮೀಸಲು (ಸಿಎಆರ್) ಪಡೆಯ ಮೈದಾನದಲ್ಲಿ ಗುರುವಾರ ಆಯೋಜಿಸಿದ್ದ 'ಪೊಲೀಸ್ ಸಂಸ್ಮರಣಾ ದಿನಾಚರಣೆ' ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಹುತಾತ್ಮ ಪೊಲೀಸರಿಗೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

'ಜನರ ಹಾಗೂ ಸಮಾಜದ ರಕ್ಷಣೆಗಾಗಿ ಪೊಲೀಸರು ಹಗಲಿರುಳು ಶ್ರಮಿಸುತ್ತಿದ್ದಾರೆ. ಜೀವವನ್ನು ಪಣಕ್ಕಿಟ್ಟು ಕೆಲಸ ಮಾಡುತ್ತಿದ್ದಾರೆ. ಪೊಲೀಸ್ ಇಲಾಖೆ ಅಭಿವೃದ್ಧಿ ಹಾಗೂ ಸಿಬ್ಬಂದಿ ಕ್ಷೇಮಾಭಿವೃದ್ಧಿಗಾಗಿ ರಾಜ್ಯ ಸರ್ಕಾರ ಹೆಚ್ಚಿನ ಒತ್ತು ನೀಡಲಿದೆ' ಎಂದೂ ಹೇಳಿದರು.



ಬೆಂಗಳೂರು ನಗರ ಸಶಸ್ತ್ರ ಮೀಸಲು (ಸಿಎಆರ್) ಪಡೆಯ ಮೈದಾನದಲ್ಲಿ ಗುರುವಾರ ಆಯೋಜಿಸಿದ್ದ 'ಪೊಲೀಸ್ ಸಂಸ್ಮರಣಾ ದಿನಾಚರಣೆ' ಕಾರ್ಯಕ್ರಮದಲ್ಲಿ ಹುತಾತ್ಮ ಪೊಲೀಸರ ಆತ್ಮಕ್ಕೆ ಶಾಂತಿ ಕೋರಿ ಸಿಬ್ಬಂದಿ ಮೌನಾಚರಣೆ ಮಾಡಿದರು – ಪ್ರಜಾವಾಣಿ ಚಿತ್ರ

'ಪೊಲೀಸರ ವಸತಿ ಸಮಸ್ಯೆ ಇರುವುದು ಗಮನಕ್ಕೆ ಬಂದಿದೆ. ಹೀಗಾಗಿ, ₹ 2 ಸಾವಿರ ಕೋಟಿ ವೆಚ್ಚದಲ್ಲಿ 10 ಸಾವಿರ ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ. ಇದಕ್ಕಾಗಿ 'ಪೊಲೀಸ್ ಗೃಹ-2025' ಯೋಜನೆ ಸಹ ಜಾರಿಗೊಳಿಸಲಾಗಿದೆ' ಎಂದೂ ತಿಳಿಸಿದರು.

377 ಪೊಲೀಸರ ಸಾವು: 'ಗಲಾಟೆ, ಗಲಭೆ ಹಾಗೂ ಇತರೆ ಸಂದಿಗ್ಧ ಸ್ಥಿತಿಯಲ್ಲಿ ಶಾಂತಿ ಕಾಪಾಡಲು ಪೊಲೀಸರು ಕೆಲಸ ಮಾಡುತ್ತಿದ್ದಾರೆ. 2020ರ ಸೆಪ್ಟೆಂಬರ್‌ನಿಂದ 2021ರ ಆಗಸ್ಟ್‌ವರೆಗೆ ದೇಶದಲ್ಲಿ ಕರ್ತವ್ಯದ ವೇಳೆ 377 ಮಂದಿ ಮೃತಪಟ್ಟಿದ್ದಾರೆ. ರಾಜ್ಯದಲ್ಲೂ ಕರ್ತವ್ಯದ ವೇಳೆ 16 ಪೊಲೀಸರು ಮೃತಪಟ್ಟಿದ್ದಾರೆ' ಎಂದು ಆರಗ ಜ್ಞಾನೇಂದ್ರ ಹೇಳಿದರು.

'ರಾಜ್ಯದಲ್ಲಿ ಕೋವಿಡ್ ಸಂದರ್ಭದಲ್ಲೂ 173 ಸಿಬ್ಬಂದಿಯನ್ನು ನಾವೆಲ್ಲರೂ ಕಳೆದುಕೊಂಡಿದ್ದೇವೆ' ಎಂದೂ ತಿಳಿಸಿದರು.

ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯೆಲ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಹಾಗೂ ಬೆಂಗಳೂರು ಪೊಲೀಸ್ ಕಮಿಷನರ್ ಕಮಲ್ ಪಂತ್ ಇದ್ದರು.

ಪ್ರೀತಿಗಾಗಿ ಯುವಕರಿಬ್ಬರ ಗಲಾಟೆ; ಕೊಲೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಹರಿಕೀರ್ತನ್ ಎಂಬಾತನನ್ನು ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಲಾಗಿದ್ದು, ಈ ಸಂಬಂಧ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಬಿ.ಕಾಂ ವಿದ್ಯಾರ್ಥಿಗಳಾದ ಮುತ್ತುರಾಜು (19) ಹಾಗೂ ಹೇಮಂತ್ (18) ಬಂಧಿತರು. ಇವರಿಬ್ಬರ ಹಲ್ಲೆಯಿಂದ ತೀವ್ರ ಗಾಯಗೊಂಡಿರುವ ಹರಿಕೀರ್ತನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ' ಪೊಲೀಸ್ ಮೂಲಗಳು ಹೇಳಿವೆ.

'ಗಾಯಾಳು ಹರಿಕೀರ್ತನ್ ಸಹ ಪದವಿ ವಿದ್ಯಾರ್ಥಿ. ತನ್ನದೇ ಕಾಲೇಜಿನ ಯುವತಿಯೊಬ್ಬರ ಜೊತೆ ಎರಡು ವರ್ಷದಿಂದ ಸ್ನೇಹ ಇಟ್ಟುಕೊಂಡಿದ್ದ. ಅವರಿಬ್ಬರು ಪರಸ್ಪರ ಪ್ರೀತಿಸುತ್ತಿದ್ದರೆಂಬ ಮಾಹಿತಿ ಇದೆ. ಎರಡು ತಿಂಗಳ ಹಿಂದಷ್ಟೇ ಹರಿಕೀರ್ತನ್‌ನಿಂದ ದೂರವಿರಲು ಯತ್ನಿಸಿದ್ದ ಯುವತಿ, ಆರೋಪಿ ಮುತ್ತುರಾಜುನನ್ನು ಪ್ರೀತಿಸಲಾರಂಭಿಸಿದ್ದರೆಂದು ಗೊತ್ತಾಗಿದೆ.'

'ಬೇರೊಬ್ಬನನ್ನು ಪ್ರೀತಿಸುವ ವಿಷಯ ತಿಳಿದ ಹರಿಕೀರ್ತನ್, ಆತ್ಮಹತ್ಯೆಗೂ ಯತ್ನಿಸಿದ್ದ. ಇದರಿಂದಾಗಿ ಯುವತಿ, ಪುನಃ ಹರಿಕೀರ್ತನ್ ಜೊತೆ ಸುತ್ತಾಡಲಾರಂಭಿಸಿದ್ದರು. ಆದರೆ, ಮುತ್ತುರಾಜು ಜೊತೆಗಿನ ಸ್ನೇಹವನ್ನು ಕಳೆದುಕೊಂಡಿರಲಿಲ್ಲ' ಎಂದೂ ಮೂಲಗಳು ತಿಳಿಸಿವೆ.

'ಮುತ್ತುರಾಜು ಜೊತೆ ಮಾತನಾಡದಂತೆ ಎಚ್ಚರಿಸಿದ್ದ ಹರಿಕೀರ್ತನ್, ಯುವತಿ ಮನೆಗೆ ಬುಧವಾರ ಹೋಗಿ ಗಲಾಟೆ ಮಾಡಿದ್ದ. ಅದೇ ಸಂದರ್ಭದಲ್ಲಿ ಮುತ್ತುರಾಜು ಸ್ಥಳದಲ್ಲಿದ್ದ. ಆತನ ಮೇಲೂ ಹಲ್ಲೆಗೆ ಯತ್ನಿಸಿದ್ದ. ತಿರುಗಿಬಿದ್ದ ಮುತ್ತುರಾಜು ಹಾಗೂ ಆತನ ಸ್ನೇಹಿತರು, ಹರಿಕೀರ್ತನ್ ಹಿಡಿದು ಥಳಿಸಿದ್ದರು.'

'ತಪ್ಪಿಸಿಕೊಂಡು ಓಡಿದ್ದ ಹರಿಕೀರ್ತನ್, ಖಾಸಗಿ ಬಸ್ ಏರಿದ್ದ. ಆತನನ್ನು ಬೆನ್ನಟ್ಟಿದ್ದ ಆರೋಪಿಗಳು, ಬಸ್ಸಿನಲ್ಲೇ ಚಾಕುವಿನಿಂದ ಇರಿದು ಪರಾರಿಯಾಗಿದ್ದರು. ಬಸ್ ಚಾಲಕರೇ ಗಾಯಾಳುವನ್ನು ಮಾಗಡಿ ರಸ್ತೆಯಲ್ಲಿರುವ ಮಧು ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ. ಸದ್ಯ ಆರೋಗ್ಯ ಸ್ಥಿತಿ ಸುಧಾರಿಸಿದೆ' ಎಂದೂ ಮೂಲಗಳು ಹೇಳಿವೆ.

ಆರೋಪಿಗಳ ರಕ್ಷಣೆ; ಪೊಲೀಸರ ವಿರುದ್ಧ ಎಸ್ಪಿಗೆ ದೂರು

ಬೆಂಗಳೂರು: 'ದಾಬಸ್‌ಪೇಟೆ ಠಾಣೆ ವ್ಯಾಪ್ತಿಯಲ್ಲಿ ಅ. 12ರಂದು ನಡೆದಿರುವ ಕೆಂಪಣ್ಣ (22) ಎಂಬುವರ ಕೊಲೆ ಪ್ರಕರಣದಲ್ಲಿ ನೈಜ ಆರೋಪಿಗಳನ್ನು ಪೊಲೀಸರು ರಕ್ಷಿಸುತ್ತಿದ್ದಾರೆ' ಎಂದು ಆರೋಪಿಸಿ ಮೃತನ ಅಣ್ಣ ಹೇಮಂತ್ ಬೆಂಗಳೂರು ಗ್ರಾಮಾಂತರ ಎಸ್ಪಿ ಕೋನವಂಶಿ ಕೃಷ್ಣ ಅವರಿಗೆ ದೂರು ನೀಡಿದ್ದಾರೆ.

ದೂರು ಸ್ವೀಕರಿಸಿರುವ ಕೋನವಂಶಿ ಕೃಷ್ಣ, 'ಪ್ರಕರಣದ ಬಗ್ಗೆ ಮಾಹಿತಿ ಕಲೆಹಾಕುತ್ತೇನೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ' ಎಂದಿದ್ದಾರೆ.

'ದಾಬಸ್‌ಪೇಟೆಯಲ್ಲಿರುವ ಮಾರುತಿ ಟ್ರೇಡರ್ಸ್ ಗ್ರಾನೈಟ್ ಕಾರ್ಖಾನೆಯಲ್ಲಿ ಕೆಂಪಣ್ಣ ಕೆಲಸ ಮಾಡುತ್ತಿದ್ದರು. ಅದೇ ಕಾರ್ಖಾನೆ ಬಳಿಯೇ ತಲೆ ಮೇಲೆ ಗ್ರಾನೈಟ್ ಕಲ್ಲು ಎತ್ತಿಹಾಕಿ ಕೊಲೆ ಮಾಡಲಾಗಿದೆ. ಮದ್ಯದ ಪಾರ್ಟಿ ಮಾಡುವ ನೆಪದಲ್ಲಿ ಆರೋಪಿಗಳಾದ ವಿನಯ್, ಚಂದು, ಭರತ್, ಝುಬಿ ಈ ಕೃತ್ಯ ಎಸಗಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆಯಡಿಯೂ ಪ್ರಕರಣ ದಾಖಲಾಗಿದೆ' ಎಂದು ಹೇಮಂತ್ ಆರೋಪಿಸಿದ್ದಾರೆ. 'ಪ್ರಕರಣದಲ್ಲಿ ಝುಬಿನನ್ನು ಮಾತ್ರ ಪೊಲೀಸರು ಬಂಧಿಸಿದ್ದಾರೆ. ಕೃತ್ಯದಲ್ಲಿ ನೇರವಾಗಿ ಭಾಗಿಯಾಗಿದ್ದ ಆರೋಪಿಗಳಾದ ವಿನಯ್, ಚಂದು ಹಾಗೂ ಭರತ್ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಮೂವರು ಪ್ರಭಾವಿಗಳ ಮಕ್ಕಳಾಗಿದ್ದು, ಅವರನ್ನು ಪ್ರಕರಣದಲ್ಲಿ ಬಚಾವ್ ಮಾಡಲು ಪೊಲೀಸರು ಯತ್ನಿಸುತ್ತಿದ್ದಾರೆ. ಕೃತ್ಯ ಸೆರೆಯಾಗಿದ್ದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನೂ ಪೊಲೀಸರೇ ಅಳಿಸಿ ಹಾಕಿಸಿದ್ದಾರೆ. ಹೀಗಾಗಿ, ಪ್ರಕರಣದ ತನಿಖಾಧಿಕಾರಿಯನ್ನು ಕೂಡಲೇ ಬದಲಾಯಿಸಬೇಕು. ಎಲ್ಲ ಆರೋಪಿಗಳನ್ನು ಬಂಧಿಸಿ ಅಣ್ಣನ ಕೊಲೆಗೆ ನ್ಯಾಯ ಒದಗಿಸಬೇಕು' ಎಂದೂ ಅವರು ಆಗ್ರಹಿಸಿದ್ದಾರೆ.

₹ 17 ಕೋಟಿ ಮೌಲ್ಯದ ಅಂಬರ್‌ಗ್ರೀಸ್ ಜಪ್ತಿ

ಬೆಂಗಳೂರು: ಸುಗಂಧ ದ್ರವ್ಯ ಹಾಗೂ ಡ್ರಗ್ಸ್ ತಯಾರಿಕೆಗೆ ಬಳಕೆಯಾಗುತ್ತದೆ ಎನ್ನಲಾದ ತಿಮಿಂಗಿಲಿನ ವಾಂತಿಯನ್ನು (ಆಂಬರ್‌ಗ್ರೀಸ್) ಅಕ್ರಮವಾಗಿ ಮಾರಲು ಯತ್ನಿಸುತ್ತಿದ್ದ ಐವರು ಆರೋಪಿಗಳನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಪುನೀತ್, ಮಧು, ನಂದೀಶ್, ಗೋಪಾಲ್ ಹಾಗೂ ಯೋಗೇಶ್ ಬಂಧಿತರು. ಅವರಿಂದ ₹ 17 ಕೋಟಿ ಮೌಲ್ಯದ 17 ಕೆ.ಜಿ ಆಂಬರ್‌ಗ್ರೀಸ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. 'ಕರಾವಳಿ ವ್ಯಕ್ತಿಗಳ ಜೊತೆ ಒಡನಾಟ ಹೊಂದಿದ್ದ ಆರೋಪಿಗಳು, ಅವರ ಮೂಲಕ ಆಂಬರ್‌ಗ್ರೀಸ್‌ನನ್ನು ನಗರಕ್ಕೆ ತಂದಿದ್ದರು. ಇದಕ್ಕೆ ಕೋಟ್ಯಂತರ ರೂಪಾಯಿ ಬೆಲೆ ಇರುವುದಾಗಿ ಹೇಳಿ ಮಾರಾಟ ಮಾಡಲು ಗ್ರಾಹಕರನ್ನು ಹುಡುಕಾಡುತ್ತಿದ್ದರು.'

'ಅನುಮಾನಾಸ್ಪದವಾಗಿ ಸುತ್ತಾಡುತ್ತಿದ್ದ ಆರೋಪಿಗಳ ಬಗ್ಗೆ ಮಾಹಿತಿ ಬಂದಿತ್ತು. ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು. ಅವರ ಬಳಿ ಅಂಬರ್‌ಗ್ರೀಸ್ ಪತ್ತೆಯಾಯಿತು' ಎಂದೂ ತಿಳಿಸಿದರು.

ಸುದ್ದಿ 2 ನಿಮಿಷ

₹ 1.25 ಕೋಟಿ ಮೌಲ್ಯದ ಚಿನ್ನಾಭರಣ ಜಪ್ತಿ: ಬಂಧನ

ಬೆಂಗಳೂರು: ಬಾಣಸವಾಡಿ ಉಪವಿಭಾಗ ವ್ಯಾಪ್ತಿಯಲ್ಲಿ ದಾಖಲಾಗಿದ್ದ ನಾಲ್ಕು ಪ್ರಕರಣಗಳಲ್ಲಿ ನಾಲ್ವರನ್ನು ಬಂಧಿಸಿರುವ ಪೊಲೀಸರು, ₹ 1.25 ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿಗಳನ್ನು ಜಪ್ತಿ ಮಾಡಿದ್ದಾರೆ.

'ಮನೆಯಲ್ಲಿ ಕಳ್ಳತನ ಹಾಗೂ ಸುಲಿಗೆಗೆ ಯತ್ನಿಸಿದ್ದ ಬಗ್ಗೆ ಪ್ರಕರಣಗಳು ದಾಖಲಾಗಿದ್ದವು. ಸೂಕ್ತ ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ಪಿಸ್ತೂಲ್ ತೋರಿಸಿ ಆರೋಪಿಗಳು ಸುಲಿಗೆಗೆ ಯತ್ನಿಸಿದ್ದರು. ಕೃತ್ಯಕ್ಕಾಗಿ ಆರೋಪಿಗಳು, ಕದ್ದ ಕಾರು ಬಳಸಿದ್ದರು. ಅವರನ್ನು ಬಂಧಿಸಿ ಪಿಸ್ತೂಲ್ ಸಹ ಜಪ್ತಿ ಮಾಡಲಾಗಿದೆ.'

'ರಾಮಮೂರ್ತಿನಗರ ಠಾಣೆ ವ್ಯಾಪ್ತಿಯ ಮನೆಗಳಲ್ಲಿ ನಡೆದಿದ್ದ ಕಳ್ಳತನ ಪ್ರಕರಣವನ್ನೂ ಭೇದಿಸಲಾಗಿದೆ' ಎಂದೂ ತಿಳಿಸಿದರು.

'ಭಕ್ತೆ' ಸೋಗಿನಲ್ಲಿ ದೇವರ ಬೆಳ್ಳಿ ಸಾಮಗ್ರಿ ಕಳವು



ಬೆಂಗಳೂರು: ಕೆ.ಪಿ. ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿರುವ ಜೈನ ಬಸದಿಯೊಂದಕ್ಕೆ ಭಕ್ತೆ ಸೋಗಿನಲ್ಲಿ ಪ್ರವೇಶಿಸಿ ದೇವರ ಬೆಳ್ಳಿ ಸಾಮಗ್ರಿಗಳನ್ನು ಕದ್ದಿದ್ದ ಆರೋಪದಡಿ ಮಂಜು ಅಲಿಯಾಸ್ ಮುನ್ನಿಬಾನು (35) ಎಂಬಾಕೆಯನ್ನು ಪೊಲೀಸರು ಬಂಧಿಸಿದ್ದಾರೆ.

'ಅ. 16ರಂದು ಬೆಳ್ಳಿ ಸಾಮಗ್ರಿಗಳು ಕಳ್ಳತನವಾಗಿದ್ದವು. ಈ ಬಗ್ಗೆ ಭಕ್ತರೊಬ್ಬರು ದೂರು ನೀಡಿದ್ದರು. ಅದರನ್ವಯ ಪ್ರಕರಣ ದಾಖಲಿಸಿಕೊಂಡು ಮುನ್ನಿಬಾನುಳನ್ನು ಬಂಧಿಸಲಾಗಿದೆ. 379 ಗ್ರಾಂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಸದಿಯಲ್ಲಿ ವಿಶೇಷ ಪೂಜೆ ಆಯೋಜಿಸಲಾಗಿತ್ತು. ದೂರುದಾರ ಹಾಗೂ ಅವರ ಕುಟುಂಬದವರು, ದೇವರ ಬೆಳ್ಳಿ ಸಾಮಗ್ರಿಗಳನ್ನು ಬಸದಿಗೆ ತಂದು ಪೂಜೆ ಮಾಡಿದ್ದರು. ಪೂಜೆ ಮುಗಿದ ನಂತರ ಸಾಮಗ್ರಿಗಳನ್ನು ಚೀಲದಲ್ಲಿ ತುಂಬಿ ಇರಿಸಿದ್ದರು. ಪ್ರಸಾದ ನೀಡಲೆಂದು ದೂರುದಾರ ಬಸದಿಯಿಂದ ಹೊರಗೆ ಹೋಗಿದ್ದರು. ಇದೇ ಸಂದರ್ಭದಲ್ಲೇ ಆರೋಪಿ, ಚೀಲವನ್ನು ಕದ್ದುಕೊಂಡು ಹೋಗಿದ್ದರು' ಎಂದೂ ತಿಳಿಸಿದರು.

ಮನೆ ಸಾಗಿಸಲು ಕೃತ್ಯ: 'ಜೈನ ಸಮುದಾಯಕ್ಕೆ ಸೇರಿದ್ದ ಮಂಜು, ಅನ್ಯಧರ್ಮದ ವ್ಯಕ್ತಿಯನ್ನು ಮದುವೆಯಾಗಿದ್ದಾಳೆ. ತನ್ನ ಹೆಸರು ಮುನ್ನಿಬಾಯಿ ಎಂಬುದಾಗಿ ಬದಲಾಯಿಸಿಕೊಂಡಿದ್ದಾಳೆ. ಈಕೆಯ ಪತಿ ಮಾರುಕಟ್ಟೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮದ್ಯವ್ಯಸನಿಯಾಗಿದ್ದ ಪತಿ, ದುಡಿದ ಹಣವನ್ನೆಲ್ಲ ಮದ್ಯ ಖರೀದಿಗೆ ಖರ್ಚು ಮಾಡುತ್ತಿದ್ದ. ಮನೆ ನಡೆಸುವುದು ಕಷ್ಟವಾಗಿತ್ತು. ಇದೇ ಕಾರಣಕ್ಕೆ ಆರೋಪಿ, ಕಳ್ಳತನ ಮಾಡಲಾರಂಭಿಸಿದ್ದಳು. ಈ ಬಗ್ಗೆ ಆಕೆ ಹೇಳಿಕೆ ನೀಡಿದ್ದಾಳೆ' ಎಂದೂ ತಿಳಿಸಿವೆ.

ಟಾಟಾ ಟೆಕ್ನಾಲಜೀಸ್ ಸಹಯೋಗ: ₹4,636 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೆ

150 ಐಟಿಐಗಳಲ್ಲಿ ನ.1ರಿಂದ ತರಬೇತಿ

ಪ್ರಜಾವಾಣಿ ವಾರ್ತೆ



ಪೀಣ್ಯ ಸರ್ಕಾರಿ ಐಟಿಐ ಕೇಂದ್ರದಲ್ಲಿ ಅಳವಡಿಸಿರುವ ಯಂತ್ರಗಳನ್ನು ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ವೀಕ್ಷಿಸಿದರು. ಡಾ.ಕೆ.ಹರೀಶ್ ಕುಮಾರ್ ಚಿತ್ರದಲ್ಲಿದ್ದಾರೆ–ಪ್ರಜಾವಾಣಿ ಚಿತ್ರ

ಬೆಂಗಳೂರು: 'ಉದ್ಯೋಗ' ಕಾರ್ಯಕ್ರಮದಡಿ ಟಾಟಾ ಟೆಕ್ನಾಲಜೀಸ್ ಸಹಯೋಗದಲ್ಲಿ ₹4,636 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೆ ಏರಿಸಲಾಗುವ 150 ಕೈಗಾರಿಕಾ ತರಬೇತಿ ಸಂಸ್ಥೆಗಳು (ಐಟಿಐ) 'ಇನ್ನೊಂದು ವಾರದಲ್ಲಿ ಉದ್ಘಾಟನೆಯಾಗಲಿವೆ. ಈ ಸಂಸ್ಥೆಗಳಲ್ಲಿ ಆಧುನಿಕ ಕೋರ್ಸ್‌ಗಳನ್ನು ಒಳಗೊಂಡ ತರಬೇತಿ ನ.1ರಿಂದ ಆರಂಭವಾಗಲಿದೆ' ಎಂದು ಕೌಶಲಾಭಿವೃದ್ಧಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಪೀಣ್ಯದಲ್ಲಿ ಮೇಲ್ದರ್ಜೆಗೇರಿಸಿರುವ ಸರ್ಕಾರಿ ಐಟಿಐ ಕೇಂದ್ರವನ್ನು ಗುರುವಾರ ಪರಿಶೀಲಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈಗಾಗಲೇ ಹೊಸ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ ನಡೆಯುತ್ತಿದೆ' ಎಂದು ತಿಳಿಸಿದರು.

'ಉದ್ಯಮಗಳ ಈಗಿನ ಬೇಡಿಕೆಗೆ ತಕ್ಕಂತೆ ಹೊಸ ಪಠ್ಯಕ್ರಮ ರೂಪಿಸಲಾಗಿದೆ. ಅಡ್ವಾನ್ಸ್ಡ್ ಸಿಎನ್‌ಸಿ ಮಷಿನಿಂಗ್, ಬೇಸಿಕ್ ಆಫ್ ಡಿಸೈನ್ ಆ್ಯಂಡ್ ವರ್ಚುಯಲ್ ವೆರಿಫಿಕೇಷನ್, ಆರ್ಟಿಸಾನ್ ಯೂಸಿಂಗ್ ಅಡ್ವಾನ್ಸ್ಡ್ ಟೂಲ್, ಇಂಡಸ್ಟ್ರಿಯಲ್ ರೊಬೊಟಿಕ್ಸ್ ಆ್ಯಂಡ್ ಡಿಜಿಟಲ್ ಮ್ಯಾನುಫ್ಯಾಕ್ಚರಿಂಗ್, ಮ್ಯಾನುಫ್ಯಾಕ್ಚರಿಂಗ್ ಪ್ರೊಸೆಸ್ ಕಂಟ್ರೋಲ್ ಆ್ಯಂಡ್ ಆಟೊಮೇಷನ್ ಮತ್ತು ಮೆಕ್ಯಾನಿಕ್ ಎಲೆಕ್ಟ್ರಿಕ್ ವೆಹಿಕಲ್ ಇವುಗಳಲ್ಲಿ ಸೇರಿವೆ' ಎಂದು ಸಚಿವರು ವಿವರಿಸಿದರು.

'ಈ ಸಂಸ್ಥೆಗಳಲ್ಲಿ ಶಿಕ್ಷಣಾರ್ಥಿಗಳಿಗೆ ಹೊಸ ತಾಂತ್ರಿಕತೆಗಳಲ್ಲಿ ತರಬೇತಿ ನೀಡಲಾಗುತ್ತದೆ. ಇದರಿಂದ ಪ್ರತಿವರ್ಷ 20 ಸಾವಿರ ಚಟುವಟಿಕೆಗಳಿಗೆ ಅನುಕೂಲವಾಗುತ್ತದೆ. ಇದರ ಜೊತೆಗೆ ಐಟಿಐ, ಪಾಲಿಟೆಕ್ನಿಕ್ ಮತ್ತು ಎಂಜಿನಿಯರಿಂಗ್ ಕಾಲೇಜುಗಳ 1 ಲಕ್ಷ ವಿದ್ಯಾರ್ಥಿಗಳಿಗೂ ಇದರ ಪ್ರಯೋಜನವಾಗುತ್ತದೆ' ಎಂದರು.

'ಟಾಟಾ ಕಂಪನಿಯೊಂದಿಗೆ ದೀರ್ಘಕಾಲದ ಸಹಭಾಗಿತ್ವ ಹೊಂದುವ ಉದ್ದೇಶವಿದ್ದು, ಮೊದಲ ಎರಡು ವರ್ಷಗಳಿಗಾಗಿ 300 ಹಾಗೂ ಮೂರನೇ ವರ್ಷದಿಂದ 150 ವಿಷಯ ಪರಿಣತರನ್ನು ನಿಯೋಜಿಸಲಾಗುತ್ತದೆ. ಇದರಿಂದ ಶಿಕ್ಷಣಾರ್ಥಿಗಳಿಗೆ ಹಾಗೂ ಐಟಿಐ ಬೋಧಕ ಸಿಬ್ಬಂದಿಗೆ ಹೊಸ ರೀತಿಯ ತರಬೇತಿಗಳ ಬಗ್ಗೆ ಮಾರ್ಗದರ್ಶನ ನೀಡಲು ಸಾಧ್ಯವಾಗುತ್ತದೆ' ಎಂದು ಸಚಿವರು ಹೇಳಿದರು.

'ಯಂತ್ರೋಪಕರಣಗಳನ್ನು ಸುಸ್ಥಿತಿಯಲ್ಲಿ ಇರಿಸುವುದಕ್ಕಾಗಿ 5 ವರ್ಷಗಳ ನಿರ್ವಹಣಾ ಒಪ್ಪಂದವನ್ನು ಇದು ಒಳಗೊಂಡಿದೆ. ಅಗತ್ಯವಿದ್ದರೆ ಇದನ್ನು ಇನ್ನೂ 5 ವರ್ಷಗಳಿಗೆ ಹೆಚ್ಚಿಸಲಾಗುತ್ತದೆ. ಈ 150 ಸಂಸ್ಥೆಗಳಿಗೆ ಅಳವಡಿಸಿರುವ 11 ದೀರ್ಘಾವಧಿ ತರಬೇತಿ ಹಾಗೂ 23 ಅಲ್ಪಾವಧಿ ತರಬೇತಿ ಕೋರ್ಸ್‌ಗಳನ್ನು ಕ್ರಮೇಣ ಎಲ್ಲ ಐಟಿಐಗಳಿಗೆ ವಿಸ್ತರಿಸಲಾಗುತ್ತದೆ' ಎಂದು ಅವರು ಹೇಳಿದರು.

ಒಟ್ಟು ₹4,636 ಕೋಟಿ ಯೋಜನಾ ವೆಚ್ಚದ ಪೈಕಿ ಕರ್ನಾಟಕ ಸರ್ಕಾರ ಶೇ 12ರಷ್ಟನ್ನು ಹಾಗೂ ಟಾಟಾ ಟೆಕ್ನಾಲಜೀಸ್ ಶೇ 88ರಷ್ಟನ್ನು ಭರಿಸುತ್ತಿವೆ. ಜೊತೆಗೆ ರಾಜ್ಯ ಸರ್ಕಾರವು ಭೌತಿಕ ಮೂಲಸೌಕರ್ಯಗಳಿಗಾಗಿ ₹220 ಕೋಟಿ ವೆಚ್ಚ ಮಾಡುತ್ತಿದೆ. ತಾಂತ್ರಿಕ ಉನ್ನತೀಕರಣಕ್ಕಾಗಿ ಆಧುನಿಕ ಸಿಎನ್‌ಸಿ ಯಂತ್ರ, ಲೇಸರ್ ಕಟ್ಟಿಂಗ್ ಯಂತ್ರ, ಅಡಿಟಿವ್ ಮ್ಯಾನುಫ್ಯಾಕ್ಚರಿಂಗ್, 3 ಡಿ ಪ್ರಿಂಟಿಂಗ್ ಮೆಷಿನ್, ಕೈಗಾರಿಕಾ ರೊಬೋಟ್, ವಿನೂತನ ತಂತ್ರಾಂಶಗಳು ಐಟಿಐಗಳಿಗೆ ಸೇರ್ಪಡೆಯಾಗಲಿವೆ.

ಉದ್ಯೋಗ ಮತ್ತು ತರಬೇತಿ ಇಲಾಖೆಯ ಆಯುಕ್ತ ಡಾ.ಕೆ.ಹರೀಶ ಕುಮಾರ್ ಇದ್ದರು.



ಆರೋಪಿಗಳಿಂದ ಜಪ್ತಿ ಮಾಡಲಾದ ಚಿನ್ನಾಭರಣ

'ಯೂಟ್ಯೂಬ್' ನೋಡಿ ಕಳವು: ವ್ಯಾಪಾರಿಗಳ ಬಂಧನ

ಬೆಂಗಳೂರು: ಇಂದಿರಾನಗರದ ಸಿ.ಎಂ.ಎಚ್ ರಸ್ತೆಯಲ್ಲಿರುವ ಮೀನಾ ಆಭರಣ ಮಳಿಗೆಯಲ್ಲಿ ಕಳ್ಳತನ ಮಾಡಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಹೋಟೆಲ್ ವ್ಯಾಪಾರಿಗಳಾದ ಮಹೇಂದ್ರ, ನೀಲಕಂಠ ಹಾಗೂ ಸ್ವಾಮಿನ್ ಬಂಧಿತರು. ಅವರಿಂದ ₹ 60 ಲಕ್ಷ ಮೌಲ್ಯದ 1 ಕೆ.ಜಿ 315 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಂಧಿತ ಆರೋಪಿಗಳು, ಇಂದಿರಾನಗರ ಹಾಗೂ ಬೊಮ್ಮನಹಳ್ಳಿಯಲ್ಲಿ ಪ್ರತ್ಯೇಕವಾಗಿ ಹೋಟೆಲ್ ನಡೆಸುತ್ತಿದ್ದರು. ಕೋವಿಡ್‌ಗೂ ಮುನ್ನ ಹೋಟೆಲ್ ವ್ಯಾಪಾರ ಚೆನ್ನಾಗಿತ್ತು. ಕೋವಿಡ್ ನಂತರ ವ್ಯಾಪಾರವೇ ಇರಲಿಲ್ಲ. ನಷ್ಟ ಅನುಭವಿಸಿದ್ದ ಆರೋಪಿಗಳು, ಆರ್ಥಿಕವಾಗಿ ಕುಗ್ಗಿದ್ದರು. ಆರಂಭದಲ್ಲಿ ಮೊಬೈಲ್ ಆ್ಯಪ್‌ಗಳ ಮೂಲಕ ಸಾಲ ಪಡೆದಿದ್ದ ಅವರು, ಸಾಲದ ಕಂತು ಪಾವತಿಸಲು ಸಾಧ್ಯವಾಗದೇ ಮತ್ತಷ್ಟು ತೊಂದರೆಗೆ ಸಿಲುಕಿದ್ದರು' ಎಂದೂ ತಿಳಿಸಿದರು.

'ಸಾಲ ತೀರಿಸಿ ಆರ್ಥಿಕವಾಗಿ ಸುಧಾರಣೆಯಾಗಲು ಯೋಚಿಸಿದ್ದ ಆರೋಪಿಗಳು, ಕಳ್ಳತನಕ್ಕೆ ಸಂಚು ರೂಪಿಸಿದ್ದರು. 'ಆಭರಣ ಮಳಿಗೆ ಕಳ್ಳತನ ಮಾಡುವುದು ಹೇಗೆ?' ಎಂಬುದನ್ನು 'ಯೂಟ್ಯೂಬ್' ಜಾಲತಾಣದಲ್ಲಿ ವಿಡಿಯೊ ನೋಡಿ ಕಲಿತಿದ್ದರು.'

'ಕೃತ್ಯದಂದೇ ಕಾರೊಂದನ್ನು ಬಾಡಿಗೆ ಪಡೆದಿದ್ದ ಆರೋಪಿಗಳು, ಅದರ ನೋಂದಣಿ ಸಂಖ್ಯೆ ಫಲಕಕ್ಕೆ ಮಸಿ ಬಳಿದಿದ್ದರು. ಅ. 14ರಂದು ಆಭರಣ ಮಳಿಗೆಗೆ ನುಗ್ಗಿ ಚಿನ್ನಾಭರಣ ಕದ್ದುಕೊಂಡು ಪರಾರಿಯಾಗಿದ್ದರು' ಎಂದೂ ಪೊಲೀಸರು ಹೇಳಿದರು.

ಗೋವಾಕ್ಕೆ ಹೋಗಿ ವಾಪಸು: 'ಚಿನ್ನಾಭರಣ ಸಮೇತ ಆರೋಪಿಗಳು ಗೋವಾಕ್ಕೆ ಹೋಗಿದ್ದರು. ಆದರೆ, ಅಲ್ಲಿ ಚಿನ್ನಾಭರಣ ಮಾರಲು ಸಾಧ್ಯವಾಗಿರಲಿಲ್ಲ. ಹೀಗಾಗಿ, ಬೆಂಗಳೂರಿನತ್ತ ವಾಪಸು ಬರುತ್ತಿದ್ದರು. ಅದೇ ಸಂದರ್ಭದಲ್ಲೇ ತುಮಕೂರು ಬಳಿ ಮೂವರನ್ನು ಬಂಧಿಸಲಾಯಿತು' ಎಂದೂ ಪೊಲೀಸರು ವಿವರಿಸಿದರು.

ಮತೀಯ ಗೂಂಡಾಗಿರಿ ಸಮರ್ಥನೆ ವಿರೋಧಿಸಿ ಪ್ರಗತಿಪರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ಮತೀಯ ಗೂಂಡಾಗಿರಿ ವಿರೋಧಿಸಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮತೀಯ ಗೂಂಡಾಗಿರಿಯನ್ನು ಸಮರ್ಥಿಸಿರುವುದನ್ನು ವಿರೋಧಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.

ಮೈಸೂರು ಬ್ಯಾಂಕ್ ವೃತ್ತದಲ್ಲಿ ವಾಹನಗಳ ಸಂಚಾರ ತಡೆದು ಭಿತ್ತಿಪತ್ರಗಳನ್ನು ಪ್ರದರ್ಶಿಸಿದ ಪ್ರತಿಭಟನಕಾರರು, ಮುಖ್ಯಮಂತ್ರಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಮಂಗಳೂರಿನ ಮತೀಯ ಗೂಂಡಾಗಿರಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ನೀಡಿರುವ ಹೇಳಿಕೆ ಸಂವಿಧಾನಕ್ಕೆ ವಿರುದ್ಧವಾಗಿದೆ. ಈ ಹೇಳಿಕೆಯನ್ನು ಹಿಂದಕ್ಕೆ ಪಡೆದು ಕ್ಷಮೆ ಯಾಚಿಸಬೇಕು' ಎಂದು ಆಗ್ರಹಿಸಿದರು.

ಸಾಮಾಜಿಕ ಕಾರ್ಯಕರ್ತ ವಿನಯ್ ಶ್ರೀನಿವಾಸ್ ಮಾತನಾಡಿ, 'ಯುವಕ-ಯುವತಿಯರು ಒಂದು ಐಸ್ ಕ್ರೀಂ ತಿನ್ನಲು ಸಾಧ್ಯವಾಗದ ಸ್ಥಿತಿ ಇದೆ. ಅದರಲ್ಲಿಯೂ ಜಾತಿ-ಧರ್ಮ ಹುಡುಕಲಾಗುತ್ತಿದೆ. ಬಜರಂಗದಳ, ವಿಶ್ವ ಹಿಂದೂ ಪರಿಷತ್ತಿನ ಗೂಂಡಾಗಳ ಕಿರುಕುಳದಿಂದ ಯುವಕ–ಯುವತಿಯರು ತಮ್ಮ ಇಷ್ಟದಂತೆ ಸ್ನೇಹ ಮಾಡುವಂತಿಲ್ಲ. ತಮಗಿಷ್ಟ ಆದವರನ್ನು ಪ್ರೀತಿ ಮಾಡುವ ಹಕ್ಕು ಕೂಡ ಇಲ್ಲವಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಜಾತಿ ವಿನಾಶಕ್ಕೆ ಅಂತರ್ಜಾತಿ ವಿವಾಹ ಅಗತ್ಯ ಎಂದು ಅಂಬೇಡ್ಕರ್ ಹೇಳಿದ್ದರು.ಆದರೆ,ಇಂದುಅಂತರ್ಜಾತಿಮದುವೆಗೆ ಅಡ್ಡಿಪಡಿಸಲಾಗುತ್ತಿದೆ. ಜನರ ನಡುವೆ ಜಾತಿ ಧರ್ಮದ ಗೋಡೆ ಕಟ್ಟಲಾಗುತ್ತಿದೆ. ಮಹಿಳೆಯರ ಮೇಲೆ ದಾಳಿ ನಡೆಸುವ ಮೂಲಕ ಅವರ ಹಕ್ಕುಗಳನ್ನು ಕಿತ್ತುಕೊಳ್ಳಲಾಗುತ್ತಿದೆ. ಮಹಿಳೆಯರು ಯಾರೊಂದಿಗೆ ಸ್ನೇಹ ಮಾಡಬೇಕು, ಯಾರೊಂದಿಗೆ ಮದುವೆಯಾಗಬೇಕು ಎಂಬುದನ್ನು ನಿಯಂತ್ರಿಸುತ್ತಿದ್ದಾರೆ' ಎಂದು ಕಿಡಿಕಾರಿದರು.

'ಅಂತರ್ಜಾತಿ ವಿವಾಹ ಮತ್ತು ಅಂತರ ಧರ್ಮೀಯ ವಿವಾಹಗಳನ್ನು ರಕ್ಷಿಸಲು ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳನ್ನು ಪಾಲಿಸಬೇಕು. ಅಂತಹ ವಿವಾಹಿತ ವ್ಯಕ್ತಿಗಳ ವಿರುದ್ಧ ನಡೆಯುವ ಹಿಂಸೆ, ಮರ್ಯಾದೆ ಹತ್ಯೆ ಮತ್ತು ಮತೀಯ ಗೂಂಡಾಗಿರಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಬಿಡಿಎ ಅಧ್ಯಕ್ಷರಾಗಿ ವಿಶ್ವನಾಥ್ ನೇಮಕ ಪ್ರಶ್ನಿಸಿ ಪಿಐಎಲ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಅವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ, ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ನೀಡಲು ಆದೇಶಿಸಿದೆ.

ಬಿಡಿಎ ಹಣಕಾಸು ಸದಸ್ಯ ಎಸ್.ಎಂ. ರಾಮ್ ಪ್ರಸಾದ್, ಎಂಜಿನಿಯರಿಂಗ್ ಸದಸ್ಯ ಎಚ್.ಆರ್. ಶಾಂತರಾಜಣ್ಣ, ನಗರ ಯೋಜನೆ ಉಸ್ತುವಾರಿ ಜೆ. ಸುಮಾ ಅವರ ನೇಮಕವನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ.

ನಗರದ ವಕೀಲ ಎ.ಎಸ್.ಹರೀಶ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ಪೀಠ, ವಿಚಾರಣೆಯನ್ನು ನ.30ಕ್ಕೆ ಮುಂದೂಡಿತು.

ಎಸ್.ಆರ್. ವಿಶ್ವನಾಥ್ ಅವರನ್ನು 2020ರ ನ.24ರಂದು ಬಿಡಿಎ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಅಧ್ಯಕ್ಷ ಮತ್ತು ಸದಸ್ಯರ ನೇಮಕಾತಿ ಸಂಬಂಧದ ದಾಖಲೆಗಳನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಒದಗಿಸಿಲ್ಲ ಎಂದು ಅರ್ಜಿದಾರರು ದೂರಿದರು.

'ಬಿಡಿಎ ಅಧ್ಯಕ್ಷರಾಗಲು ವಿಶ್ವನಾಥ್ ಅನರ್ಹರು. ಶಾಸಕರಾಗಿ ಮಾಸಿಕ ವೇತನ ಮತ್ತು ಇತರ ಸವಲತ್ತುಗಳನ್ನು ಪಡೆಯುತ್ತಿದ್ದಾರೆ. ಅವರು ಬಿಡಿಎ ಅಧ್ಯಕ್ಷರ ಸಂಭಾವನೆ ಮತ್ತು ಸವಲತ್ತುಗಳನ್ನೂ ಪಡೆಯುತ್ತಿದ್ದಾರೆ. ಒಬ್ಬ ವ್ಯಕ್ತಿ ರಾಜ್ಯದ ಸಾರ್ವಜನಿಕ ನಿಧಿಯಿಂದ ಎರಡು ಸಂಬಳ ಪಡೆಯಲು ಸಾಧ್ಯವಿಲ್ಲ. ಹೀಗಾಗಿ, ಒಬ್ಬ ಅನರ್ಹ ವ್ಯಕ್ತಿಯನ್ನು ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ' ಎಂದು ಅರ್ಜಿದಾರರು ಹೇಳಿದ್ದಾರೆ.

'ಬಿಡಿಎ ಆಡಳಿತ ಮಂಡಳಿಗೆ ಸದಸ್ಯರ ನೇಮಕ ವಿಷಯದಲ್ಲೂ ಸರ್ಕಾರ ಸೂಕ್ತ ನಿಯಮ ಮತ್ತು ನಿಬಂಧನೆಗಳನ್ನು ರೂಪಿಸಿಲ್ಲ' ಎಂದು ತಿಳಿಸಿದ್ದಾರೆ.

ಎಲ್ಲರ ನೇಮಕವನ್ನು ವಜಾಗೊಳಿಸಬೇಕು ಮತ್ತು ನೇಮಕ ಸಂದರ್ಭದಲ್ಲಿ ಬಿಡಿಎ ಕಾಯ್ದೆ 1976ರ ಸೆಕ್ಷನ್ 3 ಅನ್ನು ಕಟ್ಟುನಿಟ್ಟಾಗಿ ಪಾಲಿಸಲು ನಿರ್ದೇಶನ ನೀಡಬೇಕು. ನೇಮಕಕ್ಕೆ ಸಂಬಂಧಿಸಿದಂತೆ ನಿಯಮ ಮತ್ತು ಮಾರ್ಗಸೂಚಿಗಳನ್ನು ರೂಪಿಸಬೇಕು ಎಂದು ಮನವಿ ಮಾಡಿದ್ದಾರೆ.

ಹೃದಯಾಘಾತ; ಇನ್‌ಸ್ಪೆಕ್ಟರ್ ಮಹಮ್ಮದ್ ರಫಿ ಸಾವು



ಮಹಮ್ಮದ್ ರಫಿ

ಬೆಂಗಳೂರು: ರಾಜ್ಯ ಅಪರಾಧ ದಾಖಲಾತಿ ವಿಭಾಗದ (ಎಸ್‌ಸಿಆರ್‌ಬಿ) ಇನ್‌ಸ್ಪೆಕ್ಟರ್ ಮಹಮ್ಮದ್ ರಫಿ (50) ಅವರು ಹೃದಯಾಘಾತದಿಂದಾಗಿ ಗುರುವಾರ ಬೆಳಿಗ್ಗೆ ನಿಧನರಾದರು.

ಮೈಸೂರಿನವರಾಗಿದ್ದ ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ.

'ಮನೆಯಲ್ಲಿ ಸ್ನಾನಕ್ಕೆ ಹೊರಟಿದ್ದ ವೇಳೆ ಮಹಮ್ಮದ್ ರಫಿ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ಸುಸ್ತಾಗಿ ಪ್ರಜ್ಞೆ ತಪ್ಪಿದ್ದ ಅವರನ್ನು ಫೋರ್ಟಿಸ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಬೆಂಗಳೂರಿನ ಬೈಯಪ್ಪನಹಳ್ಳಿ ಠಾಣೆ ಹಾಗೂ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಇನ್‌ಸ್ಪೆಕ್ಟರ್ ಆಗಿ ಮಹಮ್ಮದ್ ರಫಿ ಕರ್ತವ್ಯ ನಿರ್ವಹಿಸಿದ್ದರು. ವಾರದ ಹಿಂದಷ್ಟೇ ಅವರನ್ನು ಎಸ್‌ಸಿಆರ್‌ಬಿಗೆ ವರ್ಗಾಯಿಸಲಾಗಿತ್ತು.

ಬೈಯಪ್ಪನಹಳ್ಳಿ ಇನ್‌ಸ್ಪೆಕ್ಟರ್ ಆಗಿದ್ದ ವೇಳೆಯಲ್ಲಿ ಅಪಾಯಕ್ಕೆ ಸಿಲುಕಿದ್ದ ಕರುವೊಂದನ್ನು ಮಹಮ್ಮದ್ ರಫಿ ರಕ್ಷಿಸಿದ್ದರು. ಆ ಕರು ಮಹಮ್ಮದ್ ಅವರನ್ನು ಹಿಂಬಾಲಿಸಲಾರಂಭಿಸಿತ್ತು. ಅದಕ್ಕೆ ಭೀಮಾ ಎಂಬ ಹೆಸರಿಟ್ಟು ಮಹಮ್ಮದ್ ಸಾಕುತ್ತಿದ್ದರು.

ಖಾಸಗಿ ವಾಹಿನಿಯಲ್ಲಿ ಪ್ರಸಾರವಾಗಿದ್ದ 'ಸರಿಗಮಪ' ಕಾರ್ಯಕ್ರಮದಲ್ಲಿ ಗಾಯಕರಾಗಿ ಭಾಗವಹಿಸಿದ್ದ ಕಾನ್‌ಸ್ಟೆಬಲ್ ಸುಬ್ರಮಣಿ ಜೊತೆಯಲ್ಲೂ ಮಹಮ್ಮದ್ ಕಾಣಿಸಿಕೊಂಡಿದ್ದರು. ಸ್ಪರ್ಧೆ ನಿರ್ಣಾಯಕರಾಗಿದ್ದ ಗಾಯಕ ವಿಜಯ್ ಪ್ರಕಾಶ್ ಜೊತೆಗಿನ ಸ್ನೇಹವನ್ನು ಮಹಮ್ಮದ್ ಮೆಲುಕು ಹಾಕಿದ್ದರು.



ಐಶ್ವರ್ಯ ಕಲಾನಿಕೇತನ ನಗರದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಸಹನಾ ಸೋಮಶೇಖರ್ ಅವರು ನಿರ್ದೇಶಿಸಿರುವ 'ಆಷಾಢದ ಒಂದು ದಿನ' ನಾಟಕವನ್ನು ಪ್ರದರ್ಶಿಸಲಾಯಿತು.

ಸಂಯುಕ್ತ ಕಿಸಾನ್ ಮೋರ್ಚಾದಿಂದ ಯೋಗೇಂದ್ರ ಅಮಾನತು



ನವದೆಹಲಿ (ಪಿಟಿಐ): ಲಖಿಂಪುರ–ಖೇರಿ ಹಿಂಸಾಚಾರದಲ್ಲಿ ಕೊಲೆಯಾದ ಬಿಜೆಪಿ ಕಾರ್ಯಕರ್ತರೊಬ್ಬರ ಕುಟುಂಬವನ್ನು ಭೇಟಿ ಮಾಡಿದ ಕಾರಣಕ್ಕೆ ಸಾಮಾಜಿಕ ಕಾರ್ಯಕರ್ತ ಯೋಗೇಂದ್ರ ಯಾದವ್ ಅವರನ್ನು ತಿಂಗಳ ಅವಧಿಗೆ ಸಂಯುಕ್ತ ಕಿಸಾನ್ ಮೋರ್ಚಾದಿಂದ (ಎಸ್‌ಕೆಎಂ) ಗುರುವಾರ ಅಮಾನತು ಮಾಡಲಾಗಿದೆ.

'ಎಸ್‌ಕೆಎಂನ ಸಾಮಾನ್ಯಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗಿದೆ. ಎಸ್‌ಕೆಎಂನ ಸಭೆಗಳು ಹಾಗೂ ಹೋರಾಟಗಳಲ್ಲಿ ಯಾದವ್ ಪಾಲ್ಗೊಳ್ಳುವಂತಿಲ್ಲ' ಎಂದು ಹಿರಿಯ ರೈತ ಮುಖಂಡರೊಬ್ಬರು ಸಭೆ ನಂತರ ತಿಳಿಸಿದರು.

ಯಾದವ್ ಕೂಡ ಈ ಸಾಮಾನ್ಯಸಭೆಯಲ್ಲಿ ಪಾಲ್ಗೊಂಡಿದ್ದರು. ನೂತನ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಎಸ್‌ಕೆಎಂ ಪ್ರತಿಭಟನೆ ನಡೆಸುತ್ತಿದ್ದು, ಯಾದವ್ ಅವರು ಎಸ್‌ಕೆಎಂ ಕೋರ್ ಕಮಿಟಿ ಸದಸ್ಯರಾಗಿದ್ದಾರೆ.

ತಿಂಗಳಿಗೆ ₹ 15 ಕೋಟಿಯಷ್ಟೂ ಇಲ್ಲ ವಾಣಿಜ್ಯ ಕಾರ್ಯಾಚರಣೆ ವರಮಾನ • ಕಡಿಮೆಯಾಗಿಲ್ಲ ನಿರ್ವಹಣಾ ವೆಚ್ಚ

ಲಾಭದ ಹಳಿಗೆ ಮರಳದ 'ನಮ್ಮ ಮೆಟ್ರೊ'

ಪ್ರಜಾವಾಣಿ ವಾರ್ತೆ



ನಮ್ಮ ಮೆಟ್ರೋ ಸಂಚಾರ ಮಾರ್ಗದ ಒಂದು ದೃಶ್ಯ —ಪ್ರಜಾವಾಣಿ ಚಿತ್ರ

ಬೆಂಗಳೂರು: ಕೋವಿಡ್ ನಂತರ 'ನಮ್ಮ ಮೆಟ್ರೊ' ವಾಣಿಜ್ಯ ಕಾರ್ಯಾಚರಣೆ ಪ್ರಾರಂಭವಾದರೂ, ದೈನಂದಿನ ನಿರ್ವಹಣಾ ವೆಚ್ಚವನ್ನು ಭರಿಸುವಷ್ಟೂ ವರಮಾನವೂ ಇದರಿಂದ ಹುಟ್ಟುತ್ತಿಲ್ಲ. ಮೆಟ್ರೊ ಸೇವೆ ಸದ್ಯಕ್ಕಿನ್ನೂ 'ಲಾಭದ ಹಳಿ'ಗೆ ಮರಳಿಲ್ಲ.

ಕೋವಿಡ್ ಕಾಣಿಸಿಕೊಳ್ಳುವುದಕ್ಕೆ ಮುನ್ನ 'ನಮ್ಮ ಮೆಟ್ರೊ'ದಲ್ಲಿ ನಿತ್ಯ ಸರಾಸರಿ 4.15 ಲಕ್ಷ ಮಂದಿ ಪ್ರಯಾಣಿಸುತ್ತಿದ್ದರು. ವಾಣಿಜ್ಯ ಕಾರ್ಯಾಚರಣೆಯನ್ನಷ್ಟೇ ಪರಿಗಣಿಸಿದರೆ ಮೆಟ್ರೊ ಲಾಭದ ಹಳಿಗೆ ಮರಳಿತ್ತು.

'ವರಮಾನದ ಲೆಕ್ಕಾಚಾರಗಳನ್ನೆಲ್ಲ ಕೋವಿಡ್ ಬುಡಮೇಲು ಮಾಡಿದೆ. ಈಗ ನಿರ್ವಹಣಾ ವೆಚ್ಚದಷ್ಟೂ ವರಮಾನ ಹುಟ್ಟುತ್ತಿಲ್ಲ' ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕ ಅಂಜುಮ್ ಪರ್ವೇಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಹಿಂದೆ ವಾಣಿಜ್ಯ ಕಾರ್ಯಾಚರಣೆಯಿಂದ ಬರುವ ತಿಂಗಳ ವರಮಾನ ₹ 35 ಕೋಟಿಗಳವರೆಗೆ ತಲುಪಿತ್ತು. ನಮ್ಮ ಮೆಟ್ರೊ ವಾಣಿಜ್ಯ ಸೇವೆಯ ನಿರ್ವಹಣೆಗೆ ತಿಂಗಳಿಗೆ ₹ 25 ಕೋಟಿಗಳಿಂದ ₹ 28 ಕೋಟಿಗಳ ವರೆಗೆ ವೆಚ್ಚವಾಗುತ್ತಿದೆ. ಖರ್ಚು ಕಳೆದು ₹ 10 ಕೋಟಿಗಳಷ್ಟು ಉಳಿತಾಯವಾಗುತ್ತಿತ್ತು. ಆದರೆ, ಈಗ ತಿಂಗಳ ವರಮಾನ ₹ 15 ಕೋಟಿ ಮೀರುತ್ತಿಲ್ಲ. ನಿರ್ವಹಣೆ ವೆಚ್ಚ ಮೊದಲಿನಷ್ಟೇ ಇದೆ' ಎನ್ನುತ್ತಾರೆ ನಿಗಮದ ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗದ ಕಾರ್ಯಕಾರಿ ನಿರ್ದೇಶಕ ಎ.ಎಸ್.ಶಂಕರ್.

ನಮ್ಮ ಮೆಟ್ರೊ ಸಂಸ್ಥೆಯ ಟಿಕೆಟೇತರ ವರಮಾನವೂ ಕುಸಿದಿದೆ. ಮೆಟ್ರೊ ನಿಲ್ದಾಣಗಳಲ್ಲಿ ಈ ಹಿಂದೆ ಮಳಿಗೆಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗಿತ್ತು. ಕೋವಿಡ್ ಬಳಿಕ ಇವುಗಳೂ ಬಾಗಿಲು ಮುಚ್ಚಿವೆ. ಈ ಹಿಂದೆ, 'ನಮ್ಮ ಮೆಟ್ರೊ' ಎತ್ತರಿಸಿದ ಮಾರ್ಗದ ಕಾಂಕ್ರೀಟ್ ಕಂಬಗಳಲ್ಲಿ ಹೊರಾಂಗಣ ಜಾಹೀರಾತು ಅಳವಡಿಕೆಯಿಂದಲೂ ಒಂದಷ್ಟು ವರಮಾನ ಬರುತ್ತಿತ್ತು. ಬಿಬಿಎಂಪಿಯ ಹೊರಾಂಗಣ ಜಾಹೀರಾತು ನೀತಿಗೆ ಸಂಬಂಧಿಸಿದ ಗೊಂದಲ ಇನ್ನೂ ಬಗೆಹರಿಯದ ಕಾರಣ ಆ ವರಮಾನಕ್ಕೂ ಕತ್ತರಿ ಬಿದ್ದಿದೆ.

'ಕೋವಿಡ್ ಕಾಣಿಸಿಕೊಂಡ ಬಳಿಕ ಮೆಟ್ರೊ ನಿಲ್ದಾಣಗಳಲ್ಲಿ ಮಳಿಗೆಗಳೆಲ್ಲೂ ಬಾಗಿಲು ಮುಚ್ಚಿದವು. ಅವರಲ್ಲಿ ಬಹುತೇಕ ಮಳಿಗೆಗಳ ಮಾಲೀಕರು ವ್ಯಾಪಾರ ಪುನರಾರಂಭ ಮಾಡಬಹುದು ಎಂಬ ನಿರೀಕ್ಷೆಯಲ್ಲಿದ್ದೇವೆ. ಹೊರಾಂಗಣ ಜಾಹೀರಾತುಗಳ ವರಮಾನವಂತೂ ಸಂಪೂರ್ಣ ಸ್ಥಗಿತವಾಗಿದೆ. ಬಿಬಿಎಂಪಿಯ ಹೊರಾಂಗಣ ಜಾಹೀರಾತು ನೀತಿ ಕುರಿತ ಗೊಂದಲ ಬಗೆಹರಿದರೆ ಅದರಿಂದಲೂ ಸ್ವಲ್ಪ ವರಮಾನ ಬರಬಹುದು' ಎಂದು ಅಂಜುಮ್ ಪರ್ವೇಜ್ ಆಶಾವಾದ ವ್ಯಕ್ತಪಡಿಸಿದರು.

'ಮೆಟ್ರೊ ಪ್ರಯಾಣಿಕರ ಸಂಖ್ಯೆ ಕ್ರಮೇಣ ಹೆಚ್ಚಳವಾಗುತ್ತಿದೆ. ಮನೆಯಿಂದಲೇ ಕೆಲಸ ಮಾಡುವುದಕ್ಕೆ ಅವಕಾಶ ಕಲ್ಪಿಸಿದ್ದ ಅನೇಕ ಕಂಪನಿಗಳು ನವೆಂಬರ್‌ನಿಂದ ಕಚೇರಿಗಳನ್ನು ಪೂರ್ಣಪ್ರಮಾಣದಲ್ಲಿ ಆರಂಭಿಸುತ್ತಿವೆ. 1ನೇ ತರಗತಿಯಿಂದಲೇ ಶಾಲೆಗಳೂ ಆರಂಭವಾಗುತ್ತಿವೆ. ಜನಜೀವನ ಸಹಜ ಸ್ಥಿತಿಗೆ ಮರಳಿದಂತೆ ಮೆಟ್ರೊ ವಾಣಿಜ್ಯ ಸೇವೆಯಿಂದ ಬರುವ ವರಮಾನವೂ ಹೆಚ್ಚಳವಾಗಲಿದೆ' ಎಂದು ಅವರು ತಿಳಿಸಿದರು.

'ಮೆಟ್ರೊ ಬಳಸುವವರ ಸಂಖ್ಯೆ 2.2 ಲಕ್ಷಕ್ಕೆ ಇಳಿಕೆ'

'ನಮ್ಮ ಮೆಟ್ರೊ' ಎರಡನೇ ಹಂತದ ವಿಸ್ತರಣೆಗೆ ಡಿಪಿಆರ್ ಪ್ರಕಾರ, 2021ರಲ್ಲಿ ಉತ್ತರ ದಕ್ಷಿಣ ಕಾರಿಡಾರ್ ಅಂಜನಾಪುರ ಟೌನ್‌ಶಿಪ್‌ನಿಂದ ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದವರೆಗೆ (ಬಿಐಇಸಿ) ಹಾಗೂ ಪೂರ್ವ ಪಶ್ಚಿಮ ಕಾರಿಡಾರ್ ವೈಟ್‌ಫೀಲ್ಡ್‌ವರೆಗೆ ವಿಸ್ತರಣೆ ಆಗಬೇಕಿತ್ತು. 'ನಮ್ಮ ಮೆಟ್ರೊ' ಪ್ರಯಾಣಿಕರ ದೈನಂದಿನ ಸರಾಸರಿ ಸಂಖ್ಯೆ 6.5 ಲಕ್ಷಕ್ಕೆ ಹೆಚ್ಚಳವಾಗಬೇಕಿತ್ತು. ಆದರೆ, ಪ್ರಸ್ತುತ ದಿನದಲ್ಲಿ ಸರಾಸರಿ 2.2 ಲಕ್ಷ ಪ್ರಯಾಣಿಕರಷ್ಟೇ ಮೆಟ್ರೊದಲ್ಲಿ ಪ್ರಯಾಣಿಸುತ್ತಿದ್ದಾರೆ.

ಮೆಟ್ರೊ ಇದುವರೆಗಿನ ದಿನವೊಂದರಲ್ಲಿ 4.58 ಲಕ್ಷ ಮಂದಿ ಪ್ರಯಾಣಿಸಿದ್ದು ಇದುವರೆಗಿನ ದಾಖಲೆ. 2019ರ ಆ.30ರಂದು 4,58,238 ಮಂದಿ ಪ್ರಯಾಣಿಸಿದ್ದರು.

ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಮೆಟ್ರೊ ಸೇವೆ ಸ್ಥಗಿತಗೊಳಿಸಲಾಗಿತ್ತು. ಲಾಕ್‌ಡೌನ್ ತೆರವಿನ ಬಳಿಕವೂ ಪೂರ್ಣ ಪ್ರಮಾಣದಲ್ಲಿ ಸೇವೆ ಆರಂಭಿಸಲು ಅನುಮತಿ ಇರಲಿಲ್ಲ. ಅನೇಕ ನಿರ್ಬಂಧಗಳೊಂದಿಗೆ ಮೆಟ್ರೊ ಸೇವೆ ಪುನರಾರಂಭಗೊಂಡಿದೆ. ಸೇವೆಯ ಅವಧಿಯೂ ಕಡಿತಗೊಂಡಿದೆ. ಇದರಿಂದಾಗಿ ಮೆಟ್ರೊ ಪ್ರಯಾಣಿಕರ ಸಂಖ್ಯೆ ಕ್ಷೀಣಿಸಿದೆ.



ಕೋವಿಡ್ ತಹಬಂದಿಗೆ ಬಂದಿರುವುದರಿಂದ ಜನಜೀವನವೂ ಸಹಜ ಸ್ಥಿತಿಗೆ ಮರಳುತ್ತಿದೆ. ಹಾಗಾಗಿ 'ನಮ್ಮ ಮೆಟ್ರೊ' ಕೂಡಾ ಮತ್ತೆ ಲಾಭದ ಹಳಿಗೆ ಮರಳುವ ನಿರೀಕ್ಷೆ ಇದೆ

ಅಂಜುಂ ಪರ್ವೇಜ್, ವ್ಯವಸ್ಥಾಪಕ ನಿರ್ದೇಶಕ, ಬಿಎಂಆರ್‌ಸಿಎಲ್

ಸುದ್ದಿ 2 ನಿಮಿಷ


ಮುಖ್ಯಮಂತ್ರಿ, ಬಿಜೆಪಿಯ ಆತಂಕಕಾರಿ ನಡೆ: ಬಿಕೆಸಿ

ಬೆಂಗಳೂರು: 'ಆಯುಧ ಪೂಜೆಯ ದಿನ ಕಾಪು ಠಾಣೆ ಪೊಲೀಸರು ಕೇಸರಿ ಶರ್ಟ್ ಮತ್ತು ವಿಜಯಪುರ ಗ್ರಾಮೀಣ ಠಾಣೆಯ ಪೊಲೀಸರು ಕೇಸರಿ ಶಾಲು ಧರಿಸಿ ಭಾವಚಿತ್ರ ತೆಗೆಸಿಕೊಂಡಿರುವ ಘಟನೆ ಪೊಲೀಸ್ ಇಲಾಖೆ ಮೇಲೆ ಸರ್ಕಾರ ಬೀರುತ್ತಿರುವ ಪ್ರಭಾವದ ಪರಿಣಾಮ' ಎಂದು ಕೆಪಿಸಿಸಿ ವಕ್ತಾರ ಪ್ರೊ.ಬಿ.ಕೆ. ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

'ಆದರೆ, ಈ ಘಟನೆಯ ಹಿನ್ನೆಲೆಯಲ್ಲಿ ಆಳುವವರ ತಾಳಕ್ಕೆ ತಕ್ಕಂತೆ ಕುಣಿಯುವ ಪೊಲೀಸ್ ಇಲಾಖೆ ಬಗ್ಗೆ ನಡೆಯಬೇಕಿದ್ದ ನಿಷ್ಪಕ್ಷಪಾತ ಚರ್ಚೆಗಳು ಗೌಣವಾದದ್ದು ವಿಷಾದದ ಸಂಗತಿ' ಎಂದು ಅವರು ಹೇಳಿದ್ದಾರೆ.

'ಅನೈತಿಕ ಪೊಲೀಸ್‌ಗಿರಿಯು ಕ್ರಿಯೆಗೆ ಪ್ರತಿಕ್ರಿಯೆ ಎಂದು ಇತ್ತೀಚೆಗೆ ಮುಖ್ಯಮಂತ್ರಿ ನೀಡಿದ್ದ ಹೇಳಿಕೆ ಪೊಲೀಸರು ಈ ರೀತಿ ನಿಯಮ ಮೀರಿ ವರ್ತಿಸಲು ಮುಖ್ಯ ಕಾರಣ ಎಂಬುದು ನಿರ್ವಿವಾದದ ಸಂಗತಿ. ಮುಖ್ಯಮಂತ್ರಿ ಹೇಳಿಕೆಯು ಅನೈತಿಕ ಪೊಲೀಸ್‌ಗಿರಿಯಂಥ ಸಂವಿಧಾನ ವಿರೋಧಿ ಬೆದರಿಕೆ ಮತ್ತು ಹಿಂಸಾ ಕೃತ್ಯಗಳನ್ನು ಹತ್ತಿಕ್ಕುವ ಬದಲು, ಪುರಸ್ಕರಿಸುವಂತಿತ್ತು' ಎಂದಿದ್ದಾರೆ.

'ಅನೈತಿಕ ಪೊಲೀಸ್ ಗಿರಿ ಎಂಬುದು ಸಂವಿಧಾನದತ್ತ ಮೂಲಭೂತ ಹಕ್ಕುಗಳ ಉಲ್ಲಂಘನಾ ಕೃತ್ಯ ಎಂದು ಈಗಾಗಲೇ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳು ನೀಡಿರುವ ತೀರ್ಪುಗಳನ್ನು ಮುಖ್ಯಮಂತ್ರಿ ಮರೆತಂತಿದೆ. ಮುಖ್ಯಮಂತ್ರಿಯ ಈ ಹೇಳಿಕೆ ಪೊಲೀಸರು ಕೇಸರಿ ವಸ್ತ್ರಗಳನ್ನು ಧರಿಸಲು ಪ್ರೇರಣೆಯಾಗಿದೆ. ಪೊಲೀಸ್ ಅಧಿಕಾರಿಗಳು ಸಾಂವಿಧಾನಿಕ ಮೌಲ್ಯಗಳು ಮತ್ತು ತಮ್ಮ ಸೇವೆಯ ಪಾವಿತ್ರ್ಯ ಎತ್ತಿ ಹಿಡಿಯುವ ಬದಲು, ಬಡ್ತಿ, ಹುದ್ದೆ, ಆಯಕಟ್ಟಿನ ಜಾಗಗಳಿಗೆ ವರ್ಗಾವಣೆ ಸೇರಿದಂತೆ ಇತರ ಆಮಿಷಗಳು ಹಾಗೂ ರಾಜಕಾರಣಿಗಳ ಒತ್ತಾಯಕ್ಕೆ ಬಿದ್ದು ಈ ಕೃತ್ಯ ಎಸಗಿರುವುದು ಸ್ಪಷ್ಟವಾಗಿದೆ' ಎಂದಿದ್ದಾರೆ.



ಆರ್‌.ವಿ. ವಿಶ್ವವಿದ್ಯಾಲಯದಲ್ಲಿ ಪಿಎಚ್‌.ಡಿ ಕಾರ್ಯಕ್ರಮ ಆರಂಭ

ಬೆಂಗಳೂರು: ಸಂಶೋಧನಾ ಚಟುಟಿಕೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಆರ್‌.ವಿ. ವಿಶ್ವವಿದ್ಯಾಲಯ (ಆರ್‌ವಿಯು) ತನ್ನ ಮೊದಲ ಅಕಾಡೆಮಿಕ್ ವರ್ಷದಲ್ಲೇ ಪಿಎಚ್‌.ಡಿ. ಕಾರ್ಯಕ್ರಮ ಆರಂಭಿಸಿದೆ.

ಪ್ರಸ್ತುತ 'ಸ್ಕೂಲ್ ಆಫ್ ಲಿಬರಲ್ ಆರ್ಟ್ಸ್ ಮತ್ತು ಸೈನ್ಸ್' ಹಾಗೂ 'ಸ್ಕೂಲ್ ಆಫ್ ಎಕನಾಮಿಕ್ಸ್ ಮತ್ತು ಫೈನಾನ್ಸ್' ವಿಭಾಗಗಳಲ್ಲಿ ಪಿಎಚ್‌.ಡಿ. ಪದವಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಅರೆಕಾಲಿಕ ಮತ್ತು ಪೂರ್ಣಾವಧಿಯ ಆಯ್ಕೆಯಗಳು ಲಭ್ಯ. ಈಗಾಗಲೇ ಉದ್ಯೋಗದಲ್ಲಿರುವವರು ಅಧ್ಯಯನ ಮಾಡಲು ಇಚ್ಛಿಸುವವರಿಗೆ ಅರೆಕಾಲಿಕ ಆಯ್ಕೆಯನ್ನು ನೀಡಲಾಗಿದೆ. ಮಾಹಿತಿಗೆ https://rvu.edu.in/phd/ ವೆಬ್‌ಸೈಟ್ ವೀಕ್ಷಿಸಬಹುದು.

ನರಬಲಿ ಪಡೆದಿದ್ದ ಗುಂಡಿ ಮುಚ್ಚಿದ ಜಲಮಂಡಳಿ

ಪ್ರಜಾವಾಣಿ ವಾರ್ತೆ

ವರದಿ ಫಲಶ್ರುತಿ

ಬೆಂಗಳೂರು: ಹೆಸರಘಟ್ಟ ಮುಖ್ಯ ರಸ್ತೆಯಲ್ಲಿ ವಾಹನ ಸವಾರನ ಸಾವಿಗೆ ಕಾರಣವಾಗಿದ್ದ ಗುಂಡಿಯನ್ನು ಜಲಮಂಡಳಿ ಅಧಿಕಾರಿಗಳು ಕೊನೆಗೂ ಮುಚ್ಚಿದ್ದಾರೆ.

ಕಾವೇರಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ನಿರ್ವಹಿಸುತ್ತಿರುವ ಜಲ ಮಂಡಳಿ, ದುರಸ್ತಿ ಕಾಮಗಾರಿಗೆ ದೊಡ್ಡ ಗುಂಡಿ ತೆಗೆದಿತ್ತು. ಸೆ.18ರ ರಾತ್ರಿ ಇದೇ ಗುಂಡಿಗೆ ಬಿದ್ದು ಮಲ್ಲಸಂದ್ರದ ನಿವಾಸಿಯಾದ ದ್ವಿಚಕ್ರ ವಾಹನ ಸವಾರ ಆನಂದ್ ಮೃತ ಪಟ್ಟಿದ್ದರು.

ಈ ಅವಘಡ ಸಂಭವಿಸಿ ಒಂದು ತಿಂಗಳಾದರೂ ಗುಂಡಿ ಮುಚ್ಚಿರಲಿಲ್ಲ. 'ಪ್ರಜಾವಾಣಿ'ಯ ಗುರುವಾರದ ಸಂಚಿಕೆಯಲ್ಲಿ 'ನರ ಬಲಿ ಬಳಿಕವೂ ಸರಿಯಾಗದ ರಸ್ತೆ' ಎಂಬ ವರದಿಯನ್ನು ಪ್ರಕಟಿಸಿ ಗಮನ ಸೆಳೆಯಲಾಗಿತ್ತು. ಇನ್ನೆಷ್ಟು ಜನ ಈ ಗುಂಡಿಗೆ ಬಲಿಯಾಗಬೇಕು ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದರು. ವರದಿ ಪ್ರಕಟವಾದ ದಿನವೇ ಸ್ಥಳಕ್ಕೆ ದೌಡಾಯಿಸಿರುವ ಜಲಮಂಡಳಿ ಅಧಿಕಾರಿಗಳು, ಗುತ್ತಿಗೆದಾರರ ಮೂಲಕ ಗುಂಡಿ ಮುಚ್ಚಿಸಿದ್ದಾರೆ.

1,601 ಮಿಲಿ ಮೀಟರ್ ವ್ಯಾಸದ ಮುಖ್ಯ ಕೊಳವೆ ಅಳವಡಿಕೆ ಕಾಮಗಾರಿ ನಿರ್ವಹಿಸಲಾಗುತ್ತಿದೆ. ಗುತ್ತಿಗೆದಾರರು ಈ ಕಾಮಗಾರಿಯನ್ನು ಮೂರು ತಿಂಗಳಲ್ಲೇ ಪೂರ್ಣಗೊಳಿಸಿದ್ದಾರೆ. ಕೊಳವೆ ಮಾರ್ಗಕ್ಕೆ ಕವಾಟು (ವಾಲ್ವ್) ಅಳವಡಿಸುವ ಕಾಮಗಾರಿ ಮಾತ್ರ ಪ್ರಗತಿಯಲ್ಲಿತ್ತು. ಅದಕ್ಕಾಗಿ ರಸ್ತೆ ಅಗೆದಿದ್ದು, ಸುತ್ತಲೂ ಬ್ಯಾರಿಕೇಡ್ ಅಳವಡಿಸಲಾಗಿತ್ತು.

'ಅ.30ರಿಂದ ಬಾಗಲಗುಂಟೆ ಜಾತ್ರೆ ಆರಂಭವಾಗುವುದರಿಂದ ವಾಹನ ಸಂಚಾರಕ್ಕೆ ಅನಾನುಕೂಲ ಆಗುವುದನ್ನು ತಪ್ಪಿಸಲು ಗುಂಡಿ ಮುಚ್ಚಲಾಗಿದೆ. ಜಾತ್ರೆ ಮುಗಿದ ಬಳಿಕ ಕಾಮಗಾರಿಯನ್ನು ಮತ್ತೆ ಕೈಗೆತ್ತಿಕೊಳ್ಳಲು ಅನುಮತಿ ನೀಡಲಾಗಿದೆ' ಎಂದು ಜಲ ಮಂಡಳಿ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.



ವಾಹನ ಸವಾರನ ಸಾವಿಗೆ ಕಾರಣವಾಗಿದ್ದ ಗುಂಡಿಯನ್ನು ಗುರುವಾರ ಮುಚ್ಚಿರುವುದು



ಶ್ರೀಗಂಧದಕಾವಲು ಒಕ್ಕಲಿಗರ ಸಂಘದ ಶಾಲೆ ಬಳಿಯಲ್ಲಿ ಹದಗೆಟ್ಟಿರುವ ಸರ್ವೀಸ್ ರಸ್ತೆ

'ಗುಂಡಿಗಳಿಗೆ ಮುಕ್ತಿ ನೀಡಿ'

ರಾಜರಾಜೇಶ್ವರಿನಗರ: ಗುಂಡಿಗಳಿಂದ ಕೂಡಿರುವ ಈ ರಸ್ತೆಯಲ್ಲಿ ಸಂಚರಿಸಲು ಹರಸಾಹಸ ಮಾಡಬೇಕು. ಕೊಳಚೆ ನೀರು ಸಹ ಹರಿಯುವುದರಿಂದ ದೊಡ್ಡಗುಂಡಿಗಳಲ್ಲಿ ಬಿದ್ದು ವಾಹನ ಸಂಚಾರರು ಗಾಯಗೊಂಡಿದ್ದಾರೆ. ಮಳೆ ಬಂದರೆ ಸಂಪೂರ್ಣ ಜಲಾವೃತವಾಗುವ ಈ ರಸ್ತೆಯಲ್ಲಿ ಜೀವ ಕೈಯಲ್ಲಿ ಹಿಡಿದು ಸಂಚರಿಸಬೇಕು.

ಬಿಬಿಎಂಪಿ ವ್ಯಾಪ್ತಿಯ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಹೊರ ವರ್ತುಲ ರಸ್ತೆಯ ಶ್ರೀಗಂಧಕಾವಲ್‌ನ ಒಕ್ಕಲಿಗ ಸಂಘದ ಶಾಲೆಯ ಸಮೀಪದಲ್ಲಿರುವ ಸರ್ವೀಸ್ ರಸ್ತೆಯ ದುಸ್ಥಿತಿ ಇದು.

ವರ್ಷದ ಹಿಂದೆ ಈ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗಿತ್ತು. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಒಳ ಚರಂಡಿಗಾಗಿ ಈ ರಸ್ತೆ ಅಗೆದು ಹಾಕಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಕಳಪೆ ಕಾಮಗಾರಿಯಿಂದ ರಸ್ತೆ ಪೂರ್ಣವಾಗಿ ಕಿತ್ತುಹೋಗಿ ಗುಂಡಿಮಯವಾಗಿದೆ. ದೊಡ್ಡ ಗಾತ್ರದ ಕಲ್ಲು, ಗುಂಡಿಗಳಿಂದ ವಾಹನ ಸವಾರರು ನರಕಯಾತನೆ ಅನುಭವಿಸಬೇಕಾಗಿದೆ.

'ಮಳೆ ಬಂದಾಗ ರಸ್ತೆಯಲ್ಲಿ ಗುಂಡಿ ಎಲ್ಲಿದೆ ಎಂದು ಗೊತ್ತಾಗದೆ ವಾಹನ ಸವಾರರು ಬಿದ್ದು ಗಾಯಗೊಂಡವರ ಸಂಖ್ಯೆ ಲೆಕ್ಕಕ್ಕಿಲ್ಲ' ಎಂದು ಹೇಳುತ್ತಾರೆ ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸರು.

'ಕಿತ್ತುಹೋಗಿರುವ ರಸ್ತೆ ಅಭಿವೃದ್ಧಿಪಡಿಸಲು ಅಧಿಕಾರಿಗಳು, ಜನಪ್ರತಿನಿಧಿಗಳು ನಿರ್ಲಕ್ಷ್ಯ ತೋರಿದ್ದಾರೆ' ಎಂದು ಸ್ಥಳೀಯ ನಿವಾಸಿ ರಾಘವೇಂದ್ರ ಬೇಸರ ವ್ಯಕ್ತಪಡಿಸುತ್ತಾರೆ.

'ಈ ರಸ್ತೆ ಹಾಳಾಗಿ ತಿಂಗಳುಗಳೇ ಕಳೆದಿದ್ದರೂ ದುರಸ್ತಿಯಾಗಿಲ್ಲ. ಮಲ್ಲತ್ತಹಳ್ಳಿಯಿಂದ ಪೀಣ್ಯ ಕೈಗಾರಿಕೆ ಪ್ರದೇಶಕ್ಕೆ ನಿತ್ಯ ಈ ರಸ್ತೆಯಲ್ಲಿ ಸಂಚರಿಸಬೇಕಾಗಿದೆ. ಒಮ್ಮೆ ಈ ರಸ್ತೆಯಲ್ಲಿ ಎಲ್ಲಿ ಗುಂಡಿ ಇದೆ ಎಂದು ಗೊತ್ತಾಗದೆ ಸಂಚರಿಸಿದ್ದರಿಂದ ಗುಂಡಿಗೆ ಬಿದ್ದು ಗಾಯಗೊಂಡಿದ್ದೆ. ಇದೇ ಸಮಯದಲ್ಲಿ ಬಿಎಂಟಿಸಿ ಬಸ್ ಚಾಲಕ ಸಮಯ ಪ್ರಜ್ಞೆಯಿಂದ ವಾಹನ ನಿಲ್ಲಿಸಿದ್ದರಿಂದ ನನ್ನ ಪ್ರಾಣ ಉಳಿಯಿತು' ಎಂದು ನಾಗರಿಕ ಲೋಕೇಶ್ ಹೇಳಿದರು.

'ರಸ್ತೆ ದುರಸ್ತಿ ಕೈಗೊಳ್ಳಲು ಸಾಧ್ಯವಾಗದಿದ್ದರೆ ಪ್ರತಿಯೊಂದು ಗುಂಡಿಯ ಮುಂದೆ ಎಚ್ಚರಿಕೆ ಎನ್ನುವ ಫಲಕವನ್ನಾದರೂ ಹಾಕಿ ಪುಣ್ಯ ಕಟ್ಟಿಕೊಳ್ಳಿ. ಆಗಲಾದರೂ ಜನರ ಜೀವ ಉಳಿಯುತ್ತದೆ' ಎಂದು ಹಿರಿಯ ನಾಗರಿಕರು ಹಾಗೂ ವಾಹನ ಸವಾರರು ಆಗ್ರಹಿಸಿದ್ದಾರೆ.

ಜ್ಯೇಷ್ಠತೆ ಮೀರಿ ಕಾಮಗಾರಿ ಬಿಲ್ ಪಾವತಿ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾಮಗಾರಿಗಳ ಬಿಲ್ ಪಾವತಿ ವೇಳೆ ಜ್ಯೇಷ್ಠತೆ ನಿಯಮಗಳನ್ನು ಮೀರಿ ಕೆಲವು ಗುತ್ತಿಗೆದಾರರಿಗಷ್ಟೇ ಬಿಲ್ ಪಾವತಿ ಮಾಡಲಾಗುತ್ತಿದೆ. ರಾಜಕೀಯ ಪ್ರಭಾವ ಹೊಂದಿರುವ ಗುತ್ತಿಗೆದಾರರು ಜ್ಯೇಷ್ಠತೆ ಹೊಂದಿಲ್ಲದಿದ್ದರೂ ಬಿಲ್‌ಗಳ ಬಾಕಿ ಮೊತ್ತ ಬಿಡುಗಡೆ ಮಾಡಿಸಿಕೊಳ್ಳುತ್ತಿದ್ದಾರೆ' ಎಂದು ಗುತ್ತಿಗೆದಾರರು ದೂರಿದ್ದಾರೆ.

'ಸರ್ಕಾರವು ಬಿಬಿಎಂಪಿಗೆ ₹ 550 ಕೋಟಿಯನ್ನು ಸೆಪ್ಟೆಂಬರ್ ಅಂತ್ಯದಲ್ಲಿ ಬಿಡುಗಡೆ ಮಾಡಿದೆ. ಇದನ್ನು ಗುತ್ತಿಗೆದಾರರಿಗೆ ಬಿಡುಗಡೆ ಮಾಡುವಾಗ ತಾರತಮ್ಯ ಮಾಡಲಾಗಿದೆ. ಜ್ಯೇಷ್ಠತೆ ಆಧಾರದಲ್ಲಿ ಯಾವ ಗುತ್ತಿಗೆದಾರರಿಗೆ ಬಿಲ್ ಪಾವತಿ ಆಗಬೇಕಿತ್ತೋ ಅವರನ್ನು ಕಡೆಗಣಿಸಲಾಗಿದೆ. ಎನ್‌ಸಿಸಿಯಂತಹ ಗುತ್ತಿಗೆ ಸಂಸ್ಥೆಗೆ ಜ್ಯೇಷ್ಠತೆ ಮೀರಿ ಪದೇ ಪದೇ ಹಣ ಬಿಡುಗಡೆ ಮಾಡಲಾಗಿದೆ. ಈ ಸಂಸ್ಥೆಯು 2021ರ ಜುಲೈನಲ್ಲಿ ಪೂರ್ಣಗೊಳಿಸಿದ ಕಾಮಗಾರಿಗೆ ಎರಡೂವರೆ ತಿಂಗಳಲ್ಲೇ ₹ 28.61 ಕೋಟಿ ಬಿಲ್ ಪಾವತಿಯಾಗಿದೆ. 2020ರ ಅಕ್ಟೋಬರ್‌ನಿಂದ ಇದುವರೆಗೆ ಈ ಸಂಸ್ಥೆಗೆ ಒಟ್ಟು ₹ 151.46 ಕೋಟಿ ಬಿಲ್ ಪಾವತಿಸಲಾಗಿದೆ. ಇತರ ಕೆಲವು ಗುತ್ತಿಗೆದಾರರು ತಮ್ಮ ಬಿಲ್‌ಗಾಗಿ ವರ್ಷಾನುಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಇದೆ' ಎಂದು ಗುತ್ತಿಗೆದಾರರೊಬ್ಬರು ತಿಳಿಸಿದರು.

'ಕಸ ವಿಲೇವಾರಿ, ರಸ್ತೆ ಗುಂಡಿ ಮುಚ್ಚುವುದು ಹಾಗೂ ಇತರ ತುರ್ತು ಕಾಮಗಾರಿಗಳಿಗೆ ಆದ್ಯತೆ ಮೇರೆಗೆ ಅನುದಾನ ಬಿಡುಗಡೆ ಮಾಡಬಹುದು. ಆದರೆ, ಈ ಬಾರಿ ಬಿಲ್ ಪಾವತಿ ಮಾಡುವಾಗ ಈ ನಿಯಮವೂ ಪಾಲನೆ ಆಗಿಲ್ಲ. ಸಣ್ಣಪುಟ್ಟ ಕಾಮಗಾರಿ ನಡೆಸುವ ಗುತ್ತಿಗೆದಾರರಿಗೆ ವರ್ಷಗಳ ಬಳಿಕವೂ ಬಿಲ್ ಮೊತ್ತ ಕೈಸೇರುತ್ತಿಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ಬಾಕಿ ಬಿಲ್‌ಗಳನ್ನು ಪಾವತಿಸುವಾಗ ಬಿಡುಗಡೆಯಾದ ಅನುದಾನದಲ್ಲಿ ಶೇ 80ರಷ್ಟು ಜ್ಯೇಷ್ಠತೆ ಆಧಾರದಲ್ಲಿ ಪಾವತಿಸಬೇಕು. ಇನ್ನುಳಿದ ಶೇ 20 ರಷ್ಟು ಮೊತ್ತವನ್ನು ತುರ್ತು ಕಾಮಗಾರಿಗಳಿಗೆ ಅಥವಾ ಆದ್ಯತೆಯ ಕಾಮಗಾರಿಗಳಿಗೆ ಮುಖ್ಯ ಆಯುಕ್ತರು ವಿವೇಚನೆಯ ಆಧಾರದಲ್ಲಿ ಬಿಡುಗಡೆ ಮಾಡಲು ಅವಕಾಶ ಇದೆ. ಇದನ್ನು ತಪ್ಪು ಎನ್ನಲಾಗದು. ಆದರೆ, ಈ ವಿವೇಚನೆಯಡಿ ಬಿಲ್ ಬಿಡುಗಡೆ ಮಾಡುವ ವ್ಯವಸ್ಥೆಯಲ್ಲೂ ಪಾರದರ್ಶಕತೆ ತಂದರೆ ಒಳ್ಳೆಯದು. ರಾಜಕೀಯ ಪ್ರಭಾವ ಇರುವ ಗುತ್ತಿಗೆದಾರರು ಜ್ಯೇಷ್ಠತೆ ಮಿರಿ ಬಿಲ್ ಮೊತ್ತ ಬಿಡುಗಡೆ ಮಾಡಿಸಿಕೊಳ್ಳುವ ಪ್ರಸಂಗಗಳು ನಡೆಯುತ್ತಿರುವುದು ನಿಜ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್‌.ಅಂಬಿಕಾಪತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಗುತ್ತಿಗೆದಾರರ ಮನೆಯಲ್ಲಿ ಮದುವೆಯಂಥ ಶುಭಕಾರ್ಯಗಳಿದ್ದಾಗ ಅಥವಾ ಅವರು ವೈದ್ಯಕೀಯ ಚಿಕಿತ್ಸೆ ಪಡೆಯುವ ಸಂದರ್ಭ ಎದುರಾದಾಗ ಅವರಿಗೆ ಪಾವತಿಯಾಗಬೇಕಾದ ಮೊತ್ತದಲ್ಲಿ ಭಾಗಶಃ ಹಣವನ್ನು ಜ್ಯೇಷ್ಠತೆ ಮೀರಿ ಪಾವತಿಸಲು ಅವಕಾಶವಿದೆ' ಎಂದರು. ಜ್ಯೇಷ್ಠತೆ ಮೀರಿ ಬಿಲ್ ಪಾವತಿ ಆಗುತ್ತಿರುವ ದೂರಿನ ಬಗ್ಗೆ ಪ್ರತಿಕ್ರಿಯೆ ಪಡೆಯಲು ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ ಅವರು ಕರೆಗೆ ಲಭ್ಯವಾಗಲಿಲ್ಲ.

ಪ್ರತ್ಯೇಕ ಲಿಂಗಾಯತ ಧರ್ಮ 24ರಂದು ಮಹಾರಾಷ್ಟ್ರದಲ್ಲಿ ರ‍್ಯಾಲಿ

ಕಲಬುರಗಿ: 'ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ ನೀಡಬೇಕು ಎಂದು ಆಗ್ರಹಿಸಿ, ಮಹಾರಾಷ್ಟ್ರದ ಪರಭಣಿ ನಗರದಲ್ಲಿ ಅ. 24ರಂದು ಬೃಹತ್ ರ‍್ಯಾಲಿ ನಡೆಯಲಿದೆ' ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ಮಹಾಪ್ರಧಾನ ಕಾರ್ಯದರ್ಶಿ ಆರ್‌.ಜಿ.ಶೆಟಗಾರ ಹೇಳಿದರು.

'ಬಸವಣ್ಣನವರು 12ನೇ ಶತಮಾನದಲ್ಲಿ ಹೊಸದಾಗಿ ಸ್ಥಾಪಿಸಿದ ಲಿಂಗಾಯತ ಧರ್ಮ ತನ್ನದೇ ಆದ ನೆಲೆ ಹೊಂದಿದೆ. ಇದನ್ನು ಸಾಂವಿಧಾನಿಕವಾಗಿ ಅಂಗೀಕರಿಸುವಂತೆ ದಶಕಗಳಿಂದ ಹೋರಾಟ ನಡೆದಿದೆ. ಈಗಾಗಲೇ ರಾಜ್ಯ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಕೂಡ ಮಾಡಿದೆ. ಆದರೂ ಇದಕ್ಕೆ ವಿಳಂಬ ಧೋರಣೆ ಅನುಸರಿಸುತ್ತಿರುವುದನ್ನು ಖಂಡಿಸಿ, ಈಗ ಮತ್ತೊಂದು ಹಂತದ ಹೋರಾಟ ನಡೆಯಲಿದೆ' ಎಂದು ಅವರು ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಮಹಾರಾಷ್ಟ್ರದಲ್ಲಿ 2017ರಲ್ಲಿ ಈ ರ‍್ಯಾಲಿ ಆಂಭವಾಗಿದ್ದು, ಈಗಾಗಲೇ 12 ಜಿಲ್ಲೆಗಳಲ್ಲಿ ಸಂಚರಿಸಿದೆ. ಲಾಕ್‌ಡೌನ್ ಕಾರಣ ಮಧ್ಯದಲ್ಲಿ ಹೋರಾಟ ನಿಲ್ಲಿಸಲಾಗಿತ್ತು. ಇದೇ 24ರಿಂದ ಅದು ಮತ್ತೆ ಚಾಲನೆ ಪಡೆಯಲಿದೆ. ಕೂಡಲಸಂಗಮದ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ, ಚನ್ನಬಸವಾನಂದ ಸ್ವಾಮೀಜಿ, ಬಸವಪ್ರಭು ಸ್ವಾಮೀಜಿ, ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ, ಸಂಘಟನೆಯ ಮಹಾರಾಷ್ಟ್ರದ ಮುಖಂಡರಾದ ಅವಿನಾಶ ಭೋಸಿ ಕರ, ವಿನಯ್ ಕೋರೆ, ಜಯದತ್ತ ಸಿರಸಾಗರ ನೇತೃತ್ವ ವಹಿಸಲಿದ್ದಾರೆ' ಎಂದರು.

'ಬೂದುಪಟ್ಟಿ'ಯಲ್ಲಿ ಪಾಕ್ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಾಕಿಸ್ತಾನವನ್ನು ಮುಂದಿನ ವರ್ಷ ಏಪ್ರಿಲ್‌ವರೆಗೆ 'ಬೂದುಪಟ್ಟಿ'ಯಲ್ಲಿಯೇ ಮುಂದುವರಿಸಲು ಹಣಕಾಸು ಕಾರ್ಯಪಡೆ (ಎಫ್‌ಎಟಿಎಫ್) ನಿರ್ಧರಿಸಿದೆ.

ಪ್ಯಾರಿಸ್‌ನಲ್ಲಿ ನಡೆದ ಎಫ್‌ಎಟಿಎಫ್‌ನ ನಾಲ್ಕು ದಿನಗಳ ಸಾಮಾನ್ಯಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಟರ್ಕಿ, ಜೋರ್ಡಾನ್ ಹಾಗೂ ಮಾಲಿಯನ್ನು ಸಹ 'ಬೂದುಪಟ್ಟಿ'ಯಲ್ಲಿ ಸೇರಿಸಲು ನಿರ್ಧರಿಸಲಾಯಿತು ಎಂದೂ ಸಂಘಟನೆ ತಿಳಿಸಿದೆ.

ಚಿತ್ರಾವಳಿ



ದೆಹಲಿ ಕನ್ನಡ ಸಂಘದ ನೂತನ ಅಧ್ಯಕ್ಷ ಸಿ.ಎಂ. ನಾಗರಾಜ್ ಹಾಗೂ ಅವರ ಪತ್ನಿ ಶೋಭಾ ಅವರನ್ನು ರಂಗ ವಿಜಯಾ ತಂಡವು ಇತ್ತೀಚೆಗೆ ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನ್ಮಾನಿಸಿತು. ಕನ್ನಡವೇ ಸತ್ಯ ರಂಗಣ್ಣ, ಸತ್ಯನಾರಾಯಣ, ತಂಡದ ಅಧ್ಯಕ್ಷ ಮಾಲೂರು ವಿಜಿ ಹಾಗೂ ಪದಾಧಿಕಾರಿಗಳು ಇದ್ದರು.



ಮುಸ್ಲಿಂ ಅಭಿವೃದ್ಧಿ ಸಂಸ್ಥೆಯು ಪ್ಯಾಲೇಸ್ ಗುಟ್ಟಹಳ್ಳಿಯಲ್ಲಿ ಆಯೋಜಿಸಿದ್ದ ಈದ್–ಮಿಲಾದ್ ಆಚರಣೆಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಪಾಲ್ಗೊಂಡಿದ್ದರು. ಇದೇ ವೇಳೆ ಸಮುದಾಯದ ವಿದ್ಯಾರ್ಥಿಗಳಿಗೆ ಪುಸ್ತಕ, ಶಾಲಾ ಬ್ಯಾಗ್ ಹಾಗೂ ಸಿಹಿ ವಿತರಿಸಲಾಯಿತು. ಮಹಮದೀಯರ ಕನ್ನಡ ವೇದಿಕೆಯ ಅಧ್ಯಕ್ಷ ಸಮೀವುಲ್ಲಾ ಖಾನ್, ಬಿಜೆಪಿ ಮುಖಂಡ ಶಕೀಲ್ ಅಹಮದ್, ಮುಖಂಡರಾದ ಶ್ರೀನಿವಾಸಮೂರ್ತಿ ಹಾಗೂ ಕೇಶವ ಮೂರ್ತಿ ಇದ್ದರು.

ವೈದ್ಯಕೀಯ ಕೋರ್ಸ್ ಶುಲ್ಕ ಶೇ 15ರಷ್ಟು ಹೆಚ್ಚಳ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಶುಲ್ಕ ಶೇ 15ರಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ.

ಶುಲ್ಕ ಹೆಚ್ಚಳಕ್ಕೆ ಸಂಬಂಧಿಸಿದಂತೆ ಹಿಂದಿನ ವರ್ಷಗಳಲ್ಲಿ ನಿರ್ಧರಿಸಿದಂತೆ ಸರ್ಕಾರಿ ಸೀಟುಗಳಿಗೆ ಶೇ 15 ಮತ್ತು ಖಾಸಗಿ ಸೀಟುಗಳಿಗೆ ಶೇ 25ರಷ್ಟು ಹೆಚ್ಚಿಸಲು ಚಿಂತನೆ ನಡೆದಿದೆ ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ತಿಳಿಸಿದೆ.

'ಶುಲ್ಕ ಹೆಚ್ಚಳಕ್ಕೆ ಸಂಬಂಧಿಸಿದಂತೆ ಖಾಸಗಿ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿಯ ಜೊತೆ ವೈದ್ಯಕೀಯ ಸಚಿವರು ಗುರುವಾರ ನಡೆಸಬೇಕಿದ್ದ ಸಭೆ ಕೊನೆಯ ಕ್ಷಣದಲ್ಲಿ ರದ್ದು ಆಗಿದೆ. ಈ ಸಭೆಯಲ್ಲಿಯೇ ಶುಲ್ಕ ಹೆಚ್ಚಳದ ಬಗ್ಗೆ ತೀರ್ಮಾನ ಆಗುವ ಸಾಧ್ಯತೆ ಇತ್ತು' ಎಂದೂ ಇಲಾಖೆ ಮೂಲಗಳು ತಿಳಿಸಿವೆ.

ಖಾಸಗಿ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿಗಳು ಶೇ 25ರಿಂದ ಶೇ 30ರಷ್ಟು ಶುಲ್ಕ ಹೆಚ್ಚಳಕ್ಕೆ ಬೇಡಿಕೆ ಇಟ್ಟಿವೆ.

ಶೇ 100 ರಷ್ಟು ಆಸನಗಳಿಗೆ ಅವಕಾಶ ನೀಡಿದರೂ ಕಾಯ್ದಿರಿಸುವಿಕೆಗಿಲ್ಲ ಆಸಕ್ತಿ

ಕಳೆಗಟ್ಟದ ಸರ್ಕಾರಿ ರಂಗಮಂದಿರ

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ನಿರ್ಬಂಧಗಳನ್ನು ತೆರವುಗೊಳಿಸಿ, ಶೇ 100 ರಷ್ಟು ಆಸನಗಳ ಭರ್ತಿಗೆ ಅವಕಾಶ ನೀಡಿದರೂ ನಗರದಲ್ಲಿನ ಸರ್ಕಾರಿ ರಂಗಮಂದಿರಗಳ ಕಾಯ್ದಿರಿಸುವಿಕೆಗೆ ಸಾಂಸ್ಕೃತಿಕ ಸಂಘ–ಸಂಸ್ಥೆಗಳು ಆಸಕ್ತಿ ತೋರುತ್ತಿಲ್ಲ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರವೀಂದ್ರ ಕಲಾಕ್ಷೇತ್ರ ಒಳಗೊಂಡಂತೆ ನಗರದ ಏಳು ರಂಗ ಮಂದಿರಗಳನ್ನು ನಿರ್ವಹಣೆ ಮಾಡುತ್ತಿದೆ. ಇವುಗಳಲ್ಲಿ ಎರಡು ಬಯಲು ರಂಗಮಂದಿರಗಳೂ ಸೇರಿವೆ. ಅಗ್ನಿ ಅವಘಡಕ್ಕೆ ಒಳಗಾಗಿದ್ದ ಕಲಾಗ್ರಾಮದ ಸಾಂಸ್ಕೃತಿಯ ಸಮುಚ್ಚಯ ಸ್ಥಗಿತವಾಗಿ ಮೂರು ವರ್ಷಗಳಾಗುತ್ತಾ ಬಂದರೂ ಬಾಗಿಲು ತೆರೆದಿಲ್ಲ. ಹೀಗಾಗಿ, ಬಹುತೇಕ ಎಲ್ಲ ಕಲಾ ತಂಡಗಳು, ಸಂಘ–ಸಂಸ್ಥೆಗಳು ರವೀಂದ್ರ ಕಲಾಕ್ಷೇತ್ರವನ್ನೇ ಅವಲಂಬಿಸಿವೆ.

ಕೋವಿಡ್ ನಿಯಂತ್ರಣಕ್ಕೆ ಬಂದಿರುವುದರಿಂದ ಇದೇ ತಿಂಗಳು ನಿರ್ಬಂಧಗಳನ್ನು ಪೂರ್ಣ ಪ್ರಮಾಣದಲ್ಲಿ ಸಡಿಲಿಸಿ, ಪ್ರದರ್ಶನಗಳಿಗೆ ಅವಕಾಶ ನೀಡಲಾಗಿದೆ. ಆದರೆ, ಕೋವಿಡ್‌ನಿಂದ ಉಂಟಾದ ಆರ್ಥಿಕ ಸಂಕಷ್ಟ ಹಾಗೂ ಪ್ರೇಕ್ಷಕರ ಕೊರತೆಯಿಂದಾಗಿ ಸಂಘ–ಸಂಸ್ಥೆಗಳ ಮುಖ್ಯಸ್ಥರು ರಂಗಮಂದಿರಗಳಿಗೆ ಬಾಡಿಗೆ ಪಾವತಿಸಿ, ಪ್ರದರ್ಶನ ನೀಡಲು ಮುಂದಾಗುತ್ತಿಲ್ಲ.



ರವೀಂದ್ರ ಕಲಾಕ್ಷೇತ್ರ —ಪ್ರಜಾವಾಣಿ ಚಿತ್ರ

ವರ್ಷದಲ್ಲಿ 385 ಕಾರ್ಯಕ್ರಮ

ಕೋವಿಡ್ ಪೂರ್ವದಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರತಿ ತಿಂಗಳು ಸರಾಸರಿ 30 ಕಾರ್ಯಕ್ರಮಗಳು ನಡೆಯುತ್ತಿದ್ದವು. 2019–20ನೇ ಸಾಲಿನಲ್ಲಿ 385 ಕಾರ್ಯಕ್ರಮಗಳು ನಡೆದಿದ್ದವು. ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿದ್ದಂತೆ ರಂಗಮಂದಿರಗಳನ್ನು ಸ್ಥಗಿತ ಮಾಡಲಾಗಿತ್ತು. ರವೀಂದ್ರ ಕಲಾಕ್ಷೇತ್ರ ಮತ್ತು ನಯನ ಸಭಾಂಗಣದಲ್ಲಿ 2020ರ ಮಾ.14ರಿಂದ ಮಾ.31ರ ಅವಧಿಯಲ್ಲಿ 15 ಕಾರ್ಯಕ್ರಮಗಳು ಮುಂಗಡವಾಗಿ ಬುಕ್ಕಿಂಗ್ ಆಗಿದ್ದವು. ಎಲ್ಲ ಕಾರ್ಯಕ್ರಮಗಳನ್ನು ರದ್ದು ಮಾಡಿ, ಮುಂಗಡ ಹಣ ವಾಪಸ್ ನೀಡಲಾಗಿತ್ತು.

ಈ ತಿಂಗಳು ರವೀಂದ್ರ ಕಲಾಕ್ಷೇತ್ರದಲ್ಲಿ ಈವರೆಗೆ ಏಳು ದಿನಗಳು ಮಾತ್ರ ಕಾರ್ಯಕ್ರಮಗಳು ನಡೆದಿವೆ. 830 ಆಸನಗಳ ರವೀಂದ್ರ ಕಲಾಕ್ಷೇತ್ರಕ್ಕೆ ಒಂದು ಪಾಳಿಗೆ ₹ 3 ಸಾವಿರ ಠೇವಣಿ ಸಹಿತ ಒಟ್ಟು ₹ 5,360 ಪಾವತಿಸಬೇಕಾಗುತ್ತದೆ.

ಒಂದೂ ಕಾರ್ಯಕ್ರಮವಿಲ್ಲ: ನಯನ ಸಭಾಂಗಣದಲ್ಲಿ ವಾರಾಂತ್ಯದಲ್ಲಿ ಮಾತ್ರ ಕಾರ್ಯಕ್ರಮಗಳನ್ನು ಮುಂಗಡವಾಗಿ ಕಾಯ್ದಿರಿಸಲಾಗುತ್ತಿದೆ. ಕೋವಿಡ್ ಪೂರ್ವದಲ್ಲಿ ತಿಂಗಳಿಗೆ ಕನಿಷ್ಠ 10 ಕಾರ್ಯಕ್ರಮಗಳು ಈ ಸಭಾಂಗಣದಲ್ಲಿ ನಡೆಯುತ್ತಿದ್ದವು. ಸಂಸ ಬಯಲು ರಂಗಮಂದಿರ ಹಾಗೂ ಸಮುಚ್ಚಯ ಬಯಲು ರಂಗಮಂದಿರದಲ್ಲಿ ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಮುಂಗಡ ಕಾಯ್ದಿರಿಸುವಿಕೆ ನಡೆದಿಲ್ಲ.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಪುಟ್ಟಣ್ಣಚೆಟ್ಟಿ ಪುರ ಭವನಕ್ಕೆ ದಿನವೊಂದಕ್ಕೆ ₹ 75 ಸಾವಿರ ಬಾಡಿಗೆ ಪಾವತಿಸಬೇಕಿದೆ. ಸಾಂಸ್ಕೃತಿಕ ಸಂಘ–ಸಂಸ್ಥೆಗಳು ಕೋವಿಡ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿರುವುದರಿಂದ ಅಲ್ಲಿ ಹೆಚ್ಚಿನ ಬಾಡಿಗೆ ಪಾವತಿಸಿ, ಕಾರ್ಯಕ್ರಮಗಳನ್ನು ನಡೆಸಲು ಆಸಕ್ತಿ ತೋರುತ್ತಿಲ್ಲ.

'ಕೋವಿಡ್ ನಿರ್ಬಂಧಗಳನ್ನು ತೆರವುಗೊಳಿಸಿ, ಶೇ 100 ರಷ್ಟು ಆಸನಗಳ ಭರ್ತಿಗೆ ಅವಕಾಶ ನೀಡಿರುವುದರಿಂದ ಕಾರ್ಯಕ್ರಮಗಳು ಇನ್ನುಮುಂದೆ ಹೆಚ್ಚುವ ವಿಶ್ವಾಸವಿದೆ. ಆನ್‌ಲೈನ್ ಮೂಲಕ ರಂಗಮಂದಿರಗಳನ್ನು ಮುಂಗಡವಾಗಿ ಕಾಯ್ದಿರಿಸಲು ಅವಕಾಶವಿದೆ' ಎಂದು ರವೀಂದ್ರ ಕಲಾಕ್ಷೇತ್ರದ ವ್ಯವಸ್ಥಾಪಕ ಬಿ.ಎಸ್‌. ಶಿವಪ್ರಕಾಶ್ ತಿಳಿಸಿದರು.

ಕೋವಿಡ್ ನಿಯಂತ್ರಣದಿಂದ ಸಾಂಸ್ಕೃತಿಕ ಚಟುವಟಿಕೆಗಳು ಪುನರಾರಂಭವಾಗಿವೆ. ಪೂರ್ಣ ಪ್ರಮಾಣದಲ್ಲಿ ಆಸನಗಳ ಭರ್ತಿಗೆ ಅವಕಾಶ ನೀಡಿರುವುದರಿಂದ ಕಾರ್ಯಕ್ರಮಗಳು ಹೆಚ್ಚಾಗುತ್ತವೆ

ಎಸ್. ರಂಗಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ

ವಿಜಿನಾಪುರ ಕೆಳಸೇತುವೆ: ಅವೈಜ್ಞಾನಿಕ ಕಾಮಗಾರಿ– ಆರೋಪ, ವಾಹನ ಸವಾರರಿಗೆ ಕಿರಿಕಿರಿ

ಪ್ರತಿ ಮಳೆಗೂ ಜಲ ಸ್ತಂಭನ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ವಿಜಿನಾಪುರದಿಂದ ಟಿನ್ ಫ್ಯಾಕ್ಟರಿ ಕಡೆಗೆ ಸಂಪರ್ಕ ಕಲ್ಪಿಸುವ ವಿಜಿನಾಪುರದ ಎಫ್‌ಸಿಐ ಗೋದಾಮು ಬಳಿಯ ರೈಲ್ವೆ ಕೆಳಸೇತುವೆಯಲ್ಲಿ ಪ್ರತಿ ಸಾರಿ ಮಳೆಯಾದಾಗಲೂ ಮೂರು– ನಾಲ್ಕು ಅಡಿಗಳಷ್ಟು ನೀರು ಕಟ್ಟಿಕೊಳ್ಳುತ್ತದೆ. ಈ ವೇಳೆ ಉಂಟಾಗುವ ಸಂಚಾರ ದಟ್ಟಣೆಯಿಂದಾಗಿ ವಾಹನ ಸವಾರರು ತೀವ್ರ ತೊಂದರೆ ಅನುಭವಿಸುತ್ತಾರೆ.

ಈ ಕೆಳಸೇತುವೆ ಮೂಲಕ ಹೋಗುವ ರಸ್ತೆಯು ವಿಜಿನಾಪುರದಿಂದ ಹೆಬ್ಬಾಳ, ಮಾರತಹಳ್ಳಿ, ವೈಟ್‌ಫೀಲ್ಡ್, ಹಲಸೂರು ಕಡೆಗೆ ಸಂಪರ್ಕ ಕಲ್ಪಿಸುತ್ತದೆ. ಕೆಲ ದಿನಗಳಿಂದ ಪದೇ ಪದೇ ಸುರಿಯುತ್ತಿರುವ ಮಳೆಯಿಂದಾಗಿ ಕೆಳಸೇತುವೆಯಲ್ಲಿ ನೀರು ನಿಲ್ಲುತ್ತಿದ್ದು, ಜನರು ಇದನ್ನು ಬಳಸಲಾಗದ ಸ್ಥಿತಿ ನಿರ್ಮಾಣವಾಗುತ್ತಿದೆ.

ಕೆಳಸೇತುವೆ ಮಾರ್ಗದ ಬಳಿಯ ರಾಜಕಾಲುವೆಯಲ್ಲಿ ನೀರು ಸರಾಗವಾಗಿ ಹರಿಯುತ್ತಿಲ್ಲ. ಹೀಗಾಗಿ ಮಳೆ ನೀರು ಕೆಳಸೇತುವೆ ಕಡೆಗೆ ಹರಿಯುತ್ತದೆ. ಈ ಸೇತುವೆ ಪಕ್ಕದಲ್ಲಿ ಅನೇಕ ಮನೆಗಳಿವೆ. ಇಲ್ಲಿ ಸರಿಯಾದ ಚರಂಡಿಯನ್ನು ನಿರ್ಮಾಣ ಮಾಡಿಲ್ಲ. ಚರಂಡಿಯಲ್ಲಿ ಹರಿಯುವ ನೀರು ಕೂಡ ಕೆಳಸೇತುವೆ ಬಳಿ ಸಂಗ್ರಹಗೊಳ್ಳುತ್ತದೆ.

'ಹನ್ನೆರಡು ವರ್ಷಗಳಿಂದ ಈ ಸಮಸ್ಯೆ ಇದೆ. ಪ್ರತಿ ಸಾರಿ ಮಳೆ ಬಂದಾಗ ರೈಲ್ವೆ ಸೇತುವೆ ಬಳಿ ಪ್ರವಾಹ ಸೃಷ್ಟಿಯಾಗುತ್ತದೆ. ನೀರು ಸಂಗ್ರಹಗೊಂಡು ಅನಾಹುತ ಆದಾಗ ಮಾತ್ರ ಆ ಕ್ಷಣಕ್ಕೆ ಬಿಬಿಎಂಪಿ ಅಧಿಕಾರಿಗಳು ಕಾಟಾಚಾರಕ್ಕೆ ನೀರು ತೆರವುಗೊಳಿಸಿ ಕೈತೊಳೆದುಕೊಳ್ಳುತ್ತಾರೆ. ಮಳೆ ನೀರು ಸಂಗ್ರಹಗೊಳ್ಳದಂತೆ ಸಂಪ್ ನಿರ್ಮಾಣ ಮಾಡಲು ಜನವರಿಯಲ್ಲಿ ಕೆಲಸ ಆರಂಭಿಸಲಾಗಿತ್ತು. ಮಳೆಗಾಲ ಆರಂಭಗೊಂಡರೂ ಅದರ ಕೆಲಸ ಮುಗಿದಿಲ್ಲ. ದಿನನಿತ್ಯದ ಕೆಲಸಗಳಿಗಾಗಿ ಈ ಸೇತುವೆ ಹೆಚ್ಚಿನದಾಗಿ ಅವಲಂಬಿಸಿದ್ದೇವೆ' ಎಂದು ಸ್ಥಳೀಯರು ದೂರಿದರು.

'ಕಟ್ಟಿಕೊಳ್ಳುವ ನೀರನ್ನು ಪಂಪ್ ಬಳಸಿ ಹೊರಹಾಕಲಾಗುತ್ತದೆ. ನೀರು ಹರಿಯಲು ಚರಂಡಿಗಳಿಲ್ಲ. ಈ ತೊಂದರೆ ಕುರಿತು ಹಲವಾರು ಬಾರಿ ಬಿಬಿಎಂಪಿ ಅಧಿಕಾರಿಗಳ ಬಳಿ ಮನವಿ ಸಲ್ಲಿಸಿದ್ದೇವೆ. ಆದರೂ ಪ್ರಯೋಜನವಾಗಿಲ್ಲ' ಎಂದು ಆಟೊ ಚಾಲಕ ರಾಮು ದೂರಿದರು.

ರೈಲ್ವೆ ಕೆಳಸೇತುವೆ ಚರಂಡಿಗಿಂತ ಕೆಳಮಟ್ಟದಲ್ಲಿದೆ. ಹಾಗಾಗಿ ನೀರು ಹೊರಹೋಗಲು ಸಾಧ್ಯವಾಗುತ್ತಿಲ್ಲ. ಮಳೆ ನೀರು ಸಂಗ್ರಹಕ್ಕಾಗಿ ಸಂಪ್‌ಗಳನ್ನು ನಿರ್ಮಿಸಲಾಗಿದೆ. ಪಂಪ್ ಮೂಲಕ ಸಂಪ್ ನೀರನ್ನು ಹೊರಹಾಕಲಾಗುತ್ತದೆ. ಈಗಾಗಲೇ ಸಂಪ್ ನಿರ್ಮಾಣ ಕಾರ್ಯ ಮುಗಿದಿದೆ. ವಿದ್ಯುತ್ ಪೂರೈಕೆ ಇಲ್ಲದ ಕಾರಣ ಸಮಸ್ಯೆ ಎದುರಾಗಿದೆ. ಮಳೆಗಾಲದಲ್ಲಿ ನೀರು ಸಂಗ್ರಹಗೊಳ್ಳದಂತೆ ಎಚ್ಚರವಹಿಸುತ್ತೇವೆ. ಇನ್ನೂ ಒಂದು ವಾರದಲ್ಲಿ ಎಲ್ಲಾ ಕೆಲಸಗಳು ಮುಗಿಯಲಿವೆ. ಆ ಬಳಿಕ ಈ ಕೆಳಸೇತುವೆಯಲ್ಲಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಿದ್ದೇವೆ' ಎಂದು ಬಿಬಿಎಂಪಿ ಸಹಾಯಕ ಎಂಜಿನಿಯರ್ ಸತೀಶ್ ತಿಳಿಸಿದರು.



ಕೆ.ಆರ್.ಪುರ ಬಳಿಯ ವಿಜಿನಾಪುರ ಎಫ್‌ಸಿಐ ಗೋದಾಮು ಬಳಿಯ ರೈಲ್ವೆ ಕೆಳಸೇತುವೆ ಮಳೆ ಬಂದಾಗ ಜಲಾವೃತಗೊಳ್ಳುತ್ತದೆ



ಮೈಸೂರಿನಲ್ಲಿ ಬುಧವಾರ ರಾತ್ರಿ ಇಡೀ ಸುರಿದ ಭಾರಿ ಮಳೆಗೆ ಚಾಮುಂಡಿಬೆಟ್ಟದಲ್ಲಿ ಗುರುವಾರ ಭೂಕುಸಿತ ಉಂಟಾಗಿದೆ

ಪ್ರಜಾವಾಣಿ ಚಿತ್ರ/ ಬಿ.ಆರ್.ಸವಿತಾ

ಮಂಡ್ಯ ಜಿಲ್ಲೆಯ ಕೆಲವೆಡೆ ಜನವಸತಿ ಪ್ರದೇಶಗಳು ಜಲಾವೃತ

ಹಲವೆಡೆ ಮಳೆ: ಭೂಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಬುಧವಾರ ರಾತ್ರಿಯಿಡೀ ಭಾರಿ ಮಳೆ ಬಿದ್ದಿದ್ದು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಗುರುವಾರ ಬಿರುಸಿನ ಮಳೆಯಾಗಿದೆ. ಮೈಸೂರು ಹಾಗೂ ಚಿಕ್ಕಮಗಳೂರು ನಗರಗಳಲ್ಲಿ ಭೂಕುಸಿತ ಉಂಟಾಗಿದ್ದರೆ, ಮಂಡ್ಯ ಜಿಲ್ಲೆಯ ಕೆಲವೆಡೆ ಜನವಸತಿ ಪ್ರದೇಶಗಳು ಹಾಗೂ ಶಾಲೆಗಳು ಜಲಾವೃತಗೊಂಡಿವೆ.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಭೂಕುಸಿತ ಸಂಭವಿಸಿದೆ. ನಂದಿ ವಿಗ್ರಹಕ್ಕೆ ಸಂಪರ್ಕ ಕಲ್ಪಿಸುವ ಹೊಸ ರಸ್ತೆಯಲ್ಲಿ ಭೂಮಿ ಕುಸಿದಿದೆ. ಆ ರಸ್ತೆಯಲ್ಲಿ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿದೆ. ಅಲ್ಲಿ ಕುಸಿದ ಕಲ್ಲುಗಳು ಬೆಟ್ಟದ ಕೆಳಭಾಗದ ಹಳೆ ನಂದಿ ರಸ್ತೆಗೂ ಬಿದ್ದಿವೆ. ಅದೇ ರಸ್ತೆಯಲ್ಲಿ 2005, 2017ರಲ್ಲೂ ಭೂಮಿ ಕುಸಿದಿತ್ತು. ಆಗ ಕುಸಿದಿದ್ದ ಸ್ಥಳದಿಂದ 100 ಮೀಟರ್ ದೂರದಲ್ಲಿ ಈಗ ಮತ್ತೆ ರಸ್ತೆ ಕುಸಿದಿದೆ.

ಮಂಡ್ಯ ಜಿಲ್ಲೆಯ ಚಿಂದಗಿರಿದೊಡ್ಡಿ ಗ್ರಾಮದ ನಾಲೆ ಉಕ್ಕಿ, ನಗರದ ಬೀಡಿ ಕಾರ್ಮಿಕರ ಕಾಲೊನಿಗೆ ನೀರು ನುಗ್ಗಿತ್ತು. ಜೆಎಸ್‌ಎಸ್ ಶಾಲಾ ಆವರಣ ಜಲಾವೃತಗೊಂಡಿದ್ದರಿಂದ ರಜೆ ಘೋಷಿಸಲಾಗಿತ್ತು.

ತಾಲ್ಲೂಕಿನ ತುಂಬಕೆರೆ ಮೊರಾರ್ಜಿ ದೇಸಾಯಿ ವಸತಿ ನಿಲಯದ ನೂತನ ಕಟ್ಟಡದ 14 ಅಡಿ ಎತ್ತರದ ತಡೆಗೋಡೆ ಕುಸಿದು ಬಿತ್ತು.

ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಎರಡು ಮನೆಗಳು ಭಾಗಶಃ ಕುಸಿದಿವೆ. ತಾಲ್ಲೂಕಿನ ನೆಲಮನೆ ಗ್ರಾಮದ ಭತ್ತ, ಕಬ್ಬಿನ ಗದ್ದೆಗಳು ಜಲಾವೃತಗೊಂಡಿವೆ. ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ವಿಜಾಪುರ ಅರಣ್ಯ ಗ್ರಾಮದಲ್ಲಿ ಎರಡು ಮನೆಗಳ ಗೋಡೆ ಕುಸಿದಿವೆ.

ಕೊಡಗು ಜಿಲ್ಲೆಯಲ್ಲಿ ಗುಡುಗು ಸಹಿತ ಧಾರಾಕಾರ ಮಳೆ ಸುರಿದಿದೆ.

ನೆಲಕಚ್ಚಿದ ಸೇತುವೆ

ಚಿಕ್ಕಮಗಳೂರು: ಇಲ್ಲಿನ ಗಿರಿ ಶ್ರೇಣಿ ಮಾರ್ಗದ ಹೊನ್ನಮ್ಮನ ಹಳ್ಳದ ಬದಿಯ ಮಣ್ಣು ಕುಸಿದಿದೆ. ನಗರದ ಕೆಎಸ್‌ಒಯು ಪ್ರಾದೇಶಿಕ ಕೇಂದ್ರದ ಮುಂಭಾಗದ ಮೋರಿ ಸೇತುವೆ ನೆಲಕಚ್ಚಿದೆ. ಹೊನ್ನಮ್ಮನ ಹಳ್ಳದ ದೇವಸ್ಥಾನ ಪಕ್ಕದ ಮತ್ತು ಸೇತುವೆಯಲ್ಲಿ ನಿರ್ಮಿಸಿರುವ ಮೆಟ್ಟಿಲುಗಳ ಬದಿಯ ಮಣ್ಣು ಕುಸಿದಿದೆ. ಗಿರಿ ಶ್ರೇಣಿ ಮಾರ್ಗದ ಮೈಲಿಮನೆ ಎಸ್ಟೇಟ್ ಬಳಿಯ ರಸ್ತೆ ಬದಿಯ ರಕ್ಷಣಾ ಗೋಡೆ ಜರುಗಿದ್ದು, ಮಣ್ಣು ಕುಸಿದಿದೆ.

ಇನ್ನಷ್ಟು ಸುದ್ದಿಗಳು 9

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/30Pe60n

ಅವಧಿ ಮೀರುವ ಆತಂಕದಲ್ಲಿ ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರು

ಕೋವಿಡ್ ಲಸಿಕೆ: ಖಾಲಿಯಾಗದ ದಾಸ್ತಾನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳಲ್ಲಿ ಕೋವಿಡ್ ಲಸಿಕೆ ಉಚಿತವಾಗಿ ದೊರೆಯುತ್ತಿರುವುದರಿಂದ ಖಾಸಗಿ ಆಸ್ಪತ್ರೆಗಳಲ್ಲಿ ಹಣ ಪಾವತಿಸಿ, ಲಸಿಕೆ ಪಡೆಯಲು ಜನರು ಮುಂದೆ ಬರುತ್ತಿಲ್ಲ. ಇದರಿಂದಾಗಿ ಇಲ್ಲಿನ ಬಹುತೇಕ ಖಾಸಗಿ ಆಸ್ಪತ್ರೆಗಳಲ್ಲಿ 'ಕೋವ್ಯಾಕ್ಸಿನ್' ಲಸಿಕೆಯ ದಾಸ್ತಾನು ಹಾಗೆಯೇ ಉಳಿದಿವೆ.

'ಕಳೆದ ಜೂನ್–ಜುಲೈನಲ್ಲಿ ಖರೀದಿಸಿದ್ದ 2 ಲಕ್ಷ ಡೋಸ್‌ಗಳಷ್ಟು 'ಕೋವ್ಯಾಕ್ಸಿನ್' ಲಸಿಕೆಯ ಅವಧಿ ನವೆಂಬರ್ ತಿಂಗಳಲ್ಲಿ ಅಂತ್ಯವಾಗಲಿದೆ. ಹಾಗಾಗಿ, ಸರ್ಕಾರವು ಖರೀದಿಸಿ ವಿತರಿಸಬೇಕು' ಎಂದು ಸರ್ಕಾರಕ್ಕೆ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಆಗ್ರಹಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 1.27 ಕೋಟಿ ಡೋಸ್‌ಗಳಷ್ಟು ಹಾಗೂ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 18.91 ಲಕ್ಷ ಡೋಸ್‌ಗಳಷ್ಟು ಲಸಿಕೆ ವಿತರಿಸಲಾಗಿದೆ.

ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಲಸಿಕೆಗೆ ದಿಢೀರ್ ಬೇಡಿಕೆ ಹೆಚ್ಚಿದ್ದರಿಂದ ಖಾಸಗಿ ಆಸ್ಪತ್ರೆಗಳು ವಿವಿಧ ಕಾರ್ಪೊರೇಟ್ ಕಂಪನಿಗಳು ಹಾಗೂ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಜೊತೆಗೆ ಒಪ್ಪಂದ ಮಾಡಿಕೊಂಡು ಲಸಿಕೆ ವಿತರಿಸಿದ್ದವು. ಸರ್ಕಾರವು 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಉಚಿತವಾಗಿ ಲಸಿಕೆ ಘೋಷಿಸಿದ ಬಳಿಕ ಖಾಸಗಿ ಆಸ್ಪತ್ರೆಗಳಿಗೆ ತೆರಳುವವರ ಸಂಖ್ಯೆ ಇಳಿಮುಖವಾಗಿದೆ.

ಲಸಿಕೆ ವ್ಯರ್ಥ: 'ಮಣಿಪಾಲ್, ನಾರಾಯಣ ಹೆಲ್ತ್ ಸೇರಿದಂತೆ ಕೆಲ ಪ್ರಮುಖ ಆಸ್ಪತ್ರೆಗಳು ಮಾತ್ರ ನಿಯಮಿತವಾಗಿ ಲಸಿಕೆ ಖರೀದಿಸಿ, ವಿತರಿಸುತ್ತಿವೆ. ಹಣ ಪಾವತಿಸಬೇಕಾಗಿರುವುದರಿಂದ ಲಸಿಕೆ ಪಡೆಯಲು ಬರುವವರ ಸಂಖ್ಯೆ ಇಳಿಮುಖವಾಗಿದೆ. ನಗರದ ವಿವಿಧ ಆಸ್ಪತ್ರೆಗಳಲ್ಲಿ ಈ ಹಿಂದೆ ಖರೀದಿಸಿದ್ದ 'ಕೋವ್ಯಾಕ್ಸಿನ್' ಲಸಿಕೆಯ ಡೋಸ್‌ಗಳು ಹಾಗೇ ಉಳಿದಿವೆ. ಈ ಡೋಸ್‌ಗಳನ್ನು ಸರ್ಕಾರ ಖರೀದಿಸಿ, ಫಲಾನುಭವಿಗಳಿಗೆ ವಿತರಿಸಿದರೆ ವ್ಯರ್ಥವಾಗುವುದನ್ನು ತಡೆಯಬಹುದು' ಎಂದು ಫನಾ ಅಧ್ಯಕ್ಷ ಡಾ.ಎಚ್.ಎಂ. ಪ್ರಸನ್ನ ತಿಳಿಸಿದರು.

ಅಂಕಿ-ಅಂಶಗಳು

541 ನಗರದ ಸರ್ಕಾರಿ ಲಸಿಕಾ ಕೇಂದ್ರಗಳು

222 ನಗರದ ಖಾಸಗಿ ಲಸಿಕಾ ಕೇಂದ್ರಗಳು

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,50,125 ಒಟ್ಟು ಪ್ರಕರಣಗಳು ▲ (12,49,915 ನಿನ್ನೆಯ ವಿವರ)

6,746 ▼	12,27,149 ▲	16,229 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	210 ▼
ಗುಣಮುಖ	220 ▼
ಸಾವು	04 ▼

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಮನುಷ್ಯ ದೇಹಕ್ಕೆ ಹಂದಿಯ ಕಿಡ್ನಿ ಕಸಿ

ವಾಷಿಂಗ್ಟನ್ (ಎಪಿ): ಮಿದುಳು ನಿಷ್ಕ್ರಿಯಗೊಂಡಿದ್ದ ಮಹಿಳೆಗೆ ಹಂದಿಯ ಮೂತ್ರಪಿಂಡವನ್ನು (ಕಿಡ್ನಿ) ಕಸಿ ಮಾಡುವಲ್ಲಿ ನ್ಯೂಯಾರ್ಕ್ ವಿಶ್ವವಿದ್ಯಾಲಯದ ಲ್ಯಾಂಗಾನ್ ಹೆಲ್ತ್ ಸೆಂಟರ್‌ನ ಸರ್ಜನ್‌ಗಳು ಯಶಸ್ವಿಯಾಗಿದ್ದಾರೆ.

ಪ್ರಾಣಿಗಳ ಅಂಗಾಂಗಳನ್ನು ಮನುಷ್ಯನ ದೇಹಕ್ಕೆ ಕಸಿ ಮಾಡಬೇಕು ಎಂಬ ನಿಟ್ಟಿನಲ್ಲಿ ದೊರೆತ ಆರಂಭಿಕ ಯಶಸ್ಸು ಇದು ಎಂದೇ ವಿಶ್ಲೇಷಿಸಲಾಗುತ್ತಿದೆ.

ವೆಂಟಿಲೇಟರ್ ಮೇಲಿದ್ದ ಮಹಿಳೆಗೆ ಹಂದಿಯ ಕಿಡ್ನಿ ಕಸಿ ಮಾಡುವುದಕ್ಕೆ ಆಕೆಯ ಕುಟುಂಬದವರ ಅನುಮತಿ ಪಡೆಯಲಾಯಿತು. ನಂತರ, ಮಹಿಳೆಯ ದೇಹಕ್ಕೆ ಹಂದಿಯ ಕಿಡ್ನಿಗಳನ್ನು ಕಸಿ ಮಾಡಲಾಯಿತು.


'ಮಹಿಳೆಯ ದೇಹ ಕಸಿ ಮಾಡಿದ್ದ ಕಿಡ್ನಿಯನ್ನು ತಿರಸ್ಕರಿಸಲಿಲ್ಲ. 48 ಗಂಟೆಗಳ ಕಾಲ ಅದರ ಕಾರ್ಯವನ್ನು ಪರಿಶೀಲಿಸಲಾಯಿತು. ಸಾಮಾನ್ಯ ಕಿಡ್ನಿಯಂತೆಯೇ ಕಾರ್ಯ ನಿರ್ವಹಣೆ ಕಂಡುಬಂತು' ಎಂದು ವೈದ್ಯರು ಹೇಳಿದ್ದಾರೆ.

ಈ ಪ್ರಯೋಗ ಪೂರ್ಣಗೊಂಡ ನಂತರ ಮಹಿಳೆಗೆ ಅಳವಡಿಸಿದ್ದ ಜೀವ ರಕ್ಷಕ ವ್ಯವಸ್ಥೆಯನ್ನು ತೆಗೆಯಲಾಯಿತು.

'ಸಾಮಾನ್ಯವಾಗಿ ಹಂದಿಯ ಜೀವಕೋಶಗಳಲ್ಲಿರುವ ಸಕ್ಕರೆ ಅಂಶದಿಂದಾಗಿ ಕಸಿ ಮಾಡಿದ ಅಂಗಾಂಗವನ್ನು ಮನುಷ್ಯ ದೇಹ ತಿರಸ್ಕರಿಸುತ್ತಿತ್ತು. 'ಜೀನ್–ಎಡಿಟಿಂಗ್' ತಂತ್ರಜ್ಞಾನದ ಮೂಲಕ ಹಂದಿಯ ಕಿಡ್ನಿಯಲ್ಲಿನ ಸಕ್ಕರೆ ಅಂಶವನ್ನು ತೆಗೆದು ಹಾಕಿ, ಈ ಪ್ರಯೋಗಕ್ಕೆ ಬಳಸಲಾಯಿತು. ದೇಹದ ರೋಗ ನಿರೋಧಕ ಶಕ್ತಿಗೆ ಪ್ರತಿರೋಧ ಒಡ್ಡುವುದನ್ನು ತಡೆಯಲು ಸಹ ಇದರಿಂದ ಸಾಧ್ಯವಾಯಿತು' ಎಂದು ಶಸ್ತ್ರಚಿಕಿತ್ಸೆ ನೆರವೇರಿಸಿದ ವೈದ್ಯರ ತಂಡ ತಿಳಿಸಿದೆ.

ಆಂಧ್ರಪ್ರದೇಶದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ಆಗ್ರಹ

ಹೈದರಾಬಾದ್: 'ಡ್ರಗ್ಸ್ ಮಾಫಿಯಾ ಹಾಗೂ ಫ್ಯಾಸಿಸ್ಟ್ ಶಕ್ತಿಗಳಿಂದ ರಾಜ್ಯದ ಜನತೆಯನ್ನು ರಕ್ಷಿಸಲು ಕೂಡಲೇ ಆಂಧ್ರಪ್ರದೇಶದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಬೇಕು' ಎಂದು ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಅವರು ಕೇಂದ್ರ ಸರ್ಕಾರಕ್ಕೆ ಗುರುವಾರ ಮನವಿ ಮಾಡಿದರು.



ಚಂದ್ರಬಾಬು ನಾಯ್ಡು

ಇಲ್ಲಿನ ಮಂಗಳಗಿರಿಯಲ್ಲಿರುವ ಪಕ್ಷದ ಕಚೇರಿಯಲ್ಲಿ 36 ಗಂಟೆಗಳ ನಿರಶನ ಸತ್ಯಾಗ್ರಹ ಆರಂಭಿಸಿದ ನಂತರ ಅವರು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು.

ಪಕ್ಷದ ಕಚೇರಿಯನ್ನು ವೈಎಸ್‌ಆರ್ ಕಾಂಗ್ರೆಸ್ ಕಾರ್ಯಕರ್ತರು ಮಂಗಳವಾರ ಧ್ವಂಸಗೊಳಿಸಿದರು ಎನ್ನಲಾಗಿದೆ. ಇದನ್ನು ಖಂಡಿಸಿ ಅವರು ಸತ್ಯಾಗ್ರಹ ಆರಂಭಿಸಿದ್ದಾರೆ.

'ಆಂಧ್ರಪ್ರದೇಶದಲ್ಲಿ ರಾಜ್ಯ ಸರ್ಕಾರ ಪ್ರಾಯೋಜಿತ ಭಯೋತ್ಪಾದಕ ಕೃತ್ಯಗಳು ನಡೆಯುತ್ತಿವೆ' ಎಂದು ಆರೋಪಿಸಿದರು.

'ಡ್ರಗ್ಸ್ ಜಾಲ ಕೇವಲ ಆಂಧ್ರಪ್ರದೇಶಕ್ಕೆ ಸೀಮಿತವಾಗಿಲ್ಲ. ನೆರೆಯ ರಾಜ್ಯಗಳಿಗೂ ಹಬ್ಬಿದೆ. ಈ ಸಾಮಾಜಿಕ ಅನಿಷ್ಟದಿಂದ ರಾಜ್ಯದ ಯುವ ಜನತೆಯನ್ನು ರಕ್ಷಿಸಬೇಕು' ಎಂದು ಅವರು ಹೇಳಿದರು.


ಕೋವಿಡ್: 9 ಸಾವಿರದೊಳಗೆ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, 21 ಜಿಲ್ಲೆಗಳಲ್ಲಿ ಈ ಸಂಖ್ಯೆ 100ಕ್ಕಿಂತ ಕಡಿಮೆ ಇದೆ. 8,988 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಗುರುವಾರ 1.17 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 365 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಶೇ 0.31 ರಷ್ಟು ವರದಿಯಾಗಿದೆ. 6 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 13 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೆಳಗಾವಿ, ಬೀದರ್, ಗದಗ, ಹಾವೇರಿ, ಕೊಪ್ಪಳ, ರಾಯಚೂರು, ರಾಮನಗರ, ವಿಜಯಪುರ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 210 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.84 ಲಕ್ಷ ದಾಟಿದೆ.



ಕೋವಿಡ್ ಪೀಡಿತರಲ್ಲಿ 8 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ ನಾಲ್ವರು, ದಕ್ಷಿಣ ಕನ್ನಡ, ಧಾರವಾಡ, ಶಿವಮೊಗ್ಗ ಹಾಗೂ ತುಮಕೂರಿನಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 2.19 ರಷ್ಟು ದೃಢಪಟ್ಟಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,984ಕ್ಕೆ ತಲುಪಿದೆ.

ಸೋಂಕಿತರಲ್ಲಿ 443 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.37 ಲಕ್ಷ ದಾಟಿದೆ. ಗದಗವು ಕೋವಿಡ್ ಮುಕ್ತವಾಗಿದೆ. ಯಾದಗಿರಿ ಸೇರಿದಂತೆ 6 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಹತ್ತರೊಳಗೆ ಇದೆ. ಬೆಂಗಳೂರಿನಲ್ಲಿ ಗರಿಷ್ಠ (6,746) ಸಕ್ರಿಯ ಪ್ರಕರಣಗಳಿವೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	24.30 ಕೋಟಿ ▲	3.41 ಕೋಟಿ
ಸಕ್ರಿಯ ಪ್ರಕರಣ	1.77 ಕೋಟಿ ▼	1.69 ಲಕ್ಷ ▼
ಗುಣಮುಖ	22.02 ಕೋಟಿ ▲	3.35 ಕೋಟಿ ▼
ಸಾವು	49.41 ಲಕ್ಷ ▲	4.53 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.44 ಲಕ್ಷ ▲	15,692 ▼
ಗುಣಮುಖ	4.03 ಲಕ್ಷ ▼	18,584 ▼
ಸಾವು	7,528 ▲	230 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ರಷ್ಯಾ	ಬ್ರಿಟನ್
80,425 ▲	34,073 ▲	48,954 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ರಷ್ಯಾ	ಬ್ರಿಟನ್
95.26 ▼	8.02 ▲	14.21 ▲

(ರಾತ್ರಿ 12ರ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.39 ಲಕ್ಷ
ತಮಿಳುನಾಡು	35,948
ಕೇರಳ	27,202 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	65.98 ▲
ಕೇರಳ	48.88 ▲
ತಮಿಳುನಾಡು	26.90

ಪ್ರಜಾವಾಣಿ ಗ್ರಾಫಿಕ್ಸ್

ಇ.ಡಿ.ಯಿಂದ ನಿವೃತ್ತ ಅಧಿಕಾರಿಯ ಅಕ್ರಮ ಆಸ್ತಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಆದಾಯಕ್ಕಿಂತ ಅಧಿಕ ಮೌಲ್ಯದ ಆಸ್ತಿ ಹೊಂದಿರುವ ಆರೋಪದಲ್ಲಿ ರಾಜ್ಯ ಮೂಲದ ನಿವೃತ್ತ ಅಧಿಕಾರಿಯೊಬ್ಬರ ₹ 7.48 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ)ಯಲ್ಲಿ ಸೇವೆ ಸಲ್ಲಿಸಿದ್ದ ನಿವೃತ್ತ ಮುಖ್ಯ ಎಂಜಿನಿಯರ್ ಎಸ್. ಎಂ. ಬಸವರಾಜು ಅವರಿಗೆ ಸೇರಿರುವ ಆಸ್ತಿಯನ್ನು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅಡಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಬಸವರಾಜು ಅವರ ಹೆಸರಲ್ಲಿ ಇರುವ ಠೇವಣಿಗಳು, ವಿವಿಧ ಬ್ಯಾಂಕ್ ಖಾತೆಗಳಲ್ಲಿ ಇರಿಸಿರುವ 3.41 ಕೆ.ಜಿ. ಚಿನ್ನ ಮತ್ತು ವಜ್ರಾಭರಣ, ಎರಡು ನಿವೇಶನಗಳು, ವಾಣಿಜ್ಯ ಸಂಕೀರ್ಣ ಹಾಗೂ ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಆರು ಫ್ಲ್ಯಾಟ್‌ಗಳು ಮುಟ್ಟುಗೋಲು ಹಾಕಿಕೊಳ್ಳಲಾದ ಚರ ಮತ್ತು ಸ್ಥಿರ ಆಸ್ತಿಗಳಲ್ಲಿ ಸೇರಿವೆ.

ಆದಾಯದ ಮೂಲವನ್ನು ಮೀರಿ ₹ 4.45 ಕೋಟಿಗೂ ಅಧಿಕ ಮೊತ್ತದ ಅಕ್ರಮ ಆಸ್ತಿ ಹೊಂದಿದ್ದಲ್ಲದೆ, ಅತ್ತೆ ಹಾಗೂ ಕುಟುಂಬದ ಇತರ ಸದಸ್ಯರ ಹೆಸರಿನಲ್ಲಿ ಬೇನಾಮಿ ಆಸ್ತಿ ಖರೀದಿಸಿದ್ದಾರೆ ಎಂದು ಕರ್ನಾಟಕ ಲೋಕಾಯುಕ್ತವು 2018ರಲ್ಲಿ ದಾಖಲಿಸಿಕೊಂಡಿದ್ದ ದೂರು ಮತ್ತು ದೋಷಾ ರೋಪ ಪಟ್ಟಿ ಆಧರಿಸಿ ಕ್ರಮ ಕೈಗೊಳ್ಳಲಾಗಿದೆ ಎಂದು ಗುರುವಾರ ಇ.ಡಿ. ನೀಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಒತ್ತಾಯದ ಮತಾಂತರ ಸಲ್ಲ: ಪೇಜಾವರ ಶ್ರೀ

ಗದಗ: 'ಸಮಾಜದಲ್ಲಿ ಸಾಮರಸ್ಯವಿರಬೇಕು. ಆದರೆ, ಮತಾಂತರದಂತಹ ಅವ್ಯವಹಾರ ಮಾಡಬಾರದು' ಎಂದು ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಹೇಳಿದರು.

ಅವರು ಗುರುವಾರ ನಗರದ ಹುಬ್ಬಳ್ಳಿ ರಸ್ತೆಯಲ್ಲಿರುವ ಇಂಡಸ್ಟ್ರಿಯಲ್ ಎಸ್ಟೇಟ್ ಬಳಿ ಉದ್ದೇಶಿತ ಕೃಷ್ಣ ಮಂದಿರ ನಿರ್ಮಾಣದ ಜಾಗ ವೀಕ್ಷಿಸಿ, ಗಿಡಗಳನ್ನು ನೆಟ್ಟು, ನಿರ್ಮಾಣಕ್ಕೆ ಚಾಲನೆ ನೀಡಿ ಮಾತನಾಡಿದರು.

'ಯಾರಿಗೂ ಆಮಿಷ ಒಡ್ಡಿ ಒತ್ತಾಯ ಪೂರ್ವಕವಾಗಿ ಮತಾಂತರ ಮಾಡಬಾರದು. ರಾಜ್ಯದಲ್ಲಿ ಮತಾಂತರ ತಡೆ ಕಾಯ್ದೆ ಜಾರಿಯಾಗಬೇಕು' ಎಂದು ಹೇಳಿದರು.

'ಉತ್ತಮ ಜಾಗ ಆಯ್ಕೆ ಮಾಡಿಕೊಂಡು ಕೃಷ್ಣ ಮಂದಿರ ನಿರ್ಮಾಣ ಮಾಡುವ ಸಂಕಲ್ಪ ಮಾಡಲಾಗಿದೆ. ಮುಂದಿನ ಮಂದಿರ ನಿರ್ಮಾಣ ಕಾಮಗಾರಿ ಎಲ್ಲರ ಸಹಕಾರದಿಂದ ನಿರ್ವಿಘ್ನವಾಗಿ ನೆರವೇರಲಿ. ಬಯಸಿದ ದಿನದಂದೇ ಕೃಷ್ಣನ ಪ್ರತಿಷ್ಠಾಪನೆ ಆಗಲಿ' ಎಂದು ಹೇಳಿದರು.

ಕೋವಿಡ್: 4.8 ಲಕ್ಷ ಡೋಸ್ ಲಸಿಕೆ ನೀಡುವ ಗುರಿ

ವಿಶೇಷ ಲಸಿಕಾ ಮೇಳ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದುವರೆಗೆ ಕೋವಿಡ್ ಲಸಿಕೆಯ ಒಂದೂ ಡೋಸ್ ಪಡೆಯದವರನ್ನು ಗುರುತಿಸಿ ಲಸಿಕೆ ನೀಡುವ ಉದ್ದೇಶದಿಂದ ಬಿಬಿಎಂಪಿಯು ಇದೇ 22ರಂದು (ಗುರುವಾರ) ವಿಶೇಷ ಮೇಳವನ್ನು ಹಮ್ಮಿಕೊಂಡಿದೆ. ಒಂದೇ ದಿನ 4.8 ಲಕ್ಷ ಡೋಸ್ ಲಸಿಕೆ ನೀಡುವ ಗುರಿ ನಿಗದಿಪಡಿಸಿದೆ.

ಈ ಮೇಳದ ಪೂರ್ವ ಸಿದ್ಧತೆಗಳನ್ನು ಪರಿಶೀಲಿಸುವ ಸಲುವಾಗಿ ಪಾಲಿಕೆಯ ವಿಶೇಷ ಆಯುಕ್ತ (ಆರೋಗ್ಯ) ಡಾ. ಕೆ.ವಿ.ತ್ರಿಲೋಕಚಂದ್ರ ಅವರು ಎಲ್ಲ ವಲಯದ ಆರೋಗ್ಯಾಧಿಕಾರಿಗಳ ಜೊತೆ ಗುರುವಾರ ಸಭೆ ನಡೆಸಿದರು.

'ಲಸಿಕೆ ಪಡೆಯದವರನ್ನು ಗುರುತಿಸಿ ಲಸಿಕೆ ನೀಡಲು ವಿಶೇಷ ಮೇಳ ನಗರದಾದ್ಯಂತ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ನಗರದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಲಸಿಕಾ ಕೇಂದ್ರ, ಸಂಚಾರ ಲಸಿಕಾ ಕೇಂದ್ರಗಳಲ್ಲಿ ಹಾಗೂ ಬ್ಲಾಕ್ ಮತ್ತು ಬೀದಿ ಮಟ್ಟದಲ್ಲಿ ಲಸಿಕೆ ನೀಡಲು ಕ್ರಮ ಕೈಗೊಳ್ಳಬೇಕು. ಅರ್ಹ ಸಾರ್ವಜನಿಕರು ಇದರ ಪ್ರಯೋಜನ ಪಡೆಯುವಂತೆ ನೋಡಿಕೊಳ್ಳಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ಕೊಳೆಗೇರಿಗಳ ನಿವಾಸಿಗಳು, ಬೀದಿ ಬದಿ ವ್ಯಾಪಾರಿಗಳು, ವಿವಿಧ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಯನ್ನು ಗುರಿಯಾಗಿಸಿ ಲಸಿಕಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಕಾರ್ಮಿಕರ ಸಂಘಟನೆಗಳು, ಹೋಟೆಲ್ ಮಾಲೀಕರ ಸಂಘ ಹಾಗೂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ಇತರ ಸಂಘಟನೆಗಳ ನೆರವಿನಿಂದ ಅಲ್ಲಲ್ಲಿ ಲಸಿಕಾ ಶಿಬಿರ ಹಮ್ಮಿಕೊಳ್ಳಲಾಗುತ್ತಿದೆ. ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ, ಮಾರುಕಟ್ಟೆ, ಬಸ್ ನಿಲ್ದಾಣ, ರೈಲು ನಿಲ್ದಾಣಗಳಲ್ಲಿ ಲಸಿಕಾ ಕೇಂದ್ರಗಳ ವ್ಯವಸ್ಥೆ ಮಾಡಲಾಗಿದೆ. ಸಂಚಾರ ಶಿಬಿರಗಳನ್ನೂ ಹಮ್ಮಿಕೊಳ್ಳಲಾಗುವುದು' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಶೇ 52ರಷ್ಟು ಮಂದಿಗೆ ಎರಡನೇ ಡೋಸ್'

'ನಗರದಲ್ಲಿ 91 ಲಕ್ಷ ಮಂದಿಗೆ ಲಸಿಕೆ ನೀಡುವ ಗುರಿ ನಿಗದಿಪಡಿಸಲಾಗಿದ್ದು, ಇವರಲ್ಲಿ ಶೇ 86 ರಷ್ಟು ಮಂದಿ ಈಗಾಗಲೇ ಮೊದಲನೇ ಡೋಸ್ ನೀಡಲಾಗಿದೆ. ಶೇ 52 ರಷ್ಟು ಮಂದಿ ಎರಡನೇ ಡೋಸ್ ಕೂಡ ಪಡೆದಿದ್ದಾರೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

'ಲಸಿಕೆಯ ಮೊದಲ ಡೋಸ್ ಪಡೆದವರು ಎರಡನೇ ಡೋಸ್ ಪಡೆಯಲು 12 ವಾರ ಕಾಲಾವಕಾಶ ಬೇಕು. ಹಾಗಾಗಿ ಎರಡನೇ ಡೋಸ್ ಪಡೆದವರ ಪ್ರಮಾಣ ಸ್ವಲ್ಪ ಕಡಿಮೆ ಇದೆ. ಇದುವರೆಗೆ ಅರ್ಹರಾದವರಲ್ಲಿ ಶೇ 85ರಷ್ಟು ಮಂದಿಗೆ ಎರಡನೇ ಡೋಸ್ ನೀಡಿದ್ದೇವೆ. ನಗರದಲ್ಲಿ ಆಂದೋಲನ ರೂಪದಲ್ಲಿ ಲಸಿಕಾ ಕಾರ್ಯಕ್ರಮ ನಡೆಸಿದ್ದರಿಂದಾಗಿ ಕೋವಿಡ್ ನಿಯಂತ್ರಣದಲ್ಲಿದೆ' ಎಂದರು.

ವ್ಯಸನಮುಕ್ತ ರಾಜ್ಯಕ್ಕೆ ಆಗ್ರಹಿಸಿ ಪಾದಯಾತ್ರೆ ಮಾಡುತ್ತಿರುವ ಲಾವಣ್ಯಾ

ನೆಮ್ಮದಿ ಹಾಳು ಮಾಡಿ ಸರ್ಕಾರ ನಡೆಸಬೇಕೇ?

ಪ್ರಜಾವಾಣಿ ವಾರ್ತೆ

ಹಿರಿಯೂರು: ರಾಜ್ಯವನ್ನು ವ್ಯಸನಮುಕ್ತ ಮಾಡುವಂತೆ ಒತ್ತಾಯಿಸಿ ತಾಲ್ಲೂಕಿನ ಹೇಮದಳ ಗ್ರಾಮದ ವಿದ್ಯಾರ್ಥಿನಿ ಎಚ್.ಸಿ. ಲಾವಣ್ಯಾ ಹಿರಿಯೂರಿನಿಂದ ಚಿತ್ರದುರ್ಗದ ಜಿಲ್ಲಾಧಿಕಾರಿ ಕಚೇರಿಯವರೆಗೆ 40 ಕಿ.ಮೀ. ಪಾದಯಾತ್ರೆಯನ್ನು ಗುರುವಾರ ಆರಂಭಿಸಿದರು.

ನಗರದ ಸಾರ್ವಜನಿಕ ಆಸ್ಪತ್ರೆ ಮುಂಭಾಗದಲ್ಲಿರುವ ಡಾ. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ನಂತರ ಪಾದಯಾತ್ರೆ ಆರಂಭಿಸಿದ ಅವರು, 'ಮದ್ಯ ವ್ಯಸನದಿಂದ ಲಕ್ಷಾಂತರ ಕುಟುಂಬಗಳ ನೆಮ್ಮದಿ ಹಾಳಾಗಿದೆ. ಕುಡಿತದ ದಾಸ್ಯಕ್ಕೆ ಬಿದ್ದವರ ಆರೋಗ್ಯ ಹಾಳಾಗಿದೆ. ಮದ್ಯದಿಂದ ಆದಾಯ ಬರುತ್ತದೆ ಎಂದು ಮನುಷ್ಯರನ್ನು ಬಲಿಕೊಟ್ಟು, ಕುಟುಂಬದ ನೆಮ್ಮದಿ ಹಾಳು ಮಾಡಿ ಸರ್ಕಾರ ನಡೆಸಬೇಕೆ' ಎಂದು ಪ್ರಶ್ನಿಸಿದರು.

'ಮದ್ಯಪಾನ, ಧೂಮಪಾನ, ಗಾಂಜಾ–ಅಫೀಮು ಸೇವನೆಯಿಂದ ಎಷ್ಟೆಲ್ಲಾ ಕುಟುಂಬಗಳು ಹಾಳಾಗಿವೆ ಎಂಬ ಲೆಕ್ಕ ಸರ್ಕಾರದ ಬಳಿ ಇದ್ದೇ ಇರುತ್ತದೆ. ಆದರೂ ವ್ಯಸನಕಾರಕ ವಸ್ತುಗಳ ನಿಷೇಧಕ್ಕೆ ಮುಂದಾಗದಿರುವುದು ಆಳುವವರು ಜನಪರವಾಗಿರುವ ಬಗ್ಗೆ ಅನುಮಾನ ಹುಟ್ಟಿಸುತ್ತದೆ. ದೇಶದ ಕೆಲ ರಾಜ್ಯಗಳಲ್ಲಿ ಮದ್ಯಪಾನ ನಿಷೇಧ ವಿದೆ. ನಮ್ಮಲ್ಲಿಯೂ ಇಂತಹ ಕಾನೂನನ್ನು ತರುವಂತೆ ಬುದ್ಧಿಜೀವಿಗಳು, ಪ್ರಗತಿಪರ ಸಂಘಟನೆಗಳು ಸರ್ಕಾರದ ಮೇಲೆ ಒತ್ತಡ ತರಬೇಕು' ಎಂದು ಆಗ್ರಹಿಸಿದರು.

'ದುಶ್ಚಟಗಳ ಕಾರಣದಿಂದ ಕುಟುಂಬದ ಆರ್ಥಿಕ ಸ್ಥಿತಿ ಹಾಳಾಗಿ ಎಷ್ಟೋ ಹೆಣ್ಣುಮಕ್ಕಳು ಶಾಲೆಗಳಿಂದ ದೂರ ಉಳಿದಿದ್ದಾರೆ. ಕುಡಿದ ಮತ್ತಿನಲ್ಲಿ ಲೆಕ್ಕವಿಲ್ಲದಷ್ಟು ಕೊಲೆ, ಸುಲಿಗೆ, ಅತ್ಯಾಚಾರಗಳು ನಡೆದಿವೆ. ಎಷ್ಟೆಲ್ಲ ಕಾನೂನುಗಳಿದ್ದರೂ ಹೆಣ್ಣಿನ ಮೇಲೆ ನಡೆಯುತ್ತಿರುವ ದೌರ್ಜನ್ಯ ನಿಂತಿಲ್ಲ. ಬಹುತೇಕ ಹಳ್ಳಿಗಳಲ್ಲಿ ಕಾನೂನಿನ ಭಯವಿಲ್ಲದೇ ಅಕ್ರಮ ಮದ್ಯ ಮಾರಾಟ ನಡೆಯುತ್ತಿದೆ. ನಮ್ಮ ಊರಿನಲ್ಲೂ ನಮ್ಮ ಮನೆಯ ಮುಂದೆಯೇ ಮದ್ಯ ಮಾರಾಟ ನಡೆಯುತ್ತಿತ್ತು. ನನ್ನ ಓದಿಗೆ ಅದರಿಂದ ತೊಂದರೆ ಆಗುತ್ತಿತ್ತು. ಎಷ್ಟು ಜನರಿಗೆ ಇಂತಹ ಅಕ್ರಮಗಳನ್ನು ಪ್ರಶ್ನಿಸುವ ಧೈರ್ಯವಿದೆ? ಕಾನೂನು ಕಾಪಾಡಬೇಕಾದವರೂ ಮೌನ ತಾಳಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.



ವ್ಯಸನಮುಕ್ತ ರಾಜ್ಯ ಘೋಷಣೆಗೆ ಒತ್ತಾಯಿಸಿ ಎಚ್.ಸಿ. ಲಾವಣ್ಯಾ ಹಿರಿಯೂರಿನ ಸಾರ್ವಜನಿಕ ಆಸ್ಪತ್ರೆ ಮುಂಭಾಗದಿಂದ ಚಿತ್ರದುರ್ಗ ಜಿಲ್ಲಾಧಿಕಾರಿ ಕಚೇರಿಯವರೆಗೆ ಗುರುವಾರ ಆರಂಭಿಸಿದ ಎರಡು ದಿನಗಳ ಪಾದಯಾತ್ರೆಗೆ ನಗರಸಭಾ ಅಧ್ಯಕ್ಷೆ ಷಂಸುನ್ನೀಸಾ ಚಾಲನೆ ನೀಡಿದರು

'ವ್ಯಸನದ ದಾಸನಾಗುವ ಬದಲು ಶಿಕ್ಷಣದ ದಾಸನಾಗು' ಎಂಬ ಧ್ಯೇಯ ವಾಕ್ಯದೊಂದಿಗೆ ನನ್ನ ತಂದೆ, ಸಹೋದರರ ಜೊತೆ ಪಾದಯಾತ್ರೆ ಆರಂಭಿಸಿದ್ದೇನೆ. ಸಮಾಜದಲ್ಲಿ ಶಾಂತಿ–ನೆಮ್ಮದಿ ನೆಲೆಸಲು ಮದ್ಯಮುಕ್ತ ರಾಜ್ಯ ನಮ್ಮದಾಗಬೇಕು. ಪ್ರತಿ ಕುಟುಂಬಕ್ಕೂ ವೈಯಕ್ತಿಕ ಶೌಚಾಲಯಗಳ ನಿರ್ಮಾಣವಾಗಬೇಕು. ಶಿಕ್ಷಣವನ್ನು ಕಡ್ಡಾಯ ಮಾಡಬೇಕು. ಆರೋಗ್ಯಕ್ಕೆ ಪೂರಕವಾಗುವ ವಸ್ತುಗಳನ್ನು ಉತ್ಪಾದಿಸಿ, ಬಳಸುವುದಕ್ಕೆ ಸರ್ಕಾರ ಪ್ರೋತ್ಸಾಹ ನೀಡಬೇಕು' ಎಂದು ಲಾವಣ್ಯಾ ಪ್ರತಿಪಾದಿಸಿದರು.

ಪಾದಯಾತ್ರೆಗೆ ನಗರಸಭಾ ಅಧ್ಯಕ್ಷೆ ಷಂಶುನ್ನಿಸಾ ಚಾಲನೆ ನೀಡಿದರು. ಸಾಮಾಜಿಕ ಹೋರಾಟಗಾರ ಕಸವನಹಳ್ಳಿ ರಮೇಶ್, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಖಾದಿ ರಮೇಶ್, ಎಬಿವಿಪಿ ಮುಖಂಡ ಯೋಗೇಶ್, ಶ್ರೀನಿವಾಸ್ ಮಸ್ಕಲ್, ಅಬ್ದುಲ್ ಅಜೀಜ್, ಜಿ. ದಾದಾಪೀರ್, ಲಾವಣ್ಯಾ ತಂದೆ ಚನ್ನಕೇಶವಪ್ಪ ಇದ್ದರು.

ಪ್ರಸ್ತುತ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಪ್ರಥಮ ಬಿ.ಎಸ್‌ಸಿ ವ್ಯಾಸಂಗ ಮಾಡುತ್ತಿರುವ ಲಾವಣ್ಯಾ, 2016ರಲ್ಲಿ 8ನೇ ತರಗತಿ ಓದುತ್ತಿದ್ದಾಗ ಜಿಲ್ಲೆಯನ್ನು ಬಯಲು ಶೌಚಮುಕ್ತ ಮಾಡುವಂತೆ ಒತ್ತಾಯಿಸಿ ಸತ್ಯಾಗ್ರಹ ನಡೆಸಿದ್ದರು.

ಗಾಯಾಳು ಹುಲಿ ಚಿಕಿತ್ಸೆಗಾಗಿ ಮೈಸೂರಿಗೆ


ಗುಂಡ್ಲುಪೇಟೆ: ಬಂಡೀಪುರ ರಾಷ್ಟ್ರೀಯ ಹುಲಿ ಸಂರಕ್ಷಿತ ಪ್ರದೇಶದ ಬಂಡೀಪುರ ವಲಯದ ಗಂಜಿಕಟ್ಟೆ ಅರಣ್ಯ ಪ್ರದೇಶದಲ್ಲಿ ಗಾಯಗೊಂಡು ನಿತ್ರಾಣಗೊಂಡಿದ್ದ ಏಳರಿಂದ ಎಂಟು ವರ್ಷದ ಗಂಡು ಹುಲಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಗುರುವಾರ ಸೆರೆ ಹಿಡಿದಿದ್ದಾರೆ.

ತುರ್ತು ಚಿಕಿತ್ಸೆಯ ಅಗತ್ಯವಿರುವುದರಿಂದ ಮೈಸೂರಿನ ಮೃಗಾಲಯದ ಕೂರ್ಗಳ್ಳಿ ಪುನರ್ವಸತಿ ಮತ್ತು ರಕ್ಷಣಾ ಕೇಂದ್ರಕ್ಕೆ ಕಳುಹಿಸಲಾಗಿದೆ.

ಅರಿವಳಿಕೆ ಚುಚ್ಚುಮದ್ದು ನೀಡಿ ಗುರುವಾರ ಹುಲಿ ಸೆರೆ ಹಿಡಿಯಲಾಗಿದೆ. ಹುಲಿ ಮೈ ಮೇಲೆ ಆಗಿರುವ ಗಾಯಗಳನ್ನು ಗಮನಿಸಿದರೆ ಆನೆಯೊಂದಿಗೆ ಕಾದಾಡುವ ಸಮಯದಲ್ಲಿ ದಂತ ಚುಚ್ಚಿ ಗಾಯ ಆದ ರೀತಿ ಕಾಣಿಸುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಹುಲಿಗೆ ಚುಚ್ಚುಮದ್ದು ನೀಡಲಾಗಿದೆ. ಚಿಕಿತ್ಸೆಗೆ ಹುಲಿ ಸ್ಪಂದಿಸುವ ಲಕ್ಷಣಗಳು ಕಂಡು ಬಂದಿದೆ. ಹಾಗಾಗಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಕಳುಹಿಸಲಾಯಿತು' ಎಂದು ಹುಲಿ ಯೋಜನೆ ನಿರ್ದೇಶಕ ಎಸ್. ಆರ್.ನಟೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಲಾಖಾ ಪಶು ವೈದ್ಯಾಧಿಕಾರಿಗಳಾದ ಡಾ.ವಾಸಿಂ ಮಿರ್ಜಾ, ಡಾ.ಮುಜೀಬ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಕೆ.ಪರಮೇಶ್, ಸುಮಿತ್ ಕುಮಾರ್ ಎಸ್.ಪಾಟೀಲ, ಬಂಡೀಪುರ ವಲಯ ಅರಣ್ಯಾಧಿಕಾರಿ ಪಿ.ನವೀನ್‌ಕುಮಾರ್, ಬಂಡೀಪುರ ವಲಯದ ಸ್ಥಳೀಯ ಗ್ರಾಮ ಪಂಚಾಯಿತಿ ಸದಸ್ಯ ನಾಗರಾಜು ಉಪಸ್ಥಿತರಿದ್ದರು.



ಸೆರೆ ಹಿಡಿದಿರುವ ಹುಲಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಿಮಗೆ ಸಲಹೆಯೊಂದನ್ನು ನೀಡುವ ಅವಕಾಶ ದೊರೆತರೆ ನಾನು ಹೇಳುವುದಿಷ್ಟೆ: ಇತರರ ಅಭಿಪ್ರಾಯಗಳನ್ನು ತಿಳಿದು ಭೀತರಾಗದಿರಿ. –ಪಾಲೊ ಕೊಎಲೊ

ದೇವಸ್ಥಾನಗಳು ಶ್ರದ್ಧಾ ಕೇಂದ್ರಗಳು ದುರ್ಬಳಕೆಗೆ ಅವಕಾಶ ಬೇಡ

ಹಿಂದೂ ದೇವಸ್ಥಾನಗಳ ನಿರ್ವಹಣೆಯ ಹಕ್ಕು ಹಿಂದೂಗಳ ಕೈಗೆ ಮರಳಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಅವರು ಈಚೆಗೆ ಹೇಳಿದ್ದಾರೆ. ಅಲ್ಲದೆ, ಹಿಂದೂ ದೇವಸ್ಥಾನಗಳಲ್ಲಿನ ಸಂಪತ್ತನ್ನು ಹಿಂದೂಗಳ ಕಲ್ಯಾಣಕ್ಕಾಗಿ ಮಾತ್ರ ಬಳಸಿಕೊಳ್ಳಬೇಕು ಎಂದೂ ಅವರು ಆಗ್ರಹಿಸಿದ್ದಾರೆ. ಇದು ತಪ್ಪುಗ್ರಹಿಕೆಯಿಂದ ಕೂಡಿರುವ ಆಗ್ರಹ. ಇದರ ಹಿಂದೆ ಇರುವುದು ರಾಜಕೀಯ ಹಿಡಿತ ಸಾಧಿಸುವ ಉದ್ದೇಶವೇ ವಿನಾ ದೇವಸ್ಥಾನಗಳಿಗೆ ಒಳ್ಳೆಯ ಆಡಳಿತ ನೀಡಬೇಕು ಎಂಬುದಲ್ಲ. ಆರ್‌ಎಸ್‌ಎಸ್ ತನ್ನನ್ನು ಸಾಂಸ್ಕೃತಿಕ ಸಂಘಟನೆ ಎಂದು ಕರೆದುಕೊಳ್ಳುತ್ತದೆಯಾದರೂ ಅದರ ಮೂಲದಲ್ಲಿ ಇರುವುದು ಧರ್ಮ. ರಾಜಕೀಯ ವಲಯದಲ್ಲಿಯೂ ಸಂಘದ ಕಾರ್ಯಚಟುವಟಿಕೆಗಳು ಇವೆ. ದೇವಸ್ಥಾನಗಳನ್ನು ಹಿಂದೂಗಳೇ ನಿರ್ವಹಣೆ ಮಾಡುವಂತೆ ಆಗಬೇಕು ಎಂಬ ಬೇಡಿಕೆಯ ಹಿಂದೆ ಒಂದು ಲೆಕ್ಕಾಚಾರ ಇದೆ. ದೇವಸ್ಥಾನಗಳ ನಿರ್ವಹಣೆಯು ಕೈಗೆ ಸಿಕ್ಕರೆ, ತನಗೆ ಮತ್ತು ತನ್ನ ಪರಿವಾರದ ಸಂಘಟನೆಗಳಿಗೆ ಭಕ್ತರ ಮೇಲೆ ಪ್ರಭಾವ ಬೀರಲು ಸಾಧ್ಯವಾಗುತ್ತದೆ ಎಂಬುದು ಆ ಲೆಕ್ಕಾಚಾರ. ದೇಶದಲ್ಲಿ ಅಸಂಖ್ಯ ದೇವಸ್ಥಾನಗಳು ಇವೆ. ಕೆಲವು ಸಣ್ಣವು, ಇನ್ನು ಕೆಲವು ಬೃಹತ್ ಆಗಿರುವಂಥವು. ಹಿಂದೂಗಳನ್ನು ತಾವು ಪ್ರತಿನಿಧಿಸುತ್ತೇವೆ ಎಂದು ಹೇಳಿಕೊಳ್ಳುವ ಸಂಘಟನೆಗಳಿಗೆ, ಆ ದೇವಸ್ಥಾನಗಳು ತಮ್ಮ ಚಟುವಟಿಕೆಗಳಿಗೆ ಕೇಂದ್ರಗಳಂತೆ ಒದಗಿಬರಬಹುದು ಎನ್ನುವ ಲೆಕ್ಕಾಚಾರವೂ ಇದ್ದಿರಬಹುದು. ಇದು ಜನರ ಭಕ್ತಿ ಹಾಗೂ ಧಾರ್ಮಿಕ ಭಾವನೆಗಳ ದುರ್ಬಳಕೆಗೆ ಸಮವಾಗುತ್ತದೆ. ಹಿಂದೂಗಳು ಯಾವುದೇ ಸಂಘಟನೆಗೆ ತಮ್ಮನ್ನು ಪ್ರತಿನಿಧಿಸುವ ಅಧಿಕಾರವನ್ನು ನೀಡಿಲ್ಲ.



ದೇವಸ್ಥಾನಗಳ ಆಡಳಿತವನ್ನು ನೋಡಿಕೊಳ್ಳುವ ಹೊಣೆಯಿಂದ ಸರ್ಕಾರಗಳು ಹಿಂದೆ ಸರಿಯಬೇಕು, ನಿರ್ವಹಣೆಯ ಹೊಣೆಯನ್ನು 'ಭಕ್ತ'ರಿಗೆ ಹಸ್ತಾಂತರ ಮಾಡಬೇಕು ಎಂದು ಆಗ್ರಹಿಸಲು ನಿರ್ದಿಷ್ಟ ಕಾರಣಗಳು ಇಲ್ಲ

ದಕ್ಷಿಣ ಭಾರತದಲ್ಲಿನ ದೇವಸ್ಥಾನಗಳನ್ನು ರಾಜ್ಯ ಸರ್ಕಾರಗಳೇ ನಿಯಂತ್ರಿಸುತ್ತಿವೆ ಎಂದು ಭಾಗವತ್ ಅವರು ಹೇಳಿರುವುದು ಗಮನಾರ್ಹ. ದಕ್ಷಿಣ ಭಾರತದಲ್ಲಿ (ಕರ್ನಾಟಕವನ್ನು ಹೊರತುಪಡಿಸಿದರೆ), ದೊಡ್ಡ ಮಟ್ಟದಲ್ಲಿ ಪ್ರಾಬಲ್ಯ ಹೊಂದಲು ಸಂಘ ಪರಿವಾರಕ್ಕೆ ಸಾಧ್ಯವಾಗಿಲ್ಲ. ತಮಿಳುನಾಡಿನಲ್ಲಿ ಈ ವರ್ಷ ನಡೆದ ವಿಧಾನಸಭಾ ಚುನಾವಣೆಗೂ ಮೊದಲು, ದೇವಸ್ಥಾನಗಳನ್ನು ಸರ್ಕಾರದ ಹಿಡಿತದಿಂದ ಮುಕ್ತಗೊಳಿಸಬೇಕು ಎಂಬ ಅಭಿಯಾನ ಶುರುವಾಗಿದ್ದು ಕೇವಲ ಕಾಕತಾಳೀಯ ಆಗಿರಲಾರದು. ದೇವಸ್ಥಾನಗಳ ಆಡಳಿತವನ್ನು ನೋಡಿಕೊಳ್ಳುವ ಹೊಣೆಯಿಂದ ಸರ್ಕಾರಗಳು ಹಿಂದೆ ಸರಿಯಬೇಕು, ನಿರ್ವಹಣೆಯನ್ನು 'ಭಕ್ತ'ರಿಗೆ ಹಸ್ತಾಂತರ ಮಾಡಬೇಕು ಎಂದು ಆಗ್ರಹಿಸಲು ಈಗ ಯಾವುದೇ ನಿರ್ದಿಷ್ಟ ಕಾರಣಗಳು ಇಲ್ಲ. ಹಲವು ದೇವಸ್ಥಾನಗಳನ್ನು ಹಿಂದಿನಿಂದಲೂ ಪ್ರಭುತ್ವಗಳೇ ನಿರ್ವಹಿಸಿಕೊಂಡು ಬಂದಿದ್ದಿದೆ– ತೀರಾ ಹಿಂದಿನ ಕಾಲದಲ್ಲಿ ದೇವಸ್ಥಾನಗಳನ್ನು ರಾಜರು ನೋಡಿಕೊಳ್ಳುತ್ತಿದ್ದರು, ನಂತರ ಬ್ರಿಟಿಷ್ ಸರ್ಕಾರ ಆ ಕೆಲಸ ಮಾಡಿತು, ಈಗ ಚುನಾಯಿತ ರಾಜ್ಯ ಸರ್ಕಾರಗಳು ತಮ್ಮ ಪ್ರತಿನಿಧಿಗಳ ಮೂಲಕ ಅದನ್ನು ಮಾಡಿಕೊಂಡು ಬರುತ್ತಿವೆ. ದೇವಸ್ಥಾನಗಳ ಮಾಲೀಕರು ತಾವು ಎಂದು ಹೇಳಿಕೊಂಡ ವ್ಯಕ್ತಿಗಳು, ಕುಟುಂಬಗಳು ಅಥವಾ ಖಾಸಗಿ ಸಂಸ್ಥೆಗಳು ತಮ್ಮ ಕೆಲಸವನ್ನು ಸರಿಯಾಗಿ ಮಾಡದೆ ಇದ್ದಾಗ, ಆ ದೇವಸ್ಥಾನಗಳನ್ನು ಸರ್ಕಾರಗಳು ತಮ್ಮ ಸುಪರ್ದಿಗೆ ತೆಗೆದುಕೊಂಡಿವೆ. ಕೆಲವು ಸಂದರ್ಭಗಳಲ್ಲಿ, ದೇವಸ್ಥಾನಗಳ ಆವರಣದಲ್ಲಿನ ಜಾತಿ ಆಧಾರಿತ ನಿರ್ಬಂಧಗಳನ್ನು ನಿವಾರಿಸುವ ಉದ್ದೇಶದಿಂದ ಸರ್ಕಾರಗಳು ಇಂತಹ ಕ್ರಮಕ್ಕೆ ಮುಂದಾಗಿದ್ದು ಇದೆ. ಶಾಸನಸಭೆಗಳು ಅನುಮೋದನೆ ನೀಡಿದ ಕಾನೂನುಗಳ ಅಡಿಯಲ್ಲಿ ಸರ್ಕಾರಗಳು ದೇವಸ್ಥಾನಗಳ ಆಡಳಿತ ನಿರ್ವಹಣೆ ಮಾಡುತ್ತಿವೆ. ಇದನ್ನು ನ್ಯಾಯಾಲಯಗಳು ಮಾನ್ಯ ಮಾಡಿವೆ.

ದೇವಸ್ಥಾನಗಳನ್ನು ಹಸ್ತಾಂತರ ಮಾಡಬೇಕಿರುವುದು ಯಾವ 'ಭಕ್ತ'ರಿಗೆ ಎಂಬುದು ಸ್ಪಷ್ಟವಿಲ್ಲ. ಅವರನ್ನು ಹೇಗೆ ಗುರುತಿಸಲಾಗುತ್ತದೆ? ದೇವಸ್ಥಾನವನ್ನು ಒಂದು ಟ್ರಸ್ಟ್ ಮೂಲಕ ನಿರ್ವಹಣೆ ಮಾಡಲಾಗುತ್ತದೆ ಎಂದಾದರೆ, ಆ ಟ್ರಸ್ಟ್‌ನ ಸದಸ್ಯರ ಆಯ್ಕೆ ಪ್ರಕ್ರಿಯೆ ಹೇಗೆ ನಡೆಯುತ್ತದೆ? ಆ ಟ್ರಸ್ಟ್ ಎಲ್ಲರನ್ನೂ ಒಳಗೊಳ್ಳುವಂತೆ ಇರುತ್ತದೆಯೇ? ಈ ವಿಚಾರಗಳು ಸ್ಪಷ್ಟವಾಗಬೇಕಿದೆ. ಸರ್ಕಾರಗಳು ದೇವಸ್ಥಾನಗಳ ನಿರ್ವಹಣೆಯ ಜವಾಬ್ದಾರಿಯಿಂದ ಹಿಂದೆ ಸರಿದರೆ, ದೇವಸ್ಥಾನ ಇರುವ ಪ್ರದೇಶದ ಪ್ರಭಾವಿಗಳು ಅಥವಾ ಬಲಾಢ್ಯರು ಅವುಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಬಹುದು. ದೇವಸ್ಥಾನಗಳ ಪೈಕಿ ಹಲವು ಶ್ರೀಮಂತವಾಗಿಯೂ ಇವೆ. ಖಾಸಗಿ ಹಿತಾಸಕ್ತಿ ರಕ್ಷಿಸಿಕೊಳ್ಳಲು ಪ್ರಭಾವಿಗಳು ಇಂತಹ ದೇವಸ್ಥಾನಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡರೆ, ದೇವಸ್ಥಾನ ನಡೆಸುವುದನ್ನೇ ವ್ಯವಹಾರ ಮಾಡಿಕೊಳ್ಳಬಹುದು. ದೇವಸ್ಥಾನಗಳಲ್ಲಿ ಕೆಲವು ಪ್ರತಿಗಾಮಿ ಆಚರಣೆಗಳು ಮತ್ತೆ ಶುರುವಾಗುವ ಅಪಾಯವೂ ಇರುತ್ತದೆ. ಕರ್ನಾಟಕದ ಕೆಲವು ದೇವಸ್ಥಾನಗಳಲ್ಲಿ ಕೂಡ ತೀರಾ ಅಮಾನವೀಯ ಆಚರಣೆಗಳು ಇದ್ದವು. ಸರ್ಕಾರ ಮತ್ತು ನ್ಯಾಯಾಲಯದ ಮಧ್ಯಪ್ರವೇಶದ ಪರಿಣಾಮವಾಗಿ ಅಂತಹ ಆಚರಣೆಗಳಲ್ಲಿ ಸುಧಾರಣೆಗಳನ್ನು ತರಲು ಸಾಧ್ಯವಾಗಿದೆ. ದೇವಸ್ಥಾನಗಳ ನಿರ್ವಹಣೆಯಿಂದ ಸರ್ಕಾರಗಳು ಪೂರ್ತಿಯಾಗಿ ವಿಮುಖವಾದರೆ, ಅಮಾನವೀಯ ಆಚರಣೆಗಳನ್ನು ತಡೆಯುವುದು ಕಷ್ಟವಾಗಬಹುದು. ಭಾಗವತ್ ಅವರ ಆಗ್ರಹದ ಬಗ್ಗೆ ಆಲೋಚನೆ ಮಾಡುವಾಗ, ಇಂತಹ ಅಂಶಗಳನ್ನೂ ಮನಸ್ಸಿನಲ್ಲಿ ಇರಿಸಿಕೊಳ್ಳಬೇಕು.

ದಿನದ ಟ್ವೀಟ್




ಮರೆಯಲಾಗದವರು...

ಲಸಿಕೆ ಅಭಿಯಾನ ಶತಕ ದಾಟಿರುವುದು ಒಂದು ಮೈಲಿಗಲ್ಲು. 100 ಕೋಟಿ ಡೋಸ್ ಲಸಿಕೆ ನೀಡಿಕೆ ಅಭಿಯಾನ ಪೂರ್ಣಗೊಂಡಿದೆ. ಭಾರತ ದೇಶಕ್ಕೆ ಅಭಿನಂದನೆ. ಈ ಸಾಂಕ್ರಾಮಿಕದ ಸಮಯದಲ್ಲಿ ಪ್ರಾಣ ಕಳೆದುಕೊಂಡ ಕೊರೊನಾ ವಾರಿಯರ್‌ಗಳನ್ನು ಎಂದಿಗೂ ಮರೆಯಲಾಗದು.

ಸಚಿನ್ ದೇಶ್ವಾಲ್, ನಾಗರಿಕ

ಕಿಡಿನುಡಿ

ಇವತ್ತು ಬಿಜೆಪಿಯವರು ನನ್ನ ಖಾಸಗಿ ವಿಚಾರಗಳನ್ನು ಕೆದಕಿದ್ದಾರೆ. ಅವರಿಗೆ ನೇರವಾಗಿ ಹೇಳಲು ಬಯಸುತ್ತೇನೆ. ನನ್ನ ವೈಯಕ್ತಿಕ ವಿಚಾರಗಳನ್ನು ಪ್ರಸ್ತಾಪ ಮಾಡಿದರೆ ನಾನು ಅವರೆಲ್ಲರ ವಿಚಾರಗಳನ್ನು ಮಾಧ್ಯಮಗಳ ಮುಂದೆ ಬಿಚ್ಚಿಡಬೇಕಾಗುತ್ತದೆ. ಅವೆಲ್ಲವನ್ನೂ ನೀವು ನೋಡಿದರೆ ಅಸಹ್ಯ ಪಡುತ್ತೀರಿ.



ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

50 ವರ್ಷಗಳ ಹಿಂದೆ

ಶುಕ್ರವಾರ, 22-10-1971

• ಕೃಷಿ ಸಂಪತ್ತು ತೆರಿಗೆ ಶಾಸನ ಕ್ರಮಬದ್ಧ ಸುಪ್ರೀಂ ಕೋರ್ಟ್ ತೀರ್ಪು

ನವದೆಹಲಿ, ಅ. 21– ಕೃಷಿ ಸಂಪತ್ತಿನ ಮೂಲ ಮೌಲ್ಯದ ಮೇಲೆ ಕೇಂದ್ರ ಸರ್ಕಾರ ತೆರಿಗೆಯನ್ನು ವಿಧಿಸಬಹುದೆಂಬ 1969ರ ಸಂಪತ್ತು ತೆರಿಗೆ ತಿದ್ದುಪಡಿ ಶಾಸನದ ರಾಜ್ಯಾಂಗ ಕ್ರಮಬದ್ಧತೆಯನ್ನು ಸುಪ್ರೀಂ ಕೋರ್ಟು ಇಂದು ಎತ್ತಿ ಹಿಡಿಯಿತು.

ಶಾಸನವು ರಾಜ್ಯಾಂಗದ ಅಧಿಕಾರಕ್ಕೆ ಮೀರಿದ್ದೆಂಬ ಪಂಜಾಬ್ ಹೈಕೋರ್ಟ್ ತೀರ್ಪಿನ ವಿರುದ್ಧ ಕೇಂದ್ರ ಸರ್ಕಾರ ಸಲ್ಲಿಸಿದ್ದ ಅಪೀಲನ್ನು ನ್ಯಾಯಾಲಯ ಪುರಸ್ಕರಿಸಿತು.

ಭೂಮಿ ಮತ್ತು ಬೇಸಾಯಗಳು ರಾಜ್ಯದ ಅಧಿಕಾರದಲ್ಲಿ ಬರುವ ವಿಷಯಗಳಾದ್ದರಿಂದ ಕೃಷಿ ಸಂಪತ್ತು ತೆರಿಗೆಯ ಬಗ್ಗೆ ಶಾಸನ ಮಾಡಲು ಪಾರ್ಲಿಮೆಂಟಿಗೆ ಅಧಿಕಾರವಿಲ್ಲ ಎಂದು ಪಂಜಾಬಿನ ಭೂಮಾಲೀಕರಲ್ಲಿ ಒಬ್ಬರಾದ ಎಚ್.ಎಸ್. ಧಿಲ್ಲೋನರು ಶಾಸನದ ಸಿಂಧುತ್ವವನ್ನು ಪ್ರಶ್ನಿಸಿದರು.

• ಎರಡನೇ ಎಚ್.ಎಂ.ಟಿ. ಗಡಿಯಾರ ಕಾರ್ಖಾನೆಗೆ ಶಂಕುಸ್ಥಾಪನೆ

ಬೆಂಗಳೂರು, ಅ. 21– ನಿರುದ್ಯೋಗಿ ತರುಣರಿಗೆ ಹೆಚ್ಚು ಹೆಚ್ಚು ಉದ್ಯೋಗಾವಕಾಶ ದೊರೆಯುವಂತಾಗಲು ಸರ್ಕಾರಿ ಕ್ಷೇತ್ರಗಳ ಉದ್ದಿಮೆಗಳು ತಮ್ಮ ಕೈಗಾರಿಕೆಗಳನ್ನು ವಿಸ್ತರಿಸುವ ಯೋಜನೆಗಳಿಗೆ ಸಾಕಷ್ಟು ಹಣವನ್ನು ಒದಗಿಸುವುದು ಉತ್ತಮ ಎಂದು ಎಚ್.ಎಂ.ಟಿ. ಅಧ್ಯಕ್ಷ ಡಾ. ಎಸ್.ಎಂ. ಪಾಟೀಲ್ ಅವರು ಇಂದು ಇಲ್ಲಿ ತಿಳಿಸಿದರು.

ನಾಲ್ಕು ಕೋಟಿ ರೂ.ವಿನ ಎರಡನೇ ಗಡಿಯಾರ ಕಾರ್ಖಾನೆಯ ಶಂಕುಸ್ಥಾಪನೆ ನೆರವೇರಿಸಿದ ಡಾ. ಪಾಟೀಲ್ ಅವರು, ಕಾರ್ಖಾನೆಯ ಉತ್ಪಾದನೆಯಿಂದ ಬರುವ ಲಾಭವನ್ನು ಕಾರ್ಮಿಕರೇ ಅನುಭವಿಸಬೇಕೆಂಬ ಸ್ವಾರ್ಥ ಭಾವನೆಯನ್ನು ಬಿಟ್ಟುಬಿಡಬೇಕೆಂದು ಹೇಳಿದರು.

• 'ನಗರ ಕಾರ್ಪೊರೇಷನ್ ಕಮಿಷನರಿಂದ ಕಾನೂನು, ತೀರ್ಮಾನಗಳ ಉಲ್ಲಂಘನೆ'

ಬೆಂಗಳೂರು, ಅ. 21– ನಗರ ಕಾರ್ಪೊರೇಷನ್ನಿನ ಕಮಿಷನರ್ ಅವರು ಕಾರ್ಪೊರೇಷನ್ನಿನ ಕಾನೂನು ಮತ್ತು ತೀರ್ಮಾನಗಳನ್ನು ಉಲ್ಲಂಘಿಸಿ ನಡೆದಿದ್ದಾರೆಂದು ಮೇಯರ್ ಶ್ರೀ ಜೆ.ಲಿಂಗಯ್ಯ ಅವರು ಇಂದು ಇಲ್ಲಿ ಆರೋಪಿಸಿದರು.

'ಕಮಿಷನರ್ ಅವರು ಸ್ಥಾಯಿ ಸಮಿತಿಗಳ ಸಭೆಗಳಿಗೆ ಹಾಜರಾಗುವುದಿಲ್ಲ. ನಗರ ಪರಿಶೀಲನೆಗೆ ಬನ್ನಿರೆಂದು ಕರೆದರೆ ಬರುವುದಿಲ್ಲ. ಸ್ಥಾಯಿ ಸಮಿತಿಗಳು ಹಾಗೂ ಕಾರ್ಪೊರೇಷನ್ ಸಭೆ ಕೈಗೊಳ್ಳುವ ತೀರ್ಮಾನಗಳನ್ನು ಕಾರ್ಯಗತ ಮಾಡದೇ ಕಡೆಗಣಿಸುತ್ತಿದ್ದಾರೆ' ಎಂದು ಅವರು ಹೇಳಿದರು.

'ಅವರ ಮನೋಭಾವ ಖಂಡನಾರ್ಹ' ಎಂದು ಮೇಯರ್ ಅವರು ಪತ್ರಿಕಾ ವರದಿಗಾರರಿಗೆ ತಿಳಿಸಿದರು.

ಹೊಸ ಶಿಕ್ಷಣ ನೀತಿಯು ಭಾಷೆಗೆ ನೀಡಿರುವ ಮಹತ್ವವು ಭಾಷೆಗಳ ನಡುವೆ ಸೌಹಾರ್ದ ಬೆಳೆಸಬಲ್ಲದು

ಬಹುಸಂಸ್ಕೃತಿಯ ಭಾರತಕ್ಕೆ ಬಹುಭಾಷಾ ಬೋಧನೆ



ವಿಶ್ಲೇಷಣೆ

ಅಜಕ್ಕಳ ಗಿರೀಶ ಭಟ್

ನಮ್ಮ ದೇಶದಲ್ಲಿ ಔಪಚಾರಿಕ ಶಿಕ್ಷಣದ ಅವಕಾಶವು ಎಲ್ಲರಿಗೂ ಸಮಾನವಾಗಿ ಲಭ್ಯವಿದೆ ಎನ್ನುವುದು ತಾತ್ವಿಕವಾಗಿ ಅಥವಾ ಕಾನೂನಿನ ದೃಷ್ಟಿಯಲ್ಲಿ ನಿಜವಾದರೂ ವಾಸ್ತವದಲ್ಲಿ ಅಸಮಾನತೆ, ಬಡತನ, ಸಾಮಾಜಿಕ ತಾರತಮ್ಯ ಇತ್ಯಾದಿ ಕಾರಣಗಳಿಂದ ಸಮಾನ ಅವಕಾಶಗಳು ಎಲ್ಲರಿಗೂ ದೊರೆಯುತ್ತಿಲ್ಲ.

ರಾಜ್ಯಗಳ ಪಠ್ಯಕ್ರಮ, ಕೇಂದ್ರೀಯ ಪಠ್ಯಕ್ರಮ ಮುಂತಾದ ಭಿನ್ನತೆಗಳು ಕೂಡ ಇವೆ. ಅಲ್ಲದೆ, ವಿಭಿನ್ನ ಭೌಗೋಳಿಕ ಪರಿಸ್ಥಿತಿ, ಇಂಗ್ಲಿಷ್ ಮಾಧ್ಯಮ ಶಾಲೆಗಳ ದುಬಾರಿ ಶುಲ್ಕ– ಹೀಗೆ ಸಮಾನ ಅವಕಾಶಕ್ಕೆ ತೊಡಕಾಗುವ ಹಲವು ಅಂಶಗಳಿವೆಯಾದರೂ ಮುಖ್ಯವಾಗಿ ಚರ್ಚೆಯಾಗುತ್ತಿರುವುದು ಬೋಧನೆಯ ಮಾಧ್ಯಮವೇ. ಅದರಲ್ಲೂ ಇಂಗ್ಲಿಷ್ ಮಾಧ್ಯಮವೇ ಅಸಮಾನತೆಗೆ ಕಾರಣ ಎನ್ನುವುದು ಸಾಮಾನ್ಯ ಅಭಿಪ್ರಾಯ. ನಮ್ಮ ರಾಜ್ಯದ ಸರ್ಕಾರಿ ಶಾಲೆಗಳಲ್ಲೂ ಆರಂಭದಿಂದಲೇ ಇಂಗ್ಲಿಷ್ ಕಲಿಸಬೇಕು ಎಂಬ ಒತ್ತಾಯ ಬಂದುದೂ ಈ ಹಿನ್ನೆಲೆಯಲ್ಲಿಯೇ.

ದೇಶದ ಎಲ್ಲ ಮಕ್ಕಳಿಗೂ ಶಿಕ್ಷಣದ ಅವಕಾಶ ಸಮಾನವಾಗಿ ದೊರೆಯಬೇಕು ಎನ್ನುವ ದಿಸೆಯಲ್ಲಿ ಕಳೆದ ಹಲವಾರು ವರ್ಷಗಳಿಂದ ನಮ್ಮ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಬಗ್ಗೆ ಮಾತನಾಡುತ್ತಿರುವ ಶಿಕ್ಷಣ ತಜ್ಞರು ಹಾಗೂ ಚಿಂತಕರು 'ಸಮಾನ ಶಿಕ್ಷಣ'ದ ಬಗ್ಗೆ ಒತ್ತು ಕೊಡುತ್ತಿರುವುದನ್ನು ಕೇಳುತ್ತಿದ್ದೇವೆ. ಯು.ಆರ್. ಅನಂತಮೂರ್ತಿಯವರು ಕೂಡ ಇದನ್ನು ಪದೇ ಪದೇ ಹೇಳುತ್ತಿದ್ದರು. ಶಿಕ್ಷಣವನ್ನು ರಾಷ್ಟ್ರೀಕರಣ ಮಾಡಬೇಕು ಎಂಬ ಬೇಡಿಕೆಯನ್ನು ಮಂಡಿಸುವವರೂ ಇದ್ದಾರೆ. ಆದರೆ ಸಮಾನ ಶಿಕ್ಷಣ ಎಂದರೆ ಏನು, ಅದರ ಸ್ವರೂಪ ಏನು, ಅದನ್ನು ಅನುಷ್ಠಾನಗೊಳಿಸುವುದು ಹೇಗೆ, ರಾಜ್ಯಗಳ ಒಳಗೆ ಸಮಾನ ಶಿಕ್ಷಣ ಇರಬೇಕೇ ಅಥವಾ ಇಡೀ ದೇಶಕ್ಕೇ ಅನ್ವಯಿಸುವಂಥ ಸಮಾನ ಶಿಕ್ಷಣ ಇರಬೇಕೆ, ಯಾವ ಹಂತದವರೆಗೆ ಸಮಾನ ಶಿಕ್ಷಣ ಇರಬೇಕು ಮುಂತಾದ ಪ್ರಶ್ನೆಗಳನ್ನು ಇಟ್ಟುಕೊಂಡು ಅನುಷ್ಠಾನಯೋಗ್ಯವಾದ ಸಲಹೆಗಳನ್ನು ನೀಡಿದುದು ಅಷ್ಟೇನೂ ಕಾಣುವುದಿಲ್ಲ.


ಶಿಕ್ಷಣದಲ್ಲಿ ಅದರಲ್ಲೂ ಪ್ರಾಥಮಿಕ ಶಿಕ್ಷಣದಲ್ಲಿ ಕಲಿಕೆಯ ಸಮಾನ ಅವಕಾಶಕ್ಕೆ ಅಡ್ಡಗಾಲಾಗಿ ನಿಂತಿರುವುದು ಮುಖ್ಯವಾಗಿ ಭಾಷೆ ಎಂಬ ಹಿನ್ನೆಲೆಯಲ್ಲಿ, ಈಗಿನ ರಾಷ್ಟ್ರೀಯ ಶಿಕ್ಷಣ ನೀತಿಯು ಭಾಷೆಗೆ ವಿಶೇಷ ಮಹತ್ವ ನೀಡಿರುವುದು ಉಲ್ಲೇಖನೀಯ. ಬಹುಭಾಷಿಕತೆಯನ್ನು ಉತ್ತೇಜಿಸಬೇಕು ಎಂಬುದನ್ನು ಹೊಸ ನೀತಿಯು ಸ್ಪಷ್ಟವಾಗಿ ಪ್ರತಿಪಾದಿಸಿದೆ. ಶಿಕ್ಷಣ ತಜ್ಞರು ಈಚೆಗೆ ಅನುಭವ ಆಧಾರಿತ ಕಲಿಕೆ ಎನ್ನುವ ಪರಿಕಲ್ಪನೆಗೆ ಹೆಚ್ಚು ಒತ್ತು ಕೊಡುತ್ತಿದ್ದಾರೆ. ಈ ಶಿಕ್ಷಣ ನೀತಿಯೂ ಅದನ್ನು ಪರಿಗಣಿಸಿದೆ. ಬಹುಭಾಷಿಕತೆಯು ಅನುಭವದ ವ್ಯಾಪ್ತಿಯನ್ನು ಹಿಗ್ಗಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ.

ವ್ಯಕ್ತಿಗೆ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ, ಆರ್ಥಿಕ– ಹೀಗೆ ಯಾವುದೇ ನೆಲೆಯಲ್ಲಿ ಸಬಲತೆಯನ್ನು ತರುವಲ್ಲಿಯೂ ಬಹುಭಾಷಿಕತೆಯ ಕೊಡುಗೆ ಗಣನೀಯವಾದುದು. ಅಲ್ಲದೆ, ಇನ್ನಿತರ ಭಾಷೆಗಳ ತಿಳಿವಳಿಕೆಯಿದ್ದವರು ತಮ್ಮ ಮನೆಭಾಷೆಯನ್ನು ಇನ್ನಷ್ಟು ಚೆನ್ನಾಗಿ ಬಳಸಬಲ್ಲರು ಮತ್ತು ಶ್ರೀಮಂತಗೊಳಿಸಬಲ್ಲರು ಎನ್ನುವುದೂ ಸಿದ್ಧವಾದ ಸಂಗತಿಯೇ. ಭಾಷಾ ಕೌಶಲ ಮತ್ತು ಗಣಿತದ ಮೂಲಕ ತರ್ಕಕೌಶಲವನ್ನು ಬಾಲ್ಯದಿಂದಲೇ ರೂಢಿಸುವ ದಿಸೆಯಲ್ಲಿ ಅದಕ್ಕೆ ಪೂರಕವಾದ ಪಠ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕು ಎಂಬ ಆಶಯವನ್ನು ಹೊಸ ಶಿಕ್ಷಣ ನೀತಿಯು ವ್ಯಕ್ತಪಡಿಸಿದೆ. ಇದಕ್ಕೆ ಅನುಕೂಲವಾಗುವಂತೆ ತೀರಾ ಪ್ರಾಥಮಿಕ ಹಂತದಲ್ಲಿಯೇ ಇತರ ಬೋಧನಾ ವಿಷಯಗಳ ಗ್ರಹಿಕೆಯನ್ನು ಹಿಗ್ಗಿಸಬೇಕೆಂಬ ಸಲಹೆಯೂ ಇದೆ. ಇದು ಯುಕ್ತವಾದ ಶಿಫಾರಸೇ ಆಗಿದೆ. ವಿಷಯವನ್ನು ಗ್ರಹಿಸಲು ಹಾಗೂ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಲು ಅಗತ್ಯವಾದ ಭಾಷಾ ಕೌಶಲ ಮತ್ತು ತರ್ಕಬದ್ಧ ಚಿಂತನೆಗೆ ನೀಡಬೇಕಾದಷ್ಟು ಪ್ರಾಮುಖ್ಯವನ್ನು ಈವರೆಗೆ ನೀಡದೆ ಇರುವುದರಿಂದ ತುಂಬ ಹಾನಿಯಾಗಿದೆ. ಇದರರ್ಥ ಹಿಂದಿನ ಶಿಕ್ಷಣ ನೀತಿಗಳು ಅದನ್ನು ಪರಿಗಣಿಸಿಲ್ಲ ಎಂದಲ್ಲ: ಅನುಷ್ಠಾನದಲ್ಲಿಯಂತೂ ಇದಕ್ಕೆ ಮಹತ್ವ ಸಿಕ್ಕಿಲ್ಲ.

ಎಂಟನೇ ತರಗತಿಯವರೆಗೆ ಮತ್ತು ಅನಂತರ ಕೂಡ ಮಕ್ಕಳಿಗೆ ಚೆನ್ನಾಗಿ ಗೊತ್ತಿರುವ ಭಾಷೆಯಲ್ಲೇ ಕಲಿಕೆ ನಡೆಯಬೇಕು ಎಂದು ಈಗಿನ ಶಿಕ್ಷಣ ನೀತಿ ಹೇಳಿದೆ. ಅದರಲ್ಲೂ ಕನಿಷ್ಠ ಐದನೇ ತರಗತಿಯವರೆಗೆ ಸಾಧ್ಯವಾದಲ್ಲಿ ಎಂಟನೇ ತರಗತಿಯವರೆಗೆ ಮಕ್ಕಳ ಮನೆಭಾಷೆ/ ತಾಯಿಭಾಷೆ/ ಸ್ಥಳೀಯಭಾಷೆ/ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ನೀಡಬೇಕು ಎಂದು ಹೇಳಲಾಗಿದೆ.

ಮಾತೃಭಾಷಾ ಶಿಕ್ಷಣ ಎಂಬ ಪರಿಕಲ್ಪನೆಯನ್ನು ಮೇಲಿನ ನಾಲ್ಕೂ ನಮೂನೆಯ ಭಾಷೆಗಳಿಗೆ ಅನ್ವಯಿಸಿದುದು ಕೂಡ ಸಮಂಜಸವೇ ಆಗಿದೆ. ಪ್ರಾಥಮಿಕ ಹಂತದಲ್ಲಿಯೇ ಬಹುಭಾಷಿಕ ಬೋಧನೆಗೆ ಒತ್ತು ನೀಡಬೇಕು ಎಂಬ ಶಿಫಾರಸು ಕೂಡ ಇದೆ. ಮೇಲಿನ ನಾಲ್ಕೂ ನಮೂನೆಯ ಭಾಷೆಗಳನ್ನು ಉಲ್ಲೇಖಿಸಿದ್ದರಿಂದ ಬಹುಭಾಷಿಕ ಬೋಧನೆ ಅನಿವಾರ್ಯವೇ ಆಗುತ್ತದೆ. ಬೋಧಕರು ಕೂಡ ತಮ್ಮನ್ನು ತಾವು ಹೊಸ ರೀತಿಯ ಬೋಧನೆಗೆ ಸಿದ್ಧಗೊಳಿಸಿಕೊಳ್ಳುವುದು ಅತ್ಯಂತ ಅಗತ್ಯ.

ಹೊಸ ಶಿಕ್ಷಣ ನೀತಿಯ ಬಗ್ಗೆ ಅನೇಕ ಗೋಷ್ಠಿಗಳು ನಡೆದಿವೆ. ಪರ– ವಿರೋಧದ ಚರ್ಚೆಗಳೂ ಆಗಿವೆ. ಆದರೆ ಈ ನೀತಿಯು ಹೇಳಿದ ದ್ವಿಭಾಷಿಕ ಪಠ್ಯಪುಸ್ತಕ ಎಂಬ ಒಂದು ಅತಿ ಮುಖ್ಯ ವಿಚಾರದ ಬಗ್ಗೆ ಅಷ್ಟಾಗಿ ಯಾರೂ ಗಮನ ನೀಡಿದಂತೆ ಕಾಣಲಿಲ್ಲ ಅಥವಾ ಅಂಥ ಚರ್ಚೆ ನಡೆದಿದ್ದರೂ ಅದನ್ನು ನಾನು ಗಮನಿಸದೆ ಇರಬಹುದು. ಏನೇ ಇರಲಿ, ಸಮಾನ ಶಿಕ್ಷಣ ಎಂಬ ಪರಿಕಲ್ಪನೆಯನ್ನು ಸ್ವಲ್ಪ ಮಟ್ಟಿಗಾದರೂ ಅನುಷ್ಠಾನಕ್ಕೆ ತರುವಲ್ಲಿ ಈ ದ್ವಿಭಾಷಿಕ ಪಠ್ಯಪುಸ್ತಕಗಳು ಉಪಯುಕ್ತವಾಗಬಲ್ಲವು.




ತಮ್ಮ ಮನೆಭಾಷೆ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಮಕ್ಕಳು ಗಣಿತ ಮತ್ತು ವಿಜ್ಞಾನದಂಥ ವಿಷಯಗಳ ಬಗ್ಗೆ ಮಾತಾಡಲು ಮತ್ತು ಯೋಚಿಸಲು ಸಮರ್ಥರಾಗಬೇಕು. ಅದಕ್ಕಾಗಿ ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಅತ್ಯುತ್ತಮ ಗುಣಮಟ್ಟದ ದ್ವಿಭಾಷಿಕ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಬೇಕು ಎಂದು ರಾಷ್ಟ್ರೀಯ ಶಿಕ್ಷಣ ನೀತಿ ಹೇಳುತ್ತದೆ. ಕೇವಲ ಗಣಿತ ಮತ್ತು ವಿಜ್ಞಾನಕ್ಕಷ್ಟೇ ಅಲ್ಲ, ಇದನ್ನು ಸಮಾಜವಿಜ್ಞಾನ ವಿಷಯಕ್ಕೂ ಅನ್ವಯಿಸುವುದು ಅಗತ್ಯ.

ಚಿಕ್ಕ ಮಕ್ಕಳಿಗೆ ಒಂದಕ್ಕಿಂತ ಹೆಚ್ಚು ಭಾಷೆಗಳು ಹೊರೆಯಾಗುತ್ತವೆ ಎಂಬುದು ಸರಿಯಲ್ಲ. ಈ ಅಂಶವನ್ನು ಹೊಸ ಶಿಕ್ಷಣ ನೀತಿಯೂ ಒಪ್ಪುತ್ತದೆ. ಬಹುಭಾಷಿಕರಾದವರು ಭಾಷಾ ವಿಚಾರವಾಗಿ ಸಂಘರ್ಷ ಮಾಡುವ ಸಂಭವವೂ ಕಡಿಮೆ! ಕರ್ನಾಟಕವನ್ನು ಪರಿಗಣಿಸಿದರೆ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಗಣಿತ, ವಿಜ್ಞಾನ ಮತ್ತು ಸಮಾಜವಿಜ್ಞಾನ ಪಠ್ಯಪುಸ್ತಕಗಳು ಇದ್ದರೆ ಇಂಗ್ಲಿಷ್ ಮಾಧ್ಯಮದ ಸಮಸ್ಯೆ ಸ್ವಲ್ಪವಾದರೂ ಪರಿಹಾರವಾದೀತು. ಅಷ್ಟರಮಟ್ಟಿಗೆ ಸಮಾನ ಶಿಕ್ಷಣ ಅನುಷ್ಠಾನವಾದಂತಾದೀತು. ಆದರೆ, ದ್ವಿಭಾಷಿಕ ಪಠ್ಯಪುಸ್ತಕಗಳ ಪದ್ಧತಿ ಪರಿಣಾಮಕಾರಿಯಾಗಬೇಕಾದರೆ, ಬೋಧಕರು ಕೂಡ ಅಷ್ಟೇ ಉನ್ನತ ಮಟ್ಟದ ಭಾಷಾ ಕೌಶಲವನ್ನು ಹೊಂದಿರಬೇಕಾಗುತ್ತದೆ. ಈ ದಿಸೆಯಲ್ಲಿ ಬೋಧಕರಿಗೆ ನೀಡಬೇಕಾದ ತರಬೇತಿಯ ಬಗ್ಗೆಯೂ ಶಿಕ್ಷಣ ನೀತಿ ಪ್ರಸ್ತಾಪಿಸಿದೆ. ತ್ರಿಭಾಷಾ ಸೂತ್ರವನ್ನೇ ಈ ಶಿಕ್ಷಣ ನೀತಿಯೂ ಹೇಳಿದೆಯಾದರೂ ಇದರಲ್ಲಿ ಆಯಾ ರಾಜ್ಯಗಳಿಗೆ ಭಾಷೆಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿದೆ. ಈಗಿರುವಂತೆ, ಹಿಂದಿಯು ಒಂದು ಭಾಷೆಯಾಗಿರಬೇಕಾಗಿಲ್ಲ. ಮುಖ್ಯವಾಗಿ, ಹಿಂದಿ ರಾಜ್ಯಗಳೂ ದಕ್ಷಿಣದ ಭಾಷೆಗಳನ್ನು ಬೋಧಿಸುವ ಸಲಹೆಯಿದೆ.

ಅಲ್ಲದೆ, ವಿವಿಧ ರಾಜ್ಯಗಳ ನಡುವೆ ಭಾಷಾ ಶಿಕ್ಷಕರನ್ನು ವಿನಿಮಯ ಮಾಡಿಕೊಳ್ಳುವ ವಿಶಿಷ್ಟ ಸಲಹೆ ಕೂಡ ಅಲ್ಲಿದೆ. ಮಕ್ಕಳು ಖುಷಿಯಿಂದ ಪಾಲ್ಗೊಳ್ಳಬಹುದಾದ 'ಫನ್ ಪ್ರಾಜೆಕ್ಟು'ಗಳ ಮೂಲಕ ಹೊರಭಾಷೆಗಳ ಕುರಿತಾದ ಅರಿವನ್ನು ಉಂಟುಮಾಡಬೇಕೆನ್ನುವುದೂ ಸ್ವಾಗತಾರ್ಹವೇ ಆಗಿದೆ.

ವಿವಿಧ ಭಾರತೀಯ ಭಾಷೆಗಳ ನಡುವಿನ ಭಾಷಾಂತರ ಪ್ರಕ್ರಿಯೆಯನ್ನು ಉತ್ತೇಜಿಸುವುದನ್ನು ಶಿಕ್ಷಣ ನೀತಿಯ ಭಾಗವಾಗಿಸಿರುವುದು ಕೂಡ ಹೊಸ ನೀತಿಯು ಭಾಷೆಗೆ ನೀಡಿದ ಮಹತ್ವವನ್ನು ತೋರಿಸುತ್ತದೆ. ಇಂಥ ಉಪಕ್ರಮಗಳು ಭಾಷೆಗಳ ನಡುವಿನ ಮೇಲು–ಕೀಳು ಭಾವನೆಯನ್ನು ತೊಡೆದುಹಾಕಬಲ್ಲವು ಮತ್ತು ವಿವಿಧ ಭಾರತೀಯ ಭಾಷೆಗಳ ನಡುವೆ ಸೌಹಾರ್ದವನ್ನು ಬೆಳೆಸಬಲ್ಲವು. ಒಟ್ಟಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಭಾಷೆ ಎನ್ನುವ ಸಾಂಸ್ಕೃತಿಕ ದ್ರವ್ಯಕ್ಕೆ ನೀಡಿರುವ ಪ್ರಾಮುಖ್ಯವು ಅನುಷ್ಠಾನದ ಹೊತ್ತಿನಲ್ಲೂ ಅಷ್ಟೇ ಮಹತ್ವವನ್ನು ಪಡೆದರೆ ಮುಂದಿನ ಎರಡು ದಶಕಗಳಲ್ಲಿ ಸ್ಪಷ್ಟವಾದ ಸಕಾರಾತ್ಮಕ ಬದಲಾವಣೆ ಕಾಣಬಹುದು. ಸುಶಿಕ್ಷಿತರು ನಿಜವಾದ ಸಂಪನ್ಮೂಲಗಳಾಗಿ ರೂಪುಗೊಳ್ಳಬಲ್ಲರು.

ಚುರುಮುರಿ



ಕೇಸರಿ 'ಬಾತ್'!

• ಬಿ.ಎನ್.ಮಲ್ಲೇಶ್

ಮಂಜಮ್ಮನ ಚಾದಂಗಡಿ ಮುಂದೆ ಎರಡೂ ಕೆನ್ನೆ ಊದಿಸಿಕೊಂಡು ಕೂತಿದ್ದ ದುಬ್ಬೀರನನ್ನ ಕಂಡ ತೆಪರೇಸಿ 'ಇದೇನೋ ದುಬ್ಬೀರ, ಎರಡೂ ಕೆನ್ನೆ ಬಾತುಕೊಂಡಾವಲ್ಲ, ಯಾಕೆ ಏನಾತು?' ಎಂದು ವಿಚಾರಿಸಿದ. ದುಬ್ಬೀರ ಮಾತಾಡಲಿಲ್ಲ.

ಮಂಜಮ್ಮನಿಗೆ ಕನಿಕರ. 'ಏನಾತೋ? ಬಾಳ ನೋವೈತಾ?' ಎಂದು ಕಕ್ಕುಲಾತಿ ತೋರಿದಳು. ಆಗಲೂ ದುಬ್ಬೀರ ಪಿಟಕ್ಕನ್ನಲಿಲ್ಲ.

'ಅವನು ಮಾತಾಡಲ್ಲ, ಆದ್ರೆ ಅವನ ಕೆನ್ನೆ ಯಾಕೆ ಬಾತುಕೊಂಡಾವೆ ಅಂತ ನಂಗೊತ್ತು' ಎಂದ ಗುಡ್ಡೆ ನಗುತ್ತ.

'ಹೌದಾ? ಯಾಕೆ ಏನಾತು?' ಕೊಟ್ರೇಶಿಗೆ ಕುತೂಹಲ.

'ಏನಾತು ಅಂದ್ರೆ, ಮೊನ್ನೆ ಏನಕ್ಕೋ ದುಬ್ಬೀರ ಪೊಲೀಸ್ ಸ್ಟೇಶನ್ ಮುಂದೆ ಹೊಂಟಿದ್ನಂತೆ. ಅಲ್ಲಿ ಬಹಳ ಜನ ಕೇಸರಿ ಶಲ್ಯ ಹಾಕ್ಕಂಡು ಕುಂತಿದ್ದು ನೋಡಿ 'ನೀವು ಸಂಘದೋರಾ? ದೀಕ್ಷೆ ಕೊಡೋರಾ?' ಅಂತ ಕೇಳಿದ್ನಂತೆ. ಅದಕ್ಕೆ ಅವರು ದುಬ್ಬೀರನ ಕೆನ್ನೆಗೆ ಪಟಾರ್ ಅಂತ ಬಾರಿಸಿ 'ಏಯ್, ಕಣ್ ಕಾಣ್ಸಲ್ವ? ಇದು ಪೊಲೀಸ್ ಸ್ಟೇಶನ್ನು. ನಾವೆಲ್ಲ ಪೊಲೀಸ್ರು' ಅಂದ್ರಂತೆ.

ಕಕ್ಕಾಬಿಕ್ಕಿಯಾದ ದುಬ್ಬೀರ ಕೆನ್ನೆ ಉಜ್ಜಿಕೊಂಡು ಮನೆ ಕಡೆ ಬರೋವಾಗ ರಸ್ತೇಲಿ ಕೇಸರಿ ಶಲ್ಯ ಹಾಕ್ಕಂಡೋರು ಇಬ್ರು ಯಾರದೋ ಜಗಳ ನೋಡ್ಕಂಡು ಸುಮ್ನೆ ನಿಂತಿದ್ದನ್ನು ನೋಡಿ 'ರೀ... ಇಬ್ರೂ ಪೊಲೀಸ್ ಆಗಿ ಜಗಳ ನೋಡ್ಕಂಡ್ ನಿಂತಿದೀರಲ್ಲ, ಬಿಡ್ಸೋಕಾಗಲ್ವ?' ಅಂದ್ನಂತೆ. ಅವರು ದುಬ್ಬೀರನ ಇನ್ನೊಂದ್ ಕೆನ್ನೆಗೆ ಪಟೀರ್ ಅಂತ ಬಾರಿಸಿ 'ಏಯ್, ನಾವು ಪೊಲೀಸರಲ್ಲ, ಸಂಘದೋರು. ನೀನ್ಯಾವನು ಇದನ್ನ ಕೇಳಾಕೆ' ಅಂದ್ರಂತೆ. ಅಲ್ಲಿಗೆ ಎರಡೂ ಕೆನ್ನೆ ಢಮಾರ್! ಇದು ಕತೆ' ಎಂದ ಗುಡ್ಡೆ.

'ಹೌದಾ? ಪಾಪ ದುಬ್ಬೀರ, ಬೆಳಗ್ಗಿಂದ ಏನಾದ್ರು ತಿಂದಿದಾನೋ ಇಲ್ವೋ... ಮಂಜಮ್ಮ ತಿಂಡಿ ಏನೈತೆ?' ತೆಪರೇಸಿ ಕೇಳಿದ.

'ತಿಂಡಿ ಖಾಲಿ, ಕೇಸರಿಬಾತೈತೆ ಕೊಡ್ಲಾ?' ಎಂದಳು ಮಂಜಮ್ಮ. 'ಅಯ್ಯೋ ಬ್ಯಾಡಪ್ಪಾ ಬ್ಯಾಡ' ಅನ್ನೋತರ ತಲೆ ಆಡಿಸಿ ಕೈಮುಗಿದ ದುಬ್ಬೀರ. ಎಲ್ಲರೂ ಒಳಗೇ ನಕ್ಕರು.

ಸಂಗತ

ಪ್ರೀತಿಯ ಪಾಠ ಮೊದಲಾಗಲಿ

ಸುದೀರ್ಘ ಕಾಲದಿಂದ ಶಾಲೆಯಿಂದ ಹೊರಗುಳಿದಿದ್ದ ಮಕ್ಕಳಿಗೆ ಈಗ ಬೋಧನೆಗಿಂತ ಮೊದಲು ಬೇಕಿರುವುದು ಪ್ರೀತಿ ಮತ್ತು ಕಾಳಜಿ

• ರಾಜೇಂದ್ರ ಚೆನ್ನಿ

ಒಂದರಿಂದ ಐದನೇ ತರಗತಿವರೆಗಿನ ಮಕ್ಕಳಿಗೆ ಇದೇ 25ರಿಂದ ಶಾಲೆಗಳು ಆರಂಭವಾಗುತ್ತವೆ. ಸ್ವಲ್ಪ ಆತಂಕವೆನ್ನಿಸಿದರೂ ಎಲ್ಲರೂ ಖುಷಿಯಿಂದ ಇದನ್ನು ನಿರೀಕ್ಷಿಸುತ್ತಿದ್ದಾರೆ. ಒಂದು ತಲೆಮಾರಿನ ಮಕ್ಕಳು ಎರಡು ವರ್ಷ ಬಾಲ್ಯದಿಂದ, ಕಲಿಕೆಯಿಂದ ಹಾಗೂ ಅವರ ಹಕ್ಕಾಗಿರುವ ಅನೇಕ ಖುಷಿಗಳಿಂದ ವಂಚಿತರಾದರು ಎಂದು ನಮಗೆಲ್ಲ ಅನ್ನಿಸಿತ್ತು. ಈಗ ಶಾಲೆಗಳು ಆರಂಭವಾಗುವುದನ್ನು ಒಂದು ಸಮುದಾಯವಾಗಿ, ಪಾಲಕರಾಗಿ ಮತ್ತು ನಾಗರಿಕರಾಗಿ ಉತ್ಸಾಹ ಹಾಗೂ ನಿರೀಕ್ಷೆಯಿಂದ ಸ್ವಾಗತಿಸಬೇಕಿದೆ.

ಆದರೆ ಒಂದೆರಡು ಸಂಗತಿಗಳಿಂದ ಸ್ವಲ್ಪ ಆತಂಕವೆನ್ನಿಸಿದೆ. ಮೊದಲನೆಯದಾಗಿ, ಯಾವ ಕಾರಣಕ್ಕೂ ಪಠ್ಯದಲ್ಲಿ ಕಡಿತವಿಲ್ಲ, ಶಿಕ್ಷಕರು ರಜೆ ದಿನಗಳಂದೂ ಪಾಠ ಮಾಡಿ ಪಠ್ಯವನ್ನು ಪೂರೈಸಬೇಕು ಎಂದು ಶಿಕ್ಷಣ ಸಚಿವರು ಈ ಮೊದಲೇ ಹೇಳಿದ್ದಾರೆ. ಕಷ್ಟವಾದರೂ ಪಠ್ಯವನ್ನು ಪೂರೈಸುತ್ತೇವೆ ಎಂದು ಶಿಕ್ಷಕರು ತಮ್ಮ ಸಂಘಗಳ ಮೂಲಕ ಭರವಸೆ ನೀಡಿದ್ದಾರೆ. ಈ ಮನೋಸ್ಥಿತಿ ಹಾಗೂ ಧೋರಣೆಗಳನ್ನು ಮರುಪರಿಶೀಲಿಸಿಕೊಳ್ಳುವುದು ಅವಶ್ಯಕವಾಗಿದೆ.

ಅಂದಾಜು ಎರಡು ವರ್ಷಗಳಿಂದ ಶಾಲೆಗಳಿಂದ ದೂರವಿದ್ದ ಮಕ್ಕಳು ಎಲ್ಲಾ ಹಂತದಲ್ಲೂ ಕಲಿಕೆಯಲ್ಲಿ ಹಿನ್ನಡೆಯನ್ನು ಅನುಭವಿಸಿದ್ದಾರೆ ಎನ್ನುವುದು ಅನೇಕ ಪ್ರಮುಖ ವರದಿಗಳು ಹಾಗೂ ಸಮೀಕ್ಷೆಗಳಿಂದ ಖಚಿತವಾಗಿದೆ. ಅಕ್ಷರಗಳ ಅರಿವು, ಸಂಖ್ಯೆ ಲೆಕ್ಕಗಳ ಬಳಕೆ, ಏಕಾಗ್ರತೆ, ಕಲಿಯುವಿಕೆಯ ಕೌಶಲಗಳೆಲ್ಲವೂ ಗಾಬರಿಯಾಗುವಷ್ಟು ಕುಂಠಿತವಾಗಿವೆ. ಇನ್ನೂ ಹೆಚ್ಚಿನ ಆತಂಕದ ವಿಷಯವೆಂದರೆ, ಮಕ್ಕಳಿಗೆ ಶಾಲೆಯಲ್ಲಿ ಸಿಕ್ಕುವ ಅತಿ ಮುಖ್ಯ ಶಿಕ್ಷಣವೆಂದರೆ ಸಮಾಜೀಕರಣ. ಅಂದರೆ ಇತರರೊಂದಿಗೆ ಬೆರೆತು, ಮಾತನಾಡಿ, ಜೊತೆಗೂಡಿ ಕಲಿಯುವ ಬಹುಮುಖ್ಯ ಶಿಕ್ಷಣವಿದು. ಕೋವಿಡ್ ಪಿಡುಗಿನ ಕಾಲದಲ್ಲಿ ನಮ್ಮ ಸಮಾಜದ ಅಸಮಾನ ಸಾಮಾಜಿಕ ಸ್ಥಿತಿಗಳಿಂದಾಗಿ ಮಕ್ಕಳು ವಿವಿಧ ರೀತಿಯಲ್ಲಿ ಸಮಸ್ಯೆಗಳನ್ನು ಎದುರಿಸಿದ್ದಾರೆ.

ಆನ್‌ಲೈನ್ ಕಲಿಕೆ ಲಭ್ಯವಿದ್ದ ಮಕ್ಕಳಿಗೆ ಸ್ಮಾರ್ಟ್‌ಫೋನ್ ವ್ಯಸನ ಬಾಧಿಸುತ್ತಿದೆ. ಜೊತೆಗೆ ಒಬ್ಬಂಟಿತನದ ಪ್ರಜ್ಞೆ ಕೂಡ. ಆನ್‌ಲೈನ್ ಸೌಲಭ್ಯ ಇಲ್ಲದ ಮನೆಗಳಲ್ಲಿ ಬಡತನ, ಕೆಲಸ, ಮಧ್ಯಾಹ್ನದ ಬಿಸಿಯೂಟ ಇಲ್ಲದ ಕಾರಣಕ್ಕೆ ಅಪೌಷ್ಟಿಕತೆ, ಕುಟುಂಬದೊಳಗಿನ ಸಮಸ್ಯೆಗಳಿಂದ ಮಕ್ಕಳು ಮಂಕಾಗಿದ್ದಾರೆ. ಅವರ ಮನಸ್ಸುಗಳಿಗೆ ಹೇಳಿಕೊಳ್ಳಲಾಗದ ಗಾಯಗಳಾಗಿವೆ. ಅಭದ್ರತೆ, ಸಾಮರ್ಥ್ಯ ಇಲ್ಲವೆನ್ನುವ ಹೆದರಿಕೆಯಿಂದ ಶಾಲೆಗೆ ಬರುವ ಮಕ್ಕಳಿಗೆ ಸಿಕ್ಕಬೇಕಾದ ಮೊದಲ ಪಾಠವೆಂದರೆ ಪ್ರೀತಿ ಹಾಗೂ ಕಾಳಜಿಯದು. ಬೋಧನೆಗಿಂತ ಮೊದಲು ಕಲಿಯುವಿಕೆಯ ಪ್ರೇರಣೆ, ಉತ್ಸಾಹ ಮೂಡಿಸಬೇಕಿದೆ.

ಇದನ್ನು ಕರ್ನಾಟಕದ ಶಿಕ್ಷಕರು ಮಾಡಬಲ್ಲರು. ಅವರು ದೇಶದ ಅತ್ಯುತ್ತಮ ಶಿಕ್ಷಕರಾಗಿದ್ದಾರೆ. ಆದರೆ ಈಗಲೇ ಅವರೆದುರಿಗೆ ಪಠ್ಯ ವಸ್ತುವಿನ ಖಡ್ಗವನ್ನು ಝಳಪಿಸುವುದು ಬೇಡ. ವಿದ್ಯಾರ್ಥಿಗಳಿಗೆ ಕಲಿಯಬೇಕಾದ ಸಂಗತಿಗಳನ್ನು ತುರ್ತಾಗಿ ನುಂಗಿಸುವಂತೆ ಅವರ ಮೇಲೆ ಒತ್ತಡ ತರುವುದು ಬೇಡ. ನಮ್ಮ ಶಿಕ್ಷಣ ವ್ಯವಸ್ಥೆಯು ಅಧಿಕಾರಶಾಹಿಯ ಕೈಯಲ್ಲಿ ಸಿಲುಕಿ ದಿನದಿನಕ್ಕೂ ಅಮಾನವೀಯವಾಗುತ್ತಿದೆ. ಈ ಸೂಕ್ಷ್ಮಗಳು ಶಿಕ್ಷಣ ಇಲಾಖೆಗೆ ಅರ್ಥವಾಗುವುದಿಲ್ಲ. ಮಕ್ಕಳಿಗೆ ಬೇಕಾಗಿರುವುದು ಸಂಗಾತಿತನ, ಕಾಳಜಿ ಮತ್ತು ಆತ್ಮವಿಶ್ವಾಸ. ಪ್ರಾಥಮಿಕ ತರಗತಿಗಳಲ್ಲಿ ಅಕ್ಷರಜ್ಞಾನ ಹಾಗೂ ಅಂಕಿಸಂಖ್ಯೆ, ಲೆಕ್ಕಗಳ ಪ್ರಾಥಮಿಕ ಜ್ಞಾನ, ಜೊತೆಗೆ ಪದ್ಯಗಳು, ಕತೆಗಳು. ಈ ವಿಶೇಷ ಸಂದರ್ಭದಲ್ಲಿ ಆಪ್ತ ಸಲಹೆ ಮತ್ತು ತಂದೆತಾಯಿಗಳ ಜೊತೆಗಾರಿಕೆ ಕೂಡ.



ನಮ್ಮ ಶಿಕ್ಷಕರ ಮೇಲೆ ನಂಬಿಕೆಯಿಡುವುದನ್ನು ಸಚಿವರು ಮತ್ತು ಶಿಕ್ಷಣ ಇಲಾಖೆಯು ಕಲಿಯಬೇಕಿದೆ. ಜಗತ್ತೇ ಕಂಡರಿಯದ ಪಿಡುಗಿನಿಂದ ಚೇತರಿಸಿಕೊಳ್ಳುವ ಸಂದರ್ಭವಿದು. ಹಾಗೆಂದರೆ ಪಠ್ಯಕ್ರಮವೇ ಬೇಡವೆ? ಪರೀಕ್ಷೆಗಳೇ ಬೇಡವೆ? ಹಾಗಲ್ಲ, ಈಗ ಶಾಲೆಗಳಿಗೆ ಮರಳುತ್ತಿರುವ ಮಕ್ಕಳ ಮನೋಸ್ಥಿತಿಯೇ ಬೇರೆ. ಮೊದಲ ತಿಂಗಳಂತೂ ಅವರು ಕಳೆದುಕೊಂಡಿದ್ದ ಖುಷಿ, ಸ್ವಾತಂತ್ರ್ಯ ಇವುಗಳನ್ನು ಎಚ್ಚರಿಕೆಯಿಂದಾದರೂ ಸರಿ ಕೊಡಬೇಕಿದೆ. ಪಠ್ಯ ವಸ್ತುವನ್ನು ಗುಮ್ಮನನ್ನಾಗಿಸುವುದು ಬೇಡ. ಕಲಿಕೆಗೆ ಆಧಾರವಾದ ಮೂಲ ಕೌಶಲಗಳನ್ನು ತಾಳ್ಮೆಯಿಂದ ಹೇಳಿಕೊಡುವುದು ಈಗಿನ ಅವಶ್ಯಕತೆಯಾಗಿದೆ.

ಕೊರೊನಾ ಕಾಲದಲ್ಲಿ ಕೂಡ ನಮ್ಮ ಶಿಕ್ಷಕರು ತಮ್ಮ ಸೃಜನಶೀಲತೆಯನ್ನು ತೋರಿದ್ದಾರೆ. ಅವರಿಗೆ ಸ್ವಲ್ಪ ಸ್ವಾಯತ್ತತೆ, ಉತ್ತೇಜನ ನೀಡಬೇಕಿದೆ. ಕೋವಿಡ್ ಪಿಡುಗಿನಿಂದಾಗಿ ಮಕ್ಕಳ ಕಲಿಕೆಯಲ್ಲಿ ಉಂಟಾಗಿರುವ ಸಮಸ್ಯೆಗಳ ಬಗ್ಗೆ ಬಂದಿರುವ ವಿವಿಧ ಸಮೀಕ್ಷಾ ವರದಿಗಳ ಕುರಿತು ಗಂಭೀರ ಚರ್ಚೆಯಾದಂತೆ ಕಾಣುವುದಿಲ್ಲ. ಈ ವರದಿಗಳಲ್ಲಿರುವ ಸಂಗತಿಗಳು ಆತಂಕಕಾರಿಯಾಗಿವೆ. ಅನೇಕ ಮಕ್ಕಳು ತಾವು ಹಿಂದೆ ಕಲಿತಿದ್ದ ಅಕ್ಷರ ಹಾಗೂ ಸಂಖ್ಯೆಗಳನ್ನೇ ಮರೆತಿದ್ದಾರೆ. ಅನೇಕ ಮನೋವೈದ್ಯರ ಮಾತು ಹಾಗೂ ಬರಹಗಳ ಪ್ರಕಾರ, ಶಿಕ್ಷಣ ನೀಡುವ ಸಮಾಜೀಕರಣವಿಲ್ಲದೆ ಮಕ್ಕಳ ಮನಸ್ಸಿನ ಬೆಳವಣಿಗೆಗೆ ಆಗಿರುವ ಹಾನಿಯ ಸರಿಯಾದ ಅಂದಾಜು ಕೂಡ ನಮಗಿಲ್ಲ. ಇದೆಲ್ಲವನ್ನೂ ಸರಿಪಡಿಸಲು ಸಾಧ್ಯವಿದೆ. ಆದರೆ ನಮ್ಮ ಮನೋಭಾವ ಹಾಗೂ ಧೋರಣೆಗಳಲ್ಲಿ ಬದಲಾವಣೆ ಆದರೆ ಮಾತ್ರ ಇದು ಸಾಧ್ಯ. ನಾಗರಿಕ ಸಮುದಾಯವು ಶಿಕ್ಷಣದಲ್ಲಿಯಾದರೂ ಸಹಭಾಗಿಯಾಗುವಂತೆ ಯೋಚಿಸುವುದು, ಕ್ರಿಯಾಶೀಲವಾಗುವುದು ಅಸಾಧ್ಯವೆ?

ಶಿಕ್ಷಣವು ಒಂದು ಇಲಾಖೆಯೋ ಮಾನವ ಸಮಾಜದ ಅತ್ಯಮೂಲ್ಯವಾದ ವಿದ್ಯಮಾನವೋ ಎನ್ನುವ ಪ್ರಶ್ನೆ ಕೇಳುವ ಸಂದರ್ಭವಿದಾಗಿದೆ.

ವಾಚಕರ ವಾಣಿ

ಹಿರಿಯರ ಸಂಸ್ಕೃತಿಗೆ ವಿರುದ್ಧದ ನಡೆ

'ಗಾಜು ಒಡೆಯುವ ಮುನ್ನ...' ಎಂಬ ಡಾ. ಮುರಳೀಧರ ಕಿರಣಕೆರೆ ಅವರ ಲೇಖನ (ಸಂಗತ, ಅ. 19) ಅರ್ಥಪೂರ್ಣ. ಇಂದಿನ ಯುವಕರ ಮನಸ್ಸು ಅದೆಷ್ಟು ಹದಗೆಟ್ಟಿದೆಯೆಂದರೆ, ತಾವು ಕುಡಿದ ಮದ್ಯದ ಖಾಲಿ ಬಾಟಲಿಗಳನ್ನು ಹಾಗೇ ಬಿಸಾಡದೆ ಅವುಗಳನ್ನು ಒಡೆದು ಚೂರು ಚೂರು ಮಾಡಿ ಜನ ಓಡಾಡುವ ರಸ್ತೆ ಸೇರಿದಂತೆ ಎಲ್ಲೆಂದರಲ್ಲಿ ಬಿಸಾಡಿ ಹೋಗುತ್ತಿದ್ದಾರೆ.

ಈ ಮೊದಲು ಖಾಲಿ ಬಾಟಲಿಗಳನ್ನು ಗುಜರಿ ಅಂಗಡಿಯವರು ಹಣಕ್ಕೆ ತೆಗೆದುಕೊಳ್ಳುತ್ತಿದ್ದರು. ಆದರೆ ಈಗ ಗುಜರಿಯಲ್ಲಿ ಅವುಗಳನ್ನು ಖರೀದಿಸುತ್ತಿಲ್ಲ. ಹಾಗಾಗಿ ಅವನ್ನು ಆಯುವವರೂ ಇಲ್ಲ. ಓಡಾಡುವ ಹಾದಿಯಲ್ಲಿ ಮುಳ್ಳು ಹಾಕಬಾರದು ಎಂಬುದು ನಮ್ಮ ಹಿರಿಯರ ಸಂಸ್ಕೃತಿ. ಆದರೆ ಮುಂದೆ ಸತ್ಪ್ರಜೆಗಳಾಗಬೇಕಾದ ಯುವಶಕ್ತಿ ಇದಕ್ಕೆ ವಿರುದ್ಧವಾದ ನಡೆಯನ್ನು ರೂಢಿಸಿಕೊಳ್ಳುತ್ತಿರುವುದು ದುರದೃಷ್ಟಕರ. ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಇಂತಹ ನಡೆ ಸಲ್ಲದು.

ಗೊಲ್ಲರಹಳ್ಳಿ ಮಂಜುನಾಥ್, ಹೊನ್ನಾಳಿ

ಚಿನ್ನಕ್ಕಿಂತ ಹೆಚ್ಚಾಯ್ತು ಚಿನ್ನದಂಥ ಗುಣ

ತಮಿಳುನಾಡಿನಲ್ಲಿ ಕಸದ ತೊಟ್ಟಿಯಲ್ಲಿ ಸಿಕ್ಕ 100 ಗ್ರಾಂ ಚಿನ್ನದ ನಾಣ್ಯವನ್ನು ಪೌರಕಾರ್ಮಿಕ ಮಹಿಳೆಯೊಬ್ಬರು ವಾರಸುದಾರರಿಗೆ ಹಿಂತಿರುಗಿಸಿದ್ದನ್ನು ತಿಳಿದು (ಪ್ರ. ವಾ., ಅ. 21) 'ಕಾಲ ಇನ್ನೂ ಕೆಟ್ಟಿಲ್ಲ, ಒಳ್ಳೆಯ ಗುಣಗಳಿರುವವರು ಇರುವುದರಿಂದಲೇ ಇನ್ನೂ ಮಳೆ ಬೆಳೆ ಬರುತ್ತಿದೆ' ಎಂದು ಗ್ರಾಮಾಂತರ ಪ್ರದೇಶದಲ್ಲಿ ಜನ ಮಾತನಾಡುತ್ತಿದ್ದುದು ನೆನಪಾಯಿತು. ಎಲ್ಲ ಕಾಲಕ್ಕೂ ಎಲ್ಲ ಬಗೆಯ ಗುಣಗಳು ಇರುವವರೂ ಇದ್ದೇ ಇರುತ್ತಾರೆ ಎಂಬ ಮಾತು ಸಹ ಕೇಳಿಬರುತ್ತಿರುತ್ತದೆ. ಅಷ್ಟೇ ಅಲ್ಲ ಬಂಗಾರವನ್ನು ಕಸಕ್ಕೆ ಬಿಸಾಡುವವರೂ ಇರುತ್ತಾರೆ ಮತ್ತು ತನ್ನದಲ್ಲದ ವಸ್ತುವಿಗೆ ಆಸೆಪಡದ ಜನರೂ ನಮ್ಮ ಸಮಾಜದಲ್ಲಿದ್ದಾರೆ ಎಂಬುದಕ್ಕೆ ತಮಿಳುನಾಡಿನ ಮಹಿಳೆಯೇ ನಿದರ್ಶನ.

ನಗರ, ಪಟ್ಟಣಗಳ ಜನರು ಮಾಡಿದ ಹೊಲಸನ್ನು ತಮ್ಮ ಕೈಗಳಿಂದ ವಿಲೇವಾರಿ ಮಾಡಿ ನೈರ್ಮಲ್ಯಕ್ಕೆ ಕೊಡುಗೆ ನೀಡುವ ಪೌರಕಾರ್ಮಿಕರಿಗೆ ನಮ್ಮ ಸಮಾಜ ಎಷ್ಟರಮಟ್ಟಿಗೆ ಬೆಲೆ ಕೊಡುತ್ತದೆ ಎಂಬುದು ಬೇರೆ ಮಾತು. ಇಲ್ಲಿ ಚಿನ್ನಕ್ಕೆ ಇರುವ ಬೆಲೆಗಿಂತ ಮಹಿಳೆಯ ಪ್ರಾಮಾಣಿಕತೆಯ ತೂಕವೇ ಹೆಚ್ಚಾಗಿದೆ. ಬೇಡುವವ ಬಡವ, ಸಾಕೆಂದವನೇ ಶ್ರೀಮಂತ ಎನ್ನುವ ಶರಣರ ವಚನದಂತೆ ನಿಜಕ್ಕೂ ಆ ಮಹಿಳೆಯೇ ಅಪ್ಪಟ ಚಿನ್ನ ಎನ್ನಲು ಅಡ್ಡಿ ಇಲ್ಲ ಅಲ್ಲವೇ?

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

ಆಶಯ ಇರಲಿ, ಒತ್ತಡ ಸಲ್ಲ

ಕಳೆದ ವಿಶ್ವಕಪ್ ಪಂದ್ಯಾವಳಿಗಳಲ್ಲಿ ಭಾರತವು ಪಾಕಿಸ್ತಾನದ ಎದುರು ಸೋಲದೇ ಇರಬಹುದು. ಅದು ಭಾರತದ ಸಾಮರ್ಥ್ಯ, ಗೇಮ್ ಪ್ಲಾನ್. ಆದರೆ ಇದೊಂದು ಆಟ, ಇದರಲ್ಲಿ ಸೋಲು ಗೆಲುವು ಸಾಮಾನ್ಯ. ಅದು ಅಂದಿನ ಪಿಚ್‌ನ ಸ್ಥಿತಿ, ಬ್ಯಾಟಿಂಗ್ ಶಕ್ತಿ, ಕರಾರುವಾಕ್ ಬೌಲಿಂಗ್ ಮೇಲೆ ನಿರ್ಧಾರವಾಗುತ್ತದೆ. ಅಷ್ಟಕ್ಕೂ 'ಪಾಕಿಸ್ತಾನದ ಎದುರಿನ ಪಂದ್ಯ ಬೇರೆ ತಂಡಗಳ ಜೊತೆ ಆಡಿದಂತೆಯೇ ಹೊರತು ಅದರಲ್ಲೇನೂ ವಿಶೇಷವಿಲ್ಲ' ಎಂದು ಸ್ವತಃ ವಿರಾಟ್ ಕೊಹ್ಲಿ ಅವರೇ ಹೇಳಿದ್ದಾರೆ. ಕಳೆದ ಎಪ್ಪತ್ತು ವರ್ಷಗಳಿಂದ ಪಾಕಿಸ್ತಾನವು ಭಯೋತ್ಪಾದನೆಯನ್ನು ಪೋಷಿಸುತ್ತಲೇ ಬಂದಿದೆ. ಇಂತಹ ಹಿಂಸಾತ್ಮಕ ಚಟುವಟಿಕೆಗಳ ಕಾರಣಕ್ಕಾಗಿಯೇ ನ್ಯೂಜಿಲೆಂಡ್ ಮತ್ತು ಇಂಗ್ಲೆಂಡ್ ತಂಡಗಳು ಪಾಕಿಸ್ತಾನದಲ್ಲಿ ಆಯೋಜಿಸಿದ್ದ ಸರಣಿಯನ್ನು ಆಡಲು ನಿರಾಕರಿಸಿದವು. ಹಿಂದೊಮ್ಮೆ ಶ್ರೀಲಂಕಾ ಕ್ರಿಕೆಟಿಗರ ಮೇಲೆ ಇದೇ ಪಾಕಿಸ್ತಾನದಲ್ಲಿ ಬಾಂಬ್ ದಾಳಿ ನಡೆದಿದ್ದನ್ನು ಮರೆಯುವಂತಿಲ್ಲ.

ಮತ್ತೆ ಈ ಬಾರಿ ವಿಶ್ವಕಪ್‌ನಲ್ಲಿ ಪಾಕಿಸ್ತಾನ ನಮ್ಮ ದೇಶದ ವಿರುದ್ಧ ಸೆಣಸಲಿದೆ. ಭಾರತ– ಪಾಕಿಸ್ತಾನದ ನಡುವಿನ ಪಂದ್ಯವೆಂದರೆ ಕುತೂಹಲ ಇದ್ದೇ ಇರುತ್ತದೆ. ನಮ್ಮ ದೇಶ ಗೆಲ್ಲಲಿ ಎಂಬ ಕೋಟ್ಯಂತರ ಜನರ ಹಾರೈಕೆಯಿದೆ. ಆದರೆ ಇದೊಂದು ಆಟವಾಗಿರುವುದರಿಂದ ನಾವು ಸಮಚಿತ್ತದಿಂದ ನೋಡೋಣ. ನಮ್ಮ ತಂಡವೇ ಗೆಲ್ಲಲಿ ಎಂದು ಆಶಿಸೋಣ. ಆದರೆ ಒತ್ತಡ ಹಾಕುವುದು ಸಲ್ಲ.

ಅಂಬ್ರೀಶ್ ಎಸ್. ಹೈಯ್ಯಾಳ್, ಮುದನೂರ, ಹುಣಸಗಿ

ಬೈಗುಳದ ಹಿಂದಿದೆ ನಾನಾ ಉದ್ದೇಶ!

ರಾಜ್ಯದಲ್ಲಿ ನಡೆಯಲಿರುವ ಉಪಚುನಾವಣೆಯಲ್ಲಿ ರಾಜಕಾರಣಿಗಳು ಪರಸ್ಪರ ಬೈದಾಡಿಕೊಳ್ಳುವುದೇ ಚುನಾವಣಾ ವಿಷಯ ಎಂಬಂತೆ ಆಗಿರುವುದರ ಬಗ್ಗೆ ಸಂಪಾದಕೀಯ (ಪ್ರ.ವಾ., ಅ. 21) ಆತಂಕ ವ್ಯಕ್ತಪಡಿಸಿದೆ. 'ಜನರೇಕೆ ಬೈಯ್ಯುತ್ತಾರೆ' ಎಂಬುದನ್ನು ಅರಿಯುವ ಮೂಲಕ ಇಂದಿನ ರಾಜಕಾರಣಿಗಳ ಬೈಯ್ಯುವಿಕೆಯ ಉದ್ದೇಶವನ್ನು ನಾವು ಮನಗಾಣಬಹುದು.

ಯಾವುದೇ ಒಂದು ನುಡಿಸಮುದಾಯದಲ್ಲಿ ಎರಡು ಬಗೆಯ ವ್ಯಕ್ತಿಗಳು ತಮ್ಮ ನಿತ್ಯ ಜೀವನದ ಮಾತುಕತೆಗಳಲ್ಲಿ ಹೆಚ್ಚಾಗಿ ಬೈಗುಳದ ನುಡಿಗಳನ್ನು ಬಳಸುತ್ತಾರೆ. ಅನ್ನ, ಬಟ್ಟೆ, ವಸತಿ, ವಿದ್ಯೆ, ಉದ್ಯೋಗ ಮತ್ತು ಆರೋಗ್ಯದಿಂದ ವಂಚಿತರಾಗಿರುವ ಬಡವರು ತಮ್ಮ ಮೈಮನದ ಆತಂಕ, ಹತಾಶೆ ಮತ್ತು ಸಂಕಟವನ್ನು ಹೊರಹಾಕಲು ಬೈಯ್ಯುವಿಕೆಯಲ್ಲಿ ತೊಡಗುತ್ತಾರೆ. ಜಾತಿಬಲ, ಹಣಬಲ, ತೋಳ್ಬಲ ಮತ್ತು ಆಡಳಿತದ ಗದ್ದುಗೆಯ ಬಲವುಳ್ಳ ಸಿರಿವಂತರು ತಮ್ಮ ಆಸ್ತಿಪಾಸ್ತಿಗಳನ್ನು ಕಾಪಾಡಿಕೊಳ್ಳಲು ಮತ್ತು ಅಧಿಕಾರವು ತಮ್ಮಿಂದ ಕೈತಪ್ಪಿಹೋಗದಂತೆ ಉಳಿಸಿಕೊಳ್ಳಲು ತಾವು ಯಾರನ್ನು ಎದುರಾಳಿಗಳೆಂದು ಭಾವಿಸಿರುತ್ತಾರೆಯೋ ಅಂತಹವರ ತೇಜೋವಧೆ ಮಾಡಲು ಬೈಗುಳವನ್ನು ಬಳಸುತ್ತಾರೆ. 'ಗೌಡ ಊರ ಮುಂದೆ ಬೈದರೆ, ತೋಟಿ ಒಲೆ ಮುಂದೆ ಬೈದ' ಎಂಬ ಗಾದೆಯು ಬಡವರು ತಮ್ಮ ಕುಟುಂಬದ ನೆಲೆಯಲ್ಲಿ ಮತ್ತು ಉಳ್ಳವರು ಸಾರ್ವಜನಿಕ ರಂಗದಲ್ಲಿ ಬೈಯ್ಯುವಿಕೆಯಲ್ಲಿ ತೊಡಗಿರುವುದನ್ನು ಸೂಚಿಸುತ್ತದೆ.

ಉಳ್ಳವರಿಗೆ ತಾವು ಯಾವುದೇ ಬಗೆಯ ಬೈಗುಳವನ್ನಾಡಿದರೂ ಅದನ್ನು ಅರಗಿಸಿಕೊಳ್ಳಬಲ್ಲೆವೆಂಬ ನಂಬಿಕೆಯಿರುತ್ತದೆ. ಇಂತಹವರಿಗೆ ಕಾನೂನು ಕಟ್ಟಲೆಗಳ ಬಗ್ಗೆ ಕಿಂಚಿತ್ತಾದರೂ ಗೌರವ ಇರುವುದಿಲ್ಲ. ಸಾರ್ವಜನಿಕ ರಂಗದಲ್ಲಿ ಈಗ ಕೇಳಿಬರುತ್ತಿರುವ ಇಂತಹ ಬೈಗುಳಗಳು ಏನನ್ನು ಸಂಕೇತಿಸುತ್ತಿವೆಯೆಂದರೆ, 'ಹಲವಾರು ಧರ್ಮಗಳು, ನೂರೆಂಟು ಜಾತಿಗಳ ಹೆಣಿಗೆಯಿಂದ ಕೂಡಿರುವ ನಮ್ಮ ದೇಶದ ಜನಸಮುದಾಯ ಪರಸ್ಪರ ಪ್ರೀತಿ, ಕರುಣೆ ಮತ್ತು ಮೈತ್ರಿಯಿಂದ ಜತೆಗೂಡಿ ನೆಮ್ಮದಿಯಿಂದ ಬಾಳುವಂತಾಗಲೆಂಬ ಯಾವೊಂದು ಆಸೆಯೂ ನಾಡನ್ನು ಆಳುವವರಲ್ಲಿ ಇಲ್ಲ'.

ಸಿ.ಪಿ.ನಾಗರಾಜ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಕ್ಕಳಿಗೆ ಸದ್ಯದಲ್ಲೇ ಕೋವಿಡ್ ಲಸಿಕೆ

ದೇಶದೆಲ್ಲೆಡೆ ಶಾಲೆಗಳು ಆರಂಭವಾಗುತ್ತಿದ್ದು, ಲಸಿಕೆ ಅಭಿಯಾನದಿಂದ ಹೊರಗುಳಿದಿರುವ ಮಕ್ಕಳ ಪೋಷಕರಲ್ಲಿ ಆತಂಕ ಇದೆ. ಆದರೆ ಮಕ್ಕಳಿಗೆ ಲಸಿಕೆ ಹಾಕುವ ಸಮಯ ದೂರವಿಲ್ಲ. ಸದ್ಯದಲ್ಲೇ ಅದನ್ನು ಕಾರ್ಯರೂಪಕ್ಕೆ ತರಲು ಸರ್ಕಾರ ಸಿದ್ಧತೆ ಮಾಡಿಕೊಂಡಿದೆ. ಮಕ್ಕಳಿಗೆ ಕೋವಿಡ್ ಲಸಿಕೆ ಹಾಕುವ ಕಾರ್ಯ ಅಕ್ಟೋಬರ್ ಕೊನೆಯ ವಾರ ಅಥವಾ ನವೆಂಬರ್ ಮೊದಲ ವಾರದಲ್ಲಿ ಆರಂಭವಾಗಬಹುದು ಎಂದು ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷ ಡಾ. ಎನ್.ಕೆ ಅರೋರಾ ಹೇಳಿದ್ದಾರೆ.

18 ವರ್ಷದೊಳಗಿನ 44 ಕೋಟಿ ಮಕ್ಕಳನ್ನು ಗುರುತಿಸಲಾಗಿದೆ. ಈ ಪೈಕಿ 12ರಿಂದ 17 ವರ್ಷದೊಳಗಿನ 12 ಕೋಟಿ ಮಕ್ಕಳಿದ್ದಾರೆ. ಕಾಯಿಲೆ ಅಥವಾ ಅಸ್ವಸ್ಥತೆಯಿಂದ ಬಳಲುತ್ತಿರುವ ಸುಮಾರು 30 ಲಕ್ಷ ಮಕ್ಕಳು ಮೊದಲ ಹಂತದಲ್ಲಿ ಲಸಿಕೆ ಪಡೆಯಲಿದ್ದಾರೆ. ಆರೋಗ್ಯವಂತ ಮಕ್ಕಳಿಗೆ 2022ರ ಮೊದಲ ತ್ರೈಮಾಸಿಕದಲ್ಲಿ ಲಸಿಕೆ ನೀಡಲಾಗುವುದು. ಮೊದಲ ಹಂತದಲ್ಲಿ 12–17 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ನೀಡಲಾಗುತ್ತದೆ. ಭಾರತದಲ್ಲಿ ಮಕ್ಕಳಿಗೆ ನೀಡುವ ಎರಡು ಲಸಿಕೆಗಳ ತುರ್ತು ಬಳಕೆಗೆ ಅನುಮೋದನೆ ನೀಡಲಾಗಿದೆ. ಝೈಕೋವ್-ಡಿ ಹಾಗೂ ಕೋವ್ಯಾಕ್ಸಿನ್ ಲಸಿಕೆಗಳು ಅನುಮೋದನೆ ಪಡೆದಿವೆ. ಇನ್ನೂ ಕೆಲವು ಲಸಿಕೆಗಳು ಅಭಿವೃದ್ಧಿಯ ಹಂತದಲ್ಲಿದ್ದು, ಮುಂದಿನ ವರ್ಷದ ಹೊತ್ತಿಗೆ ಅವು ಲಭ್ಯವಾಗುವ ನಿರೀಕ್ಷೆಯಿದೆ.

ಝೈಕೋವ್-ಡಿ: ಗುಜರಾತ್ ಮೂಲದ ಝೈಡಸ್ ಕ್ಯಾಡಿಲಾ ಸಂಸ್ಥೆ ಅಭಿವೃದ್ಧಿಪಡಿಸಿರುವ ಝೈಕೋವ್-ಡಿ ಲಸಿಕೆಯನ್ನು 12 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳಿಗೆ ಅನುಮೋದಿಸಲಾಗಿದೆ. ಈ ಲಸಿಕೆಯನ್ನು ಮೊದಲ ಹಂತ ದಲ್ಲಿ ಬಳಸಲಾಗುತ್ತದೆ. ಝೈಡಸ್ ಸಂಸ್ಥೆಯು ಮೊದಲ ಹಂತದಲ್ಲಿ 40 ಲಕ್ಷ ಡೋಸ್‌ಗಳನ್ನು ಪೂರೈಸುವ ನಿರೀಕ್ಷೆ ಯಿದೆ. ಮುಂದಿನ ದಿನಗಳಲ್ಲಿ ಸಂಸ್ಥೆಯು ಪ್ರತೀ ತಿಂಗಳು 1 ಕೋಟಿ ಡೋಸ್ ಪೂರೈಸಲಿದೆ. ಡಿಸೆಂಬರ್ ಹೊತ್ತಿಗೆ 4–5 ಕೋಟಿ ಡೋಸ್ ಪೂರೈಸುವ ಅಂದಾಜು ಇದೆ.

ಇದು ಸೂಜಿ ರಹಿತ ಲಸಿಕೆಯಾಗಿದ್ದು, ಮೂರು ಡೋಸ್ ನೀಡಲಾಗುತ್ತದೆ. ಇದು ಮಕ್ಕಳಿಗೆ ನೀಡ ಬಹುದಾದ ವಿಶ್ವದ ಮೊದಲ ಕೋವಿಡ್ ಲಸಿಕೆಯಾಗಿದೆ.

ಕೋವ್ಯಾಕ್ಸಿನ್: ಭಾರತವು, 2 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳಿಗೆ ಕೋವಿಡ್ ಲಸಿಕೆ ನೀಡಲು ಅನುಮೋದನೆ ನೀಡಿದ ಮೊದಲ ದೇಶ ಎನಿಸಿದೆ. ಕೇಂದ್ರ ಸರ್ಕಾರವು ಅಕ್ಟೋಬರ್ 12ರಂದು ಭಾರತ್ ಬಯೊಟೆಕ್ ಸಂಸ್ಥೆ ಅಭಿವೃದ್ಧಿಪಡಿಸಿದ ಕೋವ್ಯಾಕ್ಸಿನ್ ಲಸಿಕೆಯ ತುರ್ತು ಬಳಕೆಗೆ ಒಪ್ಪಿಗೆ ನೀಡಿತ್ತು. ಇದನ್ನು 2ರಿಂದ 18 ವರ್ಷದೊಳಗಿನ ಮಕ್ಕಳಿಗೆ ನೀಡಬಹುದು. ಕೊನೆಯ ಹಂತದ ಕ್ಲಿನಿಕಲ್ ಪ್ರಯೋಗದ ವರದಿಗಳು ಇನ್ನಷ್ಟೇ ಪ್ರಕಟವಾಗಬೇಕಿವೆ.

ಕೊವೊವ್ಯಾಕ್ಸ್: ಮಕ್ಕಳಿಗೆ ನೀಡುವುದಕ್ಕಾಗಿ ಅಭಿವೃದ್ಧಿ ಹಂತದಲ್ಲಿರುವ ಮೂರನೇ ಲಸಿಕೆ ಕೊವೊವ್ಯಾಕ್ಸ್. ಅಮೆರಿಕದ ನೊವೊವ್ಯಾಕ್ಸ್ ಸಂಸ್ಥೆಯು ಭಾರತದ ಮಕ್ಕಳಿಗಾಗಿ ಇದನ್ನು ಅಭಿವೃದ್ಧಿಪಡಿಸುತ್ತಿದ್ದು, ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಘಟಕದಲ್ಲಿ ತಯಾರಿಕೆ ಆಗಲಿದೆ. ತಾಂತ್ರಿಕವಾಗಿ ಎನ್‌ವಿಎಕ್ಸ್–ಸಿಒವಿ2373 ಎಂದು ಹೆಸರಿಸಲಾಗಿದೆ. ಇದು ಪ್ರೊಟೀನ್ ಆಧಾರಿತ ಲಸಿಕೆಯಾಗಿದೆ.

ಕಾರ್ಬಿವ್ಯಾಕ್ಸ್: ಬಯೊಲಾಜಿಕಲ್ ಇ ಸಂಸ್ಥೆ ಅಭಿವೃದ್ಧಿಪಡಿಸುತ್ತಿರುವ ಮತ್ತೊಂದು ಲಸಿಕೆ ಕಾರ್ಬಿವ್ಯಾಕ್ಸ್. ಕೆಲವು ಷರತ್ತುಗಳೊಂದಿಗೆ 5-18 ವರ್ಷ ವಯಸ್ಸಿನ ಮಕ್ಕಳ ಮೇಲೆ ವೈದ್ಯಕೀಯ ಪ್ರಯೋಗಗಳನ್ನು ನಡೆಸಲು ಇದೇ ಸೆಪ್ಟೆಂಬರ್‌ನಲ್ಲಿ ಅನುಮತಿ ನೀಡಲಾಗಿದೆ. ಇದರ ಕ್ಲಿನಿಕಲ್ ಪ್ರಯೋಗಗಳು ದೇಶದ 10 ಸ್ಥಳಗಳಲ್ಲಿ ನಡೆಯುತ್ತಿವೆ.

ಕೋವ್ಯಾಕ್ಸಿನ್‌ಗೆ ಮಾನ್ಯತೆ: ಪರಿಶೀಲನೆ

ಭಾರತ್ ಬಯೊಟೆಕ್‌ನ ಕೋವ್ಯಾಕ್ಸಿನ್ ಲಸಿಕೆ ದೇಶದಲ್ಲಿ ಕಳೆದ 9 ತಿಂಗಳಿಂದ ಬಳಕೆಯಲ್ಲಿದೆ. ಆದರೆ ಜಾಗತಿಕವಾಗಿ ಅನುಮೋದನೆ ಇನ್ನೂ ದೊರೆತಿಲ್ಲ. ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ತಾಂತ್ರಿಕ ಸಲಹಾ ಸಮಿತಿಯು ಕೋವ್ಯಾಕ್ಸಿನ್‌ಗೆ ಅನುಮೋದನೆ ನೀಡುವ ಕುರಿತು ಚರ್ಚಿಸಲು ಇದೇ 26ರಂದು ಸಭೆ ಸೇರಲಿದೆ. ಸಂಸ್ಥೆಯ ಮುಖ್ಯ ವಿಜ್ಞಾನಿ ಸೌಮ್ಯ ಸ್ವಾಮಿನಾಥನ್ ಅವರು ಇದನ್ನು ಟ್ವೀಟ್ ಮಾಡಿ ತಿಳಿಸಿದ್ದಾರೆ.

ಕೋವ್ಯಾಕ್ಸಿನ್ ಕುರಿತು ಶಿಫಾರಸುಗಳನ್ನು ಮಾಡಲು ಡಬ್ಲ್ಯುಎಚ್‌ಒ ತಜ್ಞರ ಸಲಹಾ ಗುಂಪು (ಎಸ್‌ಎಜಿಇ) ಇದೇ 6ರಂದು ಸಭೆ ನಡೆಸಿತ್ತು. ಡಬ್ಲ್ಯುಎಚ್‌ಒ ಮತ್ತು ಸ್ವತಂತ್ರ ತಜ್ಞರ ತಾಂತ್ರಿಕ ಸಲಹಾ ಸಮಿತಿಗಳು ಸಹ ಅನುಮೋದನೆ ನೀಡುವ ಮುನ್ನ ಲಸಿಕೆ ಗುಣಮಟ್ಟ, ಸುರಕ್ಷತೆ ಮತ್ತು ಪರಿಣಾಮಕಾರಿಯೇ ಎಂದು ನಿರ್ಧರಿಸುತ್ತವೆ. ಲಸಿಕೆ ತಯಾರಕರು ಸಲ್ಲಿಸಿದ ದತ್ತಾಂಶಗಳನ್ನು ಡಬ್ಲ್ಯುಎಚ್‌ಒ ತಜ್ಞರು ಪರಿಶೀಲಿಸುತ್ತಿದ್ದಾರೆ.

ಭಾರತದ ಔಷಧ ನಿಯಂತ್ರಕರಿಂದ ತುರ್ತು ಬಳಕೆ ಅನುಮೋದನೆ ಪಡೆದ ಮೂರು ಕೋವಿಡ್-19 ಲಸಿಕೆಗಳಲ್ಲಿ ಕೋವ್ಯಾಕ್ಸಿನ್ ಒಂದಾಗಿದೆ.

ಕೋವ್ಯಾಕ್ಸಿನ್ ಪಾಲು ಶೇ 11.44: ದೇಶದಲ್ಲಿ ಇಲ್ಲಿಯವರೆಗೆ ನೀಡಲಾದ 100 ಕೋಟಿ ಡೋಸ್‌ಗಳಲ್ಲಿ ಕೋವಿಶೀಲ್ಡ್ ಪಾಲು ದೊಡ್ಡದು. ಶೇ 88.46ರಷ್ಟು ಡೋಸ್‌ಗಳನ್ನು ಕೋವಿಶೀಲ್ಡ್ ಪೂರೈಸಿದೆ. ಕೊವಿಶೀಲ್ಡ್‌ನ ತಯಾರಿಕೆ ಹಾಗೂ ಪೂರೈಕೆ ಮಟ್ಟಕ್ಕೆ ಸಾಟಿಯಾಗುವಂತಹ ಸಾಮರ್ಥ್ಯವನ್ನು ಕೋವ್ಯಾಕ್ಸಿನ್ ಹೊಂದಿಲ್ಲ. ಹೀಗಾಗಿ ಕೋವ್ಯಾಕ್ಸಿನ್ ಪಾಲು ಶೇ 11.44ರಷ್ಟು ಮಾತ್ರ. ರಷ್ಯಾ ನಿರ್ಮಿತ ಸ್ಪುಟ್ನಿಕ್–ವಿ ಲಸಿಕೆ ಬಳಕೆಯು ಅಷ್ಟೇನೂ ಇಲ್ಲ. ಅದರ ಪ್ರಮಾಣ ಶೇ 0.10ರಷ್ಟು ಮಾತ್ರ ಎಂದು ಕೇಂದ್ರ ಸರ್ಕಾರ ರೂಪಿಸಿರುವ ಕೋವಿನ್ ತಾಣ ತಿಳಿಸಿದೆ.

ಕೋವಿಡ್–19 ಸಾಂಕ್ರಾಮಿಕದ ವಿರುದ್ಧ ಇದೇ ಜನವರಿ 16ರಂದು ಆರಂಭಿಸಲಾದ ಲಸಿಕೆ ಅಭಿಯಾನವು ಗುರುವಾರ ಮಹತ್ವದ ಮೈಲಿಗಲ್ಲೊಂದನ್ನು ದಾಟಿದೆ. ಲಸಿಕೆಯ ಒಟ್ಟು ನೂರು ಕೋಟಿ ಡೋಸ್‌ಗಳನ್ನು ಅರ್ಹರಿಗೆ ಹಾಕಲಾಗಿದೆ. ಇದೊಂದು ಬಹುದೊಡ್ಡ ಸಾಧನೆ ಎಂದು ಸರ್ಕಾರ ಹೇಳಿಕೊಂಡಿದೆ. ಆದರೆ, ಕೋವಿಡ್ ವಿರುದ್ಧದ ಹೋರಾಟದಲ್ಲಿ ಇನ್ನೂ ಬಹು ದೂರ ಕ್ರಮಿಸಬೇಕಿದೆ ಎಂಬುದು ವಾಸ್ತವ. ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಶೇ 37ರಷ್ಟು ಜನರು ಕೋವಿಡ್ ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದುಕೊಂಡಿದ್ದಾರೆ. ವಿಶ್ವದ ಬಹುತೇಕ ಪ್ರಮುಖ ರಾಷ್ಟ್ರಗಳಲ್ಲಿ ಎರಡೂ ಡೋಸ್ ಪಡೆದವರ ಪ್ರಮಾಣ ಶೇ 50ಕ್ಕಿಂತಲೂ ಹೆಚ್ಚು ಇದೆ. ಆದರೆ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆದವರ ಪ್ರಮಾಣ ಶೇ 21ರಷ್ಟು. ಇನ್ನೂ ಶೇ 79ರಷ್ಟು ಜನರಿಗೆ ಎರಡನೇ ಡೋಸ್ ನೀಡಬೇಕಿದೆ



ನೂರು ಕೋಟಿ ಡೋಸ್ ಸಂಭ್ರಮದ ಭಾಗವಾಗಿ ಸ್ಪೈಸ್‌ಜೆಟ್ ಏರ್‌ಲೈನ್ಸ್ ವಿಮಾನಯಾನ ಸಂಸ್ಥೆಯು ಕೆಲವು ವಿಮಾನಗಳ ಹೊರಭಾಗದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಆರೋಗ್ಯ ಕಾರ್ಯಕರ್ತರ ಚಿತ್ರ ಅಳವಡಿಸಿದೆ —ಪಿಟಿಐ ಚಿತ್ರ

100 ಕೋಟಿ ಲಸಿಕೆ ಹೆಗ್ಗಳಿಕೆ

(ಎರಡೂ ಡೋಸ್ ಆಗಿರುವವರ ಪ್ರಮಾಣ / ಎರಡನೇ ಡೋಸ್ ಪಡೆಯಬೇಕಿರುವವರ ಪ್ರಮಾಣ / ಮೊದಲ ಡೋಸ್ ಹಾಕಿಸಿಕೊಂಡವರ ಪ್ರಮಾಣ / ಒಂದೂ ಡೋಸ್ ಪಡೆಯದವರ ಪ್ರಮಾಣ)

	ಎರಡೂ ಡೋಸ್ ಆಗಿರುವವರ ಪ್ರಮಾಣ	ಎರಡನೇ ಡೋಸ್ ಪಡೆಯಬೇಕಿರುವವರ ಪ್ರಮಾಣ	ಮೊದಲ ಡೋಸ್ ಹಾಕಿಸಿಕೊಂಡವರ ಪ್ರಮಾಣ	ಒಂದೂ ಡೋಸ್ ಪಡೆಯದವರ ಪ್ರಮಾಣ
ನ್ಯೂಜಿಲೆಂಡ್	59%	41%	74%	26%
ಅಮೆರಿಕ	56%	44%	65%	35%
ಬ್ರೆಜಿಲ್	50%	50%	73%	27%
ಜರ್ಮನಿ	65%	35%	68%	32%
ಬ್ರಿಟನ್	67%	33%	73%	27%
ಭಾರತ	21%	79%	51%	49%
ಆಸ್ಟ್ರೇಲಿಯಾ	58%	42%	72%	28%
ವಿಶ್ವ	37%	63%	48%	52%

- ಭಾರತದ ಶೇ 21ರಷ್ಟು ಜನರು ಎರಡೂ ಡೋಸ್‌ಗಳನ್ನು ಹಾಕಿಸಿಕೊಂಡಿದ್ದಾರೆ. ಶೇ 51ರಷ್ಟು ಜನರು ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ
- ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 51ರಷ್ಟು ಜನರು ಕನಿಷ್ಠ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. ಆದರೆ ಶೇ 49ರಷ್ಟು ಜನರಿಗೆ ಇನ್ನೂ ಮೊದಲ ಡೋಸ್ ದೊರೆತಿಲ್ಲ
- ಎರಡೂ ಡೋಸ್ ಪಡೆದುಕೊಂಡಿರುವವರ ಪ್ರಮಾಣ ಶೇ 21 ಮಾತ್ರವಾಗಿರುವ ಕಾರಣ, ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 79ರಷ್ಟು ಜನರಿಗೆ ಕೋವಿಡ್ ಲಸಿಕೆಯ ರಕ್ಷಾಕವಚ ಇನ್ನೂ ದೊರೆತಿಲ್ಲ

ಎಲ್ಲರಿಗೂ ಲಸಿಕೆಗೆ ಬೇಕು 479 ದಿನಗಳು



ಭಾರತದ ಒಟ್ಟು ಜನಸಂಖ್ಯೆ 136 ಕೋಟಿಗೂ ಹೆಚ್ಚು. ಈ ಎಲ್ಲಾ ಜನರಿಗೂ ಕೋವಿಡ್ ಲಸಿಕೆಯನ್ನು ಪೂರ್ಣ ಪ್ರಮಾಣದಲ್ಲಿ ನೀಡಲು ಒಟ್ಟು 272 ಕೋಟಿ ಡೋಸ್‌ಗಳ ಅವಶ್ಯಕತೆ ಇದೆ. ಆದರೆ ಈಗ 100 ಕೋಟಿ ಡೋಸ್‌ಗಳನ್ನಷ್ಟೇ ನೀಡಲಾಗಿದೆ. ಇನ್ನೂ 172 ಕೋಟಿ ಡೋಸ್‌ಗಳನ್ನು ನೀಡಬೇಕಿದೆ. ದೇಶದಲ್ಲಿ ಲಸಿಕೆ ಕಾರ್ಯಕ್ರಮ ಆರಂಭವಾಗಿ ಈಗ 279 ದಿನ ಕಳೆದಿದೆ. ಇದೇ ವೇಗದಲ್ಲಿ ದೇಶದ ಎಲ್ಲರಿಗೂ ಲಸಿಕೆಯ ಎರಡೂ ಡೋಸ್ ನೀಡಲು ಇನ್ನೂ 479 ದಿನ ಬೇಕಾಗುತ್ತದೆ. ಅಂದರೆ ಎಲ್ಲರಿಗೂ ಲಸಿಕೆ ನೀಡಲು ಇನ್ನೂ ಒಂದು ವರ್ಷ ಮತ್ತು ನಾಲ್ಕು ತಿಂಗಳು ಬೇಕಾಗುತ್ತದೆ.

ಎಲ್ಲರಿಗೂ ಎರಡು ಡೋಸ್ ನೀಡಲು ಒಟ್ಟು 272 ಕೋಟಿ ಡೋಸ್ ಅಗತ್ಯವಿದೆ. ಆದರೆ ಲಸಿಕೆ ಪೋಲಿನ ಪ್ರಮಾಣವನ್ನು ಇದಕ್ಕೆ ಸೇರಿಸಿಲ್ಲ. ದೇಶದಲ್ಲಿ ಈಗ ಶೇ 6ರಷ್ಟು ಲಸಿಕೆ ಪೋಲಾಗುತ್ತಿದೆ. ಇದನ್ನು ಅಗತ್ಯವಿರುವ ಒಟ್ಟು ಡೋಸ್‌ಗಳಿಗೆ ಸೇರಿಸಿದರೆ, ಎಲ್ಲರಿಗೂ ಎರಡು ಡೋಸ್ ನೀಡಲು 288 ಕೋಟಿ ಡೋಸ್‌ಗಳಷ್ಟು ಲಸಿಕೆ ಬೇಕಾಗುತ್ತದೆ.

ದೇಶದ ಒಟ್ಟು ಜನಸಂಖ್ಯೆ	136+ ಕೋಟಿ
ಎಲ್ಲರಿಗೂ ನೀಡಲು ಬೇಕಿರುವ ಡೋಸ್‌ಗಳ ಸಂಖ್ಯೆ	272 ಕೋಟಿ
ಈಗ ನೀಡಲಾಗಿರುವ ಡೋಸ್‌ಗಳ ಸಂಖ್ಯೆ	100 ಕೋಟಿ
ಇನ್ನೂ ನೀಡಬೇಕಿರುವ ಡೋಸ್‌ಗಳ ಸಂಖ್ಯೆ	172 ಕೋಟಿ

ಆಧಾರ: ವಿಶ್ವ ಆರೋಗ್ಯ ಸಂಸ್ಥೆ, ಅವರ್‌ವರ್ಲ್ಡ್‌ಇನ್‌ಡಾಟಾ.ಕಾಂ, ಕೇಂದ್ರ ಆರೋಗ್ಯ ಸಚಿವಾಲಯ

ಆತಂಕದಿಂದ ಭರವಸೆಯತ್ತ ಪ್ರಯಾಣ: ಮೋದಿ



ನವದೆಹಲಿ: 'ಭಾರತವು ಲಸಿಕೆ ಹಾಕಲು ಆರಂಭಿಸಿದ ನಂತರದ ಸುಮಾರು 9 ತಿಂಗಳಲ್ಲಿ 100 ಕೋಟಿ ಡೋಸ್‌ಗಳ ಲಸಿಕೆ ನೀಡಿಕೆಯನ್ನು ಪೂರ್ಣಗೊಳಿಸಿದೆ. ಕೋವಿಡ್-19 ನಿಗ್ರಹದಲ್ಲಿ, ವಿಶೇಷವಾಗಿ 2020ರ ಆರಂಭದಲ್ಲಿದ್ದ ಪರಿಸ್ಥಿತಿಯನ್ನು ನಾವು ನೆನಪಿಸಿಕೊಂಡರೆ ಇದೊಂದು ಅದ್ಭುತವಾದ ಪ್ರಯಾಣವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಕೋವಿಡ್ ವಿರುದ್ಧದ ಲಸಿಕೆ ಅಭಿಯಾನದಲ್ಲಿ ನೂರು ಕೋಟಿ ಲಸಿಕೆ ನೀಡಿಕೆಯ ಮಹತ್ವದ ಗುರಿ ದಾಟಿದ ಗುರುವಾರ ಅವರು ವಿಶೇಷ ಲೇಖನವೊಂದರಲ್ಲಿ ಹೀಗೆ ಹೇಳಿದ್ದಾರೆ.

'ಮನುಕುಲವು 100 ವರ್ಷಗಳ ನಂತರ ಇಂತಹ ಸಾಂಕ್ರಾಮಿಕ ರೋಗವನ್ನು ಎದುರಿಸುತ್ತಿದೆ ಮತ್ತು ಈ ವೈರಾಣುವಿನ ಬಗ್ಗೆ ಯಾರಿಗೂ ಹೆಚ್ಚು ತಿಳಿದಿರಲಿಲ್ಲ. ಅಪರಿಚಿತ ಮತ್ತು ಅದೃಶ್ಯ ಶತ್ರು ವೇಗವಾಗಿ ಪರಿವರ್ತಿತವಾಗುತ್ತಿದ್ದಂತೆಯೇ ಪರಿಸ್ಥಿತಿ ಎಷ್ಟು ಅನಿರೀಕ್ಷಿತವಾಗಿತ್ತು ಎಂಬುದನ್ನು ನಾವು ಮರೆತಿಲ್ಲ. ಆತಂಕದಿಂದ ಭರವಸೆಯೆಡೆಗೆ ಪ್ರಯಾಣಿಸಿದ್ದೇವೆ. ನಮ್ಮ ರಾಷ್ಟ್ರವು ಶಕ್ತಿಯುತವಾಗಿ ಹೊರಹೊಮ್ಮಿದೆ' ಎಂದು ಅವರು ಸಂಭ್ರಮ ವ್ಯಕ್ತಪಡಿಸಿದ್ದಾರೆ.

ಭಾಗವಹಿಸುವಿಕೆಯ ಉತ್ಸಾಹದಲ್ಲಿ ನಾಗರಿಕರು ಮತ್ತು ಸರ್ಕಾರವು ಒಂದು ಸಾಮಾನ್ಯ ಗುರಿಯೊಂದಿಗೆ ಒಗ್ಗೂಡಿದರೆ ಭಾರತವು ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಭಾರತದ ಲಸಿಕೆ ಅಭಿಯಾನ ಒಂದು ಉದಾಹರಣೆಯಾಗಿದೆ. ಭಾರತವು ತನ್ನ ಲಸಿಕೆ ಕಾರ್ಯಕ್ರಮವನ್ನು ಪ್ರಾರಂಭಿಸಿದಾಗ, ಅನೇಕರು 130 ಕೋಟಿ ಭಾರತೀಯರ ಸಾಮರ್ಥ್ಯಗಳನ್ನು ಅನುಮಾನಿಸಿದರು. ಭಾರತವು ಲಸಿಕೆ ನೀಡಲು 3-4 ವರ್ಷಗಳನ್ನು ತೆಗೆದುಕೊಳ್ಳುತ್ತದೆ ಎಂದು ಕೆಲವರು ಹೇಳಿದರು. ಲಸಿಕೆ ಹಾಕಿಸಿಕೊಳ್ಳಲು ಜನರು ಮುಂದೆ ಬರುವುದಿಲ್ಲ ಎಂದು ಇನ್ನೂ ಕೆಲವರು ಹೇಳಿದರು. ಲಸಿಕೆ ನೀಡಿಕೆ ಪ್ರಕ್ರಿಯೆಯಲ್ಲಿ ಸಂಪೂರ್ಣ ತಪ್ಪು ನಿರ್ವಹಣೆ ಮತ್ತು ಅವ್ಯವಸ್ಥೆ ಇರುತ್ತದೆ ಎಂದು ಹೇಳಿದವರೂ ಇದ್ದರು. ಕೆಲವರು ಭಾರತವು ಪೂರೈಕೆ ಸರಪಳಿಗಳನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ ಎಂದರು. ಆದರೆ ತಮ್ಮನ್ನು ವಿಶ್ವಾಸಾರ್ಹ ಪಾಲುದಾರರನ್ನಾಗಿಸಿದರೆ ಫಲಿತಾಂಶಗಳು ಎಷ್ಟು ಅದ್ಭುತವಾಗಿರುತ್ತವೆ ಎಂಬುದನ್ನು ಜನರು ತೋರಿಸಿಕೊಟ್ಟರು ಎಂದು ಮೋದಿ ಅವರು ಲೇಖನದಲ್ಲಿ ಹೇಳಿದ್ದಾರೆ.

ಪ್ರತಿಯೊಬ್ಬರಿಗೂ ಮಾಲೀಕತ್ವದ ಮನೋಭಾವ ಬಂದರೆ ಯಾವುದೂ ಅಸಾಧ್ಯವಲ್ಲ. ನಮ್ಮ ಆರೋಗ್ಯ ಕಾರ್ಯಕರ್ತರು ಬೆಟ್ಟಗಳನ್ನು ಹತ್ತಿ, ನದಿಗಳನ್ನು ದಾಟಿ ಕಷ್ಟಕರವಾದ ಭೌಗೋಳಿಕ ಪ್ರದೇಶಗಳನ್ನು ತಲುಪಿ ಜನರಿಗೆ ಲಸಿಕೆ ಹಾಕಿದರು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಹೋಲಿಸಿದರೆ ಲಸಿಕೆಯ ಬಗ್ಗೆ ಭಾರತದಲ್ಲಿರುವ ಕನಿಷ್ಠ ಹಿಂಜರಿಕೆಯ ಶ್ರೇಯ ನಮ್ಮ ಯುವಕರು, ಸಾಮಾಜಿಕ ಕಾರ್ಯಕರ್ತರು, ಆರೋಗ್ಯ ಕಾರ್ಯಕರ್ತರು, ಸಾಮಾಜಿಕ ಮತ್ತು ಧಾರ್ಮಿಕ ಮುಖಂಡರಿಗೆ ಸಲ್ಲಬೇಕು ಎಂದು ಪ್ರಧಾನಿ ಶ್ಲಾಘಿಸಿದ್ದಾರೆ.

ಲಸಿಕೆ ನೀಡಿಕೆಯಲ್ಲಿ ತಮಗೆ ಆದ್ಯತೆ ನೀಡಬೇಕು ಎಂದು ವಿವಿಧ ಹಿತಾಸಕ್ತಿ ಗುಂಪುಗಳಿಂದ ಸಾಕಷ್ಟು ಒತ್ತಡವಿತ್ತು. ಆದರೆ ನಮ್ಮ ಇತರ ಯೋಜನೆಗಳಂತೆ, ಲಸಿಕೆ ಹಾಕುವಿಕೆಯಲ್ಲೂ ಯಾವುದೇ ವಿಐಪಿ ಸಂಸ್ಕೃತಿಯಿಲ್ಲ ಎಂದು ಸರ್ಕಾರ ಖಚಿತಪಡಿಸಿತು ಎಂದು ಅವರು ಹೇಳಿದ್ದಾರೆ.

ಲಸಿಕೆಗಳ ವಿಚಾರದಲ್ಲಿ ಭಾರತವು ನಿಜವಾಗಿಯೂ ಆತ್ಮನಿರ್ಭರವಾಗಿದೆ. ನಮ್ಮ ಲಸಿಕೆ ತಯಾರಕರು, ಇಷ್ಟು ಬೃಹತ್ ಜನಸಂಖ್ಯೆಯ ಬೇಡಿಕೆಗಳನ್ನು ಪೂರೈಸಲು ಸಮರ್ಥರಾಗುವ ಮೂಲಕ ನಾವು ಯಾರಿಗೂ ಕಡಿಮೆ ಇಲ್ಲ ಎಂದು ತೋರಿಸಿದ್ದಾರೆ ಎಂದು ಮೋದಿ ಅಭಿಪ್ರಾಯಪಟ್ಟಿದ್ದಾರೆ.

ಸ್ವದೇಶಿ ವಿಶ್ವಾಸ

ಯಾವುದೇ ಪ್ರಯತ್ನದಲ್ಲಿ ವೇಗ ಮತ್ತು ಪ್ರಮಾಣವನ್ನು ಸಾಧಿಸಲು ಮತ್ತು ಅದನ್ನು ಉಳಿಸಿಕೊಳ್ಳಲು ಎಲ್ಲಾ ಪಾಲುದಾರರ ವಿಶ್ವಾಸವು ನಿರ್ಣಾಯಕವಾಗಿದೆ. ಈ ಅಭಿಯಾನದ ಯಶಸ್ಸಿಗೆ ಒಂದು ಪ್ರಮುಖ ಕಾರಣವೆಂದರೆ, ಅಪನಂಬಿಕೆ ಮತ್ತು ಭಯವನ್ನು ಸೃಷ್ಟಿಸುವ ಹಲವಾರು ಪ್ರಯತ್ನಗಳ ನಡುವೆಯೂ ಜನರು ಲಸಿಕೆಯ ಬಗ್ಗೆ ತೋರಿಸಿದ ವಿಶ್ವಾಸ ಮತ್ತು ಲಸಿಕೆ ನೀಡಿಕೆಯಲ್ಲಿ ಅನುಸರಿಸಲಾದ ಪ್ರಕ್ರಿಯೆ. ನಮ್ಮಲ್ಲಿ ಕೆಲವರು ದೈನಂದಿನ ಅಗತ್ಯಗಳಿಗೂ ವಿದೇಶಿ ಬ್ರಾಂಡ್‌ಗಳನ್ನು ಮಾತ್ರ ನಂಬುತ್ತಾರೆ. ಆದಾಗ್ಯೂ, ಕೋವಿಡ್ -19 ಲಸಿಕೆಯಂತಹ ನಿರ್ಣಾಯಕವಾದ ವಿಷಯ ಬಂದಾಗ, ಭಾರತದ ಜನರು ಸರ್ವಾನುಮತದಿಂದ 'ಮೇಡ್ ಇನ್ ಇಂಡಿಯಾ' ಲಸಿಕೆಗಳ ಮೇಲೆ ವಿಶ್ವಾಸವಿಟ್ಟರು. ಇದೊಂದು ಮಹತ್ವದ ಮಾದರಿ ಬದಲಾವಣೆಯಾಗಿದೆ ಎಂದು ಮೋದಿ ಅವರು ಲೇಖನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಹಿಂದೂ ಧರ್ಮದ ಸಾಧುವೊಬ್ಬರು ಮುಸ್ಲಿಮರಿಗೆ ಊಟ ಬಡಿಸುತ್ತಿರುವ ಫೋಟೊವೊಂದು ಜಾಲತಾಣದಲ್ಲಿ ಹರಿದಾಡುತ್ತಿದೆ. ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆದ ಹಿಂಸಾಚಾರದಲ್ಲಿ ಈ ಫೋಟೊದಲ್ಲಿರುವ ವ್ಯಕ್ತಿ ಮೃತಪಟ್ಟಿದ್ದಾರೆ ಎಂದು ಬಿಂಬಿಸಲಾಗುತ್ತಿದೆ. 'ಇಸ್ಕಾನ್ ದೇವಾಲಯದ ಪ್ರಮುಖರಾದ ಸ್ವಾಮಿ ನಿತ್ಯ ದಾಸ್ ಪ್ರಭು ದಾಳಿಯಲ್ಲಿ ಮೃತಪಟ್ಟಿದ್ದಾರೆ. ಅವರು ಕೆಲ ದಿನಗಳ ಹಿಂದಷ್ಟೇ ಇಫ್ತಾರ್ ಕೂಟ ಆಯೋಜಿಸಿ ಮುಸ್ಲಿಮರಿಗೆ ಊಟ ಬಡಿಸಿದ್ದರು' ಎಂದು ಈ ಪೋಸ್ಟ್‌ನಲ್ಲಿ ಹೇಳಲಾಗಿದೆ.



ಇದು ಸುಳ್ಳುಸುದ್ದಿ ಎಂದು ಲಾಜಿಕಲ್ ಇಂಡಿಯನ್ ವರದಿ ಮಾಡಿದೆ. ಬಾಂಗ್ಲಾದೇಶದ ಹಿಂಸಾಚಾರದ ವೇಳೆ ಹತ್ಯೆಗೀಡಾದ ಮತ್ತು ಹಲ್ಲೆಗೀಡಾದ ಸಾಧುಗಳ ಪಟ್ಟಿಯನ್ನು ಬಾಂಗ್ಲಾದೇಶದ ಇಸ್ಕಾನ್ ದೇವಾಲಯ ಬಹಿರಂಗಪಡಿಸಿದೆ. ಅದರಲ್ಲಿ ನಿತ್ಯ ದಾಸ್ ಅವರ ಹೆಸರಿಲ್ಲ. ನಿತ್ಯ ದಾಸ್ ಅವರ ಚಿತ್ರ ಎಂದು ಹೇಳಲಾಗಿರುವ ಚಿತ್ರವನ್ನು ಪರಿಶೀಲನೆಗೆ ಒಳಪಡಿಸಲಾಗಿದೆ. ಪಶ್ಚಿಮ ಬಂಗಾಳದ ಮಾಯಪುರದ ಇಸ್ಕಾನ್ ದೇವಸ್ಥಾನದಲ್ಲಿ 2016ರಲ್ಲಿ ಹರೇ ಕೃಷ್ಣ ಎಂಬ ಹಿಂದೂ ಸಂಘಟನೆ ಆಯೋಜಿಸಿದ್ದ ಇಫ್ತಾರ್ ಕೂಟದಲ್ಲಿ ಈ ಚಿತ್ರ ತೆಗೆಯಲಾಗಿದೆ ಎಂದು ಲಾಜಿಕಲ್ ಇಂಡಿಯನ್ ಹೇಳಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ಮುಸಕಿನ ಭೂತದ ಕೃಪೆ

ನಿಶಿ ಹಿಂದೆ, ನಿಶಿ ಮುಂದೆ, ನಡುವೆ ಮಿಸುಕಾಟ ಬಾಳ್ |
ನಿಶಿ ಕೆಲವರಿಗೆ ಸೊನ್ನೆ, ಕೆಲವರಿಗೆ ಗುಟ್ಟು ||
ಮಸಕಿನಲಿ ಭೂತವೊಂದಿಹುದು ದಿಟವಾದೊಡದ |
ರುಸಿರು ಸೋಕದೆ ನಿನ್ನ? – ಮಂಕುತಿಮ್ಮ || 481 ||

ಪದ-ಅರ್ಥ: ನಿಶಿ = ಕತ್ತಲೆ, ರಹಸ್ಯ, ರಾತ್ರಿ, ಅಜ್ಞಾನ. ಭೂತ = ನಿಜ, ಸತ್ಯ, ಪರಮಾತ್ಮ, ದಿಟವಾದೊಡದ-ರುಸಿರು = ದಿಟವಾದೊಡೆ (ಸತ್ಯವಾದರೆ) + ಅದರ + ಉಸಿರು.

ವಾಚ್ಯಾರ್ಥ: ಹಿಂದೆ ಕತ್ತಲೆ, ಮುಂದೆ ಕತ್ತಲೆ. ಇವುಗಳ ನಡುವೆ ಬದುಕಿನ ಪರದಾಟ. ಕೆಲವರಿಗೆ ಕತ್ತಲೆ ಸೊನ್ನೆ, ಮತ್ತೆ ಕೆಲವರಿಗೆ ಕತ್ತಲೆಯೊಂದು ರಹಸ್ಯ. ಈ ಮಸುಕಿನಲ್ಲಿ ಸತ್ಯವೆಂಬುದು ಇರುವುದು ನಿಜವಾಗಿದ್ದರೆ ಅದರ ಉಸಿರು ನಮ್ಮನ್ನು ಸೋಕದೆ ಬಿಟ್ಟೀತೇ?

ವಿವರಣೆ: ನಾವು ಹುಟ್ಟುವ ಮುಂಚೆ ಏನಿತ್ತೋ, ನಾವು ಏನಾಗಿದ್ದೆವೋ ತಿಳಿಯದು. ಅದೊಂದು ರಹಸ್ಯ. ನಾವು ತೀರಿ ಹೋದ ಮೇಲೆ ಏನಾಗುತ್ತೇವೋ, ಎಲ್ಲಿಗೆ ಹೋಗುತ್ತೇವೋ ಅದೂ ತಿಳಿಯದು. ಅದೊಂದು ರಹಸ್ಯ. ಹುಟ್ಟೆಂಬ ಆಕಸ್ಮಿಕ ಮತ್ತು ಸಾವೆಂಬ ನಿಶ್ಚಿತಗಳ ನಡುವೆ ನಮ್ಮ ಬದುಕಿನ ಚಡಪಡಿಕೆ. ಅದೊಂದು ಚಿಕ್ಕ ಕಾಲಘಟ್ಟ. ಈ ರಹಸ್ಯ ಕೆಲವರಿಗೆ ಶೂನ್ಯ ಎನ್ನಿಸಿದೆ. ಹುಟ್ಟುವ ಮುಂದೆಯೂ ಏನೂ ಇರಲಿಲ್ಲ, ಸತ್ತ ಮೇಲೂ ಏನೂ ಉಳಿಯುವುದಿಲ್ಲ ಎಂಬುದು ನಾಸ್ತಿಕ್ಯವಾದ. ಅಲ್ಲಿ ಯಾವ ರಹಸ್ಯವೆಂಬುದು ಇಲ್ಲ. ಆದರೆ ಆಸ್ತಿಕರಿಗೆ ಇದೊಂದು ಬಹುದೊಡ್ಡ ರಹಸ್ಯ. ಆಸ್ತಿಕತೆ ಎಂಬ ಪದ 'ಅಸ್ತಿ', ಎಂದರೆ 'ಇದೆ' ಎಂಬುದರಿಂದ ಬಂದದ್ದು. ಜಗತ್ತು ಶೂನ್ಯವಲ್ಲ, ಜೀವ ಜಗತ್ತುಗಳಿಗೆ ಆಧಾರವಾಗಿರುವ ದೇವರು ಎನ್ನುವ ಶಕ್ತಿ ಶೂನ್ಯವಲ್ಲ. ಹೀಗೆ ಉಂಟು ಎನ್ನುವ ನಂಬಿಕೆಯೇ ಆಸ್ತಿಕತೆ.

ಒಂದು ಕಾಲದಲ್ಲಿ ಪಾಶ್ಚಾತ್ಯ ವಿಜ್ಞಾನದ ಬೆಳವಣಿಗೆ ನಾಸ್ತಿಕವಾದವನ್ನು ಪುಷ್ಠೀಕರಿಸುವಂತೆ ತೋರುತ್ತಿತ್ತು. ವಿಜ್ಞಾನದ ಪ್ರಗತಿ ಮುಂದುವರೆದಂತೆ, ತನ್ನ ವಿಜಯದ ಪರಂಪರೆಯ ಮಧ್ಯೆ ವಿಜ್ಞಾನಿಗೆ, ತನಗೆ ತಿಳಿಯದ್ದು ಇನ್ನೂ ಯಾವುದೋ ಇದೆ ಎಂಬ ಸಂಶಯ ಮೂಡಲು ಪ್ರಾರಂಭವಾಯಿತು. ಅನೇಕ ವೈಜ್ಞಾನಿಕರು ಜಗತ್ತಿನ ಮೂಲವನ್ನು ಶೋಧಿಸಲು ಹೊರಟರು. ವಿಜ್ಞಾನಿಗಳೂ ತತ್ವಾನ್ವೇಷಕರೇ. ಅಂಥವರು ಸಹಸ್ರಾರು ವರ್ಷಗಳಿಂದ ಆಗಾಗ ಕಾಣಬರುತ್ತಾರೆ. ಸಾಕ್ರೆಟಿಸ್, ಅರಿಸ್ಟಾಟಲ್, ನ್ಯೂಟನ್, ಡಾರ್ವಿನ್, ಐನ್‌ಸ್ಟೈನ್, ಎಡಿಂಗ್‌ಟನ್ ಇವರು ಪ್ರಮುಖರು. ಅವರೆಲ್ಲರಿಗೂ ಏನೋ ಒಂದಿದೆ, ಅದು ನಮ್ಮ ಅಳವಿಗೆ ಸಿಕ್ಕದು, ಅದು ನಮ್ಮೊಳಗೇ ಇದ್ದು ಕಣ್ಣನ್ನು ತಪ್ಪಿಸಿಕೊಳ್ಳುತ್ತಿದೆ ಎಂಬುದು ತಿಳಿದಿತ್ತು. ಇದನ್ನೇ ಕಗ್ಗ 'ಮಸಕಿನಲ್ಲಿಯ ಭೂತ' ಎಂದು ಕರೆಯುತ್ತದೆ. ಭೂತ ಎಂಬ ಪದದ ನಾಮರೂಪದ ಅರ್ಥ, ನಿಜ, ಸತ್ಯ, ಪರಮಾತ್ಮ ಎಂದಾಗುತ್ತದೆ. ಯಾವುದೋ ಸತ್ಯ ಅಥವಾ ಶಕ್ತಿ ಪ್ರಪಂಚವನ್ನು ನಡೆಸುತ್ತಿದೆ ಆದರೆ ಅದು ಅದೃಶ್ಯವಾಗಿದೆ. ಅದು ಯಾವುದು ಎಂದು ಅಂದಿನಿಂದಲೂ ತತ್ವಜ್ಞರು ಹುಡುಕುತ್ತಲೇ ಇದ್ದಾರೆ. ಸತ್ಯದಲ್ಲಿ ಯಾವಾಗಲೂ ಸ್ವತಃ ಉಳಿದುಕೊಳ್ಳುವ ಶಕ್ತಿ ಇರುತ್ತದೆ. ಅದನ್ನು ಉಳಿಸಲು ಯಾರೂ ಪ್ರಯತ್ನಿಸಬೇಕಿಲ್ಲ.

ಆದರೆ ಮಸಕಿನಲ್ಲಿಯ ಸತ್ಯ ಸಂದೇಹಗಳನ್ನು ಹುಟ್ಟು ಹಾಕುತ್ತಿದೆ. ಸಂದೇಹ, ಸತ್ಯ ಕುತೂಹಲದ ಉತ್ಕಟ ರೂಪ. ಎಲ್ಲಿಯವರೆಗೆ ಸತ್ಯದ ಅನೇಷಣೆಯಲ್ಲಿ ಶ್ರದ್ಧೆ ಇದೆಯೋ ಅಲ್ಲಿಯವರೆಗೂ ಸಂದೇಹ ನಿವಾರಣೆಯ ಆಸೆ ಇದೆ. ಈ ಶ್ರದ್ಧೆಯ ಪ್ರಯತ್ನ ಮನುಷ್ಯನನ್ನು ತಟ್ಟಿ ಜೀವೋತ್ಕರ್ಷವನ್ನುಂಟು ಮಾಡುತ್ತದೆ. ❖

ದಿನ ಭವಿಷ್ಯ
ಶುಕ್ರವಾರ ಅಕ್ಟೋಬರ್ 22, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಚಿತ್ತಾ ದ್ವಿತೀಯ ಗಂ. 39-12 (ರಾ. 9-58) ಶುಕ್ರವಾರ ನಿತ್ಯ ನಕ್ಷತ್ರ ಭರಣಿ ಗಂ. 28-46 (ಸಾ.5-48) ಸಿದ್ಧಿ ನಾಮ ಯೋಗ ಗಂ. 38-13 ತೈತಲ ಕರಣ ಗಂ. 7-6 ವಿಷಾಭಾವಃ ಅಮೃತ ಗಂ. 16-10 ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-14 ಸೂರ್ಯಾಸ್ತ: 5-54 ಅದೃಷ್ಟ ಸಂಖ್ಯೆ 3

ಮೇಷ: ಬಹುದಿನಗಳ ಇಷ್ಟಾರ್ಥ ಸಿದ್ಧಿಯಿಂದಾಗಿ ಸಂತೋಷಗೊಳ್ಳುವಿರಿ. ಸಂಬಂಧಗಳಲ್ಲಿ ಗಟ್ಟತನವನ್ನು ಕಾಣುವಿರಿ. ಧಾರ್ಮಿಕ ಕಾರ್ಯಕ್ರಮದಲ್ಲಿ ಕುಟುಂಬ ಸಮೇತ ಭಾಗಿಯಾಗುವ ಸಾಧ್ಯತೆ ಕಂಡುಬರುತ್ತಿದೆ.

ವೃಷಭ: ವಯಸ್ಕರಿಗೆ ಆಲಸ್ಯದ ದಿನವಾಗಲಿದೆ. ನಿತ್ಯ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆಯನ್ನು ಅನುಭವಿಸುವ ಸಾಧ್ಯತೆ. ಪ್ರವಾಸ ಹೋಗುವ ಬಗ್ಗೆ ವಿಚಾರ ವಿನಿಮಯ ಮಾಡಲಿದ್ದೀರಿ.

ಮಿಥುನ: ಮನೆಮಂದಿಯೊಂದಿಗೆ ಹರ್ಷದ ದಿನವನ್ನಾಗಿಸಿಕೊಳ್ಳುವಿರಿ. ಬಂಧು–ಬಾಂಧವರ ಆಗಮನ ಸಾಧ್ಯತೆ. ದಿನಪೂರ್ತಿ ಬಿಡುವಿನ ದಿನವಾಗಿಸಿಕೊಂಡು ಸಂತಸ ಸಂಭ್ರಮದಿಂದ ನಲಿಯುವಿರಿ.

ಕರ್ಕಾಟಕ: ಕೃಷಿ ಕಾರ್ಯದಲ್ಲಿ ತೊಡಗಿಕೊಂಡವರಿಗೆ ಅತ್ಯಂತ ತುರುಸಿನ ಕೆಲಸಗಳು ಎದುರಾಗುವವು. ವಾತಾವರಣದಲ್ಲಿನ ಬದಲಾವಣೆ ಆತಂಕವನ್ನು ತಂದೊಡ್ಡುವ ಸಾಧ್ಯತೆ. ದಿನವಿಡೀ ಕೆಲಸದ ಒತ್ತಡ ಕಂಡುಬರುವುದು.

ಸಿಂಹ: ಮಹಿಳೆಯರಿಗೆ ಶುಭ ಸಂಭ್ರಮದ ದಿನವಾಗಿ ಕಂಡುಬರುತ್ತಿದೆ. ಒಡಹುಟ್ಟಿದವರೊಂದಿಗೆ ಬೆರೆತು ನಲಿಯಲಿದ್ದೀರಿ. ರಾಜಕಾರಣಿಗಳಿಗೆ ಆತಂಕದ ದಿನವಾಗಿ ಕಂಡುಬರುವುದು.

ಕನ್ಯಾ: ಆತ್ಮೀಯರು, ಗುರು ಹಿರಿಯರ ದರ್ಶನ ಭಾಗ್ಯ ಕಂಡುಬರುತ್ತಿದೆ. ಕ್ಷೇತ್ರ ದರ್ಶನಕ್ಕಾಗಿ ಪ್ರವಾಸ ಹೋಗುವ ಸಾಧ್ಯತೆ. ಪ್ರಯಾಣದಲ್ಲಿ ಎಚ್ಚರಿಕೆ ಅಗತ್ಯವಾಗಿರುತ್ತದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಲವಲವಿಕೆ ಕಾಣುವಿರಿ.

ತುಲಾ: ವಸ್ತ್ರಾಭರಣಗಳನ್ನು ಖರೀದಿಸಲು ಮುಂದಾಗುವಿರಿ. ಮನೆಯಲ್ಲಿ ಶುಭ ಸಮಾರಂಭಗಳು ಕೂಡಿಬರುವ ಲಕ್ಷಣಗಳು ಕಂಡುಬರುವುದು. ಹಿರಿಯರ ಆರೋಗ್ಯದಲ್ಲಿ ವ್ಯತ್ಯಯವನ್ನು ಕಾಣಬಹುದು.

ವೃಶ್ಚಿಕ: ಹೂಡಿಕೆಯಲ್ಲಿ ಹಣ ತೊಡಗಿಸುವ ಸಾಧ್ಯತೆ ಕಂಡುಬರುತ್ತಿದೆ. ಆಸ್ತಿ ಖರೀದಿ, ಹೊಸ ವ್ಯವಹಾರಗಳ ಆರಂಭದ ಬಗ್ಗೆ ಚಿಂತನೆ ನಡೆಸಲಿದ್ದೀರಿ. ಆರೋಗ್ಯದ ಬಗ್ಗೆ ಎಚ್ಚರವಿರಲಿ.

ಧನು: ಲೇವಾದೇವಿ ವ್ಯವಹಾರದಿಂದಾಗಿ ಉತ್ತಮ ಲಾಭ ಗಳಿಸುವ ಸಾಧ್ಯತೆ. ಪಾಲುದಾರಿಕೆ ವ್ಯವಹಾರವನ್ನು ಮುಂದುವರಿಸಲಿದ್ದೀರಿ. ನೆರೆಹೊರೆಯವರೊಂದಿಗಿನ ಬಾಂಧವ್ಯಕ್ಕೆ ಕುಂದುಬರುವ ಸಾಧ್ಯತೆ.

ಮಕರ: ಗೃಹನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡುವ ಸಾಧ್ಯತೆ. ಸಂಗಾತಿಯ ಅಭಿಲಾಷೆಯಂತೆ ವ್ಯವಹರಿಸಿ ಸಂತಸ ಹಂಚಿಕೊಳ್ಳುವಿರಿ. ಗುರು ಹಿರಿಯರ ಆಶೀರ್ವಾದ ಪಡೆದುಕೊಳ್ಳುವಿರಿ.

ಕುಂಭ: ದುಡುಕಿನ ನಡೆ ನಿಮ್ಮ ಗೌರವಕ್ಕೆ ಕುಂದುಂಟುಮಾಡುವ ಸಾಧ್ಯತೆ. ಸಮಾಧಾನದಿಂದ ವ್ಯವಹರಿಸುವುದು ಉತ್ತಮ. ಸಾರ್ವಜನಿಕ ಕ್ಷೇತ್ರದಲ್ಲಿನ ವ್ಯವಹಾರಗಳಲ್ಲಿ ಹಿನ್ನಡೆ ಅನುಭವಿಸಲಿದ್ದೀರಿ.


ಮೀನ: ದಿನದ ವ್ಯವಹಾರವು ಸುಗಮವಾಗಲಿದೆ. ಹೊಸ ವ್ಯವಹಾರವೊಂದಕ್ಕೆ ನಾಂದಿ ಹಾಡಲಿದ್ದೀರಿ. ನಿಮ್ಮ ಯೋಜನೆಗಳಿಗೆ ಉತ್ತಮ ಸಹಕಾರ ದೊರಕಿ ಯಶಸ್ಸನ್ನು ಕಾಣಲಿದ್ದೀರಿ.

ನಿಮ್ಮ ಜನ್ಮದಿನ 22-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕ. ಹೊಸ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಸಕಾಲ. ನಿಮ್ಮ ಭಾವನೆಗಳಿಗೆ ಎಲ್ಲರ ಸಹಮತ ದೊರೆಯುವುದು. ಬಹುದಿನಗಳ ಆಶಯದಂತೆ ಸ್ಥಿರಾಸ್ತಿ ಗಳಿಸಿಕೊಳ್ಳುವ ಸಾಧ್ಯತೆಯೂ ಕಂಡುಬರುತ್ತಿದೆ. ಮಕ್ಕಳ ವಿಷಯದಲ್ಲಿ ಅತ್ಯಂತ ನಿಗಾವಹಿಸುವುದು ಉಚಿತ.

ಪದಬಂಧ 4755 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ನಡುವೆ ತಾಪವಿದ್ದಾಗ ಸಲ್ಲದ ವ್ಯವಹಾರವೇ? (4)
5.ಯಜಮಾನನ ಹುಟ್ಟುಗುಣ! (4)
6.ಕೊಂಕಿದ ಧಾರೆಯುಳ್ಳ ಧಾನ್ಯ ಕುಯ್ಯುವ ಸಾಧನ (4)
8.ಬಟ್ಟೆಗಳನ್ನು ಮಡಿ ಮಾಡುವ ಅಗಸ (4)
12.ನಸುಕಿನಲ್ಲಿ ಕಾಣುತ್ತಿರುವ ಕಾಡು ಹೂ (4)
14.ಬಿಗುಮಾನ ಬಿಟ್ಟು ತೋರಿಸುತ್ತಿರುವ ಆತ್ಮ ಪ್ರತಿಷ್ಠೆ! (4)
15.ಅವನು ತೋರಿಸುತ್ತಿರುವ ಸಹಾನುಭೂತಿ (4)
16.ಗರತಿ ಸೇರಿರುವ ವರ್ಗ! (4)

ಮೇಲಿಂದ ಕೆಳಕ್ಕೆ
1.ಶತ್ರುವೇ ಹುಟ್ಟಿಲ್ಲದವನು! (5)
2.ಸಮಾಧಾನದಿಂದ ಸೇರುವಿಕೆ! (4)
3.ಕುಳ್ಳ ಕೊಡುತ್ತಿರುವ ತೊಂದರೆ (4)
4.ನೆಕ್ಕಲು ಬಂದವನದ್ದು ವಿಚಿತ್ರ ವರ್ತನೆ! (3)
7.ಲಗೋರಿ ಆಡಿದ್ದು, ಹಣ ಹೂಳುವ ಸ್ಥಳದಲ್ಲಿ (2)
9.ಕುಳ್ಳ ಇಲ್ಲಿ ಕಾಣುತ್ತಿದ್ದಾನಲ್ಲಾ? (3)
10.ಶಾಖವನ್ನು ಅಳೆಯುವ ಸಾಧನ (5)
11.ಸಭಿಕನಿಗೆ ಕಾಣುತ್ತಿರುವ ಹೊಕ್ಕಳು! (2)
12.ಸಸ್ಯಗಳಿಂದ ತೆಗೆದಿರುವ ಜಿಡ್ಡು (4)
13.ಮಡಿವಂತನು ನೀಡಿರುವ ಪ್ರತ್ಯುತ್ತರ (4)
14.ಅಮೃತವೆಂದಿರುವುದು ಬರೀ ಸುಳ್ಳು! (3)



4754ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆಘ್ರಾಣ 2.ಸಾಮರಸ್ಯ 4.ಸಾಕ್ಷಾತ್ಕಾರ 6.ಪ್ರಸಂಗ 7.ನೆಪ 9.ಕನಕ 11.ರವಿ 13.ಕವಲು 14.ಟಕ್ಕುತನ 16.ಮನೆತನ 16.ಗಲಭೆ

ಮೇಲಿಂದ ಕೆಳಕ್ಕೆ: 1.ಅತ್ಮಸಾಧನೆ 2.ಸಾಮು 3.ರಕ್ತಸಂಚಾರ 5.ರಥಿಕ 8.ಪರಿವರ್ತನೆ 10.ಕರಟ 12.ವಿಧಾನಸಭೆ 15.ಮೌನ

ಸುಡೊಕು 5141

				4		8		7
4		8					9	
	9			7		6		4
	5		7				6	
				9			5	
2		3			4		7	
7								6
	1		2		9		4	
6		2				9		5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5140 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

ಮತದಾರರಿಗೆ ಹಂಚಲು ಚೀಲದಲ್ಲಿ ಹಣ ತಂದ ಮಂತ್ರಿಗಳು: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಾಗ್ದಾಳಿ

‘ಅಡ್ಡದಾರಿಯ ಪ್ರಚಾರಕ್ಕಿಳಿದ ಬಿಜೆಪಿ’

ಪ್ರಜಾವಾಣಿ ವಾರ್ತೆ

ಹಾವೇರಿ: ‘ಬಿಜೆಪಿಯವರು ಚುನಾವಣಾ ಪ್ರಚಾರವನ್ನು ಅಡ್ಡದಾರಿಗೆ ತೆಗೆದುಕೊಂಡು ಹೋಗಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ‘ಜಾತಿ ರಾಜಕಾರಣ’ ಮಾಡುತ್ತಿದ್ದಾರೆ. ನಾವು ನೀತಿ ರಾಜಕಾರಣ ಮಾಡುತ್ತಿದ್ದೇವೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆರೋಪಿಸಿದರು.

ಹಾನಗಲ್ ತಾಲ್ಲೂಕಿನ ಹೊಂಕಣ ಗ್ರಾಮದಲ್ಲಿ ಗುರುವಾರ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ ಮಾನೆ ಪರ ಚುನಾವಣಾ ಪ್ರಚಾರಕ್ಕೆ ಬಂದ ಸಂದರ್ಭದಲ್ಲಿ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು.

‘ವೈಯಕ್ತಿಕ ನಿಂದನೆಯಲ್ಲಿ ವಿಶ್ವಾಸವಿಲ್ಲ. ಎಚ್.ಡಿ.ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ ಅವರ ಬಗ್ಗೆ ಗೌರವವಿದೆ. ವಿಧಾನಸೌಧದಲ್ಲಿ ಯುದ್ಧದ ಸನ್ನಿವೇಶ ಬರುತ್ತದೆ, ಅಲ್ಲಿ ಮಾಡೋಣ’ ಎಂದು ಇತರ ಪಕ್ಷಗಳ ವೈಯಕ್ತಿಕ ಟೀಕೆಗಳಿಗೆ ನಯವಾಗಿಯೇ ತಿರುಗೇಟು ನೀಡಿದರು.

ಸರ್ಕಾರ ಏಕಿರಬೇಕು?: ‘ಮಕ್ಕಳಿಗೆ ಅ.25ರಿಂದ ಶಾಲೆ ಆರಂಭ ಮಾಡಲಾಗುತ್ತಿದ್ದು, ಬಿಸಿಯೂಟ ನೀಡಲು ಸಿದ್ಧತೆ ಆಗಿಲ್ಲ ಎಂದು ಹೇಳಿದ್ದಾರೆ. ಮಕ್ಕಳಿಗೆ ಊಟ ಕೊಡಲು ಆಗದಿದ್ದರೆ ಈ ಸರ್ಕಾರ ಯಾಕಿರಬೇಕು? ಅಂಗನವಾಡಿ ಆರಂಭ ಇಂದಿರಾ ಗಾಂಧಿ ಅವರ ಕಾರ್ಯಕ್ರಮ, ಬಿಸಿಯೂಟ ಎಸ್.ಎಂ. ಕೃಷ್ಣ ಅವರ ಸರ್ಕಾರದಲ್ಲಿ ಜಾರಿಗೆ ತಂದ ಯೋಜನೆ’ ಎಂದರು.

ಕಟೀಲ್ ವಿರುದ್ಧ ಟೀಕಿಸಿದ್ದಕ್ಕೆ ಡಿ.ಕೆ. ಶಿವಕುಮಾರ್ ಅವರು ಹುಚ್ಚಾಸ್ಪತ್ರೆಗೆ ಸೇರಲಿ, ಉಚಿತ ಚಿಕಿತ್ಸೆ ಕೊಡಿಸುತ್ತೇವೆ ಎಂದು ಶಾಸಕ ರಾಜುಗೌಡ ಹೇಳಿದ್ದರ ಕುರಿತು ಪ್ರತಿಕ್ರಿಯಿಸಿದ ಅವರು, ‘ಬೆಡ್ ರೆಡಿ ಮಾಡಿಸಲಿ, ನಾನು ಹೋಗಿ ಅಡ್ಮಿಟ್ ಆಗುತ್ತೇನೆ’ ಎಂದು ತಿರುಗೇಟು ನೀಡಿದರು.

ಚೀಲದಲ್ಲಿ ಹಣ ತಂದ ಮಂತ್ರಿಗಳು: ‘ಹಾನಗಲ್ ಕ್ಷೇತ್ರದಲ್ಲಿ ಮತದಾರರಿಗೆ ಹಂಚಲು ಐದಾರು ಜನ ಮಂತ್ರಿಗಳು ಚೀಲದಲ್ಲಿ ಹಣ ಹೊತ್ತುಕೊಂಡು ಬಂದಿದ್ದಾರೆ. ಅವರು ಎಷ್ಟು ಹಣ ಕೊಟ್ಟರೂ ಬೇಡ ಎನ್ನಬೇಡಿ. ಮಸ್ಕಿಯಲ್ಲಿ ಜನ ಬಿಜೆಪಿ ನೋಟು, ಕಾಂಗ್ರೆಸ್‌ಗೆ ವೋಟು ಎಂದು ಹೇಳಿದ್ದರು. ನೀವು ಕಾಂಗ್ರೆಸ್‌ಗೆ ಮತ ಹಾಕಿ ’ ಎಂದು ಡಿಕೆಶಿ ಹೇಳಿದರು.



ಹಾನಗಲ್ ತಾಲ್ಲೂಕಿನ ಹೊಂಕಣ ಗ್ರಾಮದಲ್ಲಿ ಗುರುವಾರ ಉಪಚುನಾವಣೆಯ ಕಾಂಗ್ರೆಸ್ ಪ್ರಚಾರ ಸಭೆಗೆ ಬಂದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಕಾರ್ಯಕರ್ತರು ಮತ್ತು ಗ್ರಾಮಸ್ಥರು ಹೂ ಮಳೆ ಸುರಿಸಿದರು



ಹಾನಗಲ್ ಕ್ಷೇತ್ರದ ಮಕರವಳ್ಳಿ ಗ್ರಾಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಚುನಾವಣಾ ಪ್ರಚಾರ ನಡೆಸಿದರು. ಬಿಜೆಪಿ ಅಭ್ಯರ್ಥಿ ಶಿವರಾಜ ಸಜ್ಜನರ, ಸಂಸದ ಶಿವಕುಮಾರ ಉದಾಸಿ, ವಿಧಾನ ಪರಿಷತ್ ಸದಸ್ಯ ಆರ್.ಶಂಕರ್ ಇದ್ದಾರೆ

‘ಬಿಜೆಪಿ ಎಂದರೆ ಭ್ರಷ್ಟ ಜನತಾ ಪಾರ್ಟಿ’



ಸಲೀಂ ಅಹಮದ್

ಹಾವೇರಿ: ‘ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ರಾಜ್ಯ ಸರ್ಕಾರ ಜನರ ತೆರಿಗೆ ಹಣವನ್ನು ಲೂಟಿ ಮಾಡಿದೆ. ಬಿಜೆಪಿ ಎಂದರೆ ‘ಭ್ರಷ್ಟ ಜನತಾ ಪಾರ್ಟಿ’ ಎಂದರ್ಥ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಆರೋಪ ಮಾಡಿದರು.

ಹಾನಗಲ್ ಕ್ಷೇತ್ರದ ಹೊಂಕಣದಲ್ಲಿ ಗುರುವಾರ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿ, ‘ಆಡಳಿತ ಪಕ್ಷದ ಸಚಿವರುಗಳ ನಡುವೆಯೇ ಹಣ ದೋಚಲು ಕಿತ್ತಾಟ ನಡೆದಿದೆ. ರಾಜ್ಯ ಸರ್ಕಾರ ಕೊರೊನಾ ಉಪಕರಣ ಖರೀದಿಯಲ್ಲಿ ₹2 ಸಾವಿರ ಕೋಟಿ ಭ್ರಷ್ಟಾಚಾರ ನಡೆಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಿಜೆಪಿಗೆ ನಂಬಿಕೆ, ವಿಶ್ವಾಸವಿಲ್ಲ’ ಎಂದು ದೂರಿದರು.

ರಹಸ್ಯ ಸಭೆ ನಡೆಸಿದ ಬೊಮ್ಮಾಯಿ!

ಹಾನಗಲ್ ತಾಲ್ಲೂಕಿನ ಗಡಿಯಂಕನಹಳ್ಳಿಯ ವಂಶಿ ಫಾರ್ಮ್‌ನಲ್ಲಿ ವಿವಿಧ ಸಮುದಾಯಗಳ ಮುಖಂಡರೊಂದಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುರುವಾರವೂ ರಹಸ್ಯ ಸಭೆ ನಡೆಸಿ, ಚುನಾವಣಾ ತಂತ್ರಗಳನ್ನು ರೂಪಿಸಿದರು.

ಬೆಂಗಳೂರಿನಿಂದ ಹಾನಗಲ್ ಕ್ಷೇತ್ರಕ್ಕೆ ಬುಧವಾರ ಸಂಜೆ ಬಂದ ಅವರು ಪಕ್ಷದ ನಾಯಕರು, ಸ್ಥಳೀಯ ಮುಖಂಡರೊಂದಿಗೆ ರಹಸ್ಯ ಸಭೆ ನಡೆಸಿದರು. ಕ್ಷತ್ರೀಯ ಮರಾಠ, ಗಂಗಾಮತಸ್ಥರು, ವಾಲ್ಮೀಕಿ ಸಮುದಾಯಗಳ ಮುಖಂಡರೊಂದಿಗೆ ಬೆಳಿಗ್ಗೆ ಸರಣಿ ಸಭೆ ನಡೆಸಿದರು.

‘ಸಮುದಾಯಗಳ ಸಮಸ್ಯೆಗಳನ್ನು ಪ್ರತ್ಯೇಕವಾಗಿ ಮುಖ್ಯಮಂತ್ರಿ ಆಲಿಸಿದರು. ಚುನಾವಣೆ ನೀತಿಸಂಹಿತೆ ಇರುವುದರಿಂದ ಯಾವುದೇ ಭರವಸೆ ನೀಡುವಂತಿಲ್ಲ. ಚುನಾವಣೆ ನಂತರ ನಿಮ್ಮ ಎಲ್ಲ ಬೇಡಿಕೆಗಳನ್ನು ಈಡೇರಿಸುತ್ತೇನೆ. ಬಿಜೆಪಿಯನ್ನು ಬೆಂಬಲಿಸಿ ಎಂದು ಸಿಎಂ ಮನವಿ ಮಾಡಿದರು’ ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ಮುಖಂಡರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಡಿಕೆಶಿಗೆ ಗೋಣಿಚೀಲದ ಅನುಭವವಿದೆ: ಸಿಎಂ

ಪ್ರಜಾವಾಣಿ ವಾರ್ತೆ

ಹಾವೇರಿ: ‘ಗುಂಡ್ಲುಪೇಟೆ, ನಂಜನಗೂಡು ಉಪಚುನಾವಣೆ ಯಾವ ರೀತಿ ನಡೆಯಿತು ಎಂಬುದನ್ನು ನೋಡಿದ್ದೇವೆ. ಗೋಣಿ ಚೀಲದಲ್ಲಿ ನೋಟು ತಂದು ಹಂಚುವ ಅನುಭವ ಡಿ.ಕೆ.ಶಿವಕುಮಾರ್ ಅವರಿಗಿದೆ. ಆದರೆ, ಬಿಜೆಪಿಯವರು ಹಾನಗಲ್ ಕ್ಷೇತ್ರದಲ್ಲಿ ಹಣ ಹಂಚುತ್ತಿದ್ದಾರೆ ಎಂದು ನಮ್ಮ ಮೇಲೆ ಗೂಬೆ ಕೂರಿಸುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದರು.

ಹಾನಗಲ್ ಕ್ಷೇತ್ರದಲ್ಲಿ ಗುರುವಾರ ಮಾಧ್ಯಮದವರೊಂದಿಗೆ ಅವರು ಮಾತನಾಡಿ, ‘ಕಾಂಗ್ರೆಸ್ ಬಣ್ಣದ ಮಾತಿಗೆ ಜನ ಉತ್ತರ ಕೊಡುತ್ತಾರೆ. ಕಾಂಗ್ರೆಸ್‌ನವರು ವಾದದಲ್ಲಿ ಗೆಲ್ಲೋಕೆ ನೋಡುತ್ತಿದ್ದಾರೆ. ನಾವು ಜನರ ಪ್ರೀತಿ ಗೆಲ್ಲೋಕೆ ನೋಡ್ತಾ ಇದ್ದೇವೆ. ಹಾನಗಲ್ ಹಾಗೂ ಸಿಂದಗಿಯಲ್ಲಿ ಜನರ ಪ್ರೀತಿ, ವಿಶ್ವಾಸ ಹಾಗೂ ಅಭಿವೃದ್ಧಿಯನ್ನು ಮುಂದಿಟ್ಟುಕೊಂಡು ನಾವು ಚುನಾವಣೆ ಎದುರಿಸುತ್ತಿದ್ದೇವೆ. ಅದೇ ನಮಗೆ ಶಕ್ತಿ ಎಂದು ಹೇಳಿದರು.

ಉತ್ತರ ಕರ್ನಾಟಕದ ಬಗ್ಗೆ ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದಾಗ ತೋರದ ಪ್ರೀತಿಯನ್ನು ಚುನಾವಣೆ ಬಂದಾಗ ತೋರುತ್ತಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಹಾವೇರಿ ಜಿಲ್ಲೆಗೆ ಮೆಡಿಕಲ್ ಕಾಲೇಜ್ ದೊರಕಿತ್ತು. ನಂತರ ಮುಖ್ಯಮಂತ್ರಿಯಾದ ಸಿದ್ದರಾಮಯ್ಯ ಆಸಕ್ತಿ ತೋರಲಿಲ್ಲ. ಹೀಗಾಗಿ ಬೇರೆ ಜಿಲ್ಲೆಗೆ ಹೋಯಿತು ಎಂದು ಕುಟುಕಿದರು.

‘ಬಿಜೆಪಿಯನ್ನು ಸೋಲಿಸಲು ಯತ್ನಿಸುವುದೇ ಕಾಂಗ್ರೆಸ್‌ನವರ ಕೆಲಸ. ಅದು ಅವರ ಕೈಯಲ್ಲಿ ಇಲ್ಲ. ಜನರು ನಾಯಕತ್ವವನ್ನು ತೀರ್ಮಾನ ಮಾಡುತ್ತಾರೆ. ಜನರ ನಾಡಿಮಿಡಿತ ನಮಗೆ ಗೊತ್ತಿದೆ. ಎರಡೂ ಕ್ಷೇತ್ರಗಳಲ್ಲಿ ಬಿಜೆಪಿಗೆ ಜಯ ನಿಶ್ಚಿತ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

‘ಡ್ರಗ್ಸ್ ದಂಧೆಯಲ್ಲಿ ಬಿಜೆಪಿ ಮುಖಂಡರದ್ದೇ ದೊಡ್ಡ ಪಾಲು’

ಕಲಬುರಗಿ: ‘ಲಾಕ್‌ಡೌನ್ ಅವಧಿಯಲ್ಲಿ ದೇಶದಲ್ಲಿ ‘ಡ್ರಗ್ಸ್’ ಬಳಕೆ ಮೂರುಪಟ್ಟು ಹೆಚ್ಚಾಗಿದೆ ಎಂದು ಆರ್‌ಎಸ್‌ಎಸ್ ಮುಖಂಡ ಮೋಹನ ಭಾಗವತ್ ಅವರೇ ಹೇಳಿದ್ದಾರೆ. ಈ ಬಗ್ಗೆ ಗೃಹಸಚಿವ ಅಮಿತ್ ಶಾ ಅವರನ್ನು ಪ್ರಶ್ನಿಸುವ ತಾಕತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಗೆ ಇದೆಯೇ’ ಎಂದು ಕೆಪಿಸಿಸಿ ವಕ್ತಾರರೂ ಆಗಿರುವ ಶಾಸಕ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

‘ಲಾಕ್‌ಡೌನ್ ಸಂದರ್ಭದಲ್ಲಿ ಸರ್ಕಾರದ ಚಟುವಟಿಕೆ ಬಿಟ್ಟರೆ ಉಳಿದೆಲ್ಲವೂ ಬಂದ್ ಇತ್ತು. ಹಾಗಾದರೆ ಇಂತಹ ವಸ್ತುಗಳು ಹೇಗೆ ಸರಬರಾಜು ಆದವು? ಅಮಿತ್ ಶಾ ಒಬ್ಬ ಅಸಮರ್ಥ ಮಂತ್ರಿ ಎಂದು ಮೋಹನ ಭಾಗವತ್ ಅವರ ಹೇಳಿಕೆಯೇ ದೃಢಪಡಿಸುತ್ತದೆ. ರಾಹುಲ್ ಗಾಂಧಿ ಅವರನ್ನು ಡ್ರಗ್ ಪೆಡ್ಲರ್ ಎಂದು ಟೀಕಿಸಿರುವ ಕಟೀಲ್; ಒಮ್ಮೆಯಾದರೂ ಅಮಿತ್ ಶಾ ಅವರನ್ನು ಪ್ರಶ್ನೆ ಮಾಡುವಂಥ ಧೈರ್ಯ ತೋರಲಿ’ ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಡ್ರಗ್ಸ್ ದಂಧೆಯಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರೂ ಬಂಧನವಾಗಿದ್ದಾರೆ. ಗುಜರಾತ್ ರಾಜ್ಯದಲ್ಲಿ ₹ 1.75 ಲಕ್ಷ ಕೋಟಿ ಮೌಲ್ಯದ 25 ಸಾವಿರ ಕೆ.ಜಿ ಹೆರಾಯಿನ್ ಪತ್ತೆಯಾಗಿದೆ. ಮೋದಿ ಅವರ ಆಪ್ತ ಅದಾನಿಯ ಖಾಸಗಿ ಬಂದರಿನಲ್ಲಿ 3 ಸಾವಿರ ಕೆ.ಜಿ ಕೊಕೇನ್ ಸಿಕ್ಕಿದೆ. ಇದರ ಬೆಲೆ ₹ 21 ಸಾವಿರ ಕೋಟಿ. ಇದೆಲ್ಲ ಸರಬರಾಜು ಆಗುತ್ತಿರುವುದು ಅಫ್ಗಾನಿಸ್ತಾನ ಹಾಗೂ ಪಾಕಿಸ್ತಾನದಿಂದ ಎಂಬುದೂ ದೃಢಪಟ್ಟಿದೆ. ಕೇಂದ್ರ ಸರ್ಕಾರವೇ ಈ ಆರೋಪಿಗಳ ರಕ್ಷಣೆಗೆ ನಿಂತಿದೆ’ ಎಂದೂ ದೂರಿದರು.



‘ಸ್ವ ಸುರಕ್ಷೆಗೆ ಯುವತಿಯರಿಗೆ ತರಬೇತಿ’

ಹುಬ್ಬಳ್ಳಿ: ಸುರಕ್ಷೆಯ ದೃಷ್ಟಿಯಿಂದ ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಯುವತಿಯರಿಗೆ ಸ್ವಯಂ ರಕ್ಷಣಾ ತರಬೇತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಪೊಲೀಸ್ ಹುತಾತ್ಮ ದಿನದ ಕಾರ್ಯಕ್ರಮದ ಬಳಿಕ ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಸ್ವ ಸುರಕ್ಷೆಗೆ ತರಬೇತಿ ನೀಡುವ ಕೆಲಸವನ್ನು ಕೆಎಸ್‌ಆರ್‌ಪಿ ಮಾಡಲಿದೆ. ಪೊಲೀಸ್ ತರಬೇತಿ ಶಾಲೆಗಳಲ್ಲಿ ಕೆಲಸ ಮಾಡಿದ ನಿವೃತ್ತ ಪ್ರಾಂಶುಪಾಲರನ್ನು ತರಬೇತಿ ನೀಡಲು ಬಳಸಿಕೊಳ್ಳಲಾಗುವುದು’ ಎಂದರು.

ಭಾರಿ ಮಳೆಯಿಂದಾಗಿ ನಲುಗಿರುವ ಉತ್ತರಾಖಂಡ ಮತ್ತು ಕೇರಳ ಪರಿಸ್ಥಿತಿ ಬಗ್ಗೆ ಪ್ರತಿಕ್ರಿಯಿಸಿ ‘ಕೇರಳ ಮುಖ್ಯಮಂತ್ರಿ ಜೊತೆ ಚರ್ಚಿಸಿ ಅಗತ್ಯ ನೆರವು ನೀಡುವುದಾಗಿ ತಿಳಿಸಿದ್ದೇನೆ. ಉತ್ತರಾಖಂಡದಲ್ಲಿ ಸಿಲುಕಿರುವ ಕರ್ನಾಟಕದವರ ರಕ್ಷಣೆಗಾಗಿ ತುಷಾರ್ ಗಿರಿನಾಥ್ ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ’ ಎಂದು ತಿಳಿಸಿದರು.

‘ಉಪಚುನಾವಣೆ ಪ್ರಚಾರದಲ್ಲಿ ವೈಯಕ್ತಿಕ ನಿಂದನೆಗಳೇ ಹೆಚ್ಚಾಗುತ್ತಿವೆಯಲ್ಲ’ ಎಂಬ ಪ್ರಶ್ನೆಗೆ, ‘ಜನ ಎಲ್ಲವನ್ನೂ ಗಮನಿಸುತ್ತಿದ್ದಾರೆ. ಚುನಾವಣೆ ಜನರ ಧ್ವನಿಯಾಗಿದೆ. ಟೀಕೆ, ಪ್ರತಿಟೀಕೆ ಜನರ ಹಾಗೂ ಕ್ಷೇತ್ರದ ಅಭಿವೃದ್ಧಿಗೆ ಸೀಮಿತರಾದರೆ ಜನಪ್ರತಿನಿಧಿಗಳಿಗೆ ಒಳ್ಳೆಯದು. ಜನರ ಮನಸ್ಸು ಗೆಲ್ಲುವ ಮಾತಗಳನ್ನಾಡಬೇಕೆ ಹೊರತು ಇನ್ನೊಬ್ಬರನ್ನು ನಿಂದಿಸುವ ಕೆಲಸ ಮಾಡಬಾರದು’ ಎಂದರು.

ಒಂದು ಮತಕ್ಕೆ ₹ 2 ಸಾವಿರ ಸಿದ್ದರಾಮಯ್ಯ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೇ ಉಪ ಚುನಾವಣೆ ಫಲಿತಾಂಶ ಸರ್ಕಾರದ ಮೇಲೆ ಪರಿಣಾಮ ಬೀರುವುದಿಲ್ಲ. ಆದರೆ, ಜನರ ಆಕ್ರೋಶ ಏನು ಎನ್ನುವುದು ಗೊತ್ತಾಗುತ್ತದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಜೆಡಿಎಸ್‌ನವರಿಗೆ ಯಾವುದೇ ಸಿದ್ಧಾಂತವಿಲ್ಲ. ಅವರು ಏನೇ ಮಾಡಿದರೂ ಕೊನೆಗೆ ಬಿಜೆಪಿ ಜೊತೆ ಸೇರಿಕೊಳ್ಳುತ್ತಾರೆ. ಈಗಲೂ ಜೆಡಿಎಸ್, ಬಿಜೆಪಿ ಒಳ ಒಪ್ಪಂದ ಮಾಡಿಕೊಂಡಿವೆ’ ಎಂದರು.

‘ಹಾನಗಲ್, ಸಿಂದಗಿ ಕ್ಷೇತ್ರದಲ್ಲಿದೆ ಕಾಂಗ್ರೆಸ್ ಪರ ಅಲೆ ಇದೆ. ಆದರೆ, ನನಗೆ ಗೊತ್ತಿರುವ ಮಟ್ಟಿಗೆ ಬಿಜೆಪಿಯವರು ಎರಡೂ ಕ್ಷೇತ್ರಗಳಲ್ಲಿ ಒಂದು ಮತಕ್ಕೆ ₹ 2 ಸಾವಿರದಂತೆ ಹಣದ ಹೊಳೆ ಹರಿಸುತ್ತಿದ್ದಾರೆ’ ಎಂದು ಆರೋಪಿಸಿದರು.

‘ಜಾತ್ಯತೀತ ಜನತಾದಳ ಎಂದು ಹೆಸರಿಟ್ಟುಕೊಂಡಿರುವ ಪ್ರಾದೇಶಿಕ ಪಕ್ಷ, ನಡವಳಿಕೆಯಲ್ಲಿ ಜಾತ್ಯತೀತ ಅಲ್ಲ. ಅದು ಕೋಮುವಾದಿ ಪಕ್ಷ. ಬಿಜೆಪಿ ಜೊತೆ ಸೇರಿಕೊಂಡು ಸರ್ಕಾರ ಮಾಡಿದ ನಂತರವೂ ಜೆಡಿಎಸ್‌ನವರು ಜಾತ್ಯತೀತ ಆಗುತ್ತಾರಾ’ ಎಂದು ಪ್ರಶ್ನಿಸಿದರು.

‘ಕೇಸರಿ, ಆರೆಸ್ಸೆಸ್ ಕಂಡರೆ ನನಗೆ ಭಯ ಇಲ್ಲ. ಆದರೆ, ಶಾಂತಿ ಕದಡಿ ಸಮಾಜ ಒಡೆಯುತ್ತಾರೆ ಎನ್ನುವ ಭಯ ಅಷ್ಟೆ’ ಎಂದ ಅವರು, ‘ಸಲೀಂ, ಉಗ್ರಪ್ಪ ಅವರ ಸಂಭಾಷಣೆಯನ್ನು ನಾನು ಕೇಳಿಲ್ಲ. ಉಗ್ರಪ್ಪ ಮಾತನ್ನು ನಾನು ಸಮರ್ಥಿಸಿಕೊಳ್ಳುವುದಿಲ್ಲ. ಬಸವರಾಜ ಬೊಮ್ಮಾಯಿ ಅವರು ಮೊದಲು ಯತ್ನಾಳ್ ಹೇಳಿಕೆ ಬಗ್ಗೆ ಉತ್ತರ ಕೊಡಲಿ. ಹಿಂದೆ ಅನಂತ್ ಕುಮಾರ್, ಯಡಿಯೂರಪ್ಪ ಮಾತನಾಡಿದ್ದಾರಲ್ಲ ಅದಕ್ಕೆ ಉತ್ತರ ಕೊಡಲಿ’ ಎಂದರು.

‘ಅಧಿಕಾರಕ್ಕೆ ಬಂದ ತಕ್ಷಣ ಪಂಚಮಸಾಲಿ ಸಮುದಾಯದವರಿಗೆ ಮೀಸಲಾತಿ ನೀಡುವುದಾಗಿ ಬಿಜೆಪಿ ನಾಯಕರು ಹೇಳಿದ್ದರು. ವಾಲ್ಮೀಕಿ ಸಮುದಾಯಕ್ಕೂ ಬಿಜೆಪಿ ಆಶ್ವಾಸನೆ ಕೊಟ್ಟಿದೆ. ಅದೆಲ್ಲವನ್ನೂ ಈಗ ಸರ್ಕಾರ ಈಡೇರಿಸಬೇಕು. ಇಲ್ಲದಿದ್ದರೆ ಪಂಚಮಸಾಲಿ ಸಮುದಾಯ ಬಿಜೆಪಿಗೆ ಪಾಠ ಕಲಿಸಲಿ’ ಎಂದರು.

‘ದುರಹಂಕಾರಿಗೆ ಜನ ಬುದ್ಧಿ ಕಲಿಸುತ್ತಾರೆ’

‘ಇಂಥ ದುರಂಹಕಾರದ ಮಾತುಗಳಿಗೆ ಜನ ಬುದ್ಧಿ ಕಲಿಸುತ್ತಾರೆ’ ಎಂದು ಸಿದ್ದರಾಮಯ್ಯ ಹೇಳಿದರು.

‘ರಮೇಶ್ ಕುಮಾರ್ ಅವರನ್ನು ಜೈಲಿಗೆ ಕಳುಹಿಸುವೆ’ ಎನ್ನುವ ಸಚಿವ ಸುಧಾಕರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು,

‘ಅಧಿಕಾರ ಶಾಶ್ವತ ಎಂದು ತಿಳಿದುಕೊಂಡಿದ್ದಾರೆ. 2023ಕ್ಕೆ ಮನೆಗೆ ಹೋಗುತ್ತಾರೆ. ಆಗ ಯಾರನ್ನು ಯಾರು ಜೈಲಿಗೆ ಕಳಿಸುತ್ತಾರೆ ಗೊತ್ತಾಗುತ್ತದೆ’ ಎಂದರು.

ಸಿದ್ದರಾಮಯ್ಯಗೆ ಮತ್ತೆ ಸಿಎಂ ಆಗುವ ಭ್ರಮೆ: ಸುಧಾಕರ ಟೀಕೆ



ಸುಧಾಕರ್

ಹಾನಗಲ್:‘ಸಿದ್ದರಾಮಯ್ಯ ದುರಹಂಕಾರದಿಂದ ಮಾತನಾಡುತ್ತಿದ್ದಾರೆ. ಈ ರೀತಿಯ ವರ್ತನೆಗಳಿಂದ ಮತ್ತೆ ಸಿ.ಎಂ ಆಗುತ್ತೇನೆ ಎಂಬ ಭ್ರಮೆಯಲ್ಲಿದ್ದಾರೆ’ ಎಂದು ಆರೋಗ್ಯ ಸಚಿವ ಡಾ.ಸುಧಾಕರ ಟೀಕಿಸಿದರು.

ಗುರುವಾರ ಇಲ್ಲಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಆರೋಪಗಳಿಗೆ ತಿರುಗೇಟು ನೀಡಿದರು. ‘ಪ್ರಚಾರ ಸಭೆಗಳಲ್ಲಿ ಏಕವಚನ ಸಂಬೋಧನೆ ಸಿದ್ದರಾಮ್ಯನವರ ಅಹಂಕಾರವನ್ನು ಬಿಂಬಿಸುತ್ತದೆ. ಇಂತಹ ನಡವಳಿಕೆಗಳಿಂದ ಉಪ ಚುನಾವಣೆಯನ್ನು ಗೆಲ್ಲುತ್ತೇವೆ ಎಂಬ ಕನಸಿನಲ್ಲಿದ್ದಾರೆ’ ಎಂದರು.

‘ಚುನಾವಣಾ ಉದ್ದೇಶದಿಂದ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ ಜನರ ಹಾದಿ ತಪ್ಪಿಸುವ ಹೇಳಿಕೆ ನೀಡುತ್ತಿದ್ದಾರೆ. ಇವರಿಗೆ ನಾಚಿಕೆಯಾಗುವುದಿಲ್ಲವೇ’ಎಂದು ಅವರು ಪ್ರಶ್ನಿಸಿದರು.

‘ವಿಧಾನಸಭೆಯಲ್ಲಿ ಕೋವಿಡ್ ಸಂಬಂಧ ಪ್ರಶ್ನೆಗಳ ಸುರಿಮಳೆಯನ್ನೆ ಹರಿಸಿದ್ದ ಸಿದ್ದರಾಮಯ್ಯನವರು ಆ ಪ್ರಶ್ನೆಗಳಿಗೆ ಉತ್ತರ ಕೇಳುವ ವ್ಯವಧಾನವನ್ನು ಪ್ರದರ್ಶಿಸಲಿಲ್ಲ. ಅಂಕಿ–ಅಂಶಗಳ ಸಮೇತ ಸದನದಲ್ಲಿ ಉತ್ತರಿಸಲು ನಾನು ಸಜ್ಜಾಗಿದ್ದರೆ ಪ್ರತಿಪಕ್ಷದವರು ಪಲಾಯನಗೈದರು’ ಎಂದು ದೂರಿದರು.

‘ತೆರೆದ ಪುಸ್ತಕ ತೆರೆದ ಬಾವಿಯಷ್ಟೇ ಅಪಾಯ‘

ಬೆಂಗಳೂರು: ‘ನೀವು ಈ ಶತಮಾನ ಕಂಡ ರಾಜಕೀಯ ದಾರ್ಶನಿಕರು. ನನ್ನ ಬದುಕು ತೆರೆದ ಪುಸ್ತಕ, ಎಲ್ಲವನ್ನೂ ಒಪ್ಪಿಕೊಂಡಿದ್ದೇನೆ ಎಂದಿರುವ ನಿಮ್ಮ ಧೈರ್ಯ ಅಭಿನಂದನೀಯ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರನ್ನು ಉದ್ದೇಶಿಸಿ ಬಿಜೆಪಿ ಟ್ವೀಟ್ ಮಾಡಿದೆ.

ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿರುದ್ಧ ಕುಮಾರಸ್ವಾಮಿ ಅವರ ಸರಣಿ ಟ್ವೀಟ್‌ಗಳಿಗೆ ಬಿಜೆಪಿ ಹೀಗೆ ಪ್ರತಿಕ್ರಿಯಿಸಿದೆ.

‘ಕಾನೂನು ಪ್ರಕಾರ ‘ಪಾರದರ್ಶಕ ಕಾಯ್ದೆ’ಯ ಉಲ್ಲಂಘನೆಯೂ ಅಪರಾಧವಲ್ಲವೇ?’ ತೆರೆದ ಪುಸ್ತಕ, ತೆರೆದ ಬಾವಿಯಷ್ಟೇ ಅಪಾಯವಂತೆ’ ಎಂದು ಬಿಜೆಪಿ ಕಾಲೆಳೆದಿದೆ.

ಎಚ್‌.ಡಿ.ಕುಮಾರಸ್ವಾಮಿ ಖಡಕ್ ಎಚ್ಚರಿಕೆ

‘ಬಿಜೆಪಿಯವರ ಅಸಹ್ಯ ಬಿಚ್ಚಿಡುತ್ತೇನೆ’

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಬಿಜೆಪಿಯವರು ನನ್ನ ವೈಯಕ್ತಿಕ ವಿಚಾರಗಳನ್ನು ಇಲ್ಲಿಗೇ ಬಿಡುವುದು ಒಳಿತು. ಇಲ್ಲವಾದರೆ ಆರ್.ಎಸ್. ಎಸ್ ಶಾಖೆಗಳಿಂದ ತರಬೇತಿ ಪಡೆದು ಬಿಜೆಪಿಗೆ ಬಂದವರೆಲ್ಲ ನಡೆಸುತ್ತಿರುವ ಅಸಹ್ಯವನ್ನು ಬಿಚ್ಚಿಡಬೇಕಾಗುತ್ತದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ಎಚ್.ಡಿ.ಕುಮಾರಸ್ವಾಮಿ ಖಡಕ್ ಎಚ್ಚರಿಕೆ ನೀಡಿದರು.

ಸಿಂದಗಿ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಪರ ಚುನಾವಣಾ ಪ್ರಚಾರದ ವೇಳೆ ಗುರುವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.



ಕುಮಾರಸ್ವಾಮಿ

‘ನನ್ನ ವೈಯಕ್ತಿಕ ವಿಚಾರಗಳನ್ನು ಪ್ರಸ್ತಾಪ ಮಾಡಿದರೆ ನಾನು ಅವರೆಲ್ಲರ ವಿಚಾರಗಳನ್ನು ಮಾಧ್ಯಮಗಳ ಮುಂದೆ ಬಿಚ್ಚಿಡುವೆ. ಬಿಜೆಪಿ ನಾಯಕರದ್ದು ಬ್ರಹ್ಮಾಂಡ ಬಂಡವಾಳ ಇದೆ. ಹಿಂದೆ ಚಿಕ್ಕಮಗಳೂರಿನ ಸರ್ಕಾರಿ ಅಧಿಕಾರಿಯೊಬ್ಬರ ಪತಿ ಕೆಆರ್‌ಎಸ್ ಜಲಾಶಯಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣನಾದವರು ಯಾರು? ತಾಕತ್ತಿದ್ದರೆ ಬಿಜೆಪಿಯವರು ಆ ನಾಯಕನ ಬಗ್ಗೆ ಮಾತನಾಡಲಿ’ ಎಂದು ಸವಾಲು ಹಾಕಿದರು.

‘ಮಂಗಳೂರಿನಲ್ಲಿ ಸಂಘದ ಪ್ರಚಾರಕರೊಬ್ಬರ ಕುಟುಂಬದ ಹೆಣ್ಣು ಮಗಳೊಬ್ಬರನ್ನು ಹಾಳು ಮಾಡಿ ಮುಂಬೈಗೆ ಕದ್ದು ಓಡಿ ಹೋಗಿದ್ದವರು ಯಾರು? ನೀವೇ ಹೇಳಿ? ಸುಮ್ಮನೆ ಕೆಣಕುತ್ತಾ ಹೋದರೆ ಅದೇ ನಿಮಗೆ ತಿರುಗುಬಾಣ ಆಗುತ್ತದೆ’ ಎಂದು ಎಚ್ಚರಿಕೆ ನೀಡಿದರು.

‘ನಾನು ಯಾವುದೇ ಕುಟುಂಬಗಳನ್ನು ಹಾಳು ಮಾಡಿಲ್ಲ. ಬಿಜೆಪಿಯವರು ಎಷ್ಟು ಮನೆಗಳನ್ನು ಹಾಳು ಮಾಡಿದ್ದಾರೆ ಎಂಬುದು ನನಗೆ ಮಾತ್ರವಲ್ಲ ಇಡೀ ನಾಡಿಗೇ ಗೊತ್ತಿದೆ’ ಎಂದರು.

‘ನನ್ನ ವಿಷಯಕ್ಕೆ ಬರದೆ, ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಿ. ಆರ್.ಎಸ್. ಎಸ್ ಬಗ್ಗೆ ನಾನು ಎತ್ತಿರುವ ಪ್ರಶ್ನೆಗಳಿಗೆ ಉತ್ತರ ನೀಡಲಿ’ ಎಂದು ಹೇಳಿದರು.

‘ಮತದಾನಕ್ಕೆ ಮುನ್ನವೇ ಮೀಸಲಾತಿ ವರದಿ ಪಡೆಯಿರಿ’

ಬೆಂಗಳೂರು: ‘ಹಾನಗಲ್ ಮತ್ತು ಸಿಂದಗಿ ವಿಧಾನಸಭಾ ಉಪ ಚುನಾವಣೆಯ ಮತದಾನಕ್ಕೆ ಮುನ್ನವೇ ಲಿಂಗಾಯತ ಪಂಚಮಸಾಲಿಗೆ 2ಎ ಮೀಸಲಾತಿ ನೀಡುವ ಕುರಿತು ಹಿಂದುಳಿದ ವರ್ಗಗಳ ಆಯೋಗದಿಂದ ವರದಿ ಪಡೆಯಬೇಕು’ ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

‘ಅಕ್ಟೋಬರ್ 30ರಂದು ಮತದಾನ ನಡೆಯಲಿದೆ. ಇದಕ್ಕೂ ಮುನ್ನವೇ ಸರ್ಕಾರ ಕ್ರಮ ಕೈಗೊಳ್ಳಬೇಕು. ಇದು ರಾಜಕೀಯ ಒತ್ತಡ ಅಲ್ಲ. ಸಮುದಾಯದ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದೇವೆ’ ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಹಾನಗಲ್ ಕ್ಷೇತ್ರದಲ್ಲಿ ಸುಮಾರು 46 ಸಾವಿರ ಮತ್ತು ಸಿಂದಗಿಯಲ್ಲಿ 36 ಸಾವಿರಕ್ಕೂ ಹೆಚ್ಚು ಪಂಚಮಸಾಲಿ ಸಮುದಾಯದ ಮತದಾರರಿದ್ದಾರೆ. ಹಾನಗಲ್‌ನಲ್ಲಿ ನಮ್ಮ ಸಮುದಾಯಕ್ಕೆ ಬಿಜೆಪಿ ಟಿಕೆಟ್ ನೀಡಿಲ್ಲ. ಸಿ.ಎಂ. ಉದಾಸಿ ಅವರ ಕುಟುಂಬದ ಸದಸ್ಯರಿಗೂ ಟಿಕೆಟ್ ನೀಡಲಿಲ್ಲ. ಮುಖ್ಯಮಂತ್ರಿ ಬದಲಾವಣೆಯ ಸಂದರ್ಭದಲ್ಲೂ ನಮ್ಮ ಸಮುದಾಯದ ಮುಖಂಡರನ್ನು ಬಿಜೆಪಿ ಕಡೆಗಣಿಸಿತು. ಈ ರೀತಿಯ ಬೆಳವಣಿಗೆಗಳಿಂದ ಸಮುದಾಯದಲ್ಲಿ ಅಸಮಾಧಾನವಾಗಿದೆ’ ಎಂದರು.



ಬಸವ ಜಯ ಮೃತ್ಯುಂಜಯ ಸ್ವಾಮೀಜಿ

‘ಮೀಸಲಾತಿಗೂ ಮತ್ತು ಚುನಾವಣಾ ರಾಜಕೀಯಕ್ಕೂ ಸಂಬಂಧ ಇಲ್ಲ. ಆದರೆ, ಮೀಸಲಾತಿ ಕಲ್ಪಿಸುವಂತೆ ಸರ್ಕಾರದ ಮೇಲೆ ಒತ್ತಡ ಹಾಕುವ ದೃಷ್ಟಿಯಿಂದ ಈ ಸಂದರ್ಭದಲ್ಲಿ ಆಗ್ರಹಿಸುತ್ತಿದ್ದೇವೆ’ ಎಂದರು.

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದರಿಂದ ಸತ್ಯಾಗ್ರಹವನ್ನು ಮುಂಡೂಡಲಾಗಿತ್ತು. ಆದರೆ, ಈಗ ಎರಡನೇ ಹಂತದ ಹೋರಾಟವನ್ನು ಮತ್ತೆ ಮುಂದುವರಿಸಲಾಗಿದೆ. ಈಗಾಗಲೇ ಅ.13ರಿಂದ ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್ ಅಭಿಯಾನವನ್ನು ಶಿಕಾರಿಪುರ ತಾಲ್ಲೂಕಿನ ಉಡುತಡಿಯಿಂದ ಆರಂಭಿಸಲಾಗಿದೆ. 2022ರ ಜನವರಿ 14ರವರೆಗೆ ಈ ಅಭಿಯಾನ ನಡೆಯಲಿದೆ’ ಎಂದರು.

‘ಅಕ್ಟೋಬರ್ 18ರಿಂದ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಈ ಅಭಿಯಾನ ಆರಂಭಿಸಲಾಗಿದ್ದು, 23ರವರೆಗೆ ನಡೆಯಲಿದೆ. ಅಕ್ಟೋಬರ್ 23ರಂದು ಬೆಂಗಳೂರಿನಲ್ಲಿ ಕಿತ್ತೂರು ರಾಣಿ ಚನ್ನಮ್ಮ ಜಯಂತ್ಯುತ್ಸವ ಆಯೋಜಿಸಲಾಗಿದೆ’ ಎಂದು ತಿಳಿಸಿದರು.

ಗಲ್ಫ್ ಕಂಪನಿಯಿಂದ ₹ 3,500 ಕೋಟಿ ಹೂಡಿಕೆ: ನಿರಾಣಿ

ಬೆಂಗಳೂರು: ‘ಅನೇಕ ಯುಎಇ ಉದ್ಯಮಿಗಳು ರಾಜ್ಯದಲ್ಲಿ ಬಂಡವಾಳ ಹೂಡಲು ಮುಂದೆ ಬಂದಿದ್ದಾರೆ. ಗಲ್ಫ್ ಇಸ್ಲಾಮಿಕ್ ಇನ್ವೆಸ್ಟ್‌ಮೆಂಟ್ ಕಂಪನಿ ಬೆಂಗಳೂರಿನಲ್ಲಿ ಕಚೇರಿ ತೆರೆಯಲು ಸಮ್ಮತಿಸಿದ್ದು, ಮುಂದಿನ ವರ್ಷಗಳಲ್ಲಿ ಸುಮಾರು ₹ 3,500 ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ’ ಎಂದು ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ತಿಳಿಸಿದರು.

‘ದುಬೈ ಎಕ್ಸ್‌ಪೋ’ದಲ್ಲಿ ಭಾಗವಹಿಸಿ ಬಂದ ಅವರು ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ‘ಅಧಿಕಾರಿಗಳ ನೇತೃತ್ವದ ನಿಯೋಗದ ಜೊತೆ ಉದ್ಯಮಿಗಳನ್ನು ಭೇಟಿಯಾಗಿ ರಾಜ್ಯದಲ್ಲಿ ಬಂಡವಾಳ ಹೂಡಲು ಮನವರಿಕೆ ಮಾಡಿದ್ದೇನೆ’ ಎಂದರು.

‘ವಿಶ್ವದಲ್ಲೇ ಮುಂಚೂಣಿಯಲ್ಲಿರುವ ಲುಲು ಗ್ರೂಪ್, ಮುಬದಾಲ, ಕೆಇಎಫ್ ಹೋಲ್ಡಿಂಗ್ಸ್ ದುಕಬ್, ಎಲೆಕ್ಟ್ರಿಕ್ ವೇ ಡಿಪಿ ವರ್ಲ್ಡ್, ಆಸ್ಟರ್ ಹೆಲ್ತ್ ಕೇರ್, ಎ.1 ಶಂಶಿ ಟ್ರಾವೆಲರ್ಸ್, ಬಿಎಲ್‌ಎಸ್ ಇಂಟರ್ ನ್ಯಾಷನಲ್, ಯುನೈಟೆಡ್ ಪಾರ್ಕ್ ಆ್ಯಂಡ್ ಸರ್ವೀಸ್, ಎಕ್ಸ್ ಪೋರ್ಟ್ ಬಹ್ರೇನ್, ಎಐಎಂಎಲ್, ತಗ್ಲೀಪ್ ಇಂಡಸ್ಟ್ರೀಸ್ ಸೇರಿದಂತೆ ಅನೇಕ ಕಂಪನಿಗಳು ಬಂಡವಾಳ ಹೂಡಿಕೆಗೆ ಸಮ್ಮತಿಸಿವೆ’ ಎಂದು ತಿಳಿಸಿದರು.

‘2022ರ ನವೆಂಬರ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಯಲಿದೆ. ಈ ಸಂದರ್ಭದಲ್ಲಿ ದೊಡ್ಡ ಪ್ರಮಾಣದ ಉದ್ಯಮಿಗಳು ರಾಜ್ಯಕ್ಕೆ ಬರುವ ಸಂಭವವಿದೆ’ ಎಂದು ಮಾಹಿತಿ ನೀಡಿದರು.

‘ರಾಜ್ಯವು ಅಂತರಿಕ್ಷ ಮತ್ತು ರಕ್ಷಣಾ ವಲಯದಲ್ಲಿ ಹೆಚ್ಚಿನ ಸಾಮರ್ಥ್ಯ ಹೊಂದಿದ್ದು, ಕರ್ನಾಟಕವು ಭಾರತದ ಅತಿದೊಡ್ಡ ಅಂತರಿಕ್ಷ ಕ್ಲಸ್ಟರ್ ಆಗಿದೆ. ಭಾರತದಲ್ಲಿ ಬೃಹತ್ ಎಲೆಕ್ಟ್ರಿಕಲ್ ಯಂತ್ರಗಳ ಎರಡನೇ ಅತಿದೊಡ್ಡ ಉತ್ಪಾದನಾ ರಾಜ್ಯವಾಗಿದೆ. ಅಂತರಿಕ್ಷ, ಬಾಹ್ಯಾಕಾಶ, ರಕ್ಷಣೆ, ಆರೋಗ್ಯ, ಕೃಮಗ್ಗ, ಆಹಾರ ಸಂಸ್ಕರಣೆ ಸೇರಿದಂತೆ ವಿವಿಧ ವಲಯಗಳಲ್ಲಿ ಬಂಡವಾಳ ಹೂಡಿಕೆ ಮಾಡಲು ಉದ್ಯಮಿಗಳಲ್ಲಿ ಮನವಿ ಮಾಡಿದ್ದೇವೆ‘ ಎಂದರು.

‘ಕೆಐಎಡಿಬಿಯಿಂದ ಪಡೆದಿರುವ ಜಮೀನನ್ನು ಕೈಗಾರಿಕೆಗಳ ಉದ್ದೇಶಕ್ಕೆ ಬಳಸಬೇಕು. ಒಂದು ವೇಳೆ ಯಾರಾದರೂ ಬಳಸಿದ್ದರೆ ಜಮೀನನ್ನು ಹಿಂಪಡೆಯಲಾಗುವುದು. ಈಗಾಗಲೇ ಕೆಲವರಿಗೆ ನೋಟಿಸ್ ಕೂಡ ನೀಡಲಾಗಿದೆ. ಯಾವುದೇ ಕಾರಣಕ್ಕೂ ಜಮೀನು ದುರುಪಯೋಗ ಆಗಲು ಬಿಡುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣರೆಡ್ಡಿ, ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ ಇದ್ದರು.

ಆರ್‌ಎಸ್‌ಎಸ್ ಬಗ್ಗೆ ಪ್ರಶ್ನಿಸುವ ಹಕ್ಕು ಕುಮಾರಸ್ವಾಮಿಗೆ ಇಲ್ಲ: ಯಡಿಯೂರಪ್ಪ

‘ಹಣ, ತೋಳ್ಬಲದ ಚುನಾವಣೆ ಸಂಸ್ಕೃತಿ ಕಾಂಗ್ರೆಸ್‌ನದ್ದು’

ಪ್ರಜಾವಾಣಿ ವಾರ್ತೆ

ಸಿಂದಗಿ (ವಿಜಯಪುರ): ‘ಕಾಂಗ್ರೆಸ್ ಪಕ್ಷ ದಿನವೂ ಬಿಜೆಪಿ ಬಗ್ಗೆ ಅಪಪ್ರಚಾರದಲ್ಲಿ ತೊಡಗಿದೆ. ಬಿಜೆಪಿ ಚೀಲದಲ್ಲಿ ಹಣ ತುಂಬಿ ಹಂಚುತ್ತಿದೆ ಎಂದು ಸುಳ್ಳು ಆರೋಪ ಮಾಡುತ್ತಿದೆ. ಹಣ, ಹೆಂಡ, ತೋಳ್ಬಲ ಕಾಂಗ್ರೆಸ್ ಸಂಸ್ಕೃತಿಯೇ ವಿನಾ ಬಿಜೆಪಿಯದ್ದಲ್ಲ’ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿರುಗೇಟು ನೀಡಿದರು.

ತಾಲ್ಲೂಕು ಕ್ರೀಡಾಂಗಣದಲ್ಲಿ ಗುರುವಾರ ಬಿಜೆಪಿ ಅಭ್ಯರ್ಥಿ ರಮೇಶ ಭೂಸನೂರ ಚುನಾವಣಾ ಪ್ರಚಾರ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

‘ದೇಶದಲ್ಲಿ 26 ರಾಜ್ಯಗಳಲ್ಲಿ ಬಿಜೆಪಿ ಸರ್ಕಾರವಿದೆ. ಕಾಂಗ್ರೆಸ್ ಕೆಲವೆಡೆ ಉಸಿರಾಡಿಸುತ್ತಿದೆ. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ತಕ್ಕಂತೆ ವರ್ತಿಸಬೇಕು’ ಎಂದರು.

ರಾಜಕೀಯದಿಂದ ನಿವೃತ್ತಿಯಾಗುವೆ: ಸ್ವಾತಂತ್ರ್ಯಾನಂತರದಿಂದಲೂ ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರರನ್ನು ತಪ್ಪು ದಾರಿಗೆ ಎಳೆದು ದ್ರೋಹ ಮಾಡುತ್ತಲೇ ಬಂದಿದೆ. ಮುಸ್ಲಿಮರೇ ಕಾಂಗ್ರೆಸ್ ವ್ಯಾಮೋಹದಿಂದ ಹೊರಬನ್ನಿ. ಅಪಪ್ರಚಾರಕ್ಕೆ ಕಿವಿಗೊಡಬೇಡಿ. ಕೇಂದ್ರ, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದೆ. ಅಲ್ಪಸಂಖ್ಯಾತರಿಗೆ ದ್ರೋಹ ಮಾಡಿರುವ ಒಂದಾದರೂ ಉದಾಹರಣೆ ಕೊಟ್ಟರೆ ನಾನು ರಾಜಕೀಯದಿಂದ ನಿವೃತ್ತಿಯಾಗುವೆ’ ಎಂದು ಯಡಿಯೂರಪ್ಪ ಸವಾಲೆಸದರು.

ಆರ್‌ಎಸ್‌ಎಸ್ ಬಗ್ಗೆ ಪ್ರಶ್ನಿಸುವ ಹಕ್ಕು ಕುಮಾರಸ್ವಾಮಿಗೆ ಇಲ್ಲ: ‘ಆರ್‌ಎಸ್‌ಎಸ್ ಬಗ್ಗೆ ಪ್ರಶ್ನೆ ಕೇಳುವ ಹಕ್ಕು ಕುಮಾರಸ್ವಾಮಿಗೆ ಇಲ್ಲ. ಇಂಥ ಪ್ರಶ್ನೆ ಕೇಳುವ ಅಗತ್ಯ ಇಲ್ಲ. ಅವರಿಗೆ ಉತ್ತರ ಕೊಡುವ ಅಗತ್ಯವೂ ಇಲ್ಲ’ ಎಂದು ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಹೇಳಿದರು.

ವಿಜಯಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ಮತ್ತು ಜೆಡಿಎಸ್‌ನವರು ಆರ್ ಎಸ್ ಎಸ್ ಬಗ್ಗೆ ಹಗುರವಾಗಿ ಮಾತಾಡಿದರೆ ಅವರ ಗೌರವ ಕಡಿಮೆ ಆಗುತ್ತದೆಯೇ ಹೊರತು, ಸಂಘದ ಗೌರವ ಕಡಿಮೆ ಆಗೋದಿಲ್ಲ.ಈ ದೇಶದ ರಾಷ್ಟ್ರಪತಿ, ಪ್ರಧಾನಿ, ನಾವು ಆರ್ ಎಸ್ ಎಸ್ ಮೂಲಕವೇ ಬಂದಿದ್ದೇವೆ. ಬಿಜೆಪಿ ಅಧಿಕಾರದಲ್ಲಿರುವ 26 ರಾಜ್ಯಗಳಲ್ಲಿನ ಬಹುತೇಕ ಮುಖಂಡರು ಆರ್.ಎಸ್.ಎಸ್‌ನಿಂದ ಬಂದವರಾಗಿದ್ದಾರೆ’ ಎಂದರು.

ಜೆಡಿಎಸ್ ಪಕ್ಷವು ಬಿಜೆಪಿಯ ಬಿ ಟೀಂ ಎಂಬ ಆರೋಪದ ಕುರಿತು ಪ್ರತಿಕ್ರಿಯಿಸಿದ ಅವರು, ಸ್ವತಃ ದೇವೇಗೌಡರೇ ಸಿಂದಗಿಯಲ್ಲಿ ಚುನಾವಣಾ ಪ್ರಚಾರ ಮಾಡುತ್ತಿದ್ದಾರೆ. ಜೆಡಿಎಸ್ ಬಗ್ಗೆ ಹಗುರವಾಗಿ ಮಾತನಾಡುವುದನ್ನು ನಾನು ಒಪ್ಪುವುದಿಲ್ಲ. ಇದರಲ್ಲಿ ಸತ್ಯಾಂಶ ಇಲ್ಲ ಎಂದರು.

ರಾಜ್ಯ ಪ್ರವಾಸ: ಅ. 30 ರಂದು ಚುನಾವಣೆ ಮುಗಿದ ಬಳಿಕ ರಾಜ್ಯದಾದ್ಯಂತ ಪ್ರವಾಸ ಮಾಡುತ್ತೇನೆ. ಮುಂದಿನ ವಿಧಾನ ಸಭೆ ಚುನಾವಣೆಯಲ್ಲಿ 140 ಕ್ಕೂ ಹೆಚ್ಚು ಸೀಟು ಗೆಲ್ಲುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು.



ಬಿಜೆಪಿ ಅಭ್ಯರ್ಥಿ ಪರ ನಡೆದ ಚುನಾವಣಾ ಪ್ರಚಾರ ಬಹಿರಂಗ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಗೆಲುವಿನ ಸಂಕೇತ ತೋರಿಸಿದರು. ಪರಿಷತ್ ಸದಸ್ಯ ಲಕ್ಷ್ಮಣ ಸವದಿ, ಶಾಸಕ ಜಗದೀಶ ಶೆಟ್ಟರ್, ಅಭ್ಯರ್ಥಿ ರಮೇಶ ಭೂಸನೂರ, ಸಚಿವರಾದ ಗೋವಿಂದ ಕಾರಜೋಳ, ವಿ.ಸೋಮಣ್ಣ ಇದ್ದಾರೆ

ಸಲೀಂ-ಉಗ್ರಪ್ಪ ಪಿಸುಮಾತು ಸಿದ್ದರಾಮಯ್ಯ ಕೊಡುಗೆ. ಉಗ್ರಪ್ಪ ಸಿದ್ದರಾಮಯ್ಯನ ಶಿಷ್ಯ. ಪಕ್ಷದಿಂದ ಉಚ್ಚಾಟನೆ ಮಾಡಿದ್ದು ಸಲೀಂ ಅವರನ್ನು. ಇದು ಮುಸ್ಲಿಮರ ಬಗ್ಗೆ ಇರುವ ಕಾಂಗ್ರೆಸ್ ಧೋರಣೆ

ಜಗದೀಶ ಶೆಟ್ಟರ್, ಶಾಸಕ

ಕಾಂಗ್ರೆಸ್ ಪಕ್ಷ ಸೋತು ಸುಣ್ಣವಾಗಿದೆ. ಮತಿಭ್ರಮಣೆಯಾಗಿ ಬಿಜೆಪಿ ವಿರುದ್ಧ ವೃಥಾ ಆರೋಪ ಮಾಡುತ್ತಿದೆ

ಬಿ.ಶ್ರೀರಾಮುಲು, ಸಚಿವ

‘ಧರ್ಮಗಳನ್ನು ಒಡೆಯುವುದೇ ಕಾಂಗ್ರೆಸ್ ಕೆಲಸ’

ಹಾವೇರಿ: ‘ಕಾಂಗ್ರೆಸ್ ಪಕ್ಷದವರು ರಾಜ್ಯದಲ್ಲಿ ಅಧಿಕಾರದಲ್ಲಿ ಇದ್ದಾಗ ಧರ್ಮ ಒಡೆಯುವ ಕೆಲಸ ಮಾಡಿದ್ದಾರೆ. ಮನುಷ್ಯ-ಮನಸ್ಸುಗಳ ಮಧ್ಯೆ ಅಶಾಂತಿ ಸೃಷ್ಟಿ ಮಾಡಿ ಜಾತಿ ಜಾತಿಗಳ ನಡುವೆ ವಿಷ ಬೀಜ ಬಿತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಹಾನಗಲ್ ವಿಧಾನಸಭಾ ಕ್ಷೇತ್ರದ ಮಕರವಳ್ಳಿ ಮತ್ತು ಹೊಂಕಣ ಗ್ರಾಮದಲ್ಲಿ ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಇತ್ತೀಚಿಗೆ ವಿಧಾನಸೌಧಕ್ಕೆ ಸಿದ್ದರಾಮಯ್ಯನವರು ಹಾಗೂ ಡಿ.ಕೆ. ಶಿವಕುಮಾರ್ ಚಕ್ಕಡಿ ಏರಿ ಬಂದಿದ್ದರು. ಹಗ್ಗ ಸಿದ್ದರಾಮಯ್ಯ ಕೈಯ್ಯಲ್ಲಿತ್ತು, ಬಾರುಕೋಲು ಡಿಕೆಶಿ ಕೈಯಲ್ಲಿತ್ತು. ಇವರಿಬ್ಬರ ಎಳೆದಾಟದಲ್ಲಿ ಚಕ್ಕಡಿಯಲ್ಲಿ ಇದ್ದ ಶಾಸಕರು ದಬಕ್ಕನೇ ಕೆಳಗೆ ಬಿದ್ದರು. ಇದೇ ರೀತಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು 2023ರ ಚುನಾವಣೆಯಲ್ಲಿ ದಬದಬನೇ ಬೀಳುತ್ತಾರೆ. ಇದು ಟ್ರೇಲರ್ ಮಾತ್ರ. ಹಾನಗಲ್ ಕ್ಷೇತ್ರದಿಂದ ಕಾಂಗ್ರೆಸ್ ಸೋಲು ಆರಂಭವಾಗಲಿದೆ. ಕಮಲದ ಅಭ್ಯರ್ಥಿಯನ್ನು ಗೆಲ್ಲಿಸುವ ಮೂಲಕ 2023ರ ಚುನಾವಣೆಗೆ ಇಲ್ಲಿನ ಮತದಾರರು ಮುನ್ನಡೆ ಬರೆಯಲಿದ್ದಾರೆ ಎಂದರು.

ರೈತರ ಪ್ರತಿಭಟನೆ ವಿರುದ್ಧದ ಅರ್ಜಿ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಹೇಳಿಕೆ

‘ಪ್ರತಿಭಟಿಸಿ, ಹೆದ್ದಾರಿ ಬಂದ್ ಮಾಡುವಂತಿಲ್ಲ’

ನವದೆಹಲಿ (ಪಿಟಿಐ): ‘ರೈತರು ಪ್ರತಿಭಟಿಸುವ ಹಕ್ಕನ್ನು ಹೊಂದಿದ್ದಾರೆ. ಆದರೆ ಆ ಹಕ್ಕು ಹೊಂದಿದ ಮಾತ್ರಕ್ಕೆ ಅವರು, ಹೆದ್ದಾರಿಗಳನ್ನು ಅನಿರ್ದಿಷ್ಟಾವಧಿಗೆ ಬಂದ್ ಮಾಡುವ ಹಾಗಿಲ್ಲ’ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ರೈತರು ಹೆದ್ದಾರಿ ಬಂದ್ ಮಾಡಿರುವುದರಿಂದ ದೆಹಲಿಗೆ ಹೋಗುವುದು ಕಷ್ಟವಾಗುತ್ತಿದೆ ಎಂದು ನೋಯ್ಡಾ ನಿವಾಸಿಯೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಮೂರ್ತಿ ಎಸ್.ಕೆ.ಕೌಲ್ ಮತ್ತು ಎಂ.ಎಂ.ಸುಂದರೇಶ್ ಅವರಿದ್ದ ಪೀಠವು ಹೀಗೆ ಹೇಳಿದೆ.

‘ನೀವು ಯಾವುದೇ ರೀತಿಯಲ್ಲಿ ಪ್ರತಿಭಟನೆ ನಡೆಸುವ ಹಕ್ಕನ್ನು ಹೊಂದಿದ್ದೀರಿ. ಆದರೆ ಅನಿರ್ದಿಷ್ಟಾವಧಿಯವರೆಗೆ ಹೆದ್ದಾರಿಗಳನ್ನು ಬಂದ್ ಮಾಡುವಂತಿಲ್ಲ. ಜನರು ರಸ್ತೆ-ಹೆದ್ದಾರಿಗಳನ್ನು ಬಳಸುವ ಹಕ್ಕನ್ನು ಹೊಂದಿದ್ದಾರೆ’ ಎಂದು ಪೀಠವು ಹೇಳಿದೆ.

ಹೆದ್ದಾರಿಗಳನ್ನು ಬಂದ್ ಮಾಡಿರುವ ಬಗ್ಗೆ, ಪೀಠದ ಎದುರು ರೈತ ಸಂಘಟನೆಗಳು ಮತ್ತು ಕೇಂದ್ರ ಸರ್ಕಾರವು ಪರಸ್ಪರ ಆರೋಪ-ಪ್ರತ್ಯಾರೋಪ ಮಾಡಿದವು.

ರೈತರ ಪ್ರತಿಭಟನೆ ಮತ್ತು ಕೃಷಿ ಕಾಯ್ದೆಗಳ ವಿರುದ್ಧ ಸುಪ್ರೀಂ ಕೋರ್ಟ್‌ನ ಬೇರೊಂದು ತ್ರಿಸದಸ್ಯ ಪೀಠದಲ್ಲಿ ವಿಚಾರಣೆ ನಡೆಯುತ್ತಿದೆ.

> ಯಾವುದೇ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದ ಮಾತ್ರಕ್ಕೆ ಪ್ರತಿಭಟನೆ ನಡೆಸಬಾರದು ಎಂದೇನಿಲ್ಲ. ಯಾವುದೇ ರೀತಿಯಲ್ಲಿ ಪ್ರತಿಭಟನೆ ನಡೆಸುವ ಹಕ್ಕು ರೈತರಿಗೆ ಇದೆ
> **ಸುಪ್ರೀಂ ಕೋರ್ಟ್ ಪೀಠ**

> ರಾಮಲೀಲಾ ಮೈದಾನದಲ್ಲಿ ಪ್ರತಿಭಟನೆ ನಡೆಸಲು ರೈತರಿಗೆ ಅವಕಾಶ ನೀಡಿ. ಅವರು ಹೆದ್ದಾರಿಗಳ ಬದಿಯಲ್ಲಿ ಪ್ರತಿಭಟನೆ ನಡೆಸುವುದನ್ನು ಕೈಬಿಡುತ್ತಾರೆ
> **ದುಶ್ಯಂತ್ ದವೆ,** ರೈತ ಸಂಘಟನೆಗಳ ಪರ ವಕೀಲ

> ರೈತರು ರಾಮಲೀಲಾ ಮೈದಾನಕ್ಕೆ ಅಥವಾ ಜಂತರ್ ಮಂತರ್‌ಗೆ ಬಂದರೆ, ಪರಿಸ್ಥಿತಿ ಬಿಗಡಾಯಿಸುತ್ತದೆ. ಅದು ಅತ್ಯಂತ ಗಂಭೀರವಾದ ಸಮಸ್ಯೆಯಾಗುತ್ತದೆ
> **ತುಷಾರ್ ಮೆಹ್ತಾ**
> ಸಾಲಿಸಿಟರ್ ಜನರಲ್

ಈ ಅರ್ಜಿಯನ್ನೂ ಅದೇ ಪೀಠಕ್ಕೆ ವರ್ಗಾಯಿಸಿ ಎಂದು ರೈತ ಸಂಘಟನೆಗಳ ಪರ ವಕೀಲ ದುಶ್ಯಂತ್ ದವೆ ಅವರು ಪೀಠಕ್ಕೆ ಮನವಿ ಮಾಡಿದರು. ಅವರ ಮನವಿಯನ್ನು ಪೀಠವು ತಿರಸ್ಕರಿಸಿತು.

‘ಇಲ್ಲಿ ಹೆದ್ದಾರಿ ಬಂದ್ ಆಗಿರುವ ಬಗ್ಗೆ ಮಾತ್ರವೇ ವಿಚಾರಣೆ ನಡೆಯುತ್ತಿದೆ. ಹೆದ್ದಾರಿಯನ್ನು ಬಂದ್ ಮಾಡಬಹುದು ಎಂಬುದು ರೈತ ಸಂಘಟನೆಗಳ ನಿಲುವೋ ಅಥವಾ ಹೆದ್ದಾರಿಯನ್ನು ಬಂದ್ ಮಾಡಬಾರದು ಎಂಬುದು ರೈತ ಸಂಘಟನೆಗಳ ನಿಲುವೋ ಎಂಬುದನ್ನು ಸ್ಪಷ್ಟಪಡಿಸಬೇಕು’ ಎಂದು ಪೀಠವು ಹೇಳಿದೆ.

ಈ ಬಗ್ಗೆ ವಿವರಣೆ ನೀಡುವಂತೆ ರೈತ ಸಂಘಟನೆಗಳಿಗೆ ಸೂಚನೆ ನೀಡಿದ್ದು, ಮೂರು ವಾರಗಳ ಕಾಲಾವಕಾಶ ನೀಡಿದೆ.

‘ಹೆದ್ದಾರಿ ಬಂದ್ ಮಾಡಿದ್ದು ರೈತರಲ್ಲ ಪೊಲೀಸರು’

‘ಹೆದ್ದಾರಿ ಬಂದ್ ಮಾಡಿದ್ದು ರೈತರಲ್ಲ, ದೆಹಲಿ ಪೊಲೀಸರು. ರೈತರು ಪ್ರತಿಭಟನೆ ನಡೆಸುತ್ತಿರುವ ಸ್ಥಳಗಳಿಗೆ ನಾನು ಆರು ಬಾರಿ ಭೇಟಿ ನೀಡಿದ್ದೇನೆ. ಎಲ್ಲಿಯೂ ರೈತರು ಹೆದ್ದಾರಿ ಬಂದ್ ಮಾಡಿಲ್ಲ’ ಎಂದು ರೈತ ಸಂಘಟನೆಗಳ ಪರ ವಕೀಲ ದುಶ್ಯಂತ್ ದವೆ ಪೀಠದ ಎದುರು ಹೇಳಿದರು.

‘ರೈತರು ದೆಹಲಿಗೆ ಬರುವುದನ್ನು ತಡೆಯಲು, ದೆಹಲಿ ಪೊಲೀಸರು ಗಡಿಗಳಲ್ಲಿ ಹೆದ್ದಾರಿಗಳನ್ನು ಬಂದ್ ಮಾಡಿದ್ದರು. ಬ್ಯಾರಿಕೇಡ್ ಹಾಕಿದ್ದು ಪೊಲೀಸರೇ ಹೊರತು ರೈತರಲ್ಲ. ರಾಮಲೀಲಾ ಮೈದಾನ ಅಥವಾ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲು ರೈತರಿಗೆ ಅವಕಾಶ ನೀಡಿ’ ಎಂದು ಅವರು ಕೋರಿದರು.

‘ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆದ ಹಿಂಸಾಚಾರದ ವಿರುದ್ಧ ರಾಮಲೀಲಾ ಮೈದಾನದಲ್ಲಿ ಪ್ರತಿಭಟನೆ ನಡೆಸಲು ಬಿಜೆಪಿ ಕಾರ್ಯಕರ್ತರಿಗೆ ಅವಕಾಶ ನೀಡಲಾಗಿತ್ತು. ಅಲ್ಲಿ 5 ಲಕ್ಷ ಬಿಜೆಪಿ ಕಾರ್ಯಕರ್ತರು ಸೇರಿದ್ದರು. ಅವರಿಗೆ ಮಾತ್ರ ಅವಕಾಶ ನೀಡಿ, ಕೆಲವೇ ಸಾವಿರ ಸಂಖ್ಯೆಯಲ್ಲಿರುವ ರೈತರಿಗೆ ಅವಕಾಶ ನಿರಾಕರಿಸುತ್ತಿರುವುದು ಏಕೆ? ಸರ್ಕಾರ ಪಕ್ಷಪಾತ ಮಾಡುತ್ತಿದೆ’ ಎಂದು ಅವರು ವಾದಿಸಿದರು.

2020ರ ನವೆಂಬರ್‌ನಲ್ಲಿ ರೈತರು ದೆಹಲಿಯನ್ನು ಪ್ರವೇಶಿಸದಂತೆ ಗಡಿಗಳಲ್ಲಿ ಪೊಲೀಸರು ಹೆದ್ದಾರಿ ತಡೆ ನಿರ್ಮಿಸಿದ್ದರು. ಹೆದ್ದಾರಿಗೆ ಅಡ್ಡವಾಗಿ ಕಾಂಕ್ರೀಟ್



ದೆಹಲಿ–ಗಾಜಿಪುರ ಗಡಿಯಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನು ಬಂದ್ ಮಾಡಿರುವ ದೆಹಲಿ ಪೊಲೀಸರು. ಇದೇ ಸೆಪ್ಟೆಂಬರ್ 21ರಂದು ಈ ಚಿತ್ರ ತೆಗೆಯಲಾಗಿತ್ತು— ಪಿಟಿಐ ಚಿತ್ರ

ಗೋಡೆಗಳನ್ನು ನಿರ್ಮಿಸಿದ್ದರು. ಹೆದ್ದಾರಿಯಲ್ಲೇ ಕಂದಕ ತೋಡಿದ್ದರು. ಕೆಲವೆಡೆ ಬ್ಯಾರಿಕೇಡ್ ಹಾಕಿದ್ದರೆ, ಕೆಲವೆಡೆ ಟಿಪ್ಪರ್‌ಗಳನ್ನು ಅಡ್ಡವಾಗಿ ನಿಲ್ಲಿಸಿದ್ದರು. ಈಗ ದೆಹಲಿ-ಸಿಂಘು, ದೆಹಲಿ-ಟಿಕ್ರಿ ಮತ್ತು ದೆಹಲಿ-ಗಾಜಿಯಾಬಾದ್ ಗಡಿಗಳಲ್ಲಿ ಹೆದ್ದಾರಿಗೆ ಬ್ಯಾರಿಕೇಡ್ ಹಾಕಿದ್ದಾರೆ.

ರೈತರ ಉದ್ದೇಶ ನೆಟ್ಟಗಿಲ್ಲ: ಸರ್ಕಾರ

‘ಪ್ರತಿಭಟನೆ ನಡೆಸುತ್ತಿರುವ ರೈತರ ಉದ್ದೇಶ ನೆಟ್ಟಗಿಲ್ಲ. ಅವರು ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿಲ್ಲ. ಬದಲಿಗೆ ಬೇರೇನೋ ಉದ್ದೇಶ ಇಟ್ಟುಕೊಂಡಿದ್ದಾರೆ. ರೈತರ ಮಧ್ಯೆ ಬೇರೆ ಯಾರೋ ಇದ್ದಾರೆ ಎಂಬುದನ್ನು ಹಲವು ತನಿಖೆಗಳು ಸಾಬೀತುಮಾಡಿವೆ’ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಪೀಠದ ಎದುರು ಆರೋಪಿಸಿದ್ದಾರೆ.

‘ಈ ಕಾರಣದಿಂದಲೇ ಅವರು ದೆಹಲಿ ಪ್ರವೇಶಿಸಲು ಬಿಡುತ್ತಿಲ್ಲ. ಜನವರಿ 26ರಂದು ರೈತರು ಏನು ಮಾಡಿದರೆಂಬುದು ಎಲ್ಲರಿಗೂ ಗೊತ್ತಿದೆ. ಅಂತಹ ಘಟನೆ ಮರುಕಳಿಸಬಾರದು ಎಂದು ಅವರಿಗೆ ಅವಕಾಶ ನೀಡುತ್ತಿಲ್ಲ. ಸೂರಿಲ್ಲದ ಹಲವರು, ರಾಮಲೀಲಾ ಮೈದಾನದಲ್ಲಿ ವಾಸಿಸುತ್ತಾರೆ. ರೈತರು ಅಲ್ಲಿ ಪ್ರತಿಭಟನೆ ನಡೆಸಿದರೆ, ಅವರಿಗೆ ತೊಂದರೆಯಾಗುತ್ತದೆ’ ಎಂದು ತುಷಾರ್ ಮೆಹ್ತಾ ಪ್ರತಿಪಾದಿಸಿದ್ದಾರೆ.


ಇನ್ಫೊಸಿಸ್ ನಿರ್ಮಾಣದ ವಿಶ್ರಾಮ ಸದನವನ್ನು ಪ್ರಧಾನಿ ನರೇಂದ್ರ ಮೋದಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಗುರುವಾರ ಉದ್ಘಾಟಿಸಿದರು

ಇನ್ಫೊಸಿಸ್ ನಿರ್ಮಾಣದ ವಿಶ್ರಾಮ ಸದನ ಉದ್ಘಾಟನೆ

ನವದೆಹಲಿ (ಪಿಟಿಐ): ಇಲ್ಲಿನ ಏಮ್ಸ್ ಆವರಣದಲ್ಲಿರುವ ರಾಷ್ಟ್ರೀಯ ಕ್ಯಾನ್ಸರ್ ಸಂಸ್ಥೆಗಾಗಿ (ಎನ್‌ಸಿಐ) ಇನ್ಫೊಸಿಸ್ ಫೌಂಡೇಶನ್ ನಿರ್ಮಿಸಿರುವ ‘ವಿಶ್ರಾಮ ಸದನ’ವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಉದ್ಘಾಟಿಸಿದರು. 806 ಹಾಸಿಗೆ ಸಾಮರ್ಥ್ಯದ ವಿಶ್ರಾಮ ಸದನವನ್ನು ಇನ್ಫೊಸಿಸ್ ಪ್ರತಿಷ್ಠಾನವು ತನ್ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಯೋಜನೆಯ ಭಾಗವಾಗಿ ನಿರ್ಮಿಸಿದೆ.

ಕ್ಯಾನ್ಸರ್ ರೋಗಿಗಳು ಹಾಗೂ ಅವ ಸಹಾಯಕರಿಗೆ ಇರುವುದಕ್ಕಾಗಿ ಈ ಸದನವನ್ನು ನಿರ್ಮಿಸಲಾಗಿದೆ. ಇದು ಹವಾನಿಯಂತ್ರಿತ ಸೌಕರ್ಯ ಹೊಂದಿರುವ ಸದನ. ರೋಗಿಗಳನ್ನು ನೋಡಿಕೊಳ್ಳಲು ದೀರ್ಘಕಾಲದವರೆಗೆ ಆಸ್ಪತ್ರೆಗಳಲ್ಲಿ ಉಳಿಯಬೇಕಾಗುವ ಸಹಾಯಕರಿಗೆ ಇದರಿಂದ ಅನುಕೂಲ ಆಗಲಿದೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಸುಮಾರು ₹93 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಈ ಸದನವು ಆಸ್ಪತ್ರೆ ಮತ್ತು ಎನ್‌ಸಿಐ ಒಪಿಡಿ ಬ್ಲಾಕ್‌ಗಳಿಗೆ ಸಮೀಪದಲ್ಲಿದೆ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಮನ್ಸುಖ್ ಮಾಂಡವಿಯಾ, ಹರಿಯಾಣ ಮುಖ್ಯಮಂತ್ರಿ ಮನೋಹರಲಾಲ್ ಖಟ್ಟರ್ ಮತ್ತು ಇನ್ಫೊಸಿಸ್ ಫೌಂಡೇಶನ್ ಅಧ್ಯಕ್ಷೆ ಸುಧಾ ಮೂರ್ತಿ ಅವರು ವಿಡಿಯೊ ಕಾನ್ಫರೆನ್ಸಿಂಗ್ ಮೂಲಕ ಉದ್ಘಾಟನೆಯಲ್ಲಿ ಭಾಗಿಯಾಗಿದ್ದರು.

ಆರ್ಯನ್ ಜಾಮೀನು ಅರ್ಜಿ ವಿಚಾರಣೆ ಮುಂದೂಡಿದ ಬಾಂಬೆ ಹೈಕೋರ್ಟ್

ಮುಂಬೈ (ಪಿಟಿಐ): ಡ್ರಗ್ಸ್ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಬಾಲಿವುಡ್ ನಟ ಶಾರೂಕ್ ಖಾನ್ ಪುತ್ರ ಆರ್ಯನ್ ಖಾನ್ ಜಾಮೀನು ಅರ್ಜಿಯ ವಿಚಾರಣೆಯನ್ನು ಇದೇ 26ರಂದು ನಡೆಸುವುದಾಗಿ ಬಾಂಬೆ ಹೈಕೋರ್ಟ್ ಗುರುವಾರ ತಿಳಿಸಿದೆ.

ಲಸಿಕೆ ಸಾಧನೆಗೆ ಶುಭಾಶಯಗಳ ಮಹಾಪೂರ

ಜಿನೀವಾ/ಜೆರುಸಲೇಂ/ನವದೆಹಲಿ (ಪಿಟಿಐ): ಕೋವಿಡ್ ಲಸಿಕೆಯ 100 ಕೋಟಿ ಮೈಲಿಗಲ್ಲು ಸಾಧಿಸಿದ ಭಾರತಕ್ಕೆ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ), ಅಮೆರಿಕ ಸೇರಿದಂತೆ ವಿಶ್ವದೆಲ್ಲೆಡೆಯಿಂದ ಶ್ಲಾಘನೆ ಸಿಕ್ಕಿದೆ.

ಡಬ್ಲ್ಯುಎಚ್‌ಒ ಮಹಾ ನಿರ್ದೇಶಕ ಟೆಡ್ರೊಸ್ ಅಧಾನೊಮ್ ಘೆಬ್ರೆಯೆಸಸ್ ಅವರು ಪ್ರಧಾನಿ ನರೇಂದ್ರ ಮೋದಿ, ವಿಜ್ಞಾನಿಗಳು, ಆರೋಗ್ಯ ಕಾರ್ಯಕರ್ತರನ್ನು ಅಭಿನಂದಿಸಿದ್ದಾರೆ. ಸಾಂಕ್ರಾಮಿಕದಿಂದ ದೇಶದ ಜನರನ್ನು ರಕ್ಷಿಸಲು ಹಾಗೂ ಯೋಜಿತ ಗುರಿಯನ್ನು ಸಾಧಿಸುವಲ್ಲಿ ತೋರಿದ ಶ್ರದ್ಧೆಯನ್ನು ಶ್ಲಾಘಿಸಿದ್ದಾರೆ.

ಅಮೆರಿಕದ ವಿದೇಶಾಂಗ ಉಪ ಕಾರ್ಯದರ್ಶಿ ವೆಂಡಿ ಶೆರ್ಮನ್ ಕೂಡ ಭಾರತವನ್ನು ಅಭಿನಂದಿಸಿದ್ದಾರೆ. ರಫ್ತು ಮಾಡುವ ಉದ್ದೇಶದಿಂದ ಲಸಿಕೆ ಉತ್ಪಾದನೆ ಹೆಚ್ಚಿಸಲು ನಿರ್ಧರಿಸಿರುವ ಭಾರತದ ಬದ್ಧತೆಯನ್ನು ಅವರು ಶ್ಲಾಘಿಸಿದ್ದಾರೆ.

ಭೂತಾನ್ ಪ್ರಧಾನಿ ಡಾ ಲೊಟೇ ಶೆರಿಂಗ್ ಅವರು, ‘ಈ ಸಾಧನೆ ಕೇವಲ ಭಾರತಕ್ಕಷ್ಟೇ ಅಲ್ಲ, ವಿಶ್ವಕ್ಕೆ ಒಂದು ದೊಡ್ಡ ಸಾಧನೆ’ ಎಂದಿದ್ದಾರೆ. ಭೂತಾನ್ ಜನರ ಪರವಾಗಿ ಭಾರತವನ್ನು ಅಭಿನಂದಿಸುತ್ತೇನೆ ಎಂದು ಅವರು ಟ್ವೀಟ್ ಮಾಡಿದ್ದಾರೆ. ಭೂತಾನ್ ವಿದೇಶಾಂಗ ಸಚಿವರೂ ಟ್ವೀಟ್ ಮಾಡಿ ಶುಭ ಕೋರಿದ್ದಾರೆ.

ಈ ಬೃಹತ್ ಕಾರ್ಯವನ್ನು ಸಾಧಿಸಿದ್ದಕ್ಕಾಗಿ ಶ್ರೀಲಂಕಾ ಪ್ರಧಾನಿ ಮಹಿಂದಾ ರಾಜಪಕ್ಸೆ ಅವರು ಪ್ರಧಾನಿ ಮೋದಿ, ವೈದ್ಯಕೀಯ ಸಮುದಾಯ ಮತ್ತು ಮುಂಚೂಣಿ ಕಾರ್ಯಕರ್ತರನ್ನು ಅಭಿನಂದಿಸಿದ್ದಾರೆ. ಭಾರತ-ಲಂಕಾ ಸಂಬಂಧಗಳನ್ನು ಮುನ್ನಡೆಸಲು ಶ್ರೀಲಂಕಾ ಪ್ರಧಾನಿಯವರ ಮಾರ್ಗದರ್ಶನ ಮತ್ತು ಬೆಂಬಲ ಪ್ರಮುಖವಾಗಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ಇದಕ್ಕೆ ಪ್ರತಿಕ್ರಿಯೆ ನೀಡಿದೆ.

100 ಕೋಟಿ ಡೋಸ್ ಮೈಲಿಗಲ್ಲು ಸಾಧಿಸಲು ಕಾರಣರಾದ ಪ್ರಧಾನಿ ಹಾಗೂ ಆರೋಗ್ಯ ಕಾರ್ಯಕರ್ತರನ್ನು ಭಾರತೀಯ ವೈದ್ಯಕೀಯ ಸಂಘ (ಐಎಂಎ) ಶ್ಲಾಘಿಸಿದೆ. ‘ಪಾಶ್ಚಿಮಾತ್ಯ ದೇಶಗಳು ಶೇ 2.5ಕ್ಕಿಂತ ಹೆಚ್ಚು ಕೋವಿಡ್ ಮರಣ ಪ್ರಮಾಣ ದಾಖಲಿಸಿರುವಾಗ, ಭಾರತವು ನಾಯಕತ್ವ, ಬಾಧ್ಯತೆ, ಆಧುನಿಕ ವೈದ್ಯಕೀಯ ಶಕ್ತಿಯ ಮೂಲಕ ಆರೋಗ್ಯ ಸಚಿವಾಲಯದ ಪ್ರಯತ್ನದಿಂದ ಮರಣ ಪ್ರಮಾಣವನ್ನು ಶೇ 1.4ಕ್ಕಿಂತ ಕಡಿಮೆ ಮಾಡಿತು’ ಎಂದು ಐಎಂಎ ತಿಳಿಸಿದೆ.

ದೇಶಕ್ಕೆ ಹೆಚ್ಚಿನ ಹೂಡಿಕೆ ಆಕರ್ಷಿಸಿ, ಆರ್ಥಿಕತೆಯನ್ನು ಬೆಳವಣಿಗೆಯ ಹಾದಿಯಲ್ಲಿ ಕೊಂಡೊಯ್ಯಲು ಭಾರತದ ಈ ಸಾಧನೆ ಸಹಾಯ ಮಾಡುತ್ತದೆ ಎಂದು ಉದ್ಯಮ ವಲಯ ಅಭಿಪ್ರಾಯಪಟ್ಟಿದೆ. ಆರೋಗ್ಯ ವಲಯವೂ ಪ್ರಧಾನಿಯನ್ನು ಶ್ಲಾಘಿಸಿದೆ. ಸೀರಂ ಇನ್‌ಸ್ಟಿಟ್ಯೂಟ್ ಸಿಇಒ ಅದರ್ ಪೂನಾವಾಲಾ ಅವರು ಈ ಮೈಲಿಗಲ್ಲು ಸಾಧಿಸಿದ ಪ್ರಧಾನಿ ನರೇಂದ್ರ ಮೋದಿ, ವಿವಿಧ ಸಚಿವಾಲಯಗಳು ಮತ್ತು ಆರೋಗ್ಯ ಕಾರ್ಯಕರ್ತರನ್ನು ಅಭಿನಂದಿಸಿದ್ದಾರೆ.

ಭಾರತ್ ಬಯೊಟೆಕ್‌ನ ಸುಚಿತ್ರ ಎಲ್ಲ, ಬಯೊಕಾನ್ ಮುಖಸ್ಥೆ ಕಿರಣ್ ಮಜುಂದಾರ್ ಶಾ, ಅಪೋಲೋ, ಫೋರ್ಟಿಸ್ ಸೇರಿದಂತೆ ವಿವಿಧ ಆಸ್ಪತ್ರೆಗಳ ಮುಖ್ಯಸ್ಥರು ಸರ್ಕಾರವನ್ನು ಅಭಿನಂದಿಸಿದ್ದಾರೆ.

ವಿಶ್ವದಾದ್ಯಂತ ಕೋವಿಡ್ -19 ಲಸಿಕೆಗಳನ್ನು ಒದಗಿಸಲು ‘ಲಸಿಕೆ ಮೈತ್ರಿ’ ಎಂಬ ಕಾರ್ಯಕ್ರಮವನ್ನು ಜನವರಿ 26ರಂದು ಕೇಂದ್ರ ಸರ್ಕಾರ ಆರಂಭಿಸಿತ್ತು. ಇದರ ಅಡಿಯಲ್ಲಿ ಕೆನಡಾ, ಬ್ರಿಟನ್, ಭೂತಾನ್, ಬಾಂಗ್ಲಾದೇಶ, ಶ್ರೀಲಂಕಾ, ಬ್ರೆಜಿಲ್, ನೇಪಾಳ, ದಕ್ಷಿಣ ಆಫ್ರಿಕಾ, ಉಕ್ರೇನ್ ಮತ್ತು ಬಹರೇನ್ ಸೇರಿದಂತೆ 95 ದೇಶಗಳಿಗೆ ಭಾರತವು ಸುಮಾರು 6.63 ಕೋಟಿ ಡೋಸ್ ಲಸಿಕೆಗಳನ್ನು ಪೂರೈಸಿದೆ.


ದೇಶದಲ್ಲಿ 100 ಕೋಟಿ ಡೋಸ್ ಕೋವಿಡ್–19 ಲಸಿಕೆ ವಿತರಣೆಯನ್ನು ಸಂಭ್ರಮಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು ದೇಶದ ನೂರು ಪಾರಂಪರಿಕ ಸ್ಮಾರಕಗಳಿಗೆ ಗುರುವಾರ ರಾಷ್ಟ್ರ ಧ್ವಜ ಹೋಲುವ ವಿದ್ಯುತ್ ದೀಪಗಳಿಂದ ಅಲಂಕರಿಸಿದೆ. ಅದರಲ್ಲಿ ವಿಜಯನಗರ ಜಿಲ್ಲೆಯ ಹಂಪಿ ಕೂಡ ಸೇರಿದ್ದು, ಸಪ್ತಸ್ವರ ಮಂಟಪ, ಕಲ್ಲಿನ ರಥಕ್ಕೂ ವಿದ್ಯುತ್ ದೀಪಗಳಿಂದ ಅಲಂಕರಿಸಿದೆ

ಉಳಿದವರಿಗೆ ಲಸಿಕೆ ನೀಡಲು ಒತ್ತು

ನವದೆಹಲಿ: ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಅರ್ಹರಾಗಿರುವ 94 ಕೋಟಿ ಜನರಲ್ಲಿ ಗರಿಷ್ಠ ಸಂಖ್ಯೆಯ ಜನರಿಗೆ ಲಸಿಕೆ ಹಾಕಿಸಲು ಈಗ ಒತ್ತು ನೀಡಬೇಕಿದೆ ಎಂದು ನೀತಿ ಆಯೋಗದ ಸದಸ್ಯ (ಆರೋಗ್ಯ) ಮತ್ತು ಸರ್ಕಾರದ ಕೋವಿಡ್ ಕಾರ್ಯಪಡೆಯ ಅಧ್ಯಕ್ಷ ವಿ.ಕೆ. ಪಾಲ್ ಗುರುವಾರ ಹೇಳಿದ್ದಾರೆ. ಕೋವಿಡ್ ಲಸಿಕೆ ಅಭಿಯಾನವು ನೂರು ಕೋಟಿ ಡೋಸ್‌ಗಿಂತಲೂ ಮುಂದಕ್ಕೆ ಸಾಗಿದ ಸಂದರ್ಭದಲ್ಲಿ ಅವರು ಮಾತನಾಡಿದ್ದಾರೆ.

10 ಕೋಟಿ ಜನರು ಇನ್ನೂ ತಮ್ಮ ಎರಡನೇ ಡೋಸ್ ಲಸಿಕೆ ಹಾಕಿಸಿಕೊಂಡಿಲ್ಲ. ಅವರು ಲಸಿಕೆ ಹಾಕಿಸಿಕೊಳ್ಳುವಂತೆ ನೋಡಿಕೊಳ್ಳಬೇಕಿದೆ. ಅವರಿಗೆ ಸಂದೇಶ ಕಳುಹಿಸಲಾಗುತ್ತಿದೆ ಎಂದು ಪಾಲ್ ತಿಳಿಸಿದ್ದಾರೆ.

ಭಾರತವು ತನ್ನ ಕೋವಿಡ್ ಲಸಿಕೆ ಅಭಿಯಾನಕ್ಕೆ ಮೂರು ಲಸಿಕೆಗಳ ಮೇಲೆ ಅವಲಂಬಿತವಾಗಿದೆ. ಬ್ರಿಟನ್‌ನ ಆಸ್ಟ್ರಾ ಜೆನೆಕಾ ಕಂಪನಿಯ ಭಾರತದ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ತಯಾರಿಸುವ ಕೋವಿಶೀಲ್ಡ್ ಮತ್ತು ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಭಾರತ್ ಬಯೊಟೆಕ್‌ನ ಕೋವ್ಯಾಕ್ಸಿನ್ ಅವುಗಳಲ್ಲಿ ಮುಖ್ಯವಾದವು. ರಷ್ಯಾ ತಯಾರಿಸುತ್ತಿರುವ ಸ್ಪುಟ್ನಿಕ್–ವಿ ಪಾಲು ಬಹಳ ಕಡಿಮೆ ಇದೆ.

‘ಇಲ್ಲಿಗೆ (100 ಕೋಟಿ ಡೋಸ್) ತಲುಪಲು 279 ದಿನಗಳು ಬೇಕಾದವು. ಶೇ 52ರಷ್ಟು ಭಾರತೀಯರಿಗೆ ಮಾತ್ರ ಕನಿಷ್ಠ ಒಂದು ಡೋಸ್ ಲಸಿಕೆ ನೀಡಲು ಈವರೆಗೆ ಸಾಧ್ಯವಾಗಿದೆ. 45 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಏಳು ಕೋಟಿ ಜನರಿಗೆ ಮೊದಲನೇ ಡೋಸ್ ನೀಡುವುದು ಇನ್ನೂ ಸಾಧ್ಯವಾಗಿಲ್ಲ. ಸಾಗಬೇಕಾದ ದಾರಿ ಇನ್ನೂ ದೂರವಿದೆ’ ಎಂದು ರಾಜಗಿರಿ ಕಾಲೇಜ್ ಆಫ್ ಸೋಷಿಯಲ್ ಸೈನ್ಸಸ್‌ನ ಪ್ರಾಧ್ಯಾಪಕ ರಿಜೊ ಎಂ ಜಾನ್ ಹೇಳಿದ್ದಾರೆ.

ತರೂರ್–ಖೇರಾ ಜಟಾಪಟಿ

100 ಕೋಟಿ ಕೋವಿಡ್ ಲಸಿಕೆ ಸಾಧನೆಯ ಗೌರವ ಸರ್ಕಾರಕ್ಕೆ ಸಲ್ಲಬೇಕು ಎಂದು ಕಾಂಗ್ರೆಸ್ ನಾಯಕ ಶಶಿ ತರೂರ್ ಅವರು ಗುರುವಾರ ಹೇಳಿದ್ದಾರೆ. ಈ ಮಾತಿಗೆ ಅವರ ಪಕ್ಷದ ಮತ್ತೊಬ್ಬ ಮುಖಂಡ ಪವನ್ ಖೇರಾ ಅವರು ಆಕ್ಷೇಪ ಎತ್ತಿದ್ದಾರೆ. ದುರಾಡಳಿತದ ಕಾರಣ ಲಕ್ಷಾಂತರ ಕುಟುಂಬಗಳು ಸಂಕಟಪಡುತ್ತಿರುವಾಗ, ಈ ಸಾಧನೆಯ ಗೌರವವನ್ನು ಸರ್ಕಾರಕ್ಕೆ ನೀಡುವುದು ಅಪಮಾನ ಎಂದು ಖೇರಾ ಅಭಿಪ್ರಾಯಪಟ್ಟಿದ್ದಾರೆ.

‘ಕೋವಿಡ್ ಎರಡನೇ ಅಲೆಯ ಅಸಮರ್ಪಕ ನಿರ್ವಹಣೆ ಬಳಿಕ ಸರ್ಕಾರ ಈಗ ಭಾಗಶಃ ಸುಧಾರಿಸಿಕೊಂಡಿದೆ. ತನ್ನ ಹಿಂದಿನ ವೈಫಲ್ಯಗಳಿಗೆ ಸರ್ಕಾರ ಜವಾಬ್ದಾರ. ಆದರೆ ಲಸಿಕೆ ಮೈಲಿಗಲ್ಲು ಸರ್ಕಾರದ ಸಾಧನೆ’ ಎಂದು ತರೂರ್ ಟ್ವೀಟ್ ಮಾಡಿದ್ದರು. ‘ಲಸಿಕೆ ಸಾಧನೆಯ ಗೌರವ ಪಡೆಯುವ ಮೊದಲು ಪ್ರಧಾನಿಯವರು ಸಂತ್ರಸ್ತ ಕುಟುಂಬಗಳ ಕ್ಷಮೆ ಕೇಳಬೇಕು. ಈ ಗೌರವ ವಿಜ್ಞಾನಿಗಳು ಮತ್ತು ವೈದ್ಯಕೀಯ ತಂಡಕ್ಕೆ ಸೇರಬೇಕು’ ಎಂದು ಖೇರಾ ಟ್ವೀಟ್ ಮಾಡಿದ್ದಾರೆ.

ಸಂಭ್ರಮ ಆಚರಣೆ

ಲಸಿಕೆ ನೀಡಿಕೆಯು ನೂರು ಕೋಟಿ ಡೋಸ್ ದಾಟಿದ ಸಂಭ್ರಮವನ್ನು ದೇಶದಾದ್ಯಂತ ಆಚರಿಸಲಾಗಿದೆ. ವಿವಿಧ ಬಂದರುಗಳಲ್ಲಿ ನಿಂತಿದ್ದ ಹಡಗುಗಳು ಸೈರನ್ ಮೊಳಗಿಸಿದವು. ವಿಮಾನ, ಬಸ್ ಮತ್ತು ರೈಲು ನಿಲ್ದಾಣಗಳಲ್ಲಿ ನೂರು ಕೋಟಿ ಲಸಿಕೆ ಡೋಸ್ ಸಂಭ್ರಮದ ಘೋಷಣೆ ಮಾಡಲಾಯಿತು. ಭಾರತೀಯ ಪುರಾತತ್ವ ಇಲಾಖೆಯು ದೇಶದ ವಿವಿಧೆಡೆ ಇರುವ ಸ್ಮಾರಕಗಳಿಗೆ ವಿದ್ಯುದ್ದೀಪಾಲಂಕಾರ ಮಾಡಿ ಸಂಭ್ರಮಕ್ಕೆ ಜತೆಯಾಗಿದೆ.

ಉತ್ತರಾಖಂಡ ಪ್ರವಾಹ: 96 ಕನ್ನಡಿಗರು ಸುರಕ್ಷಿತ

ಬೆಂಗಳೂರು: ಉತ್ತರಾಖಂಡ ಪ್ರವಾಸದಲ್ಲಿರುವ ರಾಜ್ಯದ 10 ಕುಟುಂಬಗಳ ಎಲ್ಲ 96 ಜನರೂ ಸುರಕ್ಷಿತರಾಗಿದ್ದಾರೆ. ಪ್ರವಾಹ ಪೀಡಿತ ಪ್ರದೇಶದಿಂದ ಅವರನ್ನು ರಕ್ಷಿಸಿ ಕರೆ ತರುವ ಪ್ರಯತ್ನ ನಡೆದಿದೆ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದ್ದಾರೆ.


ಆರ್.ಅಶೋಕ್

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು,‘ರಾಜ್ಯ ವಿಪತ್ತು ನಿರ್ವಹಣಾ ಇಲಾಖೆ ಉತ್ತರಾಖಂಡ ಸರ್ಕಾರದ ಜತೆ ನಿರಂತರ ಸಂಪರ್ಕದಲ್ಲಿದೆ. ರಾಜ್ಯದಿಂದ ಪ್ರವಾಸ ಕೈಗೊಂಡಿರುವವರ ವಿವರಗಳನ್ನು ಅವರಿಗೆ ನೀಡಿದ್ದೇವೆ’ ಎಂದು ತಿಳಿಸಿದರು.

ಈ ಉದ್ದೇಶಕ್ಕಾಗಿ ವಿಪತ್ತು ನಿರ್ವಹಣಾ ಇಲಾಖೆ ಸಹಾಯವಾಣಿಯನ್ನು ಸ್ಥಾಪಿಸಿದೆ. ಇದಕ್ಕೆ ಹಲವಾರು ಕರೆಗಳು ಬಂದಿವೆ. ಅಲ್ಲಿ ಸಿಲುಕಿರುವ ಎಲ್ಲರ ರಕ್ಷಣೆಗೆ ಸಕಲ ಸಿದ್ಧತೆ ಮಾಡಿಕೊಂಡಿದ್ದೇವೆ. ಯಾರೂ ಭಯಪಡಬೇಕಾದ ಅಗತ್ಯವಿಲ್ಲ ಎಂದರು.

ಗಡಿಕೇಶ್ವಾರ ಭೂಕಂಪ: ‘ಕಲಬುರಗಿ ಜಿಲ್ಲೆಯ ಗಡಿಕೇಶ್ವಾರದಲ್ಲಿ ಸುಮಾರು 10 ವರ್ಷಗಳಿಂದಲೂ ಲಘು ಕಂಪನ ಆಗುತ್ತಿದೆ. ನಾನೇ ಅಲ್ಲಿಗೆ ಭೇಟಿ ನೀಡಿ ಪರಿಸ್ಥಿತಿಯ ಅವಲೋಕನ ಮಾಡಿದ್ದೇನೆ. 30 ವರ್ಷಕ್ಕೂ ಹೆಚ್ಚು ಮನೆಗಳಿಗೆ ಹೋಗಿ ಸಮಸ್ಯೆ ಆಲಿಸಿದ್ದೇನೆ. ಎಲ್ಲರಿಗೂ ತಾತ್ಕಾಲಿಕ ಶೆಡ್ ವ್ಯವಸ್ಥೆ ಮಾಡಿದ್ದೇವೆ. ಸುಣ್ಣದ ಅಂಶ ಅಲ್ಲಿನ ಮಣ್ಣಿನಲ್ಲಿ ಹೆಚ್ಚಾಗಿರುವುದರಿಂದ ಹೆಚ್ಚು ಮಳೆ ಆದಾಗ ಈ ಸಮಸ್ಯೆ ಆಗುತ್ತದೆ’ ಎಂದು ಅಶೋಕ ತಿಳಿಸಿದರು.

‘ಇನ್ನು ಒಂದು ತಿಂಗಳ ಕಾಲ ವಿಜ್ಞಾನಿಗಳು ಸತತ ಸಂಶೋಧನೆ ಮಾಡಿ ಅಂತಿಮ ವರದಿ ನೀಡಲಿದ್ದಾರೆ. ಅಲ್ಲಿನ ಜಿಲ್ಲಾಡಳಿತದ ಜತೆ ನಿರಂತರ ಸಂಪರ್ಕದಲ್ಲಿದ್ದೇವೆ. ಪರಿಹಾರ ಕಾರ್ಯಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಜಿಲ್ಲಾಧಿಕಾರಿಗಳ ಖಾತೆಗೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ’ ಎಂದರು.

ಕೇರಳದಲ್ಲಿ ಮತ್ತೆ ಮಳೆ: 8 ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್

ತಿರುವನಂತಪುರ/ಡೆಹ್ರಾಡೂನ್ (ಪಿಟಿಐ): ಅಲ್ಪ ವಿರಾಮದ ಬಳಿಕ ಕೇರಳದಲ್ಲಿ ಗುರುವಾರ ಗುಡುಗು ಸಿಡಿಲಿನಿಂದ ಕೂಡಿದ ಭಾರಿ ಮಳೆಯಾಗಿದೆ. ರಾಜ್ಯದ ಎಂಟು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಬಹುದು ಎಂಬ ಮುನ್ನೆಚ್ಚರಿಕೆಯನ್ನು ಹವಾಮಾನ ಇಲಾಖೆ ನೀಡಿದೆ. ಈ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಪತ್ತನಂತಿಟ್ಟ, ಕೋಟಯಂ, ಇಡುಕ್ಕಿ, ಪಾಲಕ್ಕಾಡ್, ಮಲಪ್ಪುರ, ಕೋಯಿಕ್ಕೋಡ್, ವಯನಾಡ್ ಮತ್ತು ಕಣ್ಣೂರು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ತಿರುವನಂತಪುರ, ಕೊಲ್ಲಂ, ಆಲಪ್ಪುಳ, ತ್ರಿಶ್ಶೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಆರೆಂಜ್ ಅಲರ್ಟ್ ಎಂದರೆ ಭಾರಿ ಮಳೆ ಮತ್ತು ಯೆಲ್ಲೋ ಅಲರ್ಟ್ ಎಂದರೆ ಅಲ್ಲಲ್ಲಿ ಸಾಮಾನ್ಯ ಮಳೆ.

ಕೇರಳದ ಹಲವು ಭಾಗಗಳಲ್ಲಿ ಮತ್ತು ಲಕ್ಷದ್ವೀಪದ ಕೆಲವು ಭಾಗಗಳಲ್ಲಿ ಮಳೆ ಆಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಸಮುದ್ರದಲ್ಲಿ 40ರಿಂದ 50 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದೆ. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ. ಇದೇ 15ರಿಂದ ರಾಜ್ಯದಲ್ಲಿ ಮಳೆ ಆರಂಭವಾಗಿದೆ. ಹಲವು ಪ್ರದೇಶಗಳಲ್ಲಿ ಭಾರಿ ಮಳೆ ಸುರಿದಿದ್ದು ಅನಾಹುತಕ್ಕೆ ಕಾರಣವಾಗಿದೆ. ಮಳೆ ಸಂಬಂಧಿ ಅವಘಡಗಳಿಂದ ಈವರೆಗೆ 42 ಮಂದಿ ಮೃತಪಟ್ಟಿದ್ದಾರೆ.

ಶಾ ಸಮೀಕ್ಷೆ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಭಾರಿ ಮಳೆಯಿಂದ ತೀವ್ರ ತೊಂದರೆಗೆ ಒಳಗಾಗಿರುವ ಉತ್ತರಾಖಂಡ ರಾಜ್ಯದ ವಿವಿಧ ಭಾಗಗಳಲ್ಲಿ ಗುರುವಾರ ವೈಮಾನಿಕ ಸಮೀಕ್ಷೆ ನಡೆಸಿದ್ದಾರೆ.

ಕುಮಾವೊನ್ ಪ್ರಾಂತ್ಯದಲ್ಲಿ ಸಮೀಕ್ಷೆ ನಡೆಸಿದ ಬಳಿಕ ಶಾ ಅವರು ಜಾಲಿಗ್ರಾಂಟ್ ವಿಮಾನ ನಿಲ್ದಾಣದಲ್ಲಿ ಮಾಧ್ಯಮ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಂಸ್ಥೆಗಳು ಎಚ್ಚರದಲ್ಲಿ ಇದ್ದ ಕಾರಣ ಹಾನಿಯನ್ನು ತಡೆಯಲು ಸಾಧ್ಯವಾಗಿದೆ ಎಂದರು.

ಅತೀ ಹೆಚ್ಚು ಹಾನಿಗೆ ಒಳಗಾಗಿರುವ ಕುಮಾವೊನ್ ಪ್ರದೇಶದಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆ ಗುರುವಾರವೂ ನಡೆದಿದೆ. ಹೆಚ್ಚು ಅಪಾಯದ ಸ್ಥಳಗಳಿಂದ ಜನರ ತೆರವು ಮತ್ತು ಸಂಪರ್ಕ ವ್ಯವಸ್ಥೆ ಮರು ಸ್ಥಾಪನೆ ಪ್ರಯತ್ನಗಳು ಮುಂದುವರಿದಿವೆ.


ಅಮಿತ್ ಶಾ ಅವರು ಉತ್ತರಾಖಂಡದಲ್ಲಿ ಗುರುವಾರ ವೈಮಾನಿಕ ಸಮೀಕ್ಷೆ ನಡೆಸಿದರು ಪಿಟಿಐ ಚಿತ್ರ

₹7 ಸಾವಿರ ಕೋಟಿ ನಷ್ಟ

ಮೂರು ದಿನ ನಿರಂತರವಾಗಿ ಸುರಿದ ಮಳೆಯಿಂದಾಗಿ ರಾಜ್ಯದಲ್ಲಿ ಸುಮಾರು ₹ 7,000 ಕೋಟಿಯಷ್ಟು ಹಾನಿ ಆಗಿದೆ ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಹೇಳಿದ್ದಾರೆ. ಸಂಕಷ್ಟದಲ್ಲಿರುವ ಜನರ ತೆರವು, ಹಾನಿಯಾಗಿರುವ ರಸ್ತೆ ಮತ್ತು ಸೇತುವೆಗಳ ಮರುಸ್ಥಾಪನೆ ತಮ್ಮ ಆದ್ಯತೆ ಎಂದು ಅವರು ತಿಳಿಸಿದ್ದಾರೆ.

ಮಳೆಯಿಂದಾಗಿ ಮೃತಪಟ್ಟವರ ಸಂಖ್ಯೆಯು 54ಕ್ಕೆ ಏರಿದೆ. ಐವರಿಗಾಗಿ ಶೋಧ ಕಾರ್ಯ ಮುಂದುವರಿದಿದೆ.

ಶಾ ಅವರು ಉತ್ತರಾಖಂಡಕ್ಕೆ ತುರ್ತು ಪರಿಹಾರ ಪ್ಯಾಕೇಜ್ ಘೋಷಿಸಿಲ್ಲ. ಮೊದಲಿಗೆ, ಹಾನಿಯ ವಿವರವಾದ ಅಂದಾಜು ಸಿದ್ಧಪಡಿಸಬೇಕಿದೆ ಎಂದು ಅವರು ಹೇಳಿದ್ದಾರೆ. ರಾಜ್ಯದಲ್ಲಿ ನೈಸರ್ಗಿಕ ವಿಕೋಪಗಳ ಅಪಾಯ ಹೆಚ್ಚು ಎಂಬುದನ್ನು ಗಮನದಲ್ಲಿ ಇರಿಸಿಕೊಂಡು ತಿಂಗಳ ಹಿಂದೆಯೇ ₹250 ಕೋಟಿ ಬಿಡುಗಡೆ ಮಾಡಲಾಗಿತ್ತು. ಪರಿಹಾರ ಕಾರ್ಯಾಚರಣೆಗೆ ಈ ಮೊತ್ತವನ್ನು ಬಳಸಿಕೊಳ್ಳಬಹುದು ಎಂದು ಶಾ ತಿಳಿಸಿದ್ದಾರೆ.

ನೇಪಾಳ: 104 ಸಾವು

ಕಠ್ಮಂಡು (ಪಿಟಿಐ): ನೇಪಾಳದ ವಿವಿಧ ಭಾಗಗಳಲ್ಲಿ ಕಳೆದ ಮೂರು ದಿನಗಳಿಂದ ಭಾರಿ ಮಳೆ ಸುರಿಯುತ್ತಿದೆ. ಹಲವೆಡೆ ಪ್ರವಾಹ ಪರಿಸ್ಥಿತಿ ತಲೆದೋರಿದೆ. ಮಳೆ ಮತ್ತು ಪ್ರವಾಹದಿಂದಾಗಿ ಈವರೆಗೆ 104 ಮಂದಿ ಮೃತಪಟ್ಟಿದ್ದಾರೆ. 30 ಮಂದಿ ನಾಪತ್ತೆಯಾಗಿದ್ದಾರೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ. ದೇಶದ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಮಳೆ ಮತ್ತು ಪ್ರವಾಹ ಉಂಟಾಗಿದೆ. ನೇಪಾಳ ಪೊಲೀಸ್, ಸಶಸ್ತ್ರ ಪಡೆಗಳು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿವೆ. ಪ್ರತಿಕೂಲ ಹವಾಮಾನದಿಂದಾಗಿ ರಕ್ಷಣಾ ಕಾರ್ಯಾಚರಣೆಗೆ ಹಿನ್ನಡೆಯಾಗಿದೆ.

ತಾಲಿಬಾನ್ ಸರ್ಕಾರಕ್ಕೆ ಮಾನ್ಯತೆ ‘ಜಂಟಿ ಹೇಳಿಕೆ’ಗೆ ಭಾರತ ಅಸಮಾಧಾನ

ನವದೆಹಲಿ: ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ನೇತೃತ್ವದ ಮಧ್ಯಂತರ ಸರ್ಕಾರಕ್ಕೆ ಮಾನ್ಯತೆ ನೀಡುವ ಸಂಬಂಧ ಚರ್ಚಿಸಲು ರಷ್ಯಾ ಆಯೋಜಿಸಿದ್ದ ಸಭೆಯ ನಂತರ ಬಿಡುಗಡೆ ಮಾಡಲಾದ ‘ಜಂಟಿ ಹೇಳಿಕೆ’ ಭಾರತದ ಅಸಮಾಧಾನಕ್ಕೆ ಕಾರಣವಾಗಿದೆ.

ಅಫ್ಗಾನಿಸ್ತಾನ ವಿದ್ಯಮಾನಗಳ ಕುರಿತು ಚರ್ಚಿಸಲು ರಷ್ಯಾ ರಾಜಧಾನಿ ಮಾಸ್ಕೊದಲ್ಲಿ ಸಭೆ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಭಾರತ, ಪಾಕಿಸ್ತಾನ ಹಾಗೂ ಚೀನಾ ಅಲ್ಲದೇ, ಕಜಕಸ್ತಾನ, ಇರಾನ್, ಕಿರ್ಗಿಸ್ತಾನ, ತುರ್ಕಮೆನಿಸ್ತಾನ ಹಾಗೂ ಉಜ್ಬೆಕಿಸ್ತಾನ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಸಭೆ ನಂತರ ರಷ್ಯಾದ ವಿದೇಶಾಂಗ ಸಚಿವಾಲಯ ‘ಜಂಟಿ ಹೇಳಿಕೆ’ಯೊಂದನ್ನು ಬಿಡುಗಡೆ ಮಾಡಿದೆ.

‘ಅಫ್ಗಾನಿಸ್ತಾನದ ಮಧ್ಯಂತರ ಸರ್ಕಾರದ ಪ್ರತಿನಿಧಿಗಳನ್ನು ಒಳಗೊಂಡ ಉನ್ನತ ಮಟ್ಟದ ನಿಯೋಗ ಈ ಸಭೆಯಲ್ಲಿ ಪಾಲ್ಗೊಂಡಿತ್ತು’ ಎಂಬುದಾಗಿ ಈ ‘ಜಂಟಿ ಹೇಳಿಕೆ’ಯಲ್ಲಿ ಉಲ್ಲೇಖಿಸಿರುವುದು ಭಾರತದ ಅಸಮಾಧಾನಕ್ಕೆ ಕಾರಣವಾಗಿದೆ. ಆದರೆ, ಈ ‘ಜಂಟಿ ಹೇಳಿಕೆ’ಯಿಂದ ಭಾರತ ಅಧಿಕೃತವಾಗಿ ಅಂತರಕಾಯ್ದುಕೊಂಡಿಲ್ಲ.

‘ಸಭೆ ಕುರಿತಂತೆ ರಷ್ಯಾ ವಿದೇಶಾಂಗ ಸಚಿವಾಲಯ ಬಿಡುಗಡೆ ಮಾಡಿರುವುದು ಜಂಟಿ ಹೇಳಿಕೆಯಲ್ಲ. ಅಫ್ಗಾನಿಸ್ತಾನಕ್ಕೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ವಿಶೇಷ ಪ್ರತಿನಿಧಿ ಝುಮೀರ್ ಕಬುಲೋವ್ ಅವರೊಂದಿಗೆ ಬುಧವಾರ ನಡೆದ ಚರ್ಚೆಯ ಸಾರಾಂಶವಷ್ಟೇ’ ಎಂದು ಮೂಲಗಳು ಸ್ಪಷ್ಟಪಡಿಸಿವೆ.

ಡ್ರಗ್ಸ್ ಪ್ರಕರಣ: ನಟಿ ಅನನ್ಯಾ ಪಾಂಡೆ ವಿಚಾರಣೆ

ಮುಂಬೈ: ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ವಶಪಡಿಸಿಕೊಂಡಿರುವ ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯನ್ನು ಮಾದಕವಸ್ತುಗಳ ನಿಯಂತ್ರಣ ಘಟಕ (ಎನ್‌ಸಿಬಿ) ಮತ್ತಷ್ಟೂ ಚುರುಕುಗೊಳಿಸಿದೆ.

ಈನಡುವೆ, ಪುತ್ರ ಆರ್ಯನ್ ಖಾನ್‌ಗೆ ಎನ್‌ಡಿಪಿಎಸ್ ಕೋರ್ಟ್ ಜಾಮೀನು ನಿರಾಕರಿಸಿದ್ದರಿಂದ, ಬಾಲಿವುಡ್ ನಟ ಶಾರುಕ್ ಖಾನ್ ಅವರು ಆರ್ಥರ್ ರೋಡ್ ಜೈಲಿನಲ್ಲಿರುವ ಪುತ್ರನನ್ನು ಗುರುವಾರ ಭೇಟಿ ಮಾಡಿದರು.

ನಟ ಚಂಕಿ ಪಾಂಡೆ ಪುತ್ರಿ ಹಾಗೂ ನಟಿ ಅನನ್ಯಾ ಪಾಂಡೆ ಅವರನ್ನು ಎನ್‌ಸಿಬಿ ಅಧಿಕಾರಿಗಳು ಇದೇ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೆ ಒಳಪಡಿಸಿದರು. ‘ಸ್ಟುಡೆಂಟ್ ಆಫ್ ದಿ ಇಯರ್– 2’, ‘ಪತಿ ಪತ್ನಿ ಔರ್ ವೊ’ ಚಿತ್ರಗಳಲ್ಲಿ ಅನನ್ಯಾ ನಟಿಸಿದ್ದಾರೆ. ನಗರದ ಬಲ್ಲಾರ್ಡ್ ಎಸ್ಟೇಟ್‌ನಲ್ಲಿರುವ ಕಚೇರಿಯಲ್ಲಿ ಅನನ್ಯಾ ಪಾಂಡೆಯನ್ನು ಎರಡೂವರೆ ಗಂಟೆಗಳ ಕಾಲ ವಿಚಾರಣೆಗೆ ಒಳಪಡಿಸಿದ ಎನ್‌ಸಿಬಿ ಅಧಿಕಾರಿಗಳು, ಶುಕ್ರವಾರ (ಅ.22) ಪುನಃ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದರು.

ಇದಕ್ಕೂ ಮುನ್ನ, ಬಾಂದ್ರಾದಲ್ಲಿರುವ ನಟಿಯ ಮನೆಗೂ ಭೇಟಿ ನೀಡಿದ ಎನ್‌ಸಿಬಿ ಅಧಿಕಾರಿಗಳು, ಮೊಬೈಲ್ ಫೋನ್ ಸೇರಿ ಕೆಲವು ಎಲೆಕ್ಟ್ರಾನಿಕ್ಸ್ ಸಾಧನಗಳನ್ನು ವಶಪಡಿಸಿಕೊಂಡಿತು. ಆರ್ಯನ್‌ಖಾನ್ ಜೊತೆ ನಡೆಸಿದ್ದ ವಾಟ್ಸ್‌ಆ್ಯಪ್ ಚಾಟ್‌ಗಳ ಆಧಾರದ ಮೇಲೆ ವಿಚಾರಣೆಗೆ ಹಾಜರಾಗುವಂತೆ ನಟಿಗೆ ಸಮನ್ಸ್ ಜಾರಿ ಮಾಡಲಾಗಿತ್ತು ಎಂದು ಮೂಲಗಳು ಹೇಳಿವೆ.

ಹಲವಡೆ ವಿದ್ಯುತ್ ಸಂಪರ್ಕ ಕಡಿತ; ರಸ್ತೆಗೆ ಬಿದ್ದ ಮರಗಳು

ಭಾರಿ ಮಳೆಗೆ ಕುಸಿದ ಮನೆ, ಬೆಳೆಗೂ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮಂಡ್ಯ, ಹಾಸನ ಹಾಗೂ ಕೊಡಗು ಜಿಲ್ಲೆಗಳಲ್ಲಿ ಬುಧವಾರ ರಾತ್ರಿ ಸುರಿದ ಭಾರಿ ಮಳೆಯಿಂದ ಮನೆಗಳಿಗೆ ನೀರು ನುಗ್ಗಿತ್ತು. ಮರಗಳು ಬಿದ್ದವು. ಭತ್ತದ ಗದ್ದೆಗಳು ಜಲಾವೃತಗೊಂಡವು. ವಿದ್ಯುತ್ ಸಂಪರ್ಕ ಕಡಿತಗೊಂಡು, ವಾಹನ ಸಂಚಾರಕ್ಕೆ ತೊಂದರೆಯಾಗಿತ್ತು.

ಮಂಡ್ಯದ ವಿವೇಕಾನಂದ ಬಡಾವಣೆ, ಚಿಕ್ಕಮಂಡ್ಯ ರಸ್ತೆಗಳೆಲ್ಲವೂ ಜಲಾವೃತಗೊಂಡಿದ್ದು, ಗುರುವಾರ ವಾಹನ ಸಂಚಾರಕ್ಕೆ ತೊಂದರೆಯುಂಟಾಯಿತು.

ಶ್ರೀರಂಗಪಟ್ಟಣ ತಾಲ್ಲೂಕಿನ ಕೂಡಲಕುಪ್ಪೆಯ ಲಕ್ಷ್ಮಮ್ಮ, ದೊಡ್ಡಪಾಳ್ಯದ ಪರಮೇಶ್ ಅವರ ಮನೆಗಳು ಭಾಗಶಃ ಕುಸಿದವು. ಕಡತನಾಳುವಿನಲ್ಲೂ ಮನೆ ಕುಸಿಯಿತು. ನೆಲಮನೆ ಗ್ರಾಮದ 2 ಟನ್‌ಗೂ ಹೆಚ್ಚು ಕಬ್ಬಿನ ಕಂತೆಗಳು ಕೊಚ್ಚಿ ಹೋದವು.

ನಾಗಮಂಗಲ ತಾಲ್ಲೂಕು ದಮ್ಮಸಂದ್ರದ ಬಳಿ ವೀರವೈಷ್ಣವಿ ನದಿಗೆ ಅಡ್ಡಲಾಗಿ ಕಟ್ಟಿರುವ ಅಣೆಕಟ್ಟೆ ಮೇಲಿಂದ ನೀರು ಧುಮ್ಮಿಕ್ಕುತ್ತಿದ್ದು ಜೀವಕಳೆ ಬಂದಿದೆ. ಬೆಂಗಳೂರು–ಮೈಸೂರು ದಶಪಥ ನಿರ್ಮಾಣ ಕಾಮಗಾರಿಗೂ ಹಾನಿಯಾಗಿದೆ. ಮೇಲ್ಸೇತುವೆ, ಕೆಳಸೇತುವೆ ಕಾಮಗಾರಿ ವಸ್ತುಗಳು ಮಳೆಯಿಂದ ಕೊಚ್ಚಿ ಹೋಗಿವೆ.

ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ವಿಜಾಪುರ ಅರಣ್ಯ ಗ್ರಾಮದಲ್ಲಿ ಸಿಲ್ವರ್ ಮರಕ್ಕೆ ಸಿಡಿಲು ಅಪ್ಪಳಿಸಿತು. ಹಲವು ಮನೆಗಳಲ್ಲಿ ವಿದ್ಯುತ್ ಉಪಕರಣಗಳಿಗೆ ಹಾನಿಯಾಯಿತು. ಸಕಲೇಶಪುರದಲ್ಲಿ ಅಶೋಕ ರಸ್ತೆಯ ಬಳಿ ಅಂಗಡಿಗಳಿಗೆ ನೀರು ನುಗ್ಗಿತು. ಹೆತ್ತೂರು, ಯಸಳೂರು ಹೋಬಳಿಯಲ್ಲಿ ಮರಗಳು ಬಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಭತ್ತದ ಗದ್ದೆಗಳು ಜಲಾವೃತಗೊಂಡಿವೆ.

ಕೊಡಗು ಜಿಲ್ಲೆಯ ಸಿದ್ದಾಪುರ ಹಾಗೂ ಚೆಟ್ಟಳ್ಳಿ ರಸ್ತೆಯಲ್ಲಿ ಬೃಹತ್ ಮರ ಉರುಳಿ, ಸ್ವಲ್ಪ ಸಮಯ ಸಂಚಾರ ವ್ಯತ್ಯಯವಾಗಿತ್ತು.

ಮೈಸೂರು ವರದಿ: ನಗರದಲ್ಲಿ ಬುಧವಾರ ರಾತ್ರಿಯಿಡೀ ಸುರಿದ ಧಾರಾಕಾರ ಮಳೆಗೆ ಚಾಮುಂಡಿಬೆಟ್ಟದಲ್ಲಿ ಭೂಕುಸಿತ ಸಂಭವಿಸಿದೆ.

‘ಭೂಕುಸಿತವಾದ ರಸ್ತೆಯು ಬಹಳ ಹಳೆಯದು. ಕಲ್ಲುಗಳನ್ನಷ್ಟೇ ಬಳಸಿ ನಿರ್ಮಿಸಲಾಗಿದೆ. ರಸ್ತೆಯ ಭಾರ ಹೊರುವ ಸಾಮರ್ಥ್ಯವೂ ಕಡಿಮೆ ಇರುವುದರಿಂದ ಭೂಕುಸಿತವಾಗಿದೆ’ ಎಂದು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ರಾಜು ‘ಪ್ರಜಾವಾಣಿ’ಗೆ ತಿಳಿಸಿದರು.


ನಗರದಲ್ಲಿ ಬುಧವಾರ ರಾತ್ರಿಯಿಂದ ಗುರುವಾರ ನಸುಕಿನವರೆಗೆ 10 ಸೆಂ.ಮೀನಷ್ಟು ಮಳೆ ಸುರಿದಿದೆ. ಶ್ರೀರಾಂಪುರದ 2ನೇ ಹಂತ, ಪಡುವಾರಹಳ್ಳಿ, ಕುಂಬಾರಕೊಪ್ಪಲುವಿನ ಕೆಲವು ಮನೆಗಳಿಗೆ ನೀರು ನುಗ್ಗಿತ್ತು. ಜಿಲ್ಲಾಧಿಕಾರಿ ಕಚೇರಿ ಸಮೀಪದ ಉದ್ಯಾನದಲ್ಲಿ 2 ಮರಗಳು ಉರುಳಿದ್ದವು. ವಿಶ್ವಮಾನವ ಜೋಡಿ ರಸ್ತೆಯಲ್ಲಿ ಪೆಟ್ರೋಲ್ ಬಂಕ್‌ವೊಂದರ ಚಾವಣಿ ಭಾಗಶಃ ಕುಸಿದಿತ್ತು.

ಚಿಕ್ಕಮಗಳೂರು ವರದಿ: ಜಿಲ್ಲೆಯ ಮೂಡಿಗೆರೆ, ಎನ್.ಆರ್.ಪುರ, ಕಳಸ ಭಾಗದಲ್ಲೂ ಮಳೆಯಾಗಿದೆ. ಹಳ್ಳ, ಝರಿ, ನದಿಗಳಲ್ಲಿ ಹರಿವಿನ ಪ್ರಮಾಣ ತುಸು ಹೆಚ್ಚಳವಾಗಿದೆ. ಹೊಸಕೆರೆ– 4.1ಸೆಂ.ಮೀ., ಚಿಕ್ಕಮಗಳೂರು ಮತ್ತು ಮೇಗೂರು– 4, ಕಿಗ್ಗಾ– 3.6, ಜೋಳದಾಳ್–3.2 ಸೆಂ.ಮೀ ಮಳೆಯಾಗಿದೆ.


ಬುಧವಾರ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ಮಂಡ್ಯದ ಬೀಡಿ ಕಾರ್ಮಿಕರ ಕಾಲೊನಿಗೆ ನೀರು ನುಗ್ಗಿರುವುದು


ಶ್ರೀರಂಗಪಟ್ಟಣ ತಾಲ್ಲೂಕು ಕೂಡಲಕುಪ್ಪೆ ಗ್ರಾಮದ ಲಕ್ಷ್ಮಮ್ಮ ಅವರ ಮನೆ ಭಾಗಶಃ ಕುಸಿದಿರುವುದು

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,266
ಇಂದಿನ ಅಂತ್ಯ	18,178
▼	88
ದಿನದ ಗರಿಷ್ಠ	18,384

ವಿನಿಮಯ ದರ

$ ಡಾಲರ್	74.87
£ ಪೌಂಡ್	103.27
€ ಯುರೊ	87.48
¥ ಯೆನ್ (100ಕ್ಕೆ)	65.71

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1450 (1430)
ಸೋಯಾ (ರಿಫೈನ್ಡ್)	₹1320 (1310)
ಸೂರ್ಯಕಾಂತಿ (ರಿಫೈನ್ಡ್)	₹1380(1370)
ಪಾಮೋಲಿನ್	₹1210 (1210)

ಮುಂಬೈ ಧಾರಣೆ

ಶೇಂಗಾ

21-10-2021

ಜಾವಾ 70/80(ಹೊಸ)	10450-10500
ಜಾವಾ 80/90(ಹೊಸ)	10150-10200
ದಪ್ಪ ಮಧ್ಯಪ್ರದೇಶಹೊಸ)	10000-10100
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1460 (1440)
ಒಂದು ವಾರದ ಡೆಲಿವರಿ	1455 (1435)
ಸೋಯಾ ಕಚ್ಚಾ	1265 (1265)
ಪಾಮ್ ವಾರದ ಡೆಲಿವರಿ	1208 (1208)
ಸೂರ್ಯಕಾಂತಿ ಎಣ್ಣೆ ಕಚ್ಚಾ	1285 (1280)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,300 (47,300)
ಬೆಳ್ಳಿ ಕೆ.ಜಿ 64,900 (64,450)

ಆವರಣದಲ್ಲಿ ಗುರುವಾರದ ಧಾರಣೆ

ಸಂಗ್ರಹಾಗಾರದ ತೈಲ ಮಾರಾಟಕ್ಕೆ ಮುಂದಾದ ಕೇಂದ್ರ ಸರ್ಕಾರ

ಮುಖ್ಯಾಂಶಗಳು

- ಎಂಆರ್‌ಪಿಎಲ್, ಎಚ್‌ಪಿಸಿಎಲ್‌ನಿಂದ ತೈಲ ಖರೀದಿ
- ಕಡಿಮೆ ಬೆಲೆಗೆ ತೈಲ ಖರೀದಿಸಿದ್ದ ಕೇಂದ್ರ

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ತೈಲ ಬೆಲೆಯಲ್ಲಿ ಆಗುತ್ತಿರುವ ಹೆಚ್ಚಳದ ಪರಿಣಾಮವನ್ನು ತಗ್ಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು, ತನ್ನ ಸಂಗ್ರಹಾಗಾರಗಳಲ್ಲಿ ಇರುವ ತೈಲವನ್ನು ಸರ್ಕಾರಿ ಸ್ವಾಮ್ಯದ ತೈಲ ಸಂಸ್ಕರಣಾ ಕಂಪನಿಗಳಿಗೆ ಮಾರಲು ಆರಂಭಿಸಿದೆ.

'ನಾವು ತೈಲ ಮಾರಾಟ ಕಂಪನಿಗಳಿಗೆ ತೈಲವನ್ನು ಮಾರುವ ಕೆಲಸ ಶುರು ಮಾಡಿದ್ದೇವೆ. ಇದರಿಂದ ನಮಗೆ ಮುಂದೆ ಲೀಸ್ ಆಧಾರದಲ್ಲಿ ನೀಡಲು ಸ್ಥಳಾವಕಾಶವೂ ಸಿಗುತ್ತದೆ' ಎಂದು ಇಂಡಿಯನ್ ಸ್ಟ್ರ್ಯಾಟಜಿಕ್ ಪೆಟ್ರೋಲಿಯಂ ರಿಸರ್ವ್ಸ್ ಲಿ. (ಐಎಸ್‌ಪಿಆರ್‌ಎಲ್) ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಎಚ್‌.ಪಿ.ಎಸ್. ಅಹುಜಾ ತಿಳಿಸಿದರು.

ಮಂಗಳೂರಿನ ಸಂಗ್ರಹಾಗಾರದಲ್ಲಿ ಇದ್ದ 3 ಲಕ್ಷ ಟನ್ ಕಚ್ಚಾ ತೈಲವನ್ನು ಖಾಲಿ ಮಾಡಲಾಗಿದೆ. ಈ ವರ್ಷದ ಅಂತ್ಯಕ್ಕೆ ಮೊದಲು ಇನ್ನುಳಿದ 4.5 ಲಕ್ಷ ಟನ್ ಕಚ್ಚಾ ತೈಲವನ್ನು ಕೂಡ ಮಾರಾಟ ಮಾಡಲಾಗುವುದು ಎಂದರು.

ಐಎಸ್‌ಪಿಆರ್‌ಎಲ್ ಕಂಪನಿಯು ಮಂಗಳೂರಿನ 7.5 ಲಕ್ಷ ಟನ್ ಸಾಮರ್ಥ್ಯ ಒಂದು ಸಂಗ್ರಹಾಗಾರವನ್ನು ಎಂಆರ್‌ಪಿಎಲ್‌ಗೆ (ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿ.) ಲೀಸ್ ಆಧಾರದಲ್ಲಿ ನೀಡಲಿದೆ. ಮಂಗಳೂರಿನಲ್ಲಿ ತಲಾ 7.5 ಲಕ್ಷ ಟನ್ ಸಾಮರ್ಥ್ಯದ ಎರಡು ಸಂಗ್ರಹಾಗಾರಗಳು ಇವೆ.

'ಸರ್ಕಾರವು ಸಂಗ್ರಹಿಸಿದ್ದ ಕಚ್ಚಾ ತೈಲವನ್ನು ಎಂಆರ್‌ಪಿಎಲ್ ಮಾರುಕಟ್ಟೆ ದರ ನೀಡಿ ಖರೀದಿಸಿದೆ. ಮಂಗಳೂರಿನ ಸಂಗ್ರಹಾಗಾರದಲ್ಲಿ ಸೌದಿ ಅರೇಬಿಯಾದ ಕಚ್ಚಾ ತೈಲವನ್ನು ಎಂಆರ್‌ಪಿಎಲ್ ಸಂಗ್ರಹಿಸಲಿದೆ' ಎಂದು ವಿವರಿಸಿದರು. ವಿಶಾಖಪಟ್ಟಣದಲ್ಲಿ ಇರುವ ಸಂಗ್ರಹಾಗಾರದಲ್ಲಿನ 1.5 ಲಕ್ಷ ಟನ್ ಕಚ್ಚಾ ತೈಲವನ್ನು ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಖರೀದಿ ಮಾಡಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 19 ಡಾಲರ್ ಇದ್ದಾಗ ಕೇಂದ್ರವು ಕಚ್ಚಾ ತೈಲ ಖರೀದಿಸಿತ್ತು. ಈಗ ತೈಲ ಬೆಲೆಯು ಬ್ಯಾರೆಲ್‌ಗೆ 80 ಡಾಲರ್‌ಗೆ ಏರಿಕೆಯಾಗಿದ್ದು, ಈ ಹಂತದಲ್ಲಿ ತೈಲ ಮಾರಾಟದ ಮೂಲಕ ಅದರ ಲಾಭವನ್ನು ಕೇಂದ್ರವು ಪಡೆದುಕೊಳ್ಳುತ್ತಿದೆ.


ತೈಲ ಸಂಗ್ರಹಾಗಾರದ ಸಾಂದರ್ಭಿಕ ಚಿತ್ರ

ಸೆಮಿಕಂಡಕ್ಟರ್ ಕ್ಷೇತ್ರ: 1 ಕೋಟಿ ಉದ್ಯೋಗ ಸೃಷ್ಟಿ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ವಲಯದಲ್ಲಿ ಮುಂದಿನ ವರ್ಷಗಳಲ್ಲಿ 1 ಕೋಟಿ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಐಟಿ, ಬಿಟಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ವರ್ಚುವಲ್ ರೂಪದಲ್ಲಿ ನಡೆದ 16ನೇ ವರ್ಷದ ಅಖಿಲ ಭಾರತ ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ಸ್ ಒಕ್ಕೂಟದ (ಐಇಎಸ್‌ಎ) ಅಧಿವೇಶನ ಉದ್ದೇಶಿಸಿ ಗುರುವಾರ ಮಾತನಾಡಿದ ಅವರು, ದೇಶದ ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ (ಇಎಸ್‌ಡಿಎಂ) ರಫ್ತಿನಲ್ಲಿ ಕರ್ನಾಟಕದ ಪಾಲು ಶೇ 64 ರಷ್ಟಿದ್ದು, ಜಗತ್ತಿನ 85 ಹೆಚ್ಚು ಚಿಪ್ ವಿನ್ಯಾಸ ಕಂಪನಿಗಳು ಬೆಂಗಳೂರಿನಲ್ಲೇ ಇವೆ ಎಂದರು.

ಶಿಕ್ಷಣದಲ್ಲಿ ಸಮಗ್ರ ಸುಧಾರಣೆ

'ಉದ್ಯಮಗಳ ಅಗತ್ಯವನ್ನು ಗಮನಿಸಿ ಶಿಕ್ಷಣದಲ್ಲಿ ಸಮಗ್ರ ಸುಧಾರಣೆ ತರಲಾಗುತ್ತಿದೆ. ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ನೀತಿ ತಂದಿರುವ ಮೊದಲ ರಾಜ್ಯ ನಮ್ಮದು. ಇದಕ್ಕಾಗಿ ₹600 ಕೋಟಿ ಮೀಸಲಿಡಲಾಗಿದೆ' ಎಂದು ಅಶ್ವತ್ಥನಾರಾಯಣ ಹೇಳಿದರು.

'ಗ್ರಾಮೀಣ ಮಹಿಳೆಯರಲ್ಲಿ ಉದ್ಯಮಶೀಲತೆ ಬೆಳೆಸಲು ದೀನದಯಾಳ್ ಉಪಾಧ್ಯಾಯ ಪ್ರೋತ್ಸಾಹ ಯೋಜನೆಯಡಿ ತಲಾ ₹ 40 ಸಾವಿರಗಳಿಂದ ₹2 ಲಕ್ಷ ವರೆಗೆ ಸಹಾಯಧನ ನೀಡಲಾಗುತ್ತಿದೆ' ಎಂದರು.


ಅಶ್ವತ್ಥ ನಾರಾಯಣ

2025 ರ ವೇಳೆಗೆ ದೇಶದಲ್ಲಿ 220 ಶತಕೋಟಿ ಡಾಲರ್ ವಹಿವಾಟು ನಡೆಸುವ ಮಟ್ಟಕ್ಕೆ ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ಕ್ಷೇತ್ರ ಬೆಳೆಯಲಿದೆ. ಈ ಕ್ಷೇತ್ರದಲ್ಲಿ ಕರ್ನಾಟಕವನ್ನು ದೇಶದಲ್ಲೇ ಪ್ರಥಮ ಸ್ಥಾನಕ್ಕೆ ಕೊಂಡೊಯ್ಯಲಾಗುವುದು. ಈ ಬಗ್ಗೆ ನ. 17ರಿಂದ 21ರವರೆಗೆ ನಗರದಲ್ಲಿ ನಡೆಯುವ 'ಬೆಂಗಳೂರು ಟೆಕ್ ಶೃಂಗ'ದಲ್ಲಿ ಆದ್ಯತೆ ಮೇರೆಗೆ ಚರ್ಚಿಸಲಾಗುವುದು ಎಂದು ಹೇಳಿದರು.

ರಾಜ್ಯ ಸರ್ಕಾರ ಇಎಸ್‌ಡಿಎಂ ವಲಯವನ್ನು ಉತ್ತೇಜಿಸುವ ನೀತಿಯನ್ನು ಜಾರಿಗೆ ತಂದಿದೆ. ಈ ನಿಟ್ಟಿನಲ್ಲಿ ಕಂಪನಿಗಳಿಗೆ ಬಂಡವಾಳ ಹೂಡಿಕೆ ಮೇಲೆ ಸಬ್ಸಿಡಿ, ವಿದ್ಯುತ್ ದರದಲ್ಲಿ ರಿಯಾಯಿತಿ ಮತ್ತು ವಾರ್ಷಿಕ ವಹಿವಾಟಿನ ಮೇಲೆ ಪ್ರೋತ್ಸಾಹ ಧನ ಮುಂತಾದ ಸೌಲಭ್ಯಗಳನ್ನು ನೀಡ ಲಾಗುತ್ತಿದೆ ಎಂದು ಅವರು ವಿವರಿಸಿದರು.

ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಅಡಿಯಲ್ಲಿ ಡಿಜಿಟಲ್ ಉದ್ಯಮಗಳನ್ನು ಉತ್ತೇಜಿಸಲಾಗುತ್ತಿದೆ. ಇದಕ್ಕೆ ಬೆಂಗಳೂರಿನ ಐಐಐಟಿ ಸಹಯೋಗವಿದೆ. ಇದರಂತೆ ಮುಂದಿನ 9 ತಿಂಗಳಲ್ಲಿ 180 ಡಿಸೈನ್ ಎಂಜಿನಿಯರ್‌ಗಳನ್ನು ಸಿದ್ಧಗೊಳಿಸಲಾಗುವುದು. 'ಬಿಯಾಂಡ್ ಬೆಂಗಳೂರು' ಉಪಕ್ರಮದಡಿ ಹುಬ್ಬಳ್ಳಿ–ಧಾರವಾಡ ದಂತಹ ಎರಡನೇ ಸ್ತರದ ನಗರಗಳಲ್ಲಿ ಸೆಮಿಕಂಡಕ್ಟರ್ ಸ್ಟಾರ್ಟಪ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಗೊಳ್ಳುವಂತೆ ಮಾಡಬೇಕಾಗಿದೆ ಎಂದು ಅಶ್ವತ್ಥನಾರಾಯಣ ಅವರು ಹೇಳಿದರು.

ಐ.ಟಿ.: ಕೆಲಸ ತೊರೆಯುವ ಪ್ರಮಾಣ ಹೆಚ್ಚಳ

● ರಿಷಬ್ ಶಾ

ಮುಖ್ಯಾಂಶಗಳು

- ಐ.ಟಿ.: ಪ್ರತಿಭೆಗೆ ಬೇಡಿಕೆ ಹೆಚ್ಚಳ
- ಹೊಸಬರ ವೇತನ ಪ್ರಮಾಣದಲ್ಲಿ ಆಗಿಲ್ಲ ಏರಿಕೆ
- ಸಿಇಒಗಳ ವೇತನ ಹತ್ತುಪಟ್ಟು ಜಿಗಿತ

ಬೆಂಗಳೂರು: ದೇಶದ ಆರು ಮುಂಚೂಣಿ ಐ.ಟಿ. ಉದ್ದಿಮೆಗಳಲ್ಲಿ ಕೆಲಸ ತೊರೆಯುತ್ತಿರುವವರ ಪ್ರಮಾಣ ಏರಿಕೆ ಆಗಿದೆ. ಈ ಆರು ಕಂಪನಿಗಳಲ್ಲಿನ ನೌಕರರು ಕೆಲಸ ತೊರೆಯುತ್ತಿರುವ ಸರಾಸರಿ ಪ್ರಮಾಣವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇಕಡ 17ಕ್ಕೆ ಏರಿಕೆ ಆಗಿದೆ. ಇದು ಜೂನ್ ತ್ರೈಮಾಸಿಕದಲ್ಲಿ ಶೇ 13ರಷ್ಟು ಇತ್ತು.

ಇನ್ಫೊಸಿಸ್ ಮತ್ತು ವಿಪ್ರೊ ಕಂಪನಿ ತೊರೆದಿರುವ ನೌಕರರ ಪ್ರಮಾಣವು ಶೇ 20ರಷ್ಟು, ಟಿಸಿಎಸ್ ತೊರೆದಿರುವ ನೌಕರರ ಪ್ರಮಾಣವು ಶೇ 11.9ರಷ್ಟು ಇದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಟಿಸಿಎಸ್ ತೊರೆದವರ ಪ್ರಮಾಣ ಶೇ 8.9ರಷ್ಟು, ಇನ್ಫೊಸಿಸ್ ತೊರೆದವರ ಪ್ರಮಾಣ ಶೇ 7.8ರಷ್ಟು ಹಾಗೂ ವಿಪ್ರೊ ತೊರೆದವರ ಪ್ರಮಾಣ ಶೇ 11ರಷ್ಟು ಇತ್ತು.

'ಕೆಲಸ ತೊರೆಯುವ ನೌಕರರ ಪ್ರಮಾಣ ಕಡಿಮೆ ಆಗಬೇಕು ಎಂದಾದಲ್ಲಿ ಐ.ಟಿ. ಕಂಪನಿಗಳು ಹೆಚ್ಚಿನ ವೆಚ್ಚಕ್ಕೆ ಸಿದ್ಧರಾಗಬೇಕು. ಜಾಗತಿಕ ಮಟ್ಟದ ಕಂಪನಿಗಳು ತಮ್ಮ ಕೆಲಸ ಆನ್‌ಲೈನ್ ಮೂಲಕ ಆಗುವಂತೆ ನೋಡಿಕೊಳ್ಳಲು ಹಿಂದೆಂದಿಗಿಂತ ಹೆಚ್ಚು ವೆಚ್ಚ ಮಾಡುತ್ತಿವೆ. ಹಾಗಾಗಿ, ಕೆಲಸ ತೊರೆಯುವವರ ಪ್ರಮಾಣವು ಮುಂದಿನ ಎರಡು ವರ್ಷಗಳಲ್ಲಿ ಇನ್ನೂ ಹೆಚ್ಚಾಗಬಹುದು' ಎಂದು ಇನ್ಫೊಸಿಸ್‌ನ ಮಾಜಿ ಸಿಎಫ್‌ಒ ಟಿ.ವಿ. ಮೋಹನದಾಸ್ ಪೈ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದರು.

ಹೊಸದಾಗಿ ಕೆಲಸಕ್ಕೆ ಸೇರುವವರ ವೇತನದಲ್ಲಿ 2009ರ ನಂತರ ದೊಡ್ಡ ಹೆಚ್ಚಳ ಆಗಿಲ್ಲ. ಆದರೆ ಇದೇ ಅವಧಿಯಲ್ಲಿ ಸಿಇಒಗಳು ಹಾಗೂ ಉನ್ನತ ಹುದ್ದೆಗಳಲ್ಲಿ ಇರುವವರ ವೇತನವು ಎಂಟರಿಂದ ಹತ್ತು ಪಟ್ಟು ಹೆಚ್ಚಾಗಿದೆ ಎಂದು ಪೈ ಹೇಳಿದರು.

ಐ.ಟಿ. ಉದ್ಯಮದಲ್ಲಿ ಪ್ರತಿಭೆಗಳಿಗಾಗಿ ಮೂರು ದಶಕಗಳಲ್ಲಿ ಕಾಣದಿದ್ದಷ್ಟು ದೊಡ್ಡ ಹುಡುಕಾಟ ನಡೆದಿದೆ ಎಂದು ಇನ್ಫೊಸಿಸ್ ಸಿಒಒ ಯು.ಬಿ. ಪ್ರವೀಣ್ ರಾವ್ ಈಚೆಗೆ ಹೇಳಿದ್ದರು.

ಮುಂಬೈ ಸಮೀಪ ಜಿಯೊ–ಬಿಪಿ ಪೆಟ್ರೋಲ್ ಬಂಕ್

ನವದೆಹಲಿ (ಪಿಟಿಐ): ಬ್ರಿಟನ್ ಮೂಲದ ತೈಲ ಮತ್ತು ನೈಸರ್ಗಿಕ ಅನಿಲ ಕಂಪನಿ ಬಿಪಿ, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಜೊತೆಗೂಡಿ 'ಜಿಯೊ–ಬಿಪಿ' ಬ್ರ್ಯಾಂಡ್ ಅಡಿಯಲ್ಲಿ ಪೆಟ್ರೋಲ್ ಬಂಕ್‌ಗಳನ್ನು ಆರಂಭಿಸಲಿದೆ. ಮೊದಲ ಪೆಟ್ರೋಲ್ ಬಂಕ್ ಮುಂಬೈ ಸಮೀಪ ಶುರುವಾಗಲಿದೆ.

ರಿಲಯನ್ಸ್ ಮಾಲೀಕತ್ವದ 1,400 ಪೆಟ್ರೋಲ್ ಬಂಕ್‌ಗಳು ಹಾಗೂ 31 ವಿಮಾನ ಇಂಧನ ಕೇಂದ್ರಗಳ ಶೇಕಡ 49ರಷ್ಟು ಷೇರುಗಳನ್ನು ಬಿಪಿ ಕಂಪನಿಯು 2019ರಲ್ಲಿ ಖರೀದಿಸಿದೆ. ಅದಾದ ನಂತರ ರಿಲಯನ್ಸ್‌ನ ಪೆಟ್ರೋಲ್ ಬಂಕ್‌ಗಳನ್ನು 'ರಿಲಯನ್ಸ್ ಬಿಪಿ ಮೊಬಿಲಿಟಿ ಲಿಮಿಟೆಡ್'ಗೆ ವರ್ಗಾವಣೆ ಮಾಡಲಾಗಿದೆ. ರಿಲಯನ್ಸ್ ಮತ್ತು ಬಿಪಿ ಕಂಪನಿಗಳ ಜಂಟಿ ಹೂಡಿಕೆ ಇರುವ ಇದು, ಜಿಯೊ–ಬಿಪಿ ಪೆಟ್ರೋಲ್ ಬಂಕ್‌ಗಳನ್ನು ನಿರ್ವಹಿಸಲಿದೆ.

ಪೆಟ್ರೋಲ್ ಬಂಕ್‌ಗಳ ಸಂಖ್ಯೆಯನ್ನು 2025ರ ವೇಳೆಗೆ ಒಟ್ಟು 5,500ಕ್ಕೆ ಹೆಚ್ಚಿಸುವ ಗುರಿ ಇದೆ ಎಂದು ಬಿಪಿ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಬರ್ನಾರ್ಡ್ ಲೂನಿ ಅವರು 'ಇಂಡಿಯಾ ಎನರ್ಜಿ ಫೋರಂ' ಕಾರ್ಯಕ್ರಮದಲ್ಲಿ ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ;	
ಕೂಳೆ	600- 650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000 -1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು -	430
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಹಳತು	46000-51500
ಚನ್ನಗಿರಿ	
ರಾಶಿ	46599-47199
ಚಿತ್ರದುರ್ಗ	
ಆಪಿ	46719-47129
ಬೆಟ್ಟೆ	39659-40099
ಕೆಂಪುಗೋಟು	30100-30500
ರಾಶಿ	46239-46669
ಹೊನ್ನಾಳಿ	
ರಾಶಿ	45699-45699
ಕಾರ್ಕಳ	
ಹೊಸತು	35000-42500
ಹಳತು	46000-50000
ಕುಮಟಾ	
ಚಿಪ್ಪು	24109-39699
ಕೋಕ	18060-34279
ಹೊಸಚಾಲಿ	44269-46577
ಪುತ್ತೂರು	
ಕೋಕ	10500-26000
ಹೊಸತು	35550-50000
ಸಾಗರ	
ಬಿಳಿಗೋಟು	23339-37889
ಚಾಲಿ	43299-45609
ಕೋಕ	15500-39109
ಕೆಂಪುಗೋಟು	30899-36699
ರಾಶಿ	37199-48109
ಸಿಪ್ಪೆಗೋಟು	9789-24299
ಶಿವಮೊಗ್ಗ	
ಬೆಟ್ಟೆ	46300-49670
ಗೊರಬಲು	16150-38168
ಹೊಸತು	46019-46899
ರಾಶಿ	42899-47899
ಸರಕು	48130-73396
ಸಿದ್ದಾಪುರ	
ಬಿಳಿಗೋಟು	33908-41509
ಚಾಲಿ	44092-47266
ಕೋಕ	24611-37908
ಕೆಂಪುಗೋಟು	28499-34019
ರಾಶಿ	39809-46599
ತಟ್ಟಿಬೆಟ್ಟೆ	34999-43219
ತುಮಕೂರು	
ರಾಶಿ	43500-45600
ಯಲ್ಲಾಪುರ	
ಬಿಳಿಗೋಟು	34299-40142
ಚಾಲಿ	41299-47399
ಕೋಕ	29118-32179
ಕೆಂಪುಗೋಟು	29206-35123
ರಾಶಿ	44090-49309
ತಟ್ಟಿಬೆಟ್ಟೆ	36919-43670
ರೇಷ್ಮೆಗೂಡು ಮಾರುಕಟ್ಟೆ	
ರಾಮನಗರ	
ಮಿಶ್ರ ತಳಿ:	279-497
ದ್ವಿತಳಿ;	314-546

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13400	12800	13150	205.55 ಸೆಂಟ್ಸ್
ಎಸಿ	6325	5000	5450	
ಆರ್‌ಪಿ	6000	6000	6250	ಲಂಡನ್
ಆರ್‌ಸಿ	3510	340	3625	2115 ಡಾಲರ್ಸ್

ತೈಲ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು ಲೀಟರಿಗೆ ತಲಾ 35 ಪೈಸೆಯಷ್ಟು ಹೆಚ್ಚಳ ಆಗಿದೆ. ಈ ಹೆಚ್ಚಳದಿಂದಾಗಿ ಬೆಂಗಳೂರಿನಲ್ಲಿ ಪೆಟ್ರೋಲ್ ದರವು ₹ 110.25ಕ್ಕೆ, ಡೀಸೆಲ್ ದರವು ₹ 101.12ಕ್ಕೆ ತಲುಪಿದೆ.

ಡೀಸೆಲ್ ಬೆಲೆಯು ಶ್ರೀನಗರದಿಂದ ಚೆನ್ನೈವರೆಗೆ ಎಲ್ಲ ಕಡೆಗಳಲ್ಲಿಯೂ ₹ 99ಕ್ಕಿಂತ ಹೆಚ್ಚಿನ ಮಟ್ಟ ತಲುಪಿದೆ.

ವಾಯುಪಡೆ ವಿಮಾನ ಪತನ

ಗ್ವಾಲಿಯರ್ (ಪಿಟಿಐ): ತಾಂತ್ರಿಕ ದೋಷದಿಂದಾಗಿ ಮಧ್ಯಪ್ರದೇಶದ ಭಿಂಡ್ ಜಿಲ್ಲೆಯಲ್ಲಿ ಭಾರತೀಯ ವಾಯುಪಡೆಯ (ಐಎಎಫ್) ವಿಮಾನವೊಂದು ಗುರುವಾರ ಪತನಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ತರಬೇತಿ ನೀಡುವಾಗ ಐಎಎಫ್ ಮಿರಾಜ್ 2000 ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು ಪತನಗೊಂಡಿತು. ಪೈಲಟ್ ಸುರಕ್ಷಿತವಾಗಿದ್ದಾರೆ. ಎಂದು ಐಎಎಫ್ ಟ್ವೀಟ್ ಮಾಡಿದೆ.



ರೀಲ್, ರಿಯಲ್‌ನಲ್ಲೂ ನಾನು 'ಶಿವ'

ರಾಜ್ ಬಿ.ಶೆಟ್ಟಿ

ಅಭಿಲಾಷ್ ಪಿ.ಎಸ್.

ಮುಗ್ಧ, ಸಂಕೋಚದ ಪಾತ್ರಗಳಲ್ಲೇ ಕಾಣಿಸಿಕೊಂಡು ನಗಿಸುತ್ತಾ ಬಂದಿದ್ದ ನಟ ರಾಜ್ ಬಿ. ಶೆಟ್ಟಿ ಇದ್ದಕ್ಕಿದ್ದಂತೆಯೇ ರೌಡಿ ಲುಕ್‌ನಲ್ಲಿ ಬಂದಿದ್ದಾರೆ. ಗರುಡ ಗಮನ – ವೃಷಭ ವಾಹನ ಸಿನಿಮಾವು ರಾಜ್ ನಟನೆ, ನಿರ್ದೇಶನ ಹಾಗೂ ರಿಷಬ್ ಶೆಟ್ಟಿ ಅವರ ಸಾಥ್‌ನೊಂದಿಗೆ ನ. 19ಕ್ಕೆ ತೆರೆಗೆ ಬರಲಿದೆ. ರಾಜ್ ಅವರು ಗರುಡ ಗಮನನ ವೃತ್ತಾಂತ ತೆರೆದಿಟ್ಟದ್ದು ಹೀಗೆ...

● ಗರುಡ ಗಮನ–ವೃಷಭ ವಾಹನ ಪರಿಕಲ್ಪನೆ ಹುಟ್ಟಿಕೊಂಡಿದ್ದು ಹೇಗೆ?

ಬಾಲ್ಯದಿಂದಲೂ ಹಲವು ಬಾರಿ 'ದೇವಿ ಮಹಾತ್ಮೆ' ಯಕ್ಷಗಾನವನ್ನು ನೋಡುತ್ತಾ ಬೆಳೆದವನು ನಾನು. ಇದರಲ್ಲಿ ಆದಿಮಾಯೆಯು ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಸೃಷ್ಟಿ ಮಾಡುತ್ತಾಳೆ. ನಂತರದಲ್ಲಿ 'ನಮ್ಮಿಬ್ಬರಲ್ಲಿ ಯಾರು ದೊಡ್ಡವರು' ಎಂದು ಬ್ರಹ್ಮನಿಗೂ, ವಿಷ್ಣುವಿಗೂ ಜಗಳವಾಗುತ್ತದೆ. 'ದೇವರಲ್ಲೂ ತಾನು ದೊಡ್ಡವ ನಾನು ದೊಡ್ಡವ ಎನ್ನುವ ಜಗಳ ಇರುತ್ತದೆಯೇ?' ಎನ್ನುವ ಪ್ರಶ್ನೆ ಸಣ್ಣ ವಯಸ್ಸಿನಿಂದಲೇ ಕಾಡುತ್ತಿತ್ತು. ಬಹುಶಃ ಏಳನೇ ತರಗತಿಯಲ್ಲಿರುವಾಗ ಹುಟ್ಟಿಕೊಂಡ ಪ್ರಶ್ನೆ ಇದು. ಪ್ರಸ್ತುತ ಸಮಾಜದಲ್ಲಿ ಜೊತೆಗೇ ಇರುವ ಜನರ ನಡುವೆ ಇರುವ ಅಹಂ ನೋಡಿದಾಗ ಈ ವಿಷಯವನ್ನು ಸಿನಿಮಾ ಮಾಡುವ ಆಲೋಚನೆ ಮಾಡಿದೆ. ಈ ಸಿನಿಮಾವನ್ನು ನೋಡಿದರೆ ಇಬ್ಬರ ಗೆಳೆತನವೂ ಹೌದು, ಎರಡು ತತ್ವಗಳ ಹೊಡೆದಾಟವೂ ಆಗಿದೆ. ಚಿತ್ರೀಕರಣದ ಜಾಗ ದೇವಿಯ ನೆಲೆಯಾಗಿದ್ದರೆ, ಇಬ್ಬರು ಮನುಷ್ಯರು ಆ ತತ್ವಗಳಾಗಿ ನಿಂತರೆ, ಅದು ಹೇಗಿರಲಿದೆ ಎನ್ನುವುದು ನನ್ನನ್ನು ಸೆಳೆಯಿತು. ಹೀಗಾಗಿ ಮಂಗಳಾದೇವಿ ಪರಿಸರವನ್ನೇ ಚಿತ್ರೀಕರಣಕ್ಕಾಗಿ ಆಯ್ಕೆ ಮಾಡಿದೆವು.

ಚಿತ್ರದ ಪೋಸ್ಟರ್‌ನಲ್ಲಿ ನೀವು ಗಮನಿಸಿರಬಹುದು. ಕೆಂಪು ಮತ್ತು ನೀಲಿ ಬಣ್ಣವನ್ನು ಬಳಸಿದ್ದೇವೆ. ಇವೆರಡೂ ಬಣ್ಣಗಳು ಒಂದಕ್ಕೊಂದು ವಿರುದ್ಧ. ಆದರೆ ಒಂದಕ್ಕೊಂದು ಪೂರಕವಾಗಿದೆ. ಅದೇ ರೀತಿ ಎರಡು ವಿರುದ್ಧವಾದ ತತ್ವಗಳು ಒಟ್ಟಿಗೆ ಸೇರಿದಾಗ ಬಹಳ ಸದೃಢವಾಗುತ್ತವೆ.

● ಹಿಂದೆಂದೂ ನೋಡದ ರಾಜ್ ಬಿ.ಶೆಟ್ಟಿ ಅವರು ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಅಲ್ಲವೇ?

ನಾನೊಬ್ಬ ಮುಚ್ಚುಮರೆಯಿಲ್ಲದ ವ್ಯಕ್ತಿ. ನಾನು ಸ್ವಲ್ಪ ಜಾಸ್ತಿನೇ ಹುಚ್ಚ. ಕೋಪ ಸ್ವಲ್ಪ ಜಾಸ್ತಿ. 'ಒಂದು ಮೊಟ್ಟೆಯ ಕಥೆ' ನೋಡಿದ ಪ್ರೇಕ್ಷಕರು ನನ್ನನ್ನು ಗುರುತಿಸಿದ್ದು ಆ ಪಾತ್ರದ ಜೊತೆಗೆ. ಹಾಗಾಗಿಯೇ ನನಗೆ ಇರದ ಸರಳತೆ, ಸಂಕೋಚವನ್ನು ಅವರು ನನ್ನ ವ್ಯಕ್ತಿತ್ವಕ್ಕೆ ನೀಡಿದ್ದರು. ನಿಜವಾಗಿಯೂ 'ಒಂದು ಮೊಟ್ಟೆಯ ಕಥೆ'ಯ ಪಾತ್ರಕ್ಕೆ ಹೊಂದಿಕೊಳ್ಳಲು ನನಗೆ ಕಷ್ಟವಾಗಿತ್ತು. ಅದು ನನ್ನ ವ್ಯಕ್ತಿತ್ವಕ್ಕೆ ತದ್ವಿರುದ್ಧವಾಗಿತ್ತು. 'ಗರುಡ ಗಮನ ವೃಷಭ ವಾಹನ'ದಲ್ಲಿನ ಶಿವನ ಪಾತ್ರಕ್ಕೆ ಹೊಂದಿಕೊಳ್ಳಲು ನನಗೆ ಕಷ್ಟವಾಗಿಲ್ಲ. ಚಿತ್ರದಲ್ಲಿನ ನನ್ನ ಪಾತ್ರ ಬಹಳ ರಿಯಾಕ್ಟಿವ್. ರೀಲ್‌ನಲ್ಲಿ ಈ ಪಾತ್ರವನ್ನು ಮಾಡುತ್ತಾ ಮಾಡುತ್ತಾ ರಿಯಲ್‌ನಲ್ಲೂ ನಾನು 'ಶಿವ'ನಾಗುತ್ತಿದ್ದೆ. ಸಣ್ಣಪುಟ್ಟ ವಿಚಾರಕ್ಕೂ ರೇಗಾಡುತ್ತಿದ್ದೆ. ಇದು ನನ್ನ ಗಮನಕ್ಕೆ ಬರದಿದ್ದರೂ ಸುತ್ತಮುತ್ತಲಿನವರ ಪ್ರತಿಕ್ರಿಯೆಯಿಂದ ತಿಳಿಯುತ್ತಿತ್ತು.

● ಮುಗ್ಧತನವಿರುವ ಪಾತ್ರಗಳು ಇಷ್ಟವೇ ಅಥವಾ ಕ್ರೌರ್ಯ ತುಂಬಿರುವ ಪಾತ್ರಗಳೇ?

ಇಂಥದ್ದೇ ಪಾತ್ರ ಬಹಳ ಇಷ್ಟ ಎಂದು ಹೇಳಲು ಕಷ್ಟ. ಆ ಪಾತ್ರದಂತೆ ಬದುಕಿರಬಾರದು, ಅಂಥ ಪಾತ್ರವನ್ನು ನೋಡಿರಲೂಬಾರದು ಅಂತಹ ಪಾತ್ರಗಳನ್ನು ಮಾಡಲು ನನಗೆ ಹೆಚ್ಚಿನ ಆಸಕ್ತಿ. ನಟನಿಗೆ ಆಗ ಅದು ಸವಾಲು. ಹೊಸ ಪಾತ್ರವೊಂದು ಹೊಸ ಮನುಷ್ಯನ ಪರಿಶೋಧನೆಯಾಗಬೇಕೇ ಹೊರತು ಈಗಾಗಲೇ ಮಾಡಿರುವ ಒಂದು ಪಾತ್ರದ ವಿಸ್ತರಣೆ ಆಗಿರಬಾರದು. ಈಗಾಗಲೇ ಮಾಡಿದ ಪಾತ್ರದಂಥ ಪಾತ್ರವನ್ನೇ ಮಾಡುತ್ತಾ ಹೋದರೆ ಕಲೆ ಎಂಬುವುದಕ್ಕೆ ಮರ್ಯಾದೆ ಇರುವುದಿಲ್ಲ. ಅದು ನಮ್ಮ ಅಹಂನ ವೈಭವೀಕರಣಕ್ಕೆ ಅಷ್ಟೇ.

'ಗರುಡ ಗಮನ ವೃಷಭ ವಾಹನ' ಚಿತ್ರದಲ್ಲಿನ 'ಶಿವ'ನ ಪಾತ್ರ ಹೇಗಿದೆ ಎಂದರೆ, ಕಿರುಚಿ, ಮೇಲೆ ಬಿದ್ದು ಜಗಳ ಆಡುವ ಹಿಂಸೆಯೂ ಅವನಲ್ಲಿದೆ. ಇನ್ನೊಂದೆಡೆ ಸಹಜತೆಯೂ ಇದೆ. ಒಂದೆಡೆ ಸಾಮಾನ್ಯ ಮತ್ತೊಂದೆಡೆ ಅಸಾಮಾನ್ಯ. ಇದಕ್ಕಾಗಿ ಈ ಪಾತ್ರ ನನಗೆ ಇಷ್ಟ. ಯಾವುದೇ ಪಾತ್ರ ಮನುಷ್ಯನಾಗಿರಬೇಕು. ಹೀಗಿದ್ದಾಗ ಕಲೆಗೆ ಸಾರ್ಥಕತೆ.

● ಪಾತ್ರಗಳ ಆಯ್ಕೆಯಲ್ಲಿ ಬಹಳ ಸೂಕ್ಷ್ಮವಾದ ಆಯ್ಕೆ ನಡೆದಂತಿದೆ?

ಚಿತ್ರದಲ್ಲಿ ನನ್ನ ಪಾತ್ರವಾದ 'ಶಿವ'ನ ಬಾಲ್ಯದ ಪಾತ್ರವನ್ನು ಮಾಡಿದ ಮಂಗಳೂರಿನ ಹರ್ಷದೀಪ್ ನನ್ನಂತೆಯೇ ಕಾಣಿಸಿದ. ನನ್ನ ಬಾಲ್ಯವನ್ನೇ ಅವನಲ್ಲಿಯೂ ನಾನು ನೋಡಿದೆ. ಅದೇ ರೀತಿ ರಿಷಬ್ ಶೆಟ್ಟಿ ಅವರ ಪಾತ್ರ 'ಹರಿ'ಯ ಪಾತ್ರವನ್ನೂ ಮಾಡಿದ ಹುಡುಗ ಚಿಂತನ್ ಕೂಡಾ ರಿಷಬ್‌ನಂತೆಯೇ ಕಂಡ. ಚಿತ್ರದ ಯಶಸ್ಸು ಅಡಗಿರುವುದೇ ಪಾತ್ರಗಳ ಆಯ್ಕೆಯಲ್ಲಿ. ಶಿವನ ಯೌವನದ ಪಾತ್ರದಲ್ಲಿ ಯಶ್ವಿನ್ ಅದ್ಭುತವಾಗಿ ನಟಿಸಿದ್ದಾರೆ. ಈ ಪಾತ್ರಗಳು ಬಹಳ ಹೊತ್ತು ತೆರೆಯ ಮೇಲೆ ಕಾಣಿಸಿಕೊಳ್ಳುವುದಿಲ್ಲ. ಆದರೆ ಕಾಣಿಸಿಕೊಂಡಷ್ಟು ಹೊತ್ತು ಪ್ರೇಕ್ಷಕರ ಮೇಲೆ ಬಹಳ ಪರಿಣಾಮ ಬೀರುವುದು ಖಚಿತ.

● ಟ್ರೇಲರ್‌ನಲ್ಲಿ ಇಂಗ್ಲಿಷ್ ಹಾಡನ್ನು ಬಳಸಿಕೊಂಡಿರುವುದಕ್ಕೆ ಕಾರಣ?

ಮಂಗಳೂರು ಕಡೆಯ ರೌಡಿ ಬಂದರೆ ಚೆಂಡೆ ಶಬ್ದ, ಹುಲಿವೇಷದ ತಾಸೆಯ ಹಿನ್ನೆಲೆ ಬರಬೇಕು ಎಂಬ ಕಲ್ಪನೆ ಇದೆ. ಆದರೆ ನಾವು ಸಿನಿಮಾ ಮಾಡುತ್ತಿರುವುದೇ ಇಂತಹ ಕಲ್ಪನೆಯನ್ನು ಬದಲಾಯಿಸಲು. ಟ್ರೇಲರ್ ಅನ್ನು ಸೂಕ್ಷ್ಮವಾಗಿ ಗಮನಿಸಿ. ಅಲ್ಲಿರುವ ಭಾಷೆ, ಪಾತ್ರ, ಬಟ್ಟೆ, ಸಂಸ್ಕೃತಿ ಎಲ್ಲವೂ ಸ್ಥಳೀಯ. ಅದರೆ ಸಿನಿಮಾದ ವಿಷಯ ಜಾಗತಿಕ. ಇದನ್ನು ಪ್ರತಿನಿಧಿಸುವ ಹಾಡನ್ನು ನಾವು ಬಳಸಿದ್ದೇವೆ. ಹಾಡನ್ನು ಗಮನವಿಟ್ಟು ಕೇಳಿದರೆ ಇದು ಅರ್ಥವಾಗುತ್ತದೆ. ಶೀಘ್ರದಲ್ಲೇ ಇದರ ಲಿರಿಕಲ್ ವಿಡಿಯೊ ಬಿಡುಗಡೆಯಾಗಲಿದೆ.


ಇಡೀ ಸಿನಿಮಾದಲ್ಲಿ ದೃಶ್ಯಕ್ಕೂ ಅದರ ಹಿನ್ನೆಲೆ ಸಂಗೀತಕ್ಕೂ ಭಿನ್ನತೆ ಇದೆ. ಟ್ರೇಲರ್‌ನಲ್ಲೂ ಇದನ್ನು ನೀವು ಗಮನಿಸಬಹುದು. ತುಂಬಾ ಕೋಲ್ಡ್ ಆಗಿರುವ ಇಂಗ್ಲಿಷ್ ಹಾಡಿನೊಂದಿಗೆ ಟ್ರೇಲರ್ ಇರಬೇಕು ಎಂದು ನಾನು ನಿರ್ಧರಿಸಿದಾಗ ಹಲವರು ಪ್ರಶ್ನಿಸಿದರು. ಮೊದಲು ಟ್ರೇಲರ್ ಕಳಿಸಿದ್ದು ರಿಷಬ್ ಅವರಿಗೆ. ಅವರು ಕರೆ ಮಾಡಿ 'ಶೆಟ್ರೆ.. ಅದು...ಚೆನ್ನಾಗಿದೆ...ಆದರೆ..ಅದು ಅದು...' ಎಂದರು. ಮೊದಲ ಬಾರಿಗೆ ಅವರೂ ಗೊಂದಲದಲ್ಲಿದ್ದರು. ಮತ್ತೆ ಅವರ ದೃಷ್ಟಿಕೋನವೇ ಬದಲಾಯಿತು.

ಈ ಸಿನಿಮಾವನ್ನು ಕೇವಲ ತುಳು ಭಾಷೆಯಲ್ಲಿ ಮಾಡಿದ್ದರೂ ಯಶಸ್ಸು ಕಾಣುತ್ತಿತ್ತು. ತುಳು ಎನ್ನುವುದು ಕೇವಲ ಭಾಷೆಯಲ್ಲ, ಅದೊಂದು ಸಂಸ್ಕೃತಿ. ಇತ್ತೀಚೆಗಿನ ಕೆಲವು ಕನ್ನಡ, ತುಳು ಸಿನಿಮಾಗಳು ಕೇವಲ ಭಾಷೆಯಲ್ಲಷ್ಟೇ ಆಯಾ ಭಾಷೆಯ ಸಿನಿಮಾಗಳಾಗುತ್ತಿವೆಯೇ ಹೊರತು ಸಂಸ್ಕೃತಿಯಲ್ಲಿ ಅಲ್ಲ. ಒಂದು ಭಾಷೆಯ ಕಾರಣಕ್ಕೆ ಸಂಸ್ಕೃತಿಗೆ ನಿರ್ಬಂಧವಾಗಬಾರದು. ಹೀಗಾಗಿ ಕನ್ನಡದಲ್ಲೇ ಈ ಸಿನಿಮಾ ಮಾಡಿದೆ.

● ರಿಷಬ್ ಶೆಟ್ಟಿ ಅವರನ್ನು 'ಹರಿ' ಪಾತ್ರಕ್ಕೆ ಆಯ್ಕೆ ಮಾಡಿದ್ದು ಏಕೆ?

ಕನ್ನಡದಲ್ಲಿ ಯಾರನ್ನಾದರೂ 'ಹರಿ'ಯ ಪಾತ್ರಕ್ಕೆ ಆಯ್ಕೆ ಮಾಡಬೇಕು ಎಂದರೆ ರಿಷಬ್ ಅವರನ್ನು ಬಿಟ್ಟು ಕಣ್ಣ ಮುಂದೆ ಯಾರೂ ಬರಲಿಲ್ಲ. ಮಂಗಳೂರು ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಎನ್ನುವುದು ಮೊದಲ ಆದ್ಯತೆಯಾಗಿತ್ತು. 'ಹರಿ'ಯ ಪಾತ್ರಕ್ಕೆ ಎರಡು ಶೇಡ್ ಇದೆ. ಗಡ್ಡ ಮೀಸೆ ತೆಗೆದಾಗ ಮಂಗಳೂರಿನ ಮುಗ್ಧ ಹುಡುಗನ ಹಾಗೆ ರಿಷಬ್ ಕಾಣಿಸುತ್ತಾರೆ. ಗಡ್ಡ ಮೀಸೆ ಇದ್ದಾಗ ಬಹಳ ಭಿನ್ನವಾಗಿ ರಿಷಬ್ ಕಾಣಿಸುತ್ತಾರೆ. ಪಾತ್ರಕ್ಕೆ ಜೀವತುಂಬುವ ಸಾಮರ್ಥ್ಯ ರಿಷಬ್ ಅವರಲ್ಲಿದೆ. ಇದು ಸಿನಿಮಾಗೂ ಪೂರಕವಾಗಿದೆ.

ಚಿತ್ರದಲ್ಲಿ ತುಳು ರಂಗಭೂಮಿಯ ಕಲಾವಿದರೂ ಇದ್ದಾರೆ. ಇವರು ಕೇವಲ ಹಾಸ್ಯಕ್ಕೆ ಸೀಮಿತ ಎಂಬ ಮಾತಿದೆ. ಇವರನ್ನು ಭಿನ್ನವಾದ ಪಾತ್ರಕ್ಕೆ ನಾವು ಬಳಸಿಕೊಂಡಿರಲಿಲ್ಲ. ದೀಪಕ್ ರೈ ಪಾಣಾಜೆ ಅವರಿಗೆ ನಟನೆಯಲ್ಲಿ 20 ವರ್ಷಗಳ ಅನುಭವ ಇದೆ. ಇವರಿಗೆಲ್ಲರಿಗೂ ನಾವು ಅವಕಾಶ ನೀಡಿಲ್ಲ, ಬದಲಾಗಿ ಅವರ ಅನುಭವವನ್ನು ಬಳಸಿಕೊಳ್ಳುತ್ತಿದ್ದೇವೆ. ಅವರೆಲ್ಲರೂ ಬಂದ ಕಾರಣ ಚಿತ್ರದ ಬಣ್ಣ ಮತ್ತಷ್ಟು ಹೆಚ್ಚಾಗಿದೆ. ❖



'ರಣಧೀರ ಕಂಠೀರವ' ಆಗಿ ಆನಿಮೇಷನ್‌ನಲ್ಲಿ ಕಂಡ ಡಾ.ರಾಜ್ ಕುಮಾರ್

ಆ್ಯನಿಮೇಷನ್‌ನಲ್ಲಿ ಅಣ್ಣಾವ್ರು

ಮೋಹನ್ ಕುಮಾರ ಸಿ.



ಶಶಾಂಕ್ ಸೋಗಲ್

ಡಾ.ರಾಜ್‌ಕುಮಾರ್ 'ರಣಧೀರ ಕಂಠೀರವ' ಆಗಿ ಆ್ಯನಿಮೇಷನ್ ಮೂಲಕ ಮತ್ತೆ ತೆರೆಯ ಮೇಲೆ ಬಂದಿದ್ದಾರೆ. 'ಪಿಆರ್‌ಕೆ ಆಡಿಯೊ' ಯೂಟ್ಯೂಬ್ ಚಾನೆಲ್‌ನಲ್ಲಿ 'ನಿನ್ನಂಥೋರ್ ಯಾರೂ ಇಲ್ವಲ್ಲೋ' ಆ್ಯನಿಮೇಷನ್ ಹಾಡು ಬಿಡುಗಡೆಯಾಗಿದ್ದು, ವೀಕ್ಷಕರ ಭಾರೀ ಸ್ಪಂದನೆ ವ್ಯಕ್ತವಾಗಿದೆ. 4 ಲಕ್ಷಕ್ಕೂ ಹೆಚ್ಚು ಮಂದಿ ಹಾಡನ್ನು ವೀಕ್ಷಿಸಿದ್ದಾರೆ.

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಕಥೆ 'ಡೇರ್ ಡೆವಿಲ್ ಮುಸ್ತಫಾ' ತೆರೆಯ ಮೇಲೆ ತರಲು ಸಿದ್ಧವಾಗಿರುವ 'ಸಿನಿಮಾಮರ' ತಂಡ ಈ ದೃಶ್ಯ ವೈಭವವನ್ನು ಕಟ್ಟಿಕೊಟ್ಟಿದ್ದು, ವರನಟ ಮೈಸೂರು ರಾಜ್ಯದ ದೊರೆಯಾಗಿ ಕಾಣಿಸಿಕೊಂಡಿದ್ದಾರೆ. ರಂಗಭೀಷ್ಮ ಬಿ.ವಿ. ಕಾರಂತರ ರಂಗಗೀತೆಯನ್ನು ಚಿತ್ರತಂಡ ಸಿನಿಮಾಗೆ ಅಳವಡಿಸಿಕೊಂಡಿದೆ.

ಮಲ್ಲಯುದ್ಧ, ಜಂಬೂಸವಾರಿ, ಚಾಮುಂಡೇಶ್ವರಿಯಿಂದ ಕತ್ತಿ ಪಡೆಯುವುದು, ಸಿಂಹಾಸನಾರೋಹಣದಂಥ ಮೋಡಿ ಮಾಡುವ ದೃಶ್ಯ ವೈಭವನ್ನು ಮಂಗಳೂರಿನ ಪ್ಲಾಂಗಲ್ ಸ್ಟುಡಿಯೊ 2ಡಿ ಆ್ಯನಿಮೇಷನ್‌ನಲ್ಲಿ ರೂಪರೇಖೆ ಬರೆದಿದೆ.

ವಾಸುಕಿ ವೈಭವ್ ಹಾಡಿರುವ ಗೀತೆಗೆ ನವನೀತ್ ಶ್ಯಾಮ್ ಸಂಗೀತ ನೀಡಿದ್ದಾರೆ. ಶಶಾಂಕ್ ಸೋಗಲ್ ನಿರ್ದೇಶನದ ಈ ಸಿನಿಮಾ, 2022ರ ವರ್ಷಾರಂಭದಲ್ಲಿ ತೆರೆಗೆ ಬರಲಿದೆ.

'ತೇಜಸ್ವಿ ಓದುಗರೇ ಈ ಸಿನಿಮಾವನ್ನು ನಿರ್ಮಿಸಿದ್ದಾರೆ. ಚಿತ್ರದಲ್ಲಿ ಕಾಲೇಜು ವಿದ್ಯಾರ್ಥಿಗಳ ಸಾಂಸ್ಕೃತಿಕ ಸ್ಪರ್ಧೆಯ ದೃಶ್ಯಕ್ಕೆ ಹಾಡನ್ನು ಬಳಸಲಾಗಿತ್ತು. ಅಣ್ಣಾವ್ರು ಅಭಿನಯಿಸಿದ್ದರೆ ಎಷ್ಟು ಚೆಂದವಿತ್ತು ಎಂದನ್ನಿಸಿದ್ದೆ ತಡ ಆ್ಯನಿಮೇಷನ್‌ನಲ್ಲಿ ಹಾಡನ್ನು ರೂಪಿಸಲಾಗಿದೆ' ಎಂದು ಚಿತ್ರದ ನಿರ್ದೇಶಕ ಶಶಾಂಕ್ ಸೋಗಲ್ ಹೇಳಿದರು.

'ಆ್ಯನಿಮೇಷನ್‌ಗೆ ಅಭಿಮಾನಿಗಳೇ ನಿರ್ಮಾಪಕರು. ರಾಜ್ ಅವರ ಟೀಶರ್ಟ್ ಅನ್ನು 800ಕ್ಕೂ ಹೆಚ್ಚು ಅಭಿಮಾನಿಗಳು ಕೊಂಡು ನೆರವಾಗಿದ್ದಾರೆ. ಹಾಡನ್ನು ನೋಡಿದವರು ರಾಜ್ ಆ್ಯನಿಮೇಷನ್ ಚಿತ್ರ ಮಾಡಿ ಎಂದು ಹೇಳಿರುವುದೇ ಮುಂದಿನ ಕೆಲಸಗಳಿಗೆ ಸ್ಫೂರ್ತಿಯಾಗಿದೆ. ಇದೀಗ ಪ್ರೀತಿ ಹಾಗೂ ಎಚ್ಚರದಿಂದ ತೇಜಸ್ವಿ ಕಥೆಯನ್ನು ಸಿನಿಮಾ ಮಾಡಿದ್ದೇವೆ. ಕಥೆಯೇ ಚಿತ್ರದ ನಾಯಕನಾಗಿದ್ದು, ಚಿತ್ರೀಕರಣ ಪೂರ್ಣಗೊಂಡಿದೆ. ಫೆಬ್ರುವರಿಯಲ್ಲಿ ಬಿಡುಗಡೆಯಾಗಲಿದೆ' ಎಂದರು. ❖

'ಇಲ್ಲಿಂದ ಆರಂಭವಾಗಿದೆ' ಇನ್ನೊಂದು ಚಿತ್ರ



ನಿಖಿತಾಸ್ವಾಮಿ, ಕೀರ್ತಿಕೃಷ್ಣ

'ಇಲ್ಲಿಂದ ಆರಂಭವಾಗಿದೆ' ಹಾರರ್ ಚಿತ್ರಗಳ ಸಾಲಿಗೆ ಇನ್ನೊಂದು ಸೇರ್ಪಡೆ. ಟಾಲಿವುಡ್ ನಿರ್ಮಾಪಕ ಬಿ.ನರಸಿಂಹರೆಡ್ಡಿ ಈ ಚಿತ್ರದ ನಿರ್ಮಾಪಕ ಮತ್ತು ಸಿಐಡಿ ಪಾತ್ರಧಾರಿಯಾಗಿದ್ದಾರೆ. ಲಕ್ಷಣಚಪರ್ಲ ನಿರ್ದೇಶಕರು.

ಕುತೂಹಲ, ಹಾರರ್, ನವಿರು ಪ್ರೀತಿ, ತಾಯಿ ಮಗಳ ಬಾಂಧವ್ಯ ಇತ್ಯಾದಿ ಕಥೆಯ ಹೂರಣ ಚಿತ್ರದಲ್ಲಿದೆ. ಸತ್ಯ ನ್ಯಾಯಕ್ಕೆ ಎಂದಿಗೂ ಗೆಲುವು ಸಿಗಲಿದೆ ಎಂದು ಹೇಳಿದ್ದೇವೆ ಎಂದಿದೆ ಚಿತ್ರ ತಂಡ.

ಕೀರ್ತಿಕೃಷ್ಣ ನಾಯಕ. ನಿಖಿತಾಸ್ವಾಮಿ ಮತ್ತು ಮಧುಬಾಲ ನಾಯಕಿಯರು. ಇವರೊಂದಿಗೆ ಬಾಲಿವುಡ್ ನಟರಾದ ಪ್ರದೀಪ್‌ರಾವುತ್, ಶಾಹುರಾಜ್ ಶಿಂದೆ ಹಾಗೂ ಮಗಧೀರ ಖ್ಯಾತಿಯ ದೇವ್‌ಗಿಲ್ ಹಾಗೂ ಕನಕಪುರದ ಸ್ಥಳೀಯ ಕಲಾವಿದರು ಇದ್ದಾರೆ. ಬೆಂಗಳೂರು, ಮಂಗಳೂರು, ಕನಕಪುರ, ಪಾವಗಡ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಪುಷ್ಪ ಫಿಲಂಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರ ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ಸದ್ಯದಲ್ಲೇ ಏಕಕಾಲಕ್ಕೆ ಬಿಡುಗಡೆಯಾಗಲಿದೆ ಎಂದಿದೆ ಚಿತ್ರತಂಡ. ❖

ಸಿನಿ ಸಂಕ್ಷಿಪ್ತ

ಮತ್ತೆ ತೆರೆಯ ಮೇಲೆ ಮೇಘನಾ

ಚಿರಂಜೀವಿ ಸರ್ಜಾ ಅವರ ಪತ್ನಿ ಮೇಘನಾರಾಜ್ ಮತ್ತೆ ಬೆಳ್ಳಿ ತೆರೆಯ ಮೇಲೆ ಕಾಣಿಸಿಕೊಳ್ಳುತ್ತಿದ್ದಾರೆ. ಪತಿ ಚಿರು ಅವರ ಅಕಾಲಿಕ ಮರಣ, ಮಗನ ಲಾಲನೆ ಪಾಲನೆ ಕಾರಣಗಳಿಂದ ಮೇಘನಾ ಕೆಲಕಾಲ ಚಿತ್ರರಂಗದಿಂದ ದೂರವಿದ್ದರು. ಇತ್ತೀಚೆಗೆ ಹೊಸ ಚಿತ್ರದಲ್ಲಿ ನಟಿಸುವ ಬಗ್ಗೆ ಅವರು ಹೇಳಿದ್ದಾರೆ. ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ

ಪಿ.ಬಿ.ಸ್ಟುಡಿಯೋಸ್ ಲಾಂಛನದ ಅಡಿ ಪನ್ನಗಾಭರಣ ಅವರು ಈ ಚಿತ್ರ ನಿರ್ಮಿಸುತ್ತಿದ್ದಾರೆ. 'ಕಮಲೇಶ್ ಸಹ ನಿರ್ಮಾಪಕರು. ವಿಶಾಲ್ ಆತ್ರೇಯ ಅವರ ನಿರ್ದೇಶನವಿದೆ. ಇದು ವಿಶಾಲ್ ನಿರ್ದೇಶನದ ಮೊದಲ ಚಿತ್ರ. ವಾಸುಕಿ ವೈಭವ್ ಸಂಗೀತವಿದೆ. ವರ್ಷಾಂತ್ಯದಲ್ಲಿ ಚಿತ್ರೀಕರಣ ಆರಂಭವಾಗಲಿದೆ. ಇಂದು ಚಿರು ಹುಟ್ಟುಹಬ್ಬದ ಪ್ರಯುಕ್ತ ಚಾಲನೆ ನೀಡಿದ್ದೇವೆ' ಎಂದರು ಪನ್ನಗಾಭರಣ.

'ಚಿತ್ರ ನಿರ್ಮಾಣ ಚಿರು ಕನಸು. ಅದು ಈಗ ನನಸಾಗುತ್ತಿದೆ. ಇದು ಅವರ ಜನ್ಮದಿನಕ್ಕೆ ಉಡುಗೊರೆ ಎನ್ನಬಹುದು. ಎಲ್ಲೋ ಅವರೆ ನಿಂತು ಇದನ್ನೆಲ್ಲಾ ಮಾಡಿಸುತ್ತಿದ್ದಾರೆ ಅನಿಸುತ್ತಿದೆ' ಎಂದು ಮೇಘನಾ ಹೇಳಿದ್ದಾರೆ. ❖



ಮೇಘನಾರಾಜ್

ಕಟ್ಟೆಯಲ್ಲಿ 'ನಮ್ಮ ಊರಿನ ರಸಿಕರು'

ಕನ್ನಡ ರಾಜ್ಯೋತ್ಸವದಂದು ಆರಂಭವಾಗಲಿರುವ 'ಕಟ್ಟೆ' ಒಟಿಟಿಯಲ್ಲಿ ಖ್ಯಾತ ಲೇಖಕ ಗೋರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕಥಾಸಂಕಲನ 'ನಮ್ಮ ಊರಿನ ರಸಿಕರು' ವೆಬ್ ಸರಣಿಯಾಗಿ 8 ಕಂತುಗಳಲ್ಲಿ ಪ್ರಸಾರವಾಗಲಿದೆ.

ಖ್ಯಾತ ನಟ ದಿವಂಗತ ನರಸಿಂಹರಾಜು ಅವರ ಮೊಮ್ಮಕ್ಕಳಾದ ಅರವಿಂದ್ ಹಾಗೂ ಅವಿನಾಶ್ ಅವರು ಕಟ್ಟೆ ಒಟಿಟಿಯ ಪ್ರವರ್ತಕರು.

ಕ್ಯಾರಂಬೋಲ, ಮ್ಯಾಂಗೋ ಹೌಸ್ ಮತ್ತು ಕಟ್ಟೆ ಸೇರಿ 'ನಮ್ಮ ಊರಿನ ರಸಿಕರು' ವೆಬ್ ಸರಣಿಯನ್ನು ನಿರ್ಮಿಸಿವೆ. ನಂದಿತಾ ಯಾದವ್ ಅವರು ಇದರ ನಿರ್ದೇಶಕಿ. ❖

ಲವ್ವಲ್ಲಿ 'ಏನಾಯ್ತೋ ಕಾಣೆ...'



ಕೀರ್ತಿ ಕಲ್ಕರೆ, ಅಕ್ಷಿತ್ ಶಶಿಕುಮಾರ್

'ಏನಾಯ್ತೋ ಕಾಣೆ...' ಅನ್ನುತ್ತಿದ್ದಾರೆ ನಟ ಅಕ್ಷಿತ್ ಶಶಿಕುಮಾರ್. 'ಓ ಮೈ ಲವ್' ಚಿತ್ರದ ಹಾಡಿನ ಸಾಲು ಇದು. ಹಾಡಿನಲ್ಲಿ ಅಕ್ಷಿತ್ ಅವರು ನಾಯಕಿ ಕೀರ್ತಿ ಕಲ್ಕರೆ, ದೀಪಿಕಾ ಆರಾಧ್ಯ, ಅಕ್ಷತಾ ,ಶೌರ್ಯ, ಸುವೇದ್ ಅವರೊಂದಿಗೆ ಹೆಜ್ಜೆ ಹಾಕಿದ್ದಾರೆ. ಅಂದಹಾಗೆ ಚಿತ್ರೀಕರಣ ನಡೆದದ್ದು ಯಲಹಂಕದ ನಿಟ್ಟೆ ಮೀನಾಕ್ಷಿ ಕಾಲೇಜಿನಲ್ಲಿ.

ವಿ.ನಾಗೇಂದ್ರಪ್ರಸಾದ್ ಅವರು ಹಾಡು ಬರೆದಿದ್ದಾರೆ. ವಿ. ಮುರಳಿ ಅವರ ನೃತ್ಯನಿರ್ದೇಶನ ಇದೆ. ಚಿತ್ರದ ಚಿತ್ರೀಕರಣ ಬಹುತೇಕ ಮುಗಿದಿದೆ. ಚಿತ್ರವನ್ನು ಸ್ಮೈಲ್ ಶ್ರೀನು ಚಿತ್ರಕತೆ-ಸಂಭಾಷಣೆ ಬರೆದು ನಿರ್ದೇಶಿಸಿದ್ದಾರೆ. ಇದೊಂದು ಪ್ರೇಮಕಥೆ ಆಗಿದ್ದರೂ ಕಾಮಿಡಿ, ಸೆಂಟಿಮೆಂಟ್ ಜೊತೆಗೆ ಆಕ್ಷನ್‌ಗೂ ಅಷ್ಟೇ ಪ್ರಾಮುಖ್ಯತೆಯಿದೆ ಎಂದಿದೆ ಚಿತ್ರ ತಂಡ. ಹಿರಿಯ ನಿರ್ದೇಶಕ ಎಸ್.ನಾರಾಯಣ್ ಹಾಗೂ ತೆಲುಗು ಖಳನಟ ದೇವ್‌ಗಿಲ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಜಿ.ರಾಮಾಂಜಿನಿ ಚಿತ್ರದ ನಿರ್ಮಾಪಕರು. ಪೃಥ್ವಿರಾಜ್, ಸಾಧುಕೋಕಿಲ, ಪವಿತ್ರಾ ಲೋಕೇಶ್, ಸಂಗೀತಾ, ಆನಂದ್, ಭಾಗ್ಯಶ್ರೀ, ಶಿಲ್ಪಾ, ರವಿ ರಾಮ್‌ಕುಮಾರ್ ತಾರಾ ಬಳಗದಲ್ಲಿದ್ದಾರೆ. ❖

ಮೊಹಮ್ಮದುಲ್ಲಾ, ಶಕೀಬ್ ಅಲ್ ಹಸನ್ ಅಮೋಘ ಆಟ; ಕಿಪ್ಲಿನ್ ದೋರಿಗ ಬ್ಯಾಟಿಂಗ್ ವ್ಯರ್ಥ

ಸೂಪರ್ 12ಕ್ಕೆ ಬಾಂಗ್ಲಾ ಲಗ್ಗೆ

ಅಲ್ ಅಮೆರತ್, ಒಮನ್ (ಪಿಟಿಐ): ಪಪುವ ನ್ಯೂಗಿನಿ ತಂಡದ ವಿರುದ್ಧ ಭರ್ಜರಿ ಜಯ ಗಳಿಸಿದ ಬಾಂಗ್ಲಾದೇಶ ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಸೂಪರ್ 12ರ ಘಟ್ಟ ಪ್ರವೇಶಿಸಿತು. ಗುರುವಾರ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಬಾಂಗ್ಲಾದೇಶ 84 ರನ್‌ಗಳ ಜಯ ಗಳಿಸಿತು.

182 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಪಪುವ ನ್ಯೂಗಿನಿ 97 ರನ್‌ಗಳಿಗೆ ಆಲೌಟಾಯಿತು. ಎಂಟು ಮತ್ತು ಒಂಬತ್ತನೇ ಕ್ರಮಾಂಕದ ಬ್ಯಾಟರ್‌ಗಳಾದ ಕಿಪ್ಲಿನ್ ದೋರಿಗ ಹಾಗೂ ಚಡ್ ಸಾಪರ್ ಮಾತ್ರ ಎರಡಂಕಿ ಮೊತ್ತ ದಾಟಿದರು.

29 ರನ್‌ಗಳಿಗೆ ಏಳು ವಿಕೆಟ್ ಕಳೆದುಕೊಂಡಿದ್ದ ಸಂದರ್ಭದಲ್ಲಿ ಇವರಿಬ್ಬರು 25 ರನ್ ಸೇರಿಸಿದರು. ಒಂಬತ್ತನೇ ವಿಕೆಟ್‌ಗೆ ದೋರಿಗ ಮತ್ತು ಕಬುವ ಮೊರಿಯ 26 ರನ್ ಗಳಿಸಿದರು. ಹೀಗಾಗಿ ತಂಡದ ಸೋಲಿನ ಅಂತರ ಕಡಿಮೆಯಾಯಿತು. ಶಕೀಬ್ ಅಲ್ ಹಸನ್ ನಾಲ್ಕು ವಿಕೆಟ್ ಗಳಿಸಿ ಮಿಂಚಿದರು.

ಮೊಹಮ್ಮದುಲ್ಲ, ಶಕೀಬ್ ಭರ್ಜರಿ ಆಟ: ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶಕ್ಕೆ ಪಪುವ ನ್ಯೂಗಿನ ಮೊದಲ ಓವರ್‌ನಲ್ಲೇ ಆಘಾತ ನೀಡಿತು. ಆದರೆ ನಂತರ ಚೇತರಿಸಿಕೊಂಡು 7 ವಿಕೆಟ್‌ಗಳಿಗೆ 181 ರನ್ ಸೇರಿಸಿತು. ಇನಿಂಗ್ಸ್‌ನ ಎರಡನೇ ಎಸೆತದಲ್ಲಿ ಮೊಹಮ್ಮದ್ ನಯೀಮ್ ಔಟಾಗಿ ಮರಳಿದರು. ಆದರೆ ಲಿಟನ್ ದಾಸ್ ಮತ್ತು ಶಕೀಬ್ ಅಲ್ ಹಸನ್ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದರು.

ಇಬ್ಬರೂ ಎರಡನೇ ವಿಕೆಟ್‌ಗೆ 50 ರನ್‌ಗಳನ್ನು ಸೇರಿಸಿದರು. ನಂತರ ನಾಯಕ ಮೊಹಮ್ಮದುಲ್ಲ ಮಿಂಚಿದರು. 28 ಎಸೆತಗಳಲ್ಲಿ ಅರ್ಧಶತಕ ಗಳಿಸಿದ ಅವರು ಕೊನೆಯ ಐದು ಓವರ್‌ಗಳಲ್ಲಿ 68 ರನ್ ಕಲೆ ಹಾಕಿ ತಂಡ ಉತ್ತಮ ಮೊತ್ತ ಗಳಿಸಲು ನೆರವಾದರು.

ಕೊನೆಯ ಓವರ್‌ನಲ್ಲಿ ಮೊಹಮ್ಮದ್ ಸೈಫುದ್ದೀನ್ ಎರಡು ಸಿಕ್ಸರ್ ಒಳಗೊಂಡಂತೆ 20 ರನ್ ಗಳಿಸಿದರು. ಲಿಟನ್ ದಾಸ್ ಮತ್ತು ಶಕೀಬ್ ಜೊತೆಯಾಟದಿಂದಾಗಿ ಬಾಂಗ್ಲಾದೇಶ ಪವರ್ ಪ್ಲೇ ಮುಕ್ತಾಯದ ವೇಳೆ 45 ರನ್ ಗಳಿಸಿತ್ತು. ನಂತರ ಬೇಗನೇ ಎರಡು ವಿಕೆಟ್ ಕಳೆದುಕೊಂಡಿತು. ಚಾರ್ಲ್ಸ್ ಅಮಿನಿ ಪಡೆದ ಮೋಹಕ ಕ್ಯಾಚ್‌ನಿಂದಾಗಿ 101 ರನ್ ಗಳಿಸುವಷ್ಟರಲ್ಲಿ ತಂಡದ ನಾಲ್ಕನೇ ವಿಕೆಟ್ ಕೂಡ ಉರುಳಿತು.


ಶಕೀಬ್ ಅಲ್ ಹಸನ್ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಬಾಂಗ್ಲಾದೇಶ 7ಕ್ಕೆ 181 (20 ಓವರ್)
ನಯೀಮ್ ಸಿ ಬವು ಬಿ ಮೋರಿಯ 0 (2 ಎ), ಲಿಟನ್ ಸಿ ಬವು ಬಿ ವಲ 29 (23 ಎ, 4x1, 6x1), ಶಕೀಬ್ ಸಿ ಅಮಿನಿ ಬಿ ವಲ 46 (37 ಎ, 6x3), ಮುಷ್ಫಿಕುರ್ ಸಿ ಹಿರಿ ಬಿ ಅತಾಯಿ 5 (8 ಎ), ಮೊಹಮ್ಮದುಲ್ಲ ಸಿ ಸಾಪರ್ ಬಿ ರವು 50 (28ಎ, 4x3, 6x3), ಅಫಿಫ್ ಸಿ ರವು ಬಿ ಮೊರಿಯ 21 (14 ಎ, 4x3), ನೂರುಲ್ ಸಿ ಬವು ಬಿ ರವು 0 (1 ಎ), ಸೈಫುದ್ದೀನ್ ಔಟಾಗದೆ 19 (6 ಎ, 4x1), ಮೆಹದಿ ಔಟಾಗದೆ 2 (3 ಎ)
ಇತರೆ (ಲೆಗ್‌ಬೈ 1, ನೋಬಾಲ್ 2, ವೈಡ್ 6) 9
ವಿಕೆಟ್ ಪತನ: 1-0 (ಮೊಹಮ್ಮದ್ ನಯೀಮ್, 0.2), 2-50 (ಲಿಟನ್ ದಾಸ್, 7.1), 3-72 (ಮುಷ್ಫಿಕುರ್ ರಹೀಮ್, 10.2), 4-101 (ಶಕೀಬ್ ಅಲ್ ಹಸನ್, 13.4), 5-144 (ಮೊಹಮ್ಮದುಲ್ಲ, 17.2), 6-153 (ನೂರುಲ್ ಹಸನ್, 17.6), 7-161 (ಅಫಿಫ್ ಹೊಸೇನ್, 18.6)
ಬೌಲಿಂಗ್: ಕಬುವ ಮೊರಿಯ 4–0–26–2, ಡ್ಯಾಮಿಯನ್ ರವು 4–0–40–2, ಚಡ್ ಸಾಪ ರ4–0–53–0, ಸೆಸೆ ಬವು 2–0–20–0, ಅಸದ್ ವಲ 3–0–26–2, ಚಾರ್ಲ್ಸ್ ಅಮಿನಿ 2–0–9–0, ಸೈಮನ್ ಅತಾಯಿ 1–0–6–1
ಪಪುವ ನ್ಯೂಗಿನಿ 97 (19.3 ಓವರ್)
ಸಿಯಾಕ ಎಲ್‌ಬಿಡಬ್ಲ್ಯು ಸೈಫುದ್ದೀನ್ 5 (10 ಎ), ವಲ ಸಿ ನೂರುಲ್ ಬಿ ತಸ್ಕಿನ್ 6 (9 ಎ), ಅಮಿನಿ ಸಿ ನಯೀಮ್ ಬಿ ಶಕೀಬ್ 1 (2 ಎ), ಬವು ಸಿ ನಯೀಮ್ ಬಿ ಶಕೀಬ್ 7 (21 ಎ), ಅತಾಯಿ ಸಿ ಮೆಹದಿ ಬಿ ಶಕೀಬ್ 0 (2 ಎ), ಹಿರಿ ಸಿ ನೂರುಲ್ ಬಿ ಶಕೀಬ್ 8 (15 ಎ, 4x1), ನಾರ್ಮನ್ ಸಿ ಮುಷ್ಫಿಕುರ್ ಬಿ ಮೆಹದಿ 0 (2 ಎ), ದೋರಿಗ ಔಟಾಗದೆ 46 (34 ಎ, 4x2, 6x2), ಸಾಪರ್ ಬಿ ಸೈಫುದ್ದೀನ್ 11 (12 ಎ, 6x1), ಮೊರಿಯ ರನೌಟ್ (ಅಫಿಫ್/ನೂರುಲ್) 3 (6 ಎ), ರವು ಸಿ ನೂರುಲ್ ಬಿ ತಸ್ಕಿನ್ 5 (5 ಎ, 4x1)
ಇತರೆ (ಲೆಗ್ ಬೈ 1, ನೋಬಾಲ್ 1, ವೈಡ್ 3)
ವಿಕೆಟ್ ಪತನ: 1-11 (ಲೀಗಾ ಸಿಯಾಕ, 2.3), 2-13 (ಅಸದ್ ವಲ, 3.2), 3-13 (ಚಾರ್ಲ್ಸ್ ಅಮಿನಿ, 4.1), 4-14 (ಸೈಮನ್ ಅತಾಯಿ, 4.4), 5-24 (ಸೆಸೆ ಬವು, 8.5), 6-24 (ನಾರ್ಮನ್ ವನುವ, 9.2), 7-29 (ಹಿರಿ ಹಿರಿ, 10.3), 8-54 (ಚಡ್ ಸಾಪರ್, 14.5), 9-80 (ಕಬುವ ಮೊರಿಯ, 17.4), 10-97 (ಡ್ಯಾಮಿಯನ್ ರವು, 19.3)
ಬೌಲಿಂಗ್: ಮೊಹಮ್ಮದ್ ಸೈಫುದ್ದೀನ್ 4–0–21–2, ಮುಸ್ತಫಿಜುರ್ ರಹಮಾನ್ 4–0–33–0, ತಸ್ಕಿನ್ ಅಹಮ್ಮದ್ 3.3–1–12–2, ಶಕೀಬ್ ಅಲ್ ಹಸನ್ 4–0–9–4, ಮೆಹದಿ ಹಸನ್ 4–0–20–1

ಫಲಿತಾಂಶ: ಬಾಂಗ್ಲಾದೇಶಕ್ಕೆ 84 ರನ್‌ಗಳ ಜಯ.


ಅಪೇಕ್ಷಾ ಫರ್ನಾಂಡೀಸ್ ಈಜಿದ ಪರಿ– ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್

ದಾಖಲೆ ಬರೆದ ರಿಧಿಮಾ, ಧೀನಿಧಿ ದೇಶಿಂಗು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಧಿಮಾ ವೀರೇಂದ್ರ ಕುಮಾರ್ ರಾಷ್ಟ್ರೀಯ ಜೂನಿಯರ್ ಮತ್ತು ಸಬ್ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಮತ್ತೊಂದು ದಾಖಲೆ ಬರೆದರು.

ಬಸವನಗುಡಿ ಈಜುಕೇಂದ್ರದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಗುರುವಾರ ಅವರು 50 ಮೀಟರ್ಸ್ ಬ್ಯಾಕ್‌ಸ್ಟ್ರೋಕ್ ಎರಡನೇ ಗುಂಪಿನ ಸ್ಪರ್ಧೆಯಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟರು. 29.94 ಸೆಕೆಂಡುಗಳಲ್ಲಿ ಗುರಿ ತಲುಪಿದ ರಿಧಿಮಾ, 2014ರಲ್ಲಿ ಗುಜರಾತ್‌ನ ಮಾನಾ ಪಟೇಲ್ ನಿರ್ಮಿಸಿದ್ದ ದಾಖಲೆ (30.37) ಮೀರಿದರು.

ರಾಜ್ಯದ ಧೀನಿದಿ ದೇಶಿಂಗು ಕೂಡ ಮತ್ತೊಂದು ದಾಖಲೆ ನಿರ್ಮಿಸಿದರು. 200 ಮೀ. ಬಾಲಕಿಯರ ವೈಯಕ್ತಿಕ ಮೆಡ್ಲೆಯ ಮೂರನೇ ಗುಂಪಿನ ಸ್ಪರ್ಧೆಯಲ್ಲಿ ಅಗ್ರಸ್ಥಾನ (2 ನಿಮಿಷ 33.36 ಸೆಕೆಂಡುಗಳು) ಗಳಿಸಿದರು. ಕರ್ನಾಟಕದ ವಾಣಿಯಾ ಕಪೂರ್ ಅವರು ಗೋವಾದಲ್ಲಿ 2013ರಲ್ಲಿ ನಿರ್ಮಿ ಸಿದ್ದ ದಾಖಲೆ (2:37.99) ಧಿನಿದಿ ಮೀರಿದರು.


ಧಿನಿಧಿ ದೇಶಿಂಗು– ಪ್ರಜಾವಾಣಿ ಚಿತ್ರ

ಮೂರನೇ ದಿನದ ಫಲಿತಾಂಶಗಳು: ಬಾಲಕರು: 1500 ಮೀ. ಫ್ರೀಸ್ಟೈಲ್: ಒಂದನೇ ಗುಂಪು: ಅನೀಶ್ ಎಸ್. ಗೌಡ (ಕರ್ನಾಟಕ)–1, ಕಾಲ: 16:07.97, ವೇದಾಂತ್ ಮಾಧವನ್ (ಮಹಾರಾಷ್ಟ್ರ)–2, ಸುಭೋಜೀತ್ ಗುಪ್ತಾ (ಬಂಗಾಳ)–3. 400 ಮೀ. ಫ್ರೀಸ್ಟೈಲ್: ಎರಡನೇ ಗುಂಪು: ಪವನ್ ಧನಂಜಯ್ (ಕರ್ನಾಟಕ)–1, ಕಾಲ: 4:25.93, ಕವೀನ್ ರಾಜ್ (ತಮಿಳುನಾಡು)–2, ದೇವಗಣೇಶ್ ಎನ್. (ಆಂಧ್ರಪ್ರದೇಶ)–3. 200 ಮೀ. ವೈಯಕ್ತಿಕ ಮೆಡ್ಲೆ: ಮೂರನೇ ಗುಂಪು: ನಿತೀಶ್ ಎಂ.ಎಸ್. (ತಮಿಳುನಾಡು)–1, ಕಾಲ: 2:33.20, ದೇವಜೀತ್ ದೆಂಕಿ (ಬಂಗಾಳ)–2, ಯಶಸ್ವಿ ನ್ಯೂನ್ (ತೆಲಂಗಾಣ)–3. 100 ಮೀ. ಬಟರ್‌ಫ್ಲೈ: ನಾಲ್ಕನೇ ಗುಂಪು: ಶರಣ್ ಶ್ರೀಧರ್ (ಕರ್ನಾಟಕ), ಕಾಲ: 1:14.47, ಅಥರ್ವ್ ಪಾಲ್ ಸಿಂಗ್ ರಾಥೋಡ್ (ಕರ್ನಾಟಕ)–2, ಶೌರ್ಯ ಚಾಂಗ್ಮಯಿ (ಅಸ್ಸಾಂ)–3. ಐದನೇ ಗುಂಪು: ಮೋನಿಶ್ ನಾಯ್ಡು (ತಮಿಳುನಾಡು)–1, ಕಾಲ: 1:19.59, ಅಬ್ದುಲ್ ಹಫೀಜ್ ಎಂ. (ತಮಿಳುನಾಡು)–2, ಆಯುಶ್ ರಾಜಪುರೆ (ಮಹಾರಾಷ್ಟ್ರ)–3. 200 ಮೀ. ಬಟರ್‌ಫ್ಲೈ: ಒಂದನೇ ಗುಂಪು: ಆರ್ಯನ್ ಪಾಂಚಾಲ್ (ಗುಜರಾತ್)–1, ಕಾಲ: 2:03.52 (ನೂತನ ದಾಖಲೆ), ವಿಕ್ರಂ ಚಾಂಗ್ಮಯಿ (ಅಸ್ಸಾಂ)–2, ಹರ್ಷ ಸರೋಹಾ (ಹರಿಯಾಣ)–3. (2:03.63; ಈ ಹಿಂದಿನ ದಾಖಲೆ 2014ರಲ್ಲಿ ಬಂಗಾಳದ ಸುಪ್ರಿಯ ಮಂಡಲ್ ಸ್ಥಾಪಿಸಿದ್ದರು). 200 ಮೀ. ಬ್ಯಾಕ್‌ಸ್ಟ್ರೋಕ್: ಎರಡನೇ ಗುಂಪು: ಕ್ರಿಶ್ ಸುಕುಮಾರ್ (ಕರ್ನಾಟಕ)–1, ಕಾಲ: 2:32.54, ಅಭಿಷೇಕ್ ಕನೌಜಿಯಾ (ಎಸ್‌ಎಸ್‌ಬಿಸಿ)–2, ಧೃವ ಸೆಜ್ವಾಲ್–3. 50 ಮೀ. ಫ್ರೀಸ್ಟೈಲ್: ಮೂರನೇ ಗುಂಪು: ಅಕ್ಷಜ್ ಠಾಕೂರಿಯಾ (ಕರ್ನಾಟಕ)–1, ಕಾಲ: 29.08, ಆರ್ಯನ್ ಜೂನ್ (ಹರಿಯಾಣ)–2, ರೋನೆಲ್ ರೆತ್ನಂ (ತಮಿಳುನಾಡು)–3. 50 ಮೀ. ಬ್ರೆಸ್ಟ್‌ಸ್ಟ್ರೋಕ್: ಒಂದನೇ ಗುಂಪು: ಮೀತ್ ಮಕೀಜಾ (ಮಹಾರಾಷ್ಟ್ರ)–1, ಕಾಲ: 30.04, ಸ್ವದೇಶ್ ಮೊಂಡಲ್ (ಬಂಗಾಳ)–2, ಶ್ರೀಶ್ ಮೌಲಿಕ್ (ಮಹಾರಾಷ್ಟ್ರ)–3. ಎರಡನೇ ಗುಂಪು: ಕ್ರಿಶ್ ಜೈನ್ (ಹರಿಯಾಣ)–1, ಕಾಲ:29.12 ಉತ್ಕರ್ಷ್ ಗೋರ್ (ಮಹಾರಾಷ್ಟ್ರ)–2, ಸುಹಾಸ್ ಪ್ರೀತಂ ಎಂ. (ತೆಲಂಗಾಣ)–3. ನಾಲ್ಕನೇ ಗುಂಪು: ತೀರ್ಥಂಕರ್ ಮೊಂಡಲ್ (ಬಂಗಾಳ)–1, ಕಾಲ: 40.52, ರೆಯಾಂಶ್ (ಕರ್ನಾಟಕ)– 2, ಲೈತೊಂಜಮ್ ಲಂಚೆಂಬ (ಮಣಿಪುರ)–3. ಐದನೇ ಗುಂಪು: ಜಾಸ್ ಸಿಂಗ್ (ಕರ್ನಾಟಕ)–1, ಕಾಲ: 42.18, ಅಬ್ದುಲ್ ಹಫೀಜ್ (ತಮಿಳುನಾಡು)–2, ಎಸ್. ಕ್ರಿಶ್ (ಕರ್ನಾಟಕ)–3. 50 ಮೀ. ಬ್ಯಾಕ್‌ಸ್ಟ್ರೋಕ್: ಎರಡನೇ ಗುಂಪು: ಉತ್ಕರ್ಷ್ ಪಾಟೀಲ್ (ಕರ್ನಾಟಕ)–1, ಕಾಲ:27.87 ಸಿದ್ಧಾಂತ್ ಸಿಂಗ್ ಜಾಡೊನ್ (ಮಧ್ಯಪ್ರದೇಶ)–2, ವಿಶೇಷ್ ಶರ್ಮಾ (ತಮಿಳುನಾಡು)–3. 4X100 ಮೀ. ಫ್ರೀಸ್ಟೈಲ್: ಒಂದನೇ ಗುಂಪು: ಕರ್ನಾಟಕ –1, ಕಾಲ: 3:33.35, ಮಹಾರಾಷ್ಟ್ರ–2, ತಮಿಳುನಾಡು–3.

ಬಾಲಕಿಯರ ವಿಭಾಗ: ಗಮನ ಸೆಳೆದ ಹರ್ಷಿಕಾ, ಜನನಿ

400 ಮೀ. ಫ್ರೀಸ್ಟೈಲ್: ಎರಡನೇ ಗುಂಪು: ಹರ್ಷಿಕಾ ರಾಮಚಂದ್ರ (ಕರ್ನಾಟಕ)–1, ಕಾಲ: 4:41.65, ಶಿರಿನ್ (ಕರ್ನಾಟಕ)–2, ಅನನ್ಯಾ ರಾವತ್ (ದೆಹಲಿ)–3. 200 ಮೀ. ವೈಯಕ್ತಿಕ ಮೆಡ್ಲೆ: ಮೂರನೇ ಗುಂಪು: ಧೀನಿಧಿ ದೇಶಿಂಗು (ಕರ್ನಾಟಕ), ಕಾಲ:2:33.36 (ನೂತನ ದಾಖಲೆ), ತನಿಶಾ ಗುಪ್ತಾ (ಕರ್ನಾಟಕ)–2, ಶ್ರೀನಿಧಿ (ತಮಿಳುನಾಡು)–3. (2:37.99; ಹಿಂದಿನ ದಾಖಲೆ 2013ರಲ್ಲಿ ಕರ್ನಾಟಕದ ವಾಣಿಯಾ ಕಪೂರ್ ಹೆಸರಿನಲ್ಲಿತ್ತು). 100 ಮೀ. ಬಟರ್‌ಫ್ಲೈ: ನಾಲ್ಕನೇ ಗುಂಪು: ಅನ್ವೇಷಾ ಖಾನಿಕರ್ (ಅಸ್ಸಾಂ)–1 ಕಾಲ: 1:18.53, ಅಲಿಸ್ಸಾ ಸ್ವಿಡಲ್ ರೆಗೊ (ಕರ್ನಾಟಕ)–2, ಅನಿಕಾ ಭಾಟಿಯಾ (ಮಹಾರಾಷ್ಟ್ರ)–3. ಐದನೇ ಗುಂಪು: ಜನನಿ ವೆಂಕಟೇಶ್ವರಪೆರುಮಾಳ್ (ಕರ್ನಾಟಕ)–1, ಕಾಲ: 1:27.89, ಅನಂಗ್ಯಾ ಶರ್ಮಾ (ಅಸ್ಸಾಂ)–2, ಔನಾ ಪವನ್ ಆಳ್ವಾ (ಕರ್ನಾಟಕ)–3. 200 ಮೀ. ಬಟರ್‌ಫ್ಲೈ: ಒಂದನೇ ಗುಂಪು: ಅಪೇಕ್ಷಾ ಫರ್ನಾಂಡಿಸ್ (ಮಹಾರಾಷ್ಟ್ರ)–1, ಕಾಲ:2:21.63, ಶಕ್ತಿ ಬಾಲಕೃಷ್ಣನ್ (ತಮಿಳುನಾಡು)–2, ಆಸ್ಥಾ ಚೌಧರಿ (ಅಸ್ಸಾಂ)–3. 200 ಮೀ. ಬ್ರೆಸ್ಟ್‌ಸ್ಟ್ರೋಕ್: ಎರಡನೇ ಗುಂಪು: ಲಿನೇಶಾ ಎ.ಕೆ. (ಕರ್ನಾಟಕ)–1, ಕಾಲ: 2:44.27, ದಿಯಾ ಮಧುಕರ್ (ಕರ್ನಾಟಕ)–2, ಪ್ರೀತಾ ದೇವನಾಥ್ (ಬಂಗಾಳ)–3. 50 ಮೀ.ಫ್ರೀಸ್ಟೈಲ್: ಮೂರನೇ ಗುಂಪು: ತನಿಶಿ ಗುಪ್ತಾ (ಕರ್ನಾಟಕ)–1, ಕಾಲ: 28.93, ಪ್ರಮಿತಿ ಜ್ಞಾನಶೇಖರನ್ (ತಮಿಳುನಾಡು)–2, ಅದಿತಿ ಹೆಗ್ಡೆ (ಮಹಾರಾಷ್ಟ್ರ)–3. 50 ಮೀ. ಬ್ರೆಸ್ಟ್‌ಸ್ಟ್ರೋಕ್: ಒಂದನೇ ಗುಂಪು: ಅಪೇಕ್ಷಾ ಫರ್ನಾಂಡೀಸ್ (ಮಹಾರಾಷ್ಟ್ರ)–1, ಕಾಲ: 34.44 (ನೂತನ ದಾಖಲೆ), ತನಿಶಾ ಚೆಡ್ಡಾ (ಮಹಾರಾಷ್ಟ್ರ)–2, ಅನ್ವಿತಾ ಗೌಡ (ಕರ್ನಾಟಕ)–3. ನಾಲ್ಕನೇ ಗುಂಪು: ಜೀಲ್ ಮಲಾನಿ (ಮಹಾರಾಷ್ಟ್ರ)–1, ಕಾಲ: 42.61, ಜೋಯಾ ಜನ್ನತ್ (ಬಂಗಾಳ)–2, ಸಾನ್ವಿ ಮೈಗೂರ (ಕರ್ನಾಟಕ)–3. ಐದನೇ ಗುಂಪು: ಆ್ಯಡ್ರಿಯಾ ಚೆಟಿಯಾ (ಅಸ್ಸಾಂ)–1, ಕಾಲ: 41.41, ಲಾಸ್ಯ ಶ್ರೀ ಕೆ. (ಆಂಧ್ರಪ್ರದೇಶ)–2, ಧೃತಿ ಕರಿಬಸವೇಶ್ವರ (ಕರ್ನಾಟಕ)–3. 50 ಮೀ. ಬ್ಯಾಕ್‌ಸ್ಟ್ರೋಕ್: ಒಂದನೇ ಗುಂಪು: ನೀನಾ ವೆಂಕಟೇಶ್ (ಕರ್ನಾಟಕ)–1, ಕಾಲ: 30.89, ಸಂಜನಾ ಪ್ರಭುಗಾಂವಕರ್ (ಗೋವಾ)–2, ಭಕ್ತಿ ವಾಡಕರ್ (ಮಹಾರಾಷ್ಟ್ರ)– 3. ಎರಡನೇ ಗುಂಪು: ರಿಧಿಮಾ ವೀರೇಂದ್ರಕುಮಾರ್ (ಕರ್ನಾಟಕ), ಕಾಲ: 29.94 (ನೂತನ ದಾಖಲೆ), ಶಾಲಿನಿ ದೀಕ್ಷಿತ್ (ಕರ್ನಾಟಕ)–2, ಶ್ರೀ ನಿತ್ಯಾ ಸಾಗಿ (ತೆಲಂಗಾಣ)–3. 4X100 ಮೀ. ಫ್ರೀಸ್ಟೈಲ್: ಕರ್ನಾಟಕ–1, ಕಾಲ: 4:06.84, ತಮಿಳುನಾಡು–2, ಬಂಗಾಳ–3.

ಸ್ಕಾಟ್ಲೆಂಡ್ ಮುಖ್ಯ ಸುತ್ತು ಪ್ರವೇಶ

ಅಲ್ ಅಮೆರತ್ (ಪಿಟಿಐ): ಒಮನ್ ವಿರುದ್ಧ ಭರ್ಜರಿ ಎಂಟು ವಿಕೆಟ್‌ಗಳ ಜಯ ಗಳಿಸಿದ ಸ್ಕಾಟ್ಲೆಂಡ್ ತಂಡ ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಮುಖ್ಯ ಸುತ್ತು ಪ್ರವೇಶಿಸಿತು.

ಗುರುವಾರ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ 123 ರನ್‌ಗಳ ಗುರಿ ಬೆನ್ನತ್ತಿದ ಸ್ಕಾಟ್ಲೆಂಡ್ 17ನೇ ಓವರ್‌ನಲ್ಲಿ ಗೆಲುವಿನ ನಗೆ ಸೂಸಿತು. ಕೈಲ್ ಕೊಯಿಟ್ಜರ್ ಮತ್ತು ರಿಚಿ ಬೆರಿಂಗ್ಟನ್ ಅವರು ಅಮೋಘ ಬ್ಯಾಟಿಂಗ್ ಮೂಲಕ ಮಿಂಚಿ ಇದೇ ಮೊದಲ ಬಾರಿ ತಂಡ ಮುಖ್ಯ ಸುತ್ತು ಪ್ರವೇಶಿಸಲು ನೆರವಾದರು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಒಮನ್ ಮಧ್ಯಮವೇಗಿ ಜೋಶ್ ಡೆವಿ (25ಕ್ಕೆ3) ಮತ್ತು ಸಫಾಯನ್ ಶರೀಫ್ (25ಕ್ಕೆ2) ಅವರ ದಾಳಿಗೆ ನಲುಗಿ ಸಾಧಾರಣ ಮೊತ್ತಕ್ಕೆ ಆಲೌಟಾಯಿತು. ಕೊನೆಯ ಎಸೆತದಲ್ಲಿ ತಂಡ ಕೊನೆಯ ವಿಕೆಟ್ ಕಳೆದುಕೊಂಡಿತು.

ಇನಿಂಗ್ಸ್‌ನ ಎರಡನೇ ಎಸೆತದಲ್ಲಿಯೇ ಜತೀಂದರ್ ಸಿಂಗ್ ರನೌಟ್ ಆದರು. ಆರಂಭಿಕ ಆಟಗಾರ ಅಕಿಬ್ ಇಲಿಯಾಸ್ (37; 35ಎ, 3ಬೌಂ, 2ಸಿ) ದಿಟ್ಟತನದಿಂದ ಬೌಲಿಂಗ್ ಎದುರಿಸಿದರು. ಆದರೆ, ಮೂರನೇ ಓವರ್‌ನಲ್ಲಿ ಕಶ್ಯಪ್ ಪ್ರಜಾಪತಿ ಔಟಾದರು.

ಅಕಿಬ್ ಜೊತೆಗೂಡಿದ ಮೊಹಮ್ಮದ್ ನದೀಂ (25; 21ಎ, 2ಸಿ) ಮೂರನೇ ವಿಕೆಟ್‌ಗೆ 38 ರನ್ ಸೇರಿಸಿದರು. ಅಕೀಬ್ ವಿಕೆಟ್ ಪತನದ ನಂತರ ನಾಯಕ ಜೀಶನ್ ಮಕ್ಸೂದ್ (34; 30ಎ) ಒಂದಷ್ಟು ಹೋರಾಟ ತೋರಿದರು.


ಕೈಲ್ ಕೊಯಿಟ್ಜರ್ ಅವರ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಅದರಿಂದಾಗಿ ತಂಡದ ಮೊತ್ತವು 100ರ ಗಡಿ ದಾಟಿತು.

ಆದರೆ ಉಳಿದ ಬ್ಯಾಟ್ಸ್‌ಮನ್‌ಗಳು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲದಂತೆ ಜೋಶ್ ಡೆವಿ, ಸಫಾಯನ್ ಶರೀಫ್ ನೋಡಿಕೊಂಡರು. 29 ರನ್‌ಗಳ ಅಂತರದಲ್ಲಿ ಆರು ವಿಕೆಟ್‌ಗಳು ಪತನಗೊಂಡವು.

ಸಂಕ್ಷಿಪ್ತ ಸ್ಕೋರ್: ಒಮನ್: 20 ಓವರ್‌ಗಳಲ್ಲಿ 122 (ಅಕೀಬ್ ಇಲಿಯಾಸ್ 37,ಮೊಹಮ್ಮದ್ ನದೀಂ 25, ಜೀಶನ್ ಮಕ್ಸೂದ್ 34, ಜೋಶ್ ಡೇವಿ 25ಕ್ಕೆ3, ಸಫಾಯನ್ ಶರೀಫ್ 25ಕ್ಕೆ2, ಮೈಕೆಲ್ ಲೀಸ್ಕ್ 13ಕ್ಕೆ2); ಸ್ಕಾಟ್ಲೆಂಡ್: 17 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 123 (ಜಾರ್ಜ್ ಮುನ್ಸಿ 20, ಕೈಲ್ ಕೊಯಿಟ್ಜರ್ 41, ಮ್ಯಾಥ್ಯೂ ಕ್ರಾಸ್ ಔಟಾಗದೆ 26, ರಿಚಿ ಬೆರಿಂಗ್ಟನ್ ಔಟಾಗದೆ 31; ಫಯಾಜ್ ಬಟ್ 26ಕ್ಕೆ1, ಖವಾಜ್ ಅಲಿ 27ಕ್ಕೆ1). ಫಲಿತಾಂಶ: ಸ್ಕಾಟ್ಲೆಂಡ್‌ಗೆ ಎಂಟು ವಿಕೆಟ್‌ಗಳ ಗೆಲುವು. ಪಂದ್ಯಶ್ರೇಷ್ಠ: ಜೋಶ್ ಡೇವಿ.

ನಮಿಬಿಯಾ, ಐರ್ಲೆಂಡ್ ಹಣಾಹಣಿ

ಶಾರ್ಜಾ (ಪಿಟಿಐ): ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೂಪರ್ 12ರ ಹಂತಕ್ಕೆ ಪ್ರವೇಶಿಸುವ ಛಲದಲ್ಲಿರುವ ನಮಿಬಿಯಾ ಮತ್ತು ಐರ್ಲೆಂಡ್ ತಂಡಗಳು ಶುಕ್ರವಾರ ಮುಖಾಮುಖಿಯಾಗಲಿವೆ.

ಎ ಗುಂಪಿನಲ್ಲಿ ಈ ಎರಡೂ ತಂಡಗಳು ಶ್ರೀಲಂಕಾ ಎದುರಿನ ಪಂದ್ಯಗಳಲ್ಲಿ ಸೋತಿವೆ. ನೆದರ್ಲೆಂಡ್ಸ್ ತಂಡವನ್ನು ಸೋಲಿಸಿವೆ. ಆದ್ದರಿಂದ ತಲಾ ಎರಡು ಅಂಕಗಳನ್ನು ಗಳಿಸಿವೆ. ಗುಂಪಿನಿಂದ ಈಗಾಗಲೇ ಲಂಕಾ ತಂಡವು 12 ಘಟ್ಟಕ್ಕೆ ಪ್ರವೇಶಿಸಿದೆ. ಶುಕ್ರವಾರ ಜಯಿಸುವ ತಂಡವು ಎರಡನೇ ತಂಡವಾಗಿ ಪ್ರವೇಶಿಸುವುದು.

ಆರಂಭ: ಮಧ್ಯಾಹ್ನ 3.30
ಶ್ರೀಲಂಕಾ–ನೆದರ್ಲೆಂಡ್ಸ್
ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್


ಶ್ರೀಲಂಕಾ ತಂಡದ ನಾಯಕ ದಸುನ್ ಶನಕ –ಎಎಫ್‌ಪಿ ಚಿತ್ರ


ಮ್ಯಾಥ್ಯೂ ಹೇಡನ್

ಭಾರತ–ಪಾಕ್ ನಾಯಕತ್ವದ ಪೈಪೋಟಿ

ದುಬೈ (ಪಿಟಿಐ): ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ನಡೆಯಲಿರುವ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯದಲ್ಲಿ ಉತ್ತಮ ನಾಯಕತ್ವಕ್ಕೆ ಜಯ ದೊರೆಯಲಿದೆ. ಬಾಬರ್ ಆಜಂ ಅವರಲ್ಲಿ ಸಮರ್ಥ ನಾಯಕನ ಗುಣಗಳಿವೆ ಎಂದು ಪಾಕ್ ತಂಡದ ಬ್ಯಾಟಿಂಗ್ ಸಲಹೆಗಾರರಾಗಿರುವ ಮ್ಯಾಥ್ಯೂ ಹೇಡನ್ ಹೇಳಿದ್ದಾರೆ.

'ಬಾಬರ್ ಉತ್ತಮ ನಾಯಕ ಮತ್ತು ಅಷ್ಟೇ ಶ್ರೇಷ್ಠ ಕೌಶಲಗಳಿರುವ ಬ್ಯಾಟ್ಸ್‌ಮನ್ ಕೂಡ ಆಗಿದ್ದಾರೆ. ಆದ್ದರಿಂದ ಅವರು ಭಾರತಕ್ಕೆ ಬಹಳ ಕಠಿಣ ಪೈಪೋಟಿ ಒಡ್ಡುವುದು ಖಚಿತ. ಅದರಿಂದಾಗಿ ಭಾರತ ಮತ್ತು ಪಾಕ್ ತಂಡಗಳ ನಡುವಣ ಪೈಪೋಟಿಯನ್ನು ಮೀರಿಸಲು ಯಾವುದೇ ಪಂದ್ಯಕ್ಕೂ ಸಾಧ್ಯವಿಲ್ಲ' ಎಂದು ಆಸ್ಟ್ರೇಲಿಯಾದ ಮಾಜಿ ಆಟಗಾರ ಹೇಡನ್ ಅಭಿಪ್ರಾಯಪಟ್ಟಿದ್ದಾರೆ.

'ಪೂರ್ವಭಾವಿ ಸಿದ್ಧತೆಗಳು ಇಲ್ಲದ ಸಂದರ್ಭದಲ್ಲಿ ಒತ್ತಡ ಸೃಷ್ಟಿಯಾಗುವುದು ಸಹಜ. ಆದರೆ, ಅನುಭವ ಮತ್ತು ಉತ್ತಮ ಸಿದ್ಧತೆಗಳು ಇದ್ದಾಗ ಯಾವುದೇ ಒತ್ತಡವನ್ನೂ ನಿಭಾಯಿಸಿ ಇತಿಹಾಸ ಸೃಷ್ಟಿಸಬಹುದು' ಎಂದು ಹೇಡನ್ ಹೇಳಿದ್ದಾರೆ.

ತಿಮಿಂಗಿಲ ವಾಂತಿ ವಶ: ಇಬ್ಬರ ಬಂಧನ

ಕಣ್ಣೂರು (ಕೇರಳ) (ಪಿಟಿಐ): ಕಣ್ಣೂರು ಜಿಲ್ಲೆಯ ತಳಿಪ್ಪರಂಬದಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ತಿಮಿಂಗಿಲ ವಾಂತಿ (ಅಂಬರ್‌ಗ್ರೀಸ್) ಮಾರಲು ಯತ್ನಿಸಿದ ಇಬ್ಬರು ಆರೋಪಿಗಳನ್ನು ಅರಣ್ಯ ಅಧಿಕಾರಿಗಳು ಬಂಧಿಸಿದ್ದಾರೆ.

ಜಿಲ್ಲೆಯ ಇಸ್ಮಾ ಯಿಲ್ ಮತ್ತು ಬೆಂಗಳೂರಿನ ಅಬ್ದುಲ್ ರಶೀದ್ ಅವರನ್ನು ಬಂಧಿಸಲಾಗಿದೆ ಎಂದು ತಿರುವನಂತಪುರಂನ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ತಿಳಿಸಿದ್ದಾರೆ.

ಮಲಪ್ಪುರಂ ಜಿಲ್ಲೆಯ ನಿಲಂಬೂರಿನ ವ್ಯಕ್ತಿಗಳಿಗೆ 9 ಕೆ.ಜಿ ತೂಕದ ಅಂಬರ್ ಗ್ರೀಸ್ ಅನ್ನು ಸುಮಾರು ₹30 ಕೋಟಿಗೆ ಮಾರಾಟ ಮಾಡಲು ಯತ್ನಿಸುತ್ತಿದ್ದಾಗ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಹೇಳಿದ್ದಾರೆ.

ದಕ್ಷಿಣ ಕೊರಿಯಾ: ಸ್ವದೇಶಿ ರಾಕೆಟ್ ಪರೀಕ್ಷಾರ್ಥ ಉಡಾವಣೆ


ದಕ್ಷಿಣ ಕೊರಿಯಾದ ಗೊಹೆಂಗ್‌ನಲ್ಲಿರುವ ನ್ಯಾರೋ ರಾಕೆಟ್ ಉಡಾವಣಾ ಕೇಂದ್ರದಿಂದ ನೂರಿ ರಾಕೆಟ್ ಅನ್ನು ಗುರುವಾರ ಉಡಾವಣೆ ಮಾಡಲಾಯಿತು

ಸೋಲ್ (ಎಪಿ): ದಕ್ಷಿಣ ಕೊರಿಯಾ ದೇಶೀಯವಾಗಿ ಅಭಿವೃದ್ಧಿಪಡಿಸಿದ ತನ್ನ ಮೊಟ್ಟಮೊದಲ ಬಾಹ್ಯಾಕಾಶ ರಾಕೆಟ್ ಅನ್ನು ಗುರುವಾರ ಪರೀಕ್ಷಾರ್ಥ ಉಡಾವಣೆ ಮಾಡಿತು.

ದೇಶದ ಉಪಗ್ರಹ ಉಡಾವಣಾ ಯೋಜನೆಯ ಅನ್ವೇಷಣೆಯಲ್ಲಿ ಇದು ಮಹತ್ವದ ಹೆಜ್ಜೆ ಎಂದು ಅಧಿಕಾರಿಗಳು ವ್ಯಾಖ್ಯಾನಿಸಿದ್ದಾರೆ.

ಮೂರು-ಹಂತದ ನೂರಿ ರಾಕೆಟ್ 1.5 ಟನ್ ಸ್ಟೇನ್ಲೆಸ್ ಸ್ಟೀಲ್ ಮತ್ತು ಅಲ್ಯೂಮಿನಿಯಂನ ಬ್ಲಾಕ್ ಡಮ್ಮಿ ಪೇಲೋಡ್ ಅನ್ನು ಭೂಮಿಯಿಂದ 600 ರಿಂದ 800 ಕಿ.ಮೀ (372 ರಿಂದ 497 ಮೈಲಿ) ಎತ್ತರದ ಕಕ್ಷೆಗೆ ತಲುಪಿಸುವ ಗುರಿಯನ್ನು ಯಶಸ್ವಿಯಾಗಿ ಪೂರೈಸಿದೆಯೇ ಎಂಬುದು ತಕ್ಷಣಕ್ಕೆ ಖಚಿತವಾಗಿಲ್ಲ.

ತನ್ನ ಉಪಗ್ರಹಗಳನ್ನು ಉಡಾಯಿಸಲು ಇತರ ದೇಶಗಳನ್ನು ಅವಲಂಬಿಸಿರುವ ದಕ್ಷಿಣ ಕೊರಿಯಾ ಸ್ವದೇಶಿ ತಂತ್ರಜ್ಞಾನದೊಂದಿಗೆ ಉಪಗ್ರಹವನ್ನು ಬಾಹ್ಯಾಕಾಶಕ್ಕೆ ಕಳುಹಿಸಿದ 10ನೇ ರಾಷ್ಟ್ರವೆನಿಸಿಕೊಳ್ಳಲು 1990ರ ದಶಕದ ಆರಂಭದಿಂದಲೂ ಪ್ರಯತ್ನಿಸುತ್ತಿದೆ.

ದೇಶದ ಬಾಹ್ಯಾಕಾಶ ಮಹತ್ವಾಕಾಂಕ್ಷೆಗಳಿಗೆ ಇಂತಹ ಪರೀಕ್ಷಾರ್ಥ ಪ್ರಯೋಗ ನಿರ್ಣಾಯಕವಾಗಿದೆ. ಇದರಲ್ಲಿ ಹೆಚ್ಚು ಸುಧಾರಿತ ಸಂವಹನ ಉಪಗ್ರಹಗಳನ್ನು ಕಳುಹಿಸುವ ಮತ್ತು ತನ್ನದೇ ಆದ ಮಿಲಿಟರಿ ಗುಪ್ತಚರ ಉಪಗ್ರಹಗಳನ್ನು ಕಳುಹಿಸುವ ಯೋಜನೆಗಳು ಸೇರಿವೆ. 2030ರ ವೇಳೆಗೆ ಚಂದ್ರನಲ್ಲಿಗೆ ಬಾಹ್ಯಾಕಾಶ ನೌಕೆ ಕಳುಹಿಸುವ ವಿಶ್ವಾಸವನ್ನೂ ದೇಶ ಹೊಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೂರಿ ಬಾಹ್ಯಾಕಾಶ ರಾಕೆಟ್‌ನಲ್ಲಿ ನೈಜ ಉಪಗ್ರಹ ಕಳುಹಿಸುವ ಮೊದಲು 2022ರಲ್ಲಿ ಮತ್ತೊಮ್ಮೆ ಈ ರಾಕೆಟ್ ಉಡಾವಣೆ ಮಾಡುವ ಜತೆಗೆ ಹಲವು ಬಾರಿ ಇದನ್ನು ಪರೀಕ್ಷೆಗೆ ಒಳಪಡಿಸಲು ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳು ಯೋಜಿಸಿದ್ದಾರೆ.

'ಉ.ಪ್ರ.ದಲ್ಲಿ ಅಧಿಕಾರಕ್ಕೆ ಬಂದರೆ ವಿದ್ಯಾರ್ಥಿನಿಯರಿಗೆ ಉಚಿತ ಸ್ಕೂಟಿ'

ಲಖನೌ (ಪಿಟಿಐ): ಉತ್ತರ ಪ್ರದೇಶದದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ, 12ನೇ ತರಗತಿ ಉತ್ತೀರ್ಣರಾದ ಬಾಲಕಿಯರಿಗೆ ಉಚಿತವಾಗಿ ಸ್ಮಾರ್ಟ್ ಫೋನ್ ಹಾಗೂ ಪದವೀಧರ ವಿದ್ಯಾರ್ಥಿನಿಯರಿಗೆ ಎಲೆಕ್ಟ್ರಿಕ್ ಸ್ಕೂಟಿ ಕೊಡುವುದಾಗಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಭರವಸೆ ನೀಡಿದ್ದಾರೆ.


ಪ್ರಿಯಾಂಕಾ ಗಾಂಧಿ

ಇತ್ತೀಚೆಗಷ್ಟೇ ಅವರು, ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಶೇ 40ರಷ್ಟು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಟಿಕೆಟ್ ನೀಡಲಿದೆ ಎಂದು ಹೇಳಿದ್ದರು.

'ನಾನು ಕೆಲವು ವಿದ್ಯಾರ್ಥಿನಿಯರನ್ನು ಬುಧವಾರ ಭೇಟಿಯಾದೆ. ಅವರು ತಮ್ಮ ಅಧ್ಯಯನಕ್ಕೆ ಮತ್ತು ಭದ್ರತೆಯ ದೃಷ್ಟಿಯಿಂದ ಸ್ಮಾರ್ಟ್ ಫೋನ್ ಬೇಕು ಎಂದು ಹೇಳಿದರು. ಈ ಹಿನ್ನೆಲೆಯಲ್ಲಿ ಉತ್ತರ ಪ್ರದೇಶ ಕಾಂಗ್ರೆಸ್ ಘಟಕ, ಚುನಾವಣಾ ಪ್ರಣಾಳಿಕೆ ಸಮಿತಿಯ ಒಪ್ಪಿಗೆ ಮೇರೆಗೆ ಪಕ್ಷ ಅಧಿಕಾರಕ್ಕೆ ಬಂದರೆ, 12ನೇ ತರಗತಿ ಉತ್ತೀರ್ಣರಾದ ವಿದ್ಯಾರ್ಥಿನಿಯರಿಗೆ ಉಚಿತ ಸ್ಮಾರ್ಟ್ ಫೋನ್ ಮತ್ತು ಪದವೀಧರ ವಿದ್ಯಾರ್ಥಿನಿಯರಿಗೆ ಎಲೆಕ್ಟ್ರಿಕ್ ಸ್ಕೂಟಿಗಳನ್ನು ನೀಡಲು ನಿರ್ಧರಿಸಿದೆ. ಇದು ನನಗೆ ತುಂಬಾ ಸಂತೋಷ ತಂದಿದೆ' ಎಂದು ಪ್ರಿಯಾಂಕಾ ಗಾಂಧಿ ಟ್ವೀಟ್ ಮಾಡಿದ್ದಾರೆ.

ಉತ್ತರ ಪ್ರದೇಶದಲ್ಲಿ ಪಕ್ಷದ ಉಸ್ತುವಾರಿಯೂ ಆಗಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ, ಈ ಟ್ವೀಟ್‌ನೊಂದಿಗೆ ಶಾಲಾ/ಕಾಲೇಜು ವಿದ್ಯಾರ್ಥಿನಿಯರ ಗುಂಪುಗಳು ಮತ್ತು ಮಾಧ್ಯಮದವರೊಂದಿಗೆ ಸಂವಹನ ನಡೆಸುತ್ತಿರುವ ವಿಡಿಯೊವನ್ನು ಲಗತ್ತಿಸಿದ್ದಾರೆ.

ಅಮರಿಂದರ್ ಸಿಂಗ್ ನೂತನ ಕೃಷಿ ಕಾಯ್ದೆ ನಿರ್ಮಾತೃ: ಸಿಧು

ಚಂಡೀಗಡ (ಪಿಟಿಐ): 'ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರೇ ಕೇಂದ್ರದ ಮೂರು ನೂತನ ಕೃಷಿ ಕಾಯ್ದೆಗಳ ನಿರ್ಮಾತೃ' ಎಂದು ಕಾಂಗ್ರೆಸ್‌ನ ಪಂಜಾಬ್ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಟೀಕಿಸಿದರು.

'ಮೂರು ಕರಾಳ ಕಾಯ್ದೆಗಳನ್ನು ರೂಪಿಸಿರುವ ಅಮರಿಂದರ್ ಸಿಂಗ್ ಪಂಜಾಬ್‌ಗೆ ಅಂಬಾನಿಯನ್ನು ಕರೆ ತಂದರು. ರಾಜ್ಯದ ರೈತರು, ಸಣ್ಣ ವರ್ತಕರು ಹಾಗೂ ಕೃಷಿಕೂಲಿ ಕಾರ್ಮಿಕರನ್ನು ನಾಶ ಮಾಡಿದರು' ಎಂದಿದ್ದಾರೆ.

ಅಮರಿಂದರ್ ಸಿಂಗ್ ಅವರು ನೂತನ ಪಕ್ಷ ಸ್ಥಾಪಿಸುವುದಾಗಿ ಇತ್ತೀಚೆಗೆ ಹೇಳಿದ್ದಾರೆ. ಅಲ್ಲದೇ, ನೂತನ ಕೃಷಿ ಕಾಯ್ದೆಗಳನ್ನು ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆಯನ್ನು ಅಂತ್ಯಗಾಣಿಸಿದರೆ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಸ್ಥಾನಗಳ ಹೊಂದಾಣಿಕೆ ಮಾಡಿಕೊಳ್ಳುವ ಸುಳಿವನ್ನೂ ಅವರು ನೀಡಿದ್ದರು.

ಸ್ಟೋಕ್ಸ್, ಜೋಫ್ರಾ ಗೈರು ನಾಚಿಕೆಗೇಡು: ಜೇಸನ್ ರಾಯ್

ಅಬುಧಾಬಿ (ಪಿಟಿಐ): ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಮತ್ತು ವೇಗಿ ಜೋಫ್ರಾ ಆರ್ಚರ್ ಟಿ20 ವಿಶ್ವಕಪ್ ಆಡುವ ತಂಡದಲ್ಲಿರದೇ ಇರುವುದು ನಾಚಿಕೆಗೇಡು ಎಂದು ಇಂಗ್ಲೆಂಡ್ ತಂಡದ ಬ್ಯಾಟ್ಸ್‌ಮನ್ ಜೇಸನ್ ರಾಯ್ ಅಭಿಪ್ರಾಯಪಟ್ಟಿದ್ದಾರೆ.

2019ರಲ್ಲಿ ಇಂಗ್ಲೆಂಡ್ ಏಕದಿನ ವಿಶ್ವಕಪ್ ಜಯಿಸಲು ಬೆನ್ ಸ್ಟೋಕ್ಸ್ ಪ್ರಮುಖ ಪಾತ್ರ ವಹಿಸಿದ್ದರು. ಮಾನಸಿಕ ಒತ್ತಡ ನಿರ್ವಹಣೆ ಮತ್ತು ಬೆರಳಿನ ಗಾಯದಿಂದಾಗಿ ಸ್ಟೋಕ್ಸ್ ತಂಡಕ್ಕೆ ಆಯ್ಕೆಯಾಗಿಲ್ಲ. ತಮ್ಮ ಬಲಗೈ ಮೊಣಗಂಟಿನಲ್ಲಿ ಆಗಿರುವ ಗಾಯದಿಂದಾಗಿ ಜೋಫ್ರಾ ಕೂಡ ಹೊರಗುಳಿದಿದ್ದಾರೆ.

'ಇದನ್ನು ನಾನು ಸಮಸ್ಯೆ ಎಂದು ಹೇಳುವುದಿಲ್ಲ. ಆದರೆ, ಇದು ಅವಮಾನಕರ ಸಂಗತಿ. ಅವರಿಬ್ಬರೂ ಚೇತರಿಸಿಕೊಂಡು ಆರೋಗ್ಯವಂತರಾಗಿ ಮರಳಿ ಬರಲಿ' ಎಂದರು.


ಜೇಸನ್ ರಾಯ್

'ಸದ್ಯ ಇರುವ ತಂಡದಲ್ಲಿ ಉತ್ತಮ ಆಟಗಾರರು ಇದ್ದಾರೆ. ಬ್ಯಾಟಿಂಗ್ ಮತ್ತು ಬೌಲಿಂಗ್ ನಲ್ಲಿ ಉತ್ತಮ ಲಯದಲ್ಲಿರುವ ಆಟಗಾರರಿದ್ದಾರೆ. ಅಭ್ಯಾಸ ಪಂದ್ಯಗಳಲ್ಲಿ ಉತ್ತಮ ವಾಗಿ ಆಡಿ ವಿಶ್ವಾಸ ಮೂಡಿಸಿದ್ದಾರೆ' ಎಂದು ಸುದ್ದಿಗಾರರಿಗೆ ಹೇಳಿದರು.

ರಾಯ್ ಅಬುಧಾಬಿಯಲ್ಲಿ ನಡೆಯಲಿರುವ ಟಿ10 ಲೀಗ್‌ನಲ್ಲಿ ಡೆಲ್ಲಿ ಬುಲ್ಸ್ ತಂಡದಲ್ಲಿ ಆಡಲಿದ್ದಾರೆ.

ಡೆಲ್ಟಾಕ್ಕಿಂತಲೂ ವೇಗವಾಗಿ ವ್ಯಾಪಿಸುವ ರೂಪಾಂತರ ಕೊರೊನಾ ರಷ್ಯಾದಲ್ಲಿ ಪತ್ತೆ

ಮಾಸ್ಕೊ (ರಾಯಿಟರ್ಸ್): ಕೊರೊನಾ ವೈರಸ್‌ನ ರೂಪಾಂತರ ಮಾದರಿಯಾದ 'ಡೆಲ್ಟಾ'ಕ್ಕಿಂತಲೂ ವೇಗವಾಗಿ ಸಾಂಕ್ರಾಮಿಕಗೊಳ್ಳುವ ಶಕ್ತಿಯುಳ್ಳ ರೂಪಾಂತರ ಮಾದರಿಯೊಂದು ರಷ್ಯಾದಲ್ಲಿ ಪತ್ತೆಯಾಗಿದೆ. ಇದರ ಸೋಂಕಿನ ಪ್ರಕರಣಗಳೂ ಅಲ್ಲಿ ವರದಿಯಾಗುತ್ತಿವೆ.

'ಎವೈ.4.2' ಎಂದು ಗುರುತಿಸಲಾಗಿರುವ ಈ ಮಾದರಿಯು ವ್ಯಾಪಕವಾಗಿ ಹರಡುವ ಸಾಧ್ಯತೆಗಳಿವೆ ಎಂದು 'ರಾಷ್ಟ್ರೀಯ ಗ್ರಾಹಕ ನಿಗಾ ಸಂಸ್ಥೆ'ಯ ಹಿರಿಯ ಸಂಶೋಧಕ ಕಾಮಿಲ್ ಖಾಫಿಜೋವ್ ಹೇಳಿರುವುದಾಗಿ ರಾಷ್ಟ್ರೀಯ ಸುದ್ದಿ ಸಂಸ್ಥೆ 'ಆರ್‌ಐಎ' ವರದಿ ಮಾಡಿದೆ.

ರಷ್ಯಾದಲ್ಲಿ ದಾಖಲೆಯ ಮಟ್ಟದಲ್ಲಿ ವರದಿಯಾಗುತ್ತಿರುವ ಕೋವಿಡ್ ಪ್ರಕರಣಗಳ ದರವನ್ನು ಈ ರೂಪಾಂತರಿ ಮಾದರಿಯು ಮತ್ತಷ್ಟು ಹೆಚ್ಚು ಮಾಡಿದೆ ಎಂದು ಅವರು ತಿಳಿಸಿದ್ದಾರೆ.

ಹೊಸ ರೂಪಾಂತರವು ಅಂತಿಮವಾಗಿ ಡೆಲ್ಟಾವನ್ನೂ ಮೀರಬಹುದು. ಆದರೆ ಆ ಪ್ರಕ್ರಿಯೆ ನಿಧಾನವಾಗಬಹುದು ಎಂದು ಖಾಫಿಜೋವ್ ಹೇಳಿದ್ದಾರೆ.

ಕಳೆದ 24 ಗಂಟೆಗಳಲ್ಲಿ ರಷ್ಯಾದಲ್ಲಿ 1,028 ಕೋವಿಡ್ ಸಂಬಂಧಿತ ಸಾವುಗಳು ಸಂಭವಿಸಿವೆ. ಅದೇ ಹೊತ್ತಲ್ಲೇ 34,073 ಹೊಸ ಸೋಂಕು ಪ್ರಕರಣಗಳು ವರದಿಯಾಗಿವೆ. ಹೀಗಾಗಿ ಸೋಂಕು ನಿಯಂತ್ರಿಸಲು ದೇಶದಲ್ಲಿ ಹಲವು ಕಟ್ಟುನಿಟ್ಟಿನ ಕ್ರಮಗಳನ್ನು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಘೋಷಣೆ ಮಾಡಿದ್ದಾರೆ.

'ಸಾವು ತಡೆಯುವಲ್ಲಿ ಕೋವಿಶೀಲ್ಡ್ ಲಸಿಕೆ ಶೇ 90ರಷ್ಟು ಪರಿಣಾಮಕಾರಿ'

ಲಂಡನ್ (ಪಿಟಿಐ): ನ್ಯೂ ಇಂಗ್ಲೆಂಡ್ ಜರ್ನಲ್ ಆಫ್ ಮೆಡಿಸಿನ್ ಪತ್ರಿಕೆಯಲ್ಲಿ ಗುರುವಾರ ಪ್ರಕಟವಾಗಿರುವ ಅಧ್ಯಯನದ ಪ್ರಕಾರ, 'ಕೋವಿಡ್–19' ಸಾಂಕ್ರಾಮಿಕದ ಡೆಲ್ಟಾ ರೂಪಾಂತರ ಸೋಂಕಿನಿಂದ ಸಂಭವಿಸಬಹುದಾದ ಸಾವನ್ನು ತಡೆಗಟ್ಟುವಲ್ಲಿ ಕೋವಿಶೀಲ್ಡ್ ಮತ್ತು ಫೈಜರ್ ಕಂಪನಿಯ ಎರಡು ಡೋಸ್ ಕೋವಿಡ್ ಲಸಿಕೆಗಳು ಶೇ 90ರಷ್ಟು ಪರಿಣಾಮಕಾರಿಯಾಗುವ ಸಾಧ್ಯತೆ ಇದೆ.

ಸ್ಕಾಟ್ಲೆಂಡ್–ವೈಡ್ ಇಎವಿಇ II ಕೋವಿಡ್–19 ಸರ್ವೇಲೆನ್ಸ್ ದತ್ತಾಂಶವನ್ನು ಬಳಸಿಕೊಂಡು ನಡೆಸಿರುವ ಈ ಅಧ್ಯಯನವು ಮೊದಲ ಬಾರಿಗೆ, ವಿವಿಧ ದೇಶಗಳಲ್ಲಿ ಡೆಲ್ಟಾ ರೂಪಾಂತರ ಸೋಂಕಿನಿಂದ ಸಂಭವಿಸುವ ಸಾವನ್ನು ತಡೆಗಟ್ಟುವಲ್ಲಿ ಕೋವಿಡ್ ಲಸಿಕೆಗಳು ಹೇಗೆ ಪರಿಣಾಮಕಾರಿಯಾಗಿವೆ ಎಂಬುದನ್ನು ತೋರಿಸಿದೆ.

ಎಡಿನ್‌ಬರ್ಗ್ ಮತ್ತು ಸ್ಟ್ರಾತ್‌ಕ್ಲೈಡ್ ವಿಶ್ವವಿದ್ಯಾಲಯಗಳು ಮತ್ತು ಸ್ಕಾಟ್ಲೆಂಡ್‌ನ ಸಾರ್ವಜನಿಕ ಆರೋಗ್ಯ ಕೇಂದ್ರವನ್ನೊಳಗೊಂಡ ಸಂಶೋಧನಾ ತಂಡ ಏಪ್ರಿಲ್ 1 ರಿಂದ ಸೆ. 27ರವರೆಗೆ ಸ್ಕಾಟ್ಲೆಂಡ್‌ನಲ್ಲಿರುವ 54 ಲಕ್ಷ ಜನರಿಂದ ಸಂಗ್ರಹಿಸಿದ ದತ್ತಾಂಶವನ್ನು ವಿಶ್ಲೇಷಣೆಗೆ ಒಳಪಡಿಸಿ, ಅಧ್ಯಯನ ನಡೆಸಿದೆ.

ಅಧ್ಯಯನದ ಪ್ರಕಾರ, ಈ ಅವಧಿಯಲ್ಲಿ ಪಿಸಿಆರ್ ಮೂಲಕ ನಡೆಸಿದ ಕೋವಿಡ್ ಪರೀಕ್ಷೆಯಲ್ಲಿ 1,15,000 ಜನರಿಗೆ ಕೋವಿಡ್ ಸೋಂಕು ತಗುಲಿರುವುದು ದೃಢಪಟ್ಟಿದೆ ಮತ್ತು ಸೋಂಕಿನಿಂದಾಗಿ 201 ಸಾವುಗಳು ಸಂಭವಿಸಿವೆ.

ರಾಜ್ಯ ಸೈಕ್ಲಿಂಗ್ ಚಾಂಪಿಯನ್‌ಷಿಪ್: ಎರಡನೇ ದಿನವೂ ಪ್ರಾಬಲ್ಯ

ವಿಜಯಪುರ ಕ್ರೀಡಾ ನಿಲಯಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ವಿಜಯಪುರ: ಎರಡೂ ದಿನ ಪ್ರಾಬಲ್ಯ ಮೆರೆದ ವಿಜಯಪುರ ಕ್ರೀಡಾನಿಲಯದ ಸೈಕ್ಲಿಸ್ಟ್‌ಗಳು, ಗುರುವಾರ ಇಲ್ಲಿ ಮುಕ್ತಾಯವಾದ 12ನೇ ರಾಜ್ಯ ರಸ್ತೆ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಪಡೆದುಕೊಂಡರು.

ಈ ತಂಡ 42 ಅಂಕಗಳನ್ನು ಗಳಿಸಿದರೆ, 36 ಅಂಕ ಕಲೆಹಾಕಿದ ಬಾಗಲಕೋಟೆ ಜಿಲ್ಲೆ ತಂಡಕ್ಕೆ ರನ್ನರ್ಸ್ ಅಪ್ ಸ್ಥಾನ ಲಭಿಸಿತು. ನ. 25ರಿಂದ 28ರ ತನಕ ಹರಿಯಾಣದ ಕುರುಕ್ಷೇತ್ರದಲ್ಲಿ ಜರುಗುವ ರಾಷ್ಟ್ರೀಯ ರಸ್ತೆ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವ ತಂಡವನ್ನು ಇಲ್ಲಿ ಆಯ್ಕೆ ಮಾಡಲಾಗುತ್ತಿದೆ.

ಎರಡನೇ ದಿನದ ಫಲಿತಾಂಶ: ಪುರುಷರ ಹಾಗೂ ಬಾಲಕರ ವಿಭಾಗ:

16 ವರ್ಷದೊಳಗಿನ 15 ಕಿ.ಮೀ ಮಾಸ್ಡ್ ಸ್ಟಾರ್ಟ್: ಚಿರಾಯುಷ್ ಪಟವರ್ಧನ (ಕಾಲ: 22:39.44ಸೆ.)–1, ಕೆ.ಸುರೇಶ ಬಾಬು (ಎರಡೂ ಚಂದರಗಿ ಕ್ರೀಡಾ ಶಾಲೆ; 22:40.30ಸೆ.)–2, ಹನಮಂತ ಮರನೂರ (ಗದಗ ಕ್ರೀಡಾ ನಿಲಯ; 22:44.15ಸೆ.)–3.

18 ವರ್ಷದೊಳಗಿನ 50 ಕಿ.ಮೀ ಮಾಸ್ಡ್ ಸ್ಟಾರ್ಟ್: ಮಲ್ಲಿಕಾರ್ಜುನ ಯಾದವಾಡ (ಬಾಗಲಕೋಟೆ ಜಿಲ್ಲೆ; 56:04.56ಸೆ.)–1, ಮಧು ಕಾಡಾಪುರ (56:25:40ಸೆ.)–2, ಲೋಕೇಶ (ಇಬ್ಬರೂ ಚಂದರಗಿ ಕ್ರೀಡಾ ಶಾಲೆ- ;56:45.60ಸೆ.)–3.

23 ವರ್ಷದೊಳಗಿನ 80 ಕಿ.ಮೀ ಮಾಸ್ಡ್ ಸ್ಟಾರ್ಟ್: ಗಣೇಶ ಕುಡಿಗನೂರ (ವಿಜಯಪುರ ಜಿಲ್ಲೆ 01:31:06.30ಸೆ.)–1, ಬಸವರಾಜ ಮಡ್ಡಿ (ಬಾಗಲಕೋಟೆ ಜಿಲ್ಲೆ; 01:31:10.42ಸೆ.)–2, ವಿಶ್ವನಾಥ ಗಾಡಾದ (ವಿಜಯಪುರ ಜಿಲ್ಲೆ; 01:31:10.52ಸೆ)–3.

ಪುರುಷರ 80 ಕಿ.ಮೀ ಮಾಸ್ಡ್ ಸ್ಟಾರ್ಟ್: ಸಂತೋಷ ಕುರಣೆ (ವಿಜಯಪುರ ಜಿಲ್ಲೆ; 01:56:01.10ಸೆ.)–1, ಸಚಿನ್ ರಂಜಣಗಿ (ವಿಜಯಪುರ ಜಿಲ್ಲೆ; 01:58:20.10)–2, ಶ್ರೀನಿಧಿ ಉರಲಾ (ಧಾರವಾಡ ಜಿಲ್ಲೆ; 01:58:20.14ಸೆ.)–3.

ಮಹಿಳೆಯರ ಹಾಗೂ ಬಾಲಕಿಯರ ವಿಭಾಗ: **16 ವರ್ಷದೊಳಗಿನವರ 15 ಕಿ.ಮೀ ಮಾಸ್ಡ್ ಸ್ಟಾರ್ಟ್:** ನಂದಾ ಚಿಚಖಂಡಿ (ಬಾಗಲಕೋಟೆ ಜಿಲ್ಲೆ; 19:09.92ಸೆ.)–1, ಶೈಲಾ ನ್ಯಾಮಗೌಡ (ವಿಜಯಪುರ ಜಿಲ್ಲೆ; 19:10.40ಸೆ.)–2 ಪೂಜಾ ಮಠಪತಿ (ಬಾಗಲಕೋಟ ಜಿಲ್ಲೆ; 19:15.60ಸೆ.)–3.

18 ವರ್ಷದೊಳಗಿನ 30 ಕಿ.ಮೀ ಮಾಸ್ಡ್ ಸ್ಟಾರ್ಟ್: ಅಂಕಿತಾ ರಾಠೋಡ (ವಿಜಯಪುರ ಜಿಲ್ಲೆ; 43:38.41)–1, ಚೈತ್ರಾ ಬೋರ್ಜಿ (ಬಾಗಲಕೋಟೆ ಜಿಲ್ಲೆ; 43:40.32ಸೆ.)–2 ನಿವೇದಿತಾ ಕೊಕ್ಕನವರ (ಧಾರವಾಡ ಜಿಲ್ಲೆ; 43:40.56ಸೆ.)–3.

ಮುಖ್ಯಾಂಶಗಳು

- ನವೆಂಬರ್‌ನಲ್ಲಿ ಕುರುಕ್ಷೇತ್ರ-ದಲ್ಲಿ ರಾಷ್ಟ್ರೀಯ ಟೂರ್ನಿ
- ಬಾಗಲಕೋಟೆ ಜಿಲ್ಲೆಗೆ ರನ್ನರ್ಸ್ ಅಪ್ ಸ್ಥಾನ
- 42 ಅಂಕಗಳನ್ನು ಕಲೆಹಾಕಿದ ವಿಜಯಪುರ ಕ್ರೀಡಾನಿಲಯ

ಸೆಹಜ್, ಪ್ರೇಶಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಹಜ್ ಸಿಂಗ್ ಪವಾರ್ ಮತ್ತು ಪ್ರೇಶಾ ಶಾಂತಮೂರ್ತಿ ಅವರು ಚೊಚ್ಚಲ ಪ್ರಶಸ್ತಿ ಎತ್ತಿಹಿಡಿದು ಎಫ್‌ಎಸ್‌ಎ ಅಂಗಣದಲ್ಲಿ ಸಂಭ್ರಮಿಸಿದರು.

ಗುರುವಾರ ಮುಕ್ತಾಯಗೊಂಡ ಎಐಸ್‌ಟಿಎ-ಎಐಟಿಎ ಸಿಎಸ್3 18 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಸೆಹಜ್ ಮತ್ತು ಪ್ರೇಶಾ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಎರಡೂ ವಿಭಾಗಗಳ ಫೈನಲ್ ಪಂದ್ಯಗಳು ರೋಚಕ ಹಣಾಹಣಿಯಿಂದ ಕೂಡಿದ್ದವು.

ವಿದ್ಯಾನಿಕೇತನ ಶಾಲೆಯ ಒಂಬತ್ತನೇ ತರಗತಿ ವಿದ್ಯಾರ್ಥಿ ಸೆಹಜ್ ಸಿಂಗ್ ಬಾಲಕರ ವಿಭಾಗದಲ್ಲಿ 7-6 (7-5), 6-2ರಲ್ಲಿ ಅಕ್ಷಯ್ ಪ್ರಸಾದ್ ವಿರುದ್ಧ ಜಯ ಗಳಿಸಿದರು.

ಕಾಶಿಶ್ ಕಾಂತ್ ಎದುರಿನ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಪ್ರೇಶಾ 7-5, 6-2ರಲ್ಲಿ ಗೆಲುವು ದಾಖಲಿಸಿದರು.

ಗೆದ್ದ ಇಬ್ಬರೂ 14 ವಯಸ್ಸಿನವರಾಗಿದ್ದು ಡಿಪಿಎಸ್ ಈಸ್ಟ್ ಶಾಲೆಯ ವಿದ್ಯಾರ್ಥಿನಿ ಪ್ರೇಶಾ ಮುಂದಿನ ತಿಂಗಳು 15ನೇ ವರ್ಷಕ್ಕೆ ಕಾಲಿಡಲಿದ್ದಾರೆ.

ಬಾಲಕರ ವಿಭಾಗದ ಫೈನಲ್‌ನ ಅರಂಭದಲ್ಲೇ ಸೆಹಜ್ 3–1ರ ಮುನ್ನಡೆ ಸಾಧಿಸಿದ್ದರು.

ಆದರೆ ತಿರುಗೇಟು ನೀಡಿದ ಅಕ್ಷಯ್ 5–4ರ ಮುನ್ನಡೆಯೊಂದಿಗೆ ನಗೆಸೂಸಿದರು. ಸೆಹಜ್ ಕೂಡ ಪಟ್ಟು ಬಿಡದೆ ಆಡಿದರು. ಹೀಗಾಗಿ ಸೆಟ್ ಟೈ ಬ್ರೇಕರ್‌ಗೆ ಸಾಗಿತು. ಭರ್ಜರಿ ಆಟದೊಂದಿಗೆ ಸೆಹಜ್ ಗೆಲುವು ಸಾಧಿಸಿದರು. ಎರಡನೇ ಸೆಟ್‌ನಲ್ಲೂ ಸೆಹಜ್ 4–1ರ ಮುನ್ನಡೆಯೊಂದಿಗೆ ಶುಭಾರಂಭ ಮಾಡಿದರು. ಹೀಗಾಗಿ ಸುಲಭ ಜಯ ಒಲಿಯಿತು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಪ್ರೇಶಾ 4–3ರ ಮುನ್ನಡೆ ಗಳಿಸಿದ್ದಾಗ ಎದುರಾಳಿ ಚೇತರಿಸಿಕೊಂಡು 5–4ರ ಮುನ್ನಡೆ ಸಾಧಿಸಿದರು.

ಆದರೆ ಪ್ರೇಶಾ ಸೆಟ್ ಗೆದ್ದು ಸಂಭ್ರಮಿಸಿದರು. ಎರಡನೇ ಸೆಟ್‌ನಲ್ಲಿ ಪ್ರೇಶಾ 5–1ರ ಮುನ್ನಡೆಯೊಂದಿಗೆ ಆರಂಭದಲ್ಲೇ ಆಧಿಪತ್ಯ ಸಾಧಿಸಿದರು. ಆಲ್‌ರೌಂಡ್ ಆಟವು ಅವರ ಗೆಲುವನ್ನು ಸುಲಭವಾಗಿಸಿತು.



ಪ್ರೇಶಾ ಶಾಂತಮೂರ್ತಿ ಮತ್ತು ಸೆಹಜ್ ಸಿಂಗ್ ಪವಾರ್

ಡೆನ್ಮಾರ್ಕ್ ಓಪನ್: ಬುಸನಾನ್ ವಿರುದ್ಧ ಜಯ; ಕಿದಂಬಿಗೆ ಸೋಲು

ಕ್ವಾರ್ಟರ್ ಫೈನಲ್‌ಗೆ ಸಿಂಧು ಲಗ್ಗೆ

ಒಡೆನ್ಸ್, ಡೆನ್ಮಾರ್ಕ್ (ಪಿಟಿಐ): ಪ್ರಬಲ ಪೈಪೋಟಿ ನೀಡಿದ ಎದುರಾಳಿಯನ್ನು ಪ್ರಯಾಸದಿಂದ ಮಣಿಸಿದ ಭಾರತದ ಪಿ.ವಿ.ಸಿಂಧು ಅವರು ಡೆನ್ಮಾರ್ಕ್ ಓಪನ್ ಸೂಪರ್1000 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್ ಹಂತಕ್ಕೆ ಲಗ್ಗೆ ಇರಿಸಿದರು.

ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳ ಸಾಧನೆ ಮಾಡಿರುವ ಸಿಂಧು ಗುರುವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ಥಾಯ್ಲೆಂಡ್‌ನ ಬುಸನಾನ್ ಒಂಗ್‌ಬಮ್ರುನ್‌ಫಾನ್ ಎದುರು 21-16, 12-21, 21-15ರಲ್ಲಿ ಜಯ ಗಳಿಸಿದರು. 67 ನಿಮಿಷಗಳ ಹಣಾಹಣಿಯ ಎರಡನೇ ಗೇಮ್‌ನಲ್ಲಿ ಹಿನ್ನಡೆ ಅನುಭವಿಸಿದರೂ ಚೇತರಿಸಿಕೊಂಡು ನಿರ್ಣಾಯಕ ಗೇಮ್ ಗೆದ್ದು ಮುಂದಿನ ಹಂತಕ್ಕೆ ಪ್ರವೇಶಿಸಿದರು.

ಆಗಸ್ಟ್‌ನಲ್ಲಿ ನಡೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗಳಿಸಿದ ನಂತರ ಸಿಂಧು ವಿಶ್ರಾಂತಿ ಪಡೆಯಲು ಬಯಸಿದ್ದರು. ಆದ್ದರಿಂದ ಒಲಿಂಪಿಕ್ಸ್ ನಂತರ ಅವರು ಕಣಕ್ಕೆ ಇಳಿದಿರುವ ಮೊದಲ ಟೂರ್ನಿ ಇದಾಗಿದೆ.

ಕಿದಂಬಿ ಶ್ರೀಕಾಂತ್‌ಗೆ ನಿರಾಸೆ: ಜಪಾನ್‌ನ ಕೆಂಟೊ ಮೊಮೊಟ ಎದುರಿನ ಪಂದ್ಯದಲ್ಲಿ ಕಿದಂಬಿ ಶ್ರೀಕಾಂತ್ ಮುಗ್ಗರಿಸಿದರು. ಗುರುವಾರ ನಡೆದ ಪಂದ್ಯದಲ್ಲಿ ಮೊಮೊಟ 23–21, 21–9ರಲ್ಲಿ ಗೆಲುವು ಸಾಧಿಸಿದರು. ಕೇವಲ 43 ನಿಮಿಷಗಳಲ್ಲಿ ಶ್ರೀಕಾಂತ್ ಸೋಲಿಗೆ ಶರಣಾದರು.



ಪಿ.ವಿ.ಸಿಂಧು –ಟ್ವಿಟರ್ ಚಿತ್ರ



ಕಿದಂಬಿ ಶ್ರೀಕಾಂತ್ –ಎಎಫ್‌ಪಿ ಚಿತ್ರ

ಟಾಪ್ ಯೋಜನೆಗೆ ಗಾರ್ಗ್ ಸಿಇಒ

ನವದೆಹಲಿ (ಪಿಟಿಐ): ಕಮಾಂಡರ್ ಪಿ.ಕೆ. ಗಾರ್ಗ್ ಅವರನ್ನು ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆ (ಟಾಪ್ಸ್) ಮುಖ್ಯ ಕಾರ್ಯನಿರ್ವಹಣೆ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.

ಭಾರತೀಯ ಕ್ರೀಡಾ ಪ್ರಾಧಿಕಾರ (ಸಾಯ್) ಮಿಷನ್ ಒಲಿಂಪಿಕ್ಸ್ ಘಟಕದ ಸಭೆಯಲ್ಲಿ ನೇಮಕವನ್ನು ಪ್ರಕಟಿಸಲಾಯಿತು.

ಗಾರ್ಗ್ ಅವರು ಇದೇ 25ರಂದು ಅಧಿಕಾರ ವಹಿಸಿಕೊಳ್ಳುವರು. 2018ರಿಂದ ಟೋಕಿಯೊ ಒಲಿಂಪಿಕ್ಸ್ ಮುಕ್ತಾಯದವರೆಗೂ ಈ ಸ್ಥಾನದಲ್ಲಿ ಕಾರ್ಯನಿರ್ವಹಿಸಿದ ರಾಜೇಶ್ ರಾಜಗೋಪಾಲನ್ ಅಧಿಕಾರ ಹಸ್ತಾಂತರಿಸುವರು.

ಗಾರ್ಗ್ ಅವರು ಕಳೆದ ಜೂನ್ ತಿಂಗಳವರೆಗೂ ಸಾಯ್ ಹೈಪರ್ಫಾರ್ಮೆನ್ಸ್ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು.

ಸೇಲಿಂಗ್ ಕ್ರೀಡಾಪಟುವಾಗಿರುವ ಅವರು 1990ರಲ್ಲಿ ಅವರು ಅರ್ಜುನ ಪ್ರಶಸ್ತಿ ಮತ್ತು 1993–94ರಲ್ಲಿ ಮೇಜರ್ ಧ್ಯಾನಚಂದ್ ಪುರಸ್ಕಾರ ಪಡೆದಿದ್ದಾರೆ.

1984ರಲ್ಲಿ ಅವರು ಭಾರತ ನೌಕಾಪಡೆಯನ್ನು ಸೇರಿದ್ದರು. 34 ವರ್ಷಗಳ ಕಾಲ ಅಲ್ಲಿ ಕಾರ್ಯನಿರ್ವಹಿಸಿದ್ದಾರೆ. ಐದು ಏಷ್ಯನ್ ಗೇಮ್ಸ್‌ಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. 1993ರಲ್ಲಿ ಜಿಂಬಾಬ್ವೆಯಲ್ಲಿ ನಡೆದಿದ್ದ ಎಂಟರ್‌ಪ್ರೈಸ್ ಕ್ಲಾಸ್ ಸೇಲಿಂಗ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಮತ್ತು ಗೋವಾದಲ್ಲಿ 1997ರಲ್ಲಿ ಬೆಳ್ಳಿ ಪದಕ ಗಳಿಸಿದ್ದರು.

ಕಿಮ್ಮನೆ ಗಾಲ್ಫ್ ರೆಸಾರ್ಟ್‌ಗೆ ಗೌರವ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ದುಬೈನಲ್ಲಿ ಕೇಂದ್ರ ಕಚೇರಿ ಹೊಂದಿರುವ 'ಇಂಟರ್ ನ್ಯಾಷನಲ್ ಟ್ರಾವೆಲ್ ಅವಾರ್ಡ್ಸ್' ಸಂಸ್ಥೆಯು ಶಿವಮೊಗ್ಗದ ಕಿಮ್ಮನೆ ಗಾಲ್ಫ್ ರೆಸಾರ್ಟ್‌ಗೆ 'ಬೆಸ್ಟ್ ಗಾಲ್ಫ್ ರೆಸಾರ್ಟ್ ಇನ್ ಏಷ್ಯಾ-2021' ಪ್ರಶಸ್ತಿ ನೀಡಿ ಗೌರವಿಸಿದೆ.

ಸಾಗರ ರಸ್ತೆಯ ಮಲ್ಲಿಗೇನಹಳ್ಳಿ ಬಳಿ 65 ಎಕರೆ ವಿಸ್ತಾರದಲ್ಲಿ ಹರಡಿರುವ ಈ ಗಾಲ್ಫ್ ಕ್ಲಬ್ ಕೆಲವು ತಿಂಗಳ ಹಿಂದಷ್ಟೇ ಆರಂಭವಾಗಿದೆ. 9 ಹೋಲ್ ಗಾಲ್ಫ್‌ಕೋರ್ಸ್, 30 ಐಷಾರಾಮಿ ಕೊಠಡಿಗಳು, ಸೂಟ್‌ಗಳು, ಬಾರ್, ರೆಸ್ಟೋರೆಂಟ್, ಒಳಾಂಗಣ ಔತಣಕೂಟ, ಸುಸಜ್ಜಿತ ಬೋರ್ಡ್‌ರೂಂ, ಟೀ ಬಾರ್, ಟೇಬಲ್ ಟೆನ್ನಿಸ್, ಸ್ನೂಕರ್, ಫಿಟ್‌ನೆಸ್ ಸೆಂಟರ್, ಮೀನುಗಾರಿಕೆ ಸೌಲಭ್ಯಗಳನ್ನು ಹೊಂದಿದೆ.

ಸ್ವಚ್ಛಂದ ಪರಿಸರ, ಅತ್ಯುತ್ತಮ ಸೇವೆ, ಗುಣಮಟ್ಟದ ಊಟ, ವಿಶ್ವದರ್ಜೆಯ ಸೌಲಭ್ಯಗಳಿಂದ ಗಾಲ್ಫ್ ಪ್ರಿಯರು ಹಾಗೂ ಪ್ರವಾಸಿಗರ ಮೆಚ್ಚುಗೆಗೆ ಪಾತ್ರವಾಗಿದೆ. ವಿಶ್ವ ಪ್ರವಾಸೋದ್ಯಮ ಕ್ಷೇತ್ರದಲ್ಲಿನ ಅತ್ಯುತ್ತಮ ಸೇವೆ ಮತ್ತು ಸೌಲಭ್ಯ ಪರಿಗಣಿಸಿ ಪ್ರಶಸ್ತಿ ಲಭಿಸಿದೆ. ವರ್ಷಕ್ಕೆ ಒಮ್ಮೆ ಏಷ್ಯಾದ ದೇಶಗಳ ಸಾವಿರಾರು ಪ್ರವಾಸಿ ಹೋಟೆಲ್‌ಗಳು, ರೆಸಾರ್ಟ್ಸ್‌ಗಳ ಮೂಲಸೌಕರ್ಯ, ಗುಣಮಟ್ಟ ಪರಿಶೀಲಿಸಿ ಪ್ರಶಸ್ತಿ ನೀಡಿ ಗೌರವಿಸುತ್ತದೆ.

'ಅತ್ಯುತ್ತಮ ಸೇವೆ, ವಿಶ್ವದರ್ಜೆಯ ಸೌಲಭ್ಯಗಳಿಂದ ಕಡಿಮೆ ಅವಧಿಯಲ್ಲಿ ಗಾಲ್ಫ್ ಜನಮನ್ನಣೆ ಗಳಿಸಿದೆ. ದೇಶ, ವಿದೇಶಗಳ ವೃತ್ತಿಪರ ಗಾಲ್ಫ್ ಆಟಗಾರರು, ಪ್ರವಾಸಿಗರು ಬರುತ್ತಿದ್ದಾರೆ.

ಹಲವು ಸುತ್ತಿನ ಪರಿಶೀಲನೆಯ ಬಳಿಕ ಪ್ರಶಸ್ತಿ ಘೋಷಣೆ ಮಾಡಲಾಗಿದೆ. ಇದು ನಮ್ಮ ಸಂಸ್ಥೆಗೆ ಸಂದ ಗರಿ' ಎಂದು ಗಾಲ್ಫ್ ವ್ಯವಸ್ಥಾಪಕ ನಿರ್ದೇಶಕ ಕಿಮ್ಮನೆ ಜಯರಾಮ್ ಪ್ರತಿಕ್ರಿಯಿಸಿದರು.

ಎದುರಾಳಿಗಳ 'ಚಾಲೆಂಜ್' ಗೆದ್ದ ಮಿಥುನ್, ರಘು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ವಿಭಾಗದಲ್ಲಿ ಕರ್ನಾಟಕದ ಆರು ಮತ್ತು ಪುರುಷರ ವಿಭಾಗದಲ್ಲಿ ಮೂವರು ಆಟಗಾರರು ಇಲ್ಲಿ ನಡೆಯುತ್ತಿರುವ ಇನ್ಫೋಸಿಸ್ ಫೌಂಡೇಷನ್ ಇಂಡಿಯನ್ – ಇಂಟರ್ ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮುನ್ನಡೆ ಸಾಧಿಸಿದರು.

ಪ್ರಕಾಶ್ ಪಡುಕೋಣೆ ಅಕಾಡೆಮಿಯ ಆಶ್ರಯದಲ್ಲಿ ಪಡುಕೋಣೆ-ದ್ರಾವಿಡ್ ಸ್ಪೋರ್ಟ್ಸ್ ಎಕ್ಸ್‌ಲೆನ್ಸ್ ಸೆಂಟರ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಗುರುವಾರ ಕರ್ನಾಟಕದ ಮಿಥುನ್ ಮಂಜುನಾಥ್ ಮತ್ತು ರಘು ಮರಿಸ್ವಾಮಿ ಮುನ್ನಡೆ ಸಾಧಿಸಿದ ಪ್ರಮುಖರು.

ಫಲಿತಾಂಶಗಳು: ಮೊದಲ ಸುತ್ತು: ಪುರುಷರು: ಕರ್ನಾಟಕದ ರಘು ಮರಿಸ್ವಾಮಿ 19–21, 21–16, 21–19ರಿಂದ ಅರುಣೇಶ್ ಹರಿ ವಿರುದ್ಧ; ಕರ್ನಾಟಕದ ಮಿಥುನ್ ಮಂಜುನಾಥ್ 21–5, 21–14 ರಿಂದ ಗೋಪಾಲಕೃಷ್ಣ-ರೆಡ್ಡಿ ದುಂಡಿ ವಿರುದ್ಧ; ಎಸ್. ಭಾರ್ಗವ್ 21–14, 21–17ರಿಂದ ಹೇಮಂತ್ ಗೌಡ ಎದುರು ಜಯಿಸಿದರು.

ಮಹಿಳೆಯರ ಸಿಂಗಲ್ಸ್: ಕರ್ನಾಟಕದ ಆಕರ್ಷಿ ಕಶ್ಯಪ್ 21–19, 21–15ರಿಂದ ಮೇಧಾ ಶಶಿಧರನ್ ವಿರುದ್ಧ; ಕರ್ನಾಟಕದ ಶೀತಲ್ ದಿವಾಕರ್ 21–9, 21–15ರಿಂದ ವಿಭಾ ಮರಳೂರು ಎದುರು; ಕವಿಪ್ರಿಯಾ ಸೆಲ್ವಂ 21–17, 21–18ರಿಂದ ಕರ್ನಾ ಟಕದ ಗಾಯತ್ರಿ ರಾಣಿ ಜೈಸ್ವಾಲ್ ಎದುರು; ಶಿವಾನಿ ಆಂಜೆಲಿನಾ ಪಾಥಿ 21–16, 22–20ರಿಂದ ಅಖಿಲಾ ಆನಂದ್ ಎದುರು; ಧ್ರುತಿ ಯತೀಶ್ 21–13, 21–11ರಿಂದ ಶಿವಾನಿ ವೈಷ್ಣವಿ ದೇವಿ ವಿರುದ್ಧ; ವಿಜೇತಾ ಹರೀಶ್ 22–20, 21–13ರಿಂದ ಅನುರಾ ಪ್ರಭುದೇಸಾಯಿ ಎದುರೂ; ಕೀರ್ತಿ ಭಾರದ್ವಾಜ್ 21–17, 21–16ರಿಂದ ಶ್ರೀಲಂಕಾದ ಲಿಯಾಂಗೆ ವಿರುದ್ಧ; ರಶ್ಮಿ ಗಣೇಶ್ 19–21, 21–8, 21–12ರಿಂದ ರುದ್ರಾಣಿ ಗಣೇಶ್ ವಿರುದ್ಧವೂ ಗೆದ್ದರು.



ಮಿಥುನ್ ಮಂಜುನಾಥ್

ಬಾಕ್ಸಿಂಗ್: ಹೇಮಲತಾಗೆ ಗೆಲುವು

ಹಿಸ್ಸಾರ್ (ಪಿಟಿಐ): ಅಸ್ಸಾಂನ ಪಿ.ಎಸ್. ಮಂತಸಾಹ ಕುಮಾರಿ ಅವರನ್ನು ಏಕಪಕ್ಷೀಯವಾಗಿ ಮಣಿಸಿದ ದೆಹಲಿಯ ಹೇಮಲತಾ ಅವರು ಮಹಿಳೆಯರ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಆರಂಭದ ಗೆಲುವು ಸಾಧಿಸಿದರು.

ಸೇಂಟ್ ಜೋಸೆಫ್ಸ್ ಇಂಟರ್‌ನ್ಯಾಷನಲ್ ಸ್ಕೂಲ್ ಆವರಣದಲ್ಲಿ ಗುರುವಾರ ಆರಂಭಗೊಂಡ ಚಾಂಪಿಯನ್‌ಷಿಪ್‌ನ 50 ಕೆಜಿ ವಿಭಾಗದಲ್ಲಿ ಅವರು 4–0ಯಿಂದ ಜಯ ಗಳಿಸಿದರು.

ಯಾವುದೇ ಹಂತದಲ್ಲೂ ಎದುರಾಳಿ ಮೇಲುಗೈ ಸಾಧಿಸಲು ಅವಕಾಶ ಕೊಡದ ಹೇಮಲತಾ ಸುಲಭವಾಗಿ ಬೌಟ್ ಗೆದ್ದರು.

ಮಹಾರಾಷ್ಟ್ರದ ಆರ್ಯ ಕುಲಕರ್ಣಿ 52 ಕೆಜಿ ವಿಭಾಗದಲ್ಲಿ ಅರುಣಾಚಲಪ್ರದೇಶದ ಯಾಪೆ ಬಮಂಗ್ ಅವರನ್ನು 5–0ಯಿಂದ ಮಣಿಸಿದರು. 50 ಕೆಜಿ ವಿಭಾಗದಲ್ಲಿ ಗೋವಾದ ಪ್ರೀತಿ ಚವಾಣ್ ಕೂಡ ಜಯ ಗಳಿಸಿದರು. ಪಶ್ಚಿಮ ಬಂಗಾಳದ ಮೋನಿಕಾ ಪಾಂಡೆ ವಿರುದ್ಧ ಅವರು ಗೆದ್ದರು. ಪಂಜಾಬ್‌ನ ಕೋಮಲ್ 5–0ಯಿಂದ ಉತ್ತರಾಖಂಡದ ಸೋನಿಯಾ ಗೌನಿ ಅವರನ್ನು ಮಣಿಸಿದರು.

52 ಕೆಜಿ ವಿಭಾಗದ ಮತ್ತೊಂದು ಬೌಟ್‌ನಲ್ಲಿ ಮಧ್ಯಪ್ರದೇಶದ ಅಂಜಲಿ ಶರ್ಮಾ ಮತ್ತು ತಮಿಳುನಾಡಿನ ವಿನೋದಿನಿ ನಡುವೆ ಪ್ರಬಲ ಪೈಪೋಟಿ ನಡೆಯಿತು. ಅಂಜಲಿ 3–2ರಲ್ಲಿ ಜಯ ಗಳಿಸಿದರು.



ಅಭಯ್ ಶರ್ಮಾ

ಫೀಲ್ಡಿಂಗ್ ಕೋಚ್: ಅಭಯ್ ಅರ್ಜಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಫೀಲ್ಡಿಂಗ್ ಕೋಚ್ ಸ್ಥಾನಕ್ಕಾಗಿ ಕ್ರಿಕೆಟಿಗ ಅಭಯ್ ಶರ್ಮಾ ಅರ್ಜಿ ಸಲ್ಲಿಸಿದ್ದಾರೆ.

ಸದ್ಯ ಫೀಲ್ಡಿಂಗ್ ಕೋಚ್ ಆರ್. ಶ್ರೀಧರ್ ಅವರ ಅವಧಿಯು ಟಿ20 ವಿಶ್ವಕಪ್ ಟೂರ್ನಿಯ ನಂತರ ಮುಕ್ತಾಯವಾಗಲಿದೆ.

ಅವರ ಸ್ಥಾನಕ್ಕೆ ಅಭ್ಯರ್ಥಿಗಳ ಸಂದರ್ಶನ ನಡೆಸಿ ಆಯ್ಕೆ ಮಾಡಲಾಗುತ್ತಿದೆ. ಅರ್ಜಿ ಸಲ್ಲಿಸಲು ನವೆಂಬರ್ 3 ಕೊನೆಯ ದಿನವಾಗಿದೆ.

52 ವರ್ಷದ ಅಭಯ್ ಭಾರತ ಎ ಮತ್ತು 19 ವರ್ಷದೊಳಗಿನವರ ತಂಡಗಳಲ್ಲಿ ಕೋಚ್ ಆಗಿದ್ದರು. ಇತ್ತೀಚೆಗೆ ಭಾರತ ಮಹಿಳಾ ತಂಡಕ್ಕೂ ಅವರು ಮಾರ್ಗದರ್ಶನ ನೀಡಿದ್ದರು. ಶರ್ಮಾ ದೆಹಲಿ, ರೈಲ್ವೆಸ್ ಮತ್ತು ರಾಜಸ್ಥಾನ ತಂಡಗಳಲ್ಲಿ ಆಡಿದ್ದರು.

89 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿದ ಅನುಭವ ಹೊಂದಿದ್ದಾರೆ.

2016ರಲ್ಲಿ ಜಿಂಬಾಬ್ವೆ ಪ್ರವಾಸಕ್ಕೆ ತೆರಳಿದ್ದ ಭಾರತ ತಂಡದ ಫೀಲ್ಡಿಂಗ್ ಕೋಚ್ ಆಗಿದ್ದರು.

ಅದೇ ವರ್ಷ ಅಮೆರಿಕ ಮತ್ತು ವೆಸ್ಟ್ ಇಂಡೀಸ್‌ನಲ್ಲಿಆಡಿದ ಭಾರತ ತಂಡಕ್ಕೂ ಶರ್ಮಾ ಮಾರ್ಗದರ್ಶನ ಮಾಡಿದ್ದರು.

ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಕೋಚ್ ಆಗಿರುವ ಶರ್ಮಾ, ಮುಖ್ಯಸ್ಥ ರಾಹುಲ್ ದ್ರಾವಿಡ್ ಅವರೊಂದಿಗೆ ಕಾರ್ಯನಿರ್ವಹಿಸಿದ್ದಾರೆ.